ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜನವರಿ 5, 2011 ರೂ. 12/-

ಹೆಮ್ಮೆ ತಂದ ರಹಮತ್ ಬರಗೂರು



ಕೇರಳ ದೇವಸ್ಥಾನದಲ್ಲಿ

ಯೆಡ್ಡಿ & ಶ್ರೀಮತಿ ಶೋಭಾ

ಗಳೂರು ಲ್ಯಾಂಡ್ ಮಾಫಿಯಾ

ಗು ಬಲಿ



: ಟಾಯ್ಲೆಟ್ ಆದ ಕಾಲೇಜು

ದ್ದಗುಂಡ ಹತ್ಯೆ

ಲೀಸರಿಗೆ ಸುಪಾರಿ



ಧಾರವಾಡ: ಸಿಪಿಐ ಬಿರಾದಾರ್‌ಗೆ ಹುಡುಗೀರ ಗೂಸಾ!

-ತಾಪಂ: ಧಾರವಾಡ, ಕಲಬುರ್ಗಿ, ಬಾಗಲಕೋಟೆ

ವೇರಿ, ಉತ್ತರ ಕನ್ನಡ, ಯಾದಗಿರಿ

ನೋ ಕಾಮೆಂಟ್ಸ್

"ಸತ್ಯಂ ಹಗರಣ ಒಂದು ಅಪರೂಪದ ಹಗರಣ. ಇದೊಂದು ಅಪವಾದವೇ ಹೊರತು ನಿಯಮವಲ್ಲ ಎಂದು ಅನೇಕ ಉದ್ಯಮಿಗಳು ಸಮರ್ಥಿಸಿಕೊಂಡಿದ್ದರು. ಆದರೆ ಆರ್ಥಿಕ ಉದಾರೀಕರಣದ ಪೂರ್ವದಲ್ಲಿದ್ದ ಎಲ್ಲ ರೋಗಗಳು ಆಗಲೇ ಬೇರೊಂದು ರೂಪದಲ್ಲಿ ಮರುಕಳಿಸಿದ್ದವು. ಅದರ ಮುಂದುವರಿದ ರೂಪವೇ ಈ ಟೆಲಿಕಾಂ ಕ್ಷೇತ್ರದ ಹಗರಣ. ಬಹುಶಃ ರೋಗಗ್ರಸ್ತ ಸರ್ಕಾರಿ ಉದ್ದಿಮೆಗಳಿಂದ ಸರ್ಕಾರದ ಬೊಕ್ಕಸಕ್ಕೆ ಆಗಿರುವ ಒಟ್ಟು ನಷ್ಟದ ಮೊತ್ತವನ್ನು ಮೀರಿಸಿದಂತಿದೆ ಈ ಹಗರಣದಲ್ಲಿ ಸೋರಿಹೋದ ಹಣ."

- ದಿನೇಶ್ ಅಮೀನ್ ಮಟ್ಟು

"ಹಿಂದೆ ನಾನು ಆರೆಸ್ಸೆಸ್‌ನಲ್ಲಿ ಇದ್ದಾಗ ಮಾತಾಡುತ್ತಾ ಹೇಳಿದೆ 'ಯಾರು ತಪ್ಪು ಮಾಡಿದರೂ ತಪ್ಪು ತಪ್ಪೇ. ನೆಹರೂ ತಪ್ಪು ಮಾಡಿದರೂ ತಪ್ಪೇ'. ನನ್ನ ಹಿರಿಯರು 'ಹೌದು, ಯಾರಾದರೇನು, ನೆಹರೂ ತಪ್ಪು ಮಾಡಿದರೂ ತಪ್ಪೇ' ಎಂದರು. ಆಗ ನಾನು 'ನೆಹರೂ ಮಾಡಿದರೂ ತಪ್ಪೇ, ಗುರೂಜಿ ತಪ್ಪು ಮಾಡಿದರೂ ತಪ್ಪೇ' ಎಂದೆ. ತಕ್ಷಣ ಅವರು ಹೌಹಾರಿ 'ಹಾಗೆಲ್ಲಾ ಹೇಳಬಾರದು. ಗುರೂಜಿ ತಪ್ಪು ಮಾಡುವುದಿಲ್ಲ' ಎಂದರು. ಇದು ಆರೆಸ್ಸೆಸ್ ಕೊಡುವ ಶಿಕ್ಷಣ. ಅವರಲ್ಲಿ ಬೇರೇನೂ ಸರಕುಗಳಿರುವುದಿಲ್ಲ"

- ಕೆ.ಎಸ್. ಭಗವಾನ್

"ಹಿಂದೂತ್ವವಾದಿ ಧೋರಣೆ ಹೊಂದಿರುವ ಕೋಮುವಾದಿ ನಾಯಕರು 'ಎಲ್ಲಾ ಮುಸ್ಲಿಮರೂ ಭಯೋತ್ಪಾದಕರಲ್ಲ ಆದರೆ ಎಲ್ಲಾ ಭಯೋತ್ಪಾದಕರೂ ಮುಸ್ಲಿಮರೇ ಅಲ್ಲವೇ?' ಎಂದು ಕೇಳುತ್ತಾರೆ. ಆದರೆ 'ಎಲ್ಲಾ ಹಿಂದೂ ಭಯೋತ್ಪಾದಕರೂ ಆರೆಸ್ಸೆಸ್ ಸಂಬಂಧಿಗಳೇ ಆಗಿರುವುದೇಕೆ?' ಎಂಬ ಪ್ರಶ್ನೆಗೆ ಅವರು ಉತ್ತರಿಸುತ್ತಾರೆಯೇ?"

- ದಿಗ್ವಿಜಯ್ ಸಿಂಗ್, ಕಾಂಗ್ರೆಸ್ ಮುಖಂಡ

ನಂಬಿದ್ರೆನಂಬಿ ಬಿಟ್ರೆಬಿಡಿ

"ಸಾರ್ವಜನಿಕರು ಯಾವುದೇ ಕಾರಣಕ್ಕೂ ಪೊಲೀಸರಿಗೆ ಲಂಚಕೊಡಬೇಡಿ. ಸರ್ಕಾರದಿಂದ ತನಿಖೆ ಹಾಗೂ ಇತರ ವೆಚ್ಚಗಳಿಗೆ ಕೋಟ್ಯಂತರ ಹಣ ಮೀಸಲಿಟ್ಟಿದೆ."

- ಅಜಯ ಕುಮಾರ್ ಸಿಂಗ್, ಡಿಜಿಪಿ

"ಹಿಂದೂ ರಾಷ್ಟ್ರದಲ್ಲಿ ರಾಮಮಂದಿರ ನಿರ್ಮಾಣಕ್ಕೆ ಕಾನೂನಿನ ಒಪ್ಪಿಗೆಗೆ ಕಾಯುವ ಸ್ಥಿತಿ ಎದುರಾಗಿರುವುದು ದುರಂತ. ರಾಮನಿಗೇ ಮಂದಿರ ಕಟ್ಟಲಾಗದ ನಾವು ಭವಿಷ್ಯದಲ್ಲಿ ನಮಗೊಂದು ಮನೆ ಕಟ್ಟಿಕೊಳ್ಳಲು ಸಾಧ್ಯವೇ? ಮಾದಿಗರನ್ನು ಹಲವು ವರ್ಷಗಳಿಂದ ಹೊರಗಿಡಲಾಗಿದೆ ನಿಜ. ಮೊದಲು ಎದುರಾಗಿರುವ ಅಂತರರಾಷ್ಟ್ರೀಯ ಸಮಸ್ಯೆಯನ್ನು ಹೊಡೆದೋಡಿಸೋಣ. ಬಳಿಕ ನಮ್ಮೊಳಗಿರುವ ಸಮಸ್ಯೆಗಳನ್ನು ಇಲ್ಲೇ ಬಗೆಹರಿಸಿಕೊಳ್ಳಬಹುದು."

- ಎಂ.ಶಂಕರಪ್ಪ, ಮಾದಿಗ ದಂಡೋರದ ಅಧ್ಯಕ್ಷರು

ಆದರೆ ಭ್ರಷ್ಟಾಚಾರ ಮಾಡಲು ಬಿಟ್ಟಿದ್ದೇಕೆ, ಅದನ್ನು ಹೇಳಿ!

"ಭ್ರಷ್ಟಾಚಾರದ ಆರೋಪಗಳು ಸಾಬೀತಾಗದಿದ್ದರೂ ಸಚಿವರು ಮತ್ತು ಮುಖ್ಯಮಂತ್ರಿಗಳನ್ನು ಕೆಳಗಿಳಿಯುವಂತೆ ನಾವು ಸೂಚಿಸಿದ್ದೇವೆ. ಆದರೆ ಇತರ ಯಾವ ಪಕ್ಷಗಳು ಅಂತಹ ಕೆಲಸ ಮಾಡಿವೆ. ಭ್ರಷ್ಟಾಚಾರ ಮಿತಿಮೀರಿರುವ ಕರ್ನಾಟಕ ಅಥವಾ ಇತರ ರಾಜ್ಯಗಳಲ್ಲಿ ಬಿಜೆಪಿ ಅಂತಹ ಕಾರ್ಯಕ್ಕೆ ಮುಂದಾಗಿದೆಯೇ?"

- ಸೋನಿಯಾ ಗಾಂಧಿ

ಇತಿಹಾಸ ಪ್ರಜ್ಞೆ ಇಲ್ಲದ ಇತಿಹಾಸಕಾರ

"ಕಾಂಗ್ರೆಸ್ ಪಕ್ಷ ಇಲ್ಲದಿದ್ದರೆ ಭಾರತವು ಈ ರೀತಿ ಒಂದು ಸಮೈಕ್ಯ ದೇಶವಾಗಿ ಇರಲು ಸಾಧ್ಯವೇ ಇರುತ್ತಿರಲಿಲ್ಲ. ಆ ಐಕ್ಯತೆ ಎಷ್ಟೇ ಗಟ್ಟಿಯಾದದ್ದಲ್ಲವಾದರೂ ಈಗಿರುವಷ್ಟು ಐಕ್ಯತೆಗಾದರೂ ಕಾಂಗ್ರೆಸ್ಸೇ ಕಾರಣ"


- ರಾಮಚಂದ್ರ ಗುಹ

ಶಾಶ್ವತವಾಗಿ ವಿರೋಧ ಪಕ್ಷದಲ್ಲೇ ಕುಳಿತುಕೊಳ್ಳುವ ಲಕ್ಷಣಗಳಿವು!

"ನಮ್ಮದು ಪ್ರತಿಪಕ್ಷ. ಹಾಗಾಗಿ ಈ ಹೊತ್ತಿನಲ್ಲಿ ನಾವು ಭರವಸೆ ಕೊಡುವ ಸ್ಥಿತಿಯಲ್ಲಿ ಇಲ್ಲ. ಮುಂದೆ ಅಧಿಕಾರಕ್ಕೆ ಬಂದರೆ ಮಾಡುತ್ತೇವೆ ಎನ್ನುವುದೂ ಅಪ್ರಸ್ತುತ. ಈ ಎರಡೂವರೆ ವರ್ಷಗಳಲ್ಲಿ ಬಿಜೆಪಿಯು ದಿವಾಳಿಯತ್ತ ತಂದಿಟ್ಟಿರುವ ಪಂಚಾಯತ್ ರಾಜ್ ವ್ಯವಸ್ಥೆಯ ರೋಗಲಕ್ಷಣಗಳನ್ನು ಗುರುತಿಸಿ ಅದಕ್ಕೆ ಚಿಕಿತ್ಸೆ ನೀಡುವುದು ನಮ್ಮ ಕರ್ತವ್ಯ. ಚಿಕಿತ್ಸೆಗೆ ಸ್ಪಂದಿಸದ ಸರ್ಕಾರವನ್ನು ಜನಾಂದೋಲನ ಮತ್ತು ಜನಜಾಗೃತಿಯಿಂದ ಮಣಿಸುವ ಸಂಕಲ್ಪ ನಮ್ಮದು."

- ಜಾತ್ಯತೀತ ಜನತಾದಳದ ಪ್ರಣಾಳಿಕೆ

ಹಿಂದೂತ್ವ ಭಯೋತ್ಪಾದನೆ ಹೆಚ್ಚು ಅಪಾಯಕಾರಿಯಲ್ಲವೇ?



ಮೊದಲಿಗೆ ಓದುಗರಲ್ಲಿ ಕೆಲವು ವಿಷಯಗಳನ್ನು ಸ್ಪಷ್ಟಪಡಿಸಬೇಕು. ಮತ್ತೊಮ್ಮೆ ಶೀರ್ಷಿಕೆ ಓದಿ. ನಾವು ಈಗ ಚರ್ಚಿಸುತ್ತಿರುವುದು 'ಹಿಂದೂತ್ವ' ಭಯೋತ್ಪಾದನೆಯೇ ಹೊರತು 'ಹಿಂದೂ' ಭಯೋತ್ಪಾದನೆಯಲ್ಲ. 'ಹಿಂದೂ' ಭಯೋತ್ಪಾದನೆ, 'ಮುಸ್ಲಿಂ' ಭಯೋತ್ಪಾದನೆ ಎಂಬ ಪದ ಪ್ರಯೋಗಗಳೇ ತಪ್ಪು. ಏಕೆಂದರೆ ಆ ಪದಗಳ ಬಳಕೆಯಲ್ಲಿರುವ ಭಾಷಾ ರಾಜಕಾರಣ ಭಯೋತ್ಪಾದಕನೊಬ್ಬ ಮುಸ್ಲಿಮನಾಗಿದ್ದರೆ ಅವನನ್ನು 'ಮುಸ್ಲಿಂ ಭಯೋತ್ಪಾದಕ'ನೆಂದು ಹೇಳುವ ಮೂಲಕ ಸಮಾಜದಲ್ಲಿ ಇಡೀ ಮುಸ್ಲಿಂ ಸಮುದಾಯವೇ ಭಯೋತ್ಪಾದಕರೆಂಬ ಭಾವನೆಯನ್ನು ಹುಟ್ಟುಹಾಕುತ್ತದೆ. ಈಗಾಗಲೇ ಈ ಬಗೆಯ ಭಾಷಾ ರಾಜಕಾರಣದ ಪರಿಣಾಮವನ್ನು ಈ ದೇಶದ ಇಡೀ ಮುಸ್ಲಿಂ ಸಮುದಾಯವೇ ಅನುಭವಿಸುತ್ತಿದೆ. ಹೀಗಾಗಿ ಈಗ ಹಿಂದೂ ಧರ್ಮದ ಹೆಸರಲ್ಲಿ ಕೆಲವು ಸಂಘಟನೆಗಳು ನಡೆಸುತ್ತಿರುವ ಭಯೋತ್ಪಾದನೆಯ ಬಗ್ಗೆ ಚರ್ಚೆ ಮಾಡುವಾಗ 'ಹಿಂದೂ ಭಯೋತ್ಪಾದನೆ' ಎಂದು ಬಳಸುವುದೂ ತಪ್ಪು. ಆದ್ದರಿಂದಲೇ ಇಲ್ಲಿ ನಾವು ಚರ್ಚಿಸುತ್ತಿರುವುದು ಹಿಂದೂ ಧರ್ಮ ರಕ್ಷಣೆಯ ಹೆಸರಿನಲ್ಲಿ ಕೆಲವು ಹಿಂದೂತ್ವವಾದಿ ಸಂಘಟನೆಗಳು ನಡೆಸುತ್ತಿರುವುದು ಹೆಚ್ಚು ಅಪಾಯಕಾರಿಯೇ ಎಂಬುದನ್ನು.

ಇಲ್ಲಿ ಇನ್ನೂ ಒಂದು ವಿಷಯ ಸ್ಪಷ್ಟಗೊಳ್ಳಬೇಕು. ಹಿಂದೂ ಧರ್ಮ ಬೇರೆ. ಹಿಂದೂತ್ವ ಬೇರೆ. ಹಿಂದೂ ಧರ್ಮ ಎಂದರೇನು ಎಂಬ ಚರ್ಚೆಯಿದೆಯಾದರೂ ಈ ದೇಶದ ಜನಸಾಮಾನ್ಯರು ಯಾವುದನ್ನು ಹಿಂದೂ ಧರ್ಮ ಎಂದು ಭಾವಿಸಿಕೊಂಡು, ಇತರ ಧರ್ಮೀಯರೊಂದಿಗೆ ಯಾವುದೇ ಸಂಘರ್ಷವಿಲ್ಲದೆ ಸೌಹಾರ್ದತೆಯಿಂದ ಬದುಕುತ್ತಾ ಬಂದಿದ್ದಾರೋ ಅದು ಹಿಂದೂತ್ವವಲ್ಲ. ಹಿಂದೂತ್ವ ಎಂದರೇನು ಎಂಬುದನ್ನು ಆರೆಸ್ಸೆಸ್ಸಿನ ಎರಡನೇ ಸರಸಂಘ ಚಾಲಕರಾದ ಗೋಳ್ವಾಲ್ಕರ್ 1939ರಲ್ಲಿ ಬರೆದ ತಮ್ಮ *'We or Our Nationhood Defined'* ಎಂಬ ಪುಸ್ತಕದಲ್ಲಿ ತುಂಬಾ ಸ್ಪಷ್ಟವಾಗಿ ವಿವರಿಸಿದ್ದಾರೆ. ಅವರ ಪ್ರಕಾರ:

"The foreign races in Hindustan (read all Muslims and Christian) must either adopt the Hindu culture and language, must learn to respect and hold in reverence Hindu religion, must entertain no idea but those of the glorification of Hindu race and culture, i.e., of the Hindu nation and must lost their separate existence to merge in the Hindu race, or stay in the country, wholly subordinated to the Hindu Nation, claiming nothing, deserving no privileges far less any preferential treatment - not even citizen's rights. There is, at least should be, no other course for them to adopt."

ಅಂದರೆ

"ಈ ಹಿಂದೂಸ್ಥಾನದಲ್ಲಿರುವ ವಿದೇಶಿ ಧರ್ಮಗಳ ಅನುಯಾಯಿಗಳು, ಎಂದರೆ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು, ಒಂದೋ ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಳವಡಿಸಿಕೊಳ್ಳಬೇಕು, ಹಿಂದೂ ಧರ್ಮವನ್ನು ಅತ್ಯಂತ ಗೌರವಿಸುವುದನ್ನು ಕಲಿತುಕೊಳ್ಳಬೇಕು, ಹಿಂದೂ ಜನಾಂಗ ಮತ್ತು ಸಂಸ್ಕೃತಿಯನ್ನು ಅಂದರೆ ಹಿಂದೂ ದೇಶದ ವೈಭವವನ್ನು ಕೊಂಡಾಡುವುದರ ಹೊರತಾಗಿ ಬೇರೇನೂ ಭಾವನೆಗಳನ್ನು ಬೆಳೆಸಿಕೊಳ್ಳಬಾರದು ಮತ್ತು ತಮ್ಮ ಪ್ರತ್ಯೇಕ ಅಸ್ಮಿತೆಗಳನ್ನೆಲ್ಲಾ ಕಳಚಿಕೊಂಡು ಹಿಂದೂ ಜನಾಂಗದೊಳಗೆ ಬೆರೆತುಹೋಗಿಬಿಡಬೇಕು ಅಥವಾ ನಾಗರಿಕ ಹಕ್ಕುಗಳನ್ನೂ ಸಹ ಆಗ್ರಹಿಸದೆ ಮತ್ತು ಆದ್ಯತಾ ಸೌಲಭ್ಯಗಳನ್ನಿರಲಿ ಯಾವುದೇ ಸೌಲಭ್ಯಗಳನ್ನೂ ಸಹ ಅಪೇಕ್ಷಿಸದೆ ಸಂಪೂರ್ಣವಾಗಿ ಹಿಂದೂ ರಾಷ್ಟ್ರಕ್ಕೆ ಅಧೀನವಾಗಿದ್ದುಕೊಂಡು ವಾಸಿಸಬಹುದು. ಇದನ್ನು ಬಿಟ್ಟು ಅವರು ಬೇರಿನ್ನಾವ ಮಾರ್ಗವನ್ನು ಅನುಸರಿಸಲು ಸಾಧ್ಯವಾಗಬಾರದು."

ಅಂದರೆ ಸಾರಾಂಶದಲ್ಲಿ ಇಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ಎರಡನೇ ದರ್ಜೆ ನಾಗರಿಕರಾಗಿ ಬದುಕಬೇಕು ಎಂಬುದೇ ಹಿಂದೂತ್ವದ ಸಾರಾಂಶ. ಮೇಲ್ನೋಟಕ್ಕೆ ಸ್ಪಷ್ಟವಾಗುವಂತೆ ಇದು ಬಹುಸಂಖ್ಯಾತ ಹಿಂದೂಗಳ ಅಭಿಪ್ರಾಯ ಅಲ್ಲವೇ

ಶಿವಸುಂದರ್



ಚಾರ್ವಾಕ

ಅಲ್ಲ, ಇದು ಹಿಂದೂಗಳಲ್ಲಿ ಅಲ್ಪಸಂಖ್ಯಾತರಾದ ಆರೆಸ್ಸೆಸ್ ಮತ್ತದರ ಪರಿವಾರಿಗಳ ವಾದ. ಕೋಮುವಾದ. ಹಿಂದೂತ್ವ ಕೋಮುವಾದ. ಅಷ್ಟೆ. ಇದನ್ನೇ ಮತ್ತೊಂದು ಮಾತಿನಲ್ಲಿ ಹೇಳುವುದಾದರೆ 'ಜೈ ಶ್ರೀರಾಂ' ಎನ್ನುವುದು ಕೋಮುವಾದವಲ್ಲ. ಆದರೆ 'ಇಸ್ ದೇಶ್ ಮೆ ರಹನಾ ಹೈತೋ ಜೈ ಶ್ರೀರಾಂ ಕೆಹನಾ ಹೋಗಾ (ಈ ದೇಶದಲ್ಲಿ ಬದುಕಬೇಕೆಂದಿದ್ದರೆ ಜೈ ಶ್ರೀರಾಂ ಎನ್ನಬೇಕು)' ಎನ್ನುವುದು ಕೋಮುವಾದ. ಕೋಟ್ಯಾಂತರ ಹಿಂದೂ ಧರ್ಮೀಯರಲ್ಲಿ ಇರುವ ಧರ್ಮಭೀರುತನವನ್ನು ಮತ್ತು ರಾಮಭಕ್ತಿಯನ್ನು ತಮ್ಮ ರಾಜಕೀಯಕ್ಕೆ ಬಳಸಿಕೊಳ್ಳಲು ಹಿಂದೂತ್ವವಾದಿಗಳು ಹಿಂದೂ ಧರ್ಮವನ್ನು ದುಷ್ಟವಾಗಿ ಬಳಕೆ ಮಾಡಿಕೊಳ್ಳುತ್ತಿರುವ ರಾಜಕಾರಣವನ್ನೇ 'ಹಿಂದೂತ್ವ' ಎನ್ನಬಹುದು. ಅದು ರಾಮಕೃಷ್ಣ ಪರಮಹಂಸ, ವಿವೇಕಾನಂದ ಮತ್ತಿತರರು ಬೋಧಿಸಿದ ಹಿಂದೂ ಧರ್ಮ ಅಲ್ಲ. ಬದಲಾಗಿ ಹಿಂದೂತ್ವವೆಂಬುದು ಹಿಂದೂಗಳ ಹೆಸರಲ್ಲಿ ಆರೆಸ್ಸೆಸ್ ಮತ್ತದರ ಪರಿವಾರ ಹಿಂದೂಗಳಲ್ಲೇ ಇರುವ ಬಡ, ಶೂದ್ರ, ದಲಿತ ಜನಾಂಗದ ಮೇಲೆ ಮತ್ತು ಇತರ ಧರ್ಮೀಯರ ಮೇಲೆ ನಡೆಸುತ್ತಿರುವ ರಕ್ತಸಿಕ್ತ ಭಯೋತ್ಪಾದನೆ.

ಈಗ ಭಾರತದಲ್ಲಿ ಹಿಂದೂ ಭಯೋತ್ಪಾದನೆ ಹೆಚ್ಚು ಅಪಾಯಕಾರಿಯೋ ಅಥವಾ ಇತರ ಧರ್ಮಗಳಲ್ಲಿರುವ ಮತಾಂಧರು ನಡೆಸುತ್ತಿರುವ ಭಯೋತ್ಪಾದನೆಯು ಹೆಚ್ಚು ಅಪಾಯಕಾರಿಯೋ ಎಂಬ ಪ್ರಶ್ನೆ. ಮೊನ್ನೆ ವಿಕಿಲೀಕ್ಸ್‌ನಲ್ಲಿ ಬಹಿರಂಗಗೊಂಡಿರುವ ಹಲವಾರು ಅಮೆರಿಕದ ಕಾಗದಪತ್ರಗಳಲ್ಲಿ ಕಾಂಗ್ರೆಸ್ಸಿನ ಯುವರಾಜ ರಾಹುಲ್ ಗಾಂಧಿ ಅಮೆರಿಕದ ತಿಮೋತಿ ಎಂಬ ರಾಜತಾಂತ್ರಿಕನ ಜೊತೆ ನಡೆಸಿರುವ ಮಾತುಕತೆಯ ವಿವರಗಳೂ ಬಹಿರಂಗಗೊಂಡಿವೆ. ಅದರಲ್ಲಿ ಒಂದು ಕಡೆ ರಾಹುಲ್ "ಭಾರತದಲ್ಲಿ ಕೆಲವು ಮುಸ್ಲಿಮರು ಲಷ್ಕರ್‌ನಂತಹ ಕೆಲವು ಇಸ್ಲಾಮಿಕ್ ಸಂಘಟನೆಗಳಿಗೆ ಬೆಂಬಲ ನೀಡುತ್ತಿರುವ ಮಾಹಿತಿ ಇರುವುದು ನಿಜವಾದರೂ ಈ ದೇಶಕ್ಕೆ ಅದಕ್ಕಿಂತ ಹೆಚ್ಚಿನ ಅಪಾಯವಿರುವುದು ಧಾರ್ಮಿಕ ಉದ್ರಿಕ್ತತೆಯನ್ನುಂಟುಮಾಡಿ ಹಿಂದೂ ಮುಸ್ಲಿಮರ ನಡುವೆ ರಾಜಕೀಯ ಸಂಘರ್ಷವನ್ನೇರ್ಪಡಿಸುವ ಕೆಲವು ಮೂಲಭೂತವಾದಿ ಹಿಂದೂ ಸಂಘಟನೆಗಳಿಂದ" ಎಂದು ಹೇಳಿದ್ದಾರೆ. ಇದನ್ನೇ ದಾಳವಾಗಿ ಬಳಸಿಕೊಳ್ಳುತ್ತಿರುವ ಆರೆಸ್ಸೆಸ್ ಮತ್ತು ಬಿಜೆಪಿಗಳು ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಮಹಾನ್ ದೇಶದ್ರೋಹವನ್ನೇ ಮಾಡಿದ್ದಾರೆಂಬಂತೆ ದೇಶಾದ್ಯಂತ ಹುಯಿಲೆಬ್ಬಿಸಿವೆ. ಆದರೆ ಅಪರೂಪಕ್ಕೆ ಸತ್ಯ ನುಡಿದ ಕಾಂಗ್ರೆಸ್ ಅದನ್ನು ರಾಜಕೀಯವಾಗಿ ದಕ್ಕಿಸಿಕೊಳ್ಳುವ ಯಾವ ಬದ್ಧತೆಯನ್ನೂ ತೋರುತ್ತಿಲ್ಲ. ಏಕೆಂದರೆ ಹಿಂದೂ ಓಟುಗಳು ಬೀಳದೇ ಹೋಗುತ್ತದೆಂಬ ಭಯ.

ಹಾಗೆ ನೋಡಿದರೆ ಬಿಜೆಪಿ ಈ ದೇಶದಲ್ಲಿ ಹುಟ್ಟಿ ಬೆಳೆಯಲು ಕಾಂಗ್ರೆಸ್‌ನ ಮೃದು ಹಿಂದೂತ್ವವಾದವೂ ಕಾರಣವೇ. ಹೀಗಾಗಿಯೇ ಅದು ಕರ್ನಾಟಕವನ್ನೂ ಒಳಗೊಂಡಂತೆ ಎಲ್ಲೂ ಹಿಂದೂತ್ವವಾದಿಗಳ ವಿರುದ್ಧ ನಿರ್ಣಾಯಕ ಸಮರಕ್ಕೆ ಇಳಿಯಲೇ ಇಲ್ಲ. ಹಲವು ಕಡೆ ತಾವೂ ಸಹ ಈ ರಕ್ತಪಿಪಾಸು ಸಂಘಪರಿವಾರಿಗಳ ಜೊತೆ ಸೇರಿಕೊಂಡು ಮುಸ್ಲಿಮರ ರಕ್ತ ಕುಡಿದ ಉದಾಹರಣೆಗಳೂ ಉಂಟು. ಈಗಲಾದರೂ ಯಾವುದನ್ನು ರಾಹುಲ್ ಗಾಂಧಿ ಜನರ ಮುಂದೆ ಬಹಿರಂಗವಾಗಿ ಪ್ರಚಾರ ಮಾಡಬೇಕಿತ್ತೋ ಅದನ್ನು ಗುಟ್ಟಾಗಿ ಅಮೆರಿಕನ್ ರಾಜತಾಂತ್ರಿಕನ ಮುಂದೆ ಹೇಳಿದ್ದಾನೆ. ಆರೆಸ್ಸೆಸ್ ದಾಳಿ ಶುರುವಾದ ತಕ್ಷಣ ತಾನು ಹೇಳಿದ್ದು ಸತ್ಯ ಎಂದು ಹೇಳಿ ದಕ್ಕಿಸಿಕೊಳ್ಳುವ ರಾಜಕೀಯ ದೃಢತೆಯನ್ನು ಇಡೀ ಕಾಂಗ್ರೆಸ್ ಪಕ್ಷ ತೋರಿಸುತ್ತಿಲ್ಲ. ಬದಲಿಗೆ ಏನೋ ತಪ್ಪಾಗಿ ಹೋಗಿದೆಯೆಂಬ ಅಭಿಪ್ರಾಯವನ್ನೇ ವ್ಯಕ್ತಪಡಿಸುತ್ತಿದ್ದಾರೆ. ಇದು ನಮ್ಮ ದೇಶದ ಸಂಸದೀಯ ಜಾತ್ಯತೀತತೆಯ ಹಣೆಬರಹ!


ಹಿಂದೂ ಭಯೋತ್ಪಾದನೆಯೆಂಬ ಪರಿಭಾಷೆಯನ್ನೇ ಬಳಸಬಾರದೆಂಬಂತೆ ಹಿಂದೂತ್ವವಾದಿಗಳೂ ಹುಯಿಲೆಬ್ಬಿಸಿದ್ದಾರೆ. ಅದಕ್ಕೆ ಅವರು ಮುಂದಿಡುತ್ತಿರುವ ವಾದ ಹಿಂದೂಗಳು ಉದಾರ ಹೃದಯಿಗಳು; ಅವರು ಭಯೋತ್ಪಾದಕರಾಗಲು ಸಾಧ್ಯವೇ ಇಲ್ಲ ಎಂಬುದು ನಿಜ. ಸಾಮಾನ್ಯ ಹಿಂದೂಗಳಾಗಲೀ, ಮುಸ್ಲಿಮರಾಗಲೀ ಎಲ್ಲರೂ ಉದಾರ ಹೃದಯಿಗಳೇ. ಆದರೆ ಹಿಂದೂತ್ವವಾದಿಗಳಾದ ಸಂಘಪರಿವಾರದವರು ಉದಾರ ಹೃದಯಿಗಳಲ್ಲವೆಂಬುದೂ ಅಷ್ಟೇ ನಿಜವಾದ ವಿಷಯ. ಸಾಮಾನ್ಯ ಹಿಂದೂವಿನ ನೆರಳಲ್ಲಿ ಹಿಂದೂತ್ವ ಭಯೋತ್ಪಾದಕರು ಬಚ್ಚಿಟ್ಟುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ.

ಇನ್ನು 2004-2008ರ ನಡುವೆ ಮಾಲೆಗಾಂವ್, ಅಜ್ಮೀರ್, ಕಾನ್ಪುರ, ಹೈದರಾಬಾದ್ ಇನ್ನಿತರ ಕಡೆಗಳಲ್ಲಿ ನಡೆದ ಬಾಂಬ್ ಸ್ಫೋಟದ ಹಿಂದೆ (ಅಂದರೆ ಬಾಂಬ್ ಭಯೋತ್ಪಾದನೆಯ ಹಿಂದೆ) ಪ್ರಗ್ಯಾ ಸಿಂಗ್, ಕರ್ನಲ್ ಪುರೋಹಿತ್‌ರಂಥ ಉಗ್ರಗಾಮಿಗಳು ಮತ್ತು ಅಭಿನವ್ ಭಾರತ್ ಹಾಗೂ ಸನಾತನ ಸಂಸ್ಥೆಗಳಂಥ ಹಿಂದೂತ್ವವಾದಿ ಭಯೋತ್ಪಾದಕ ಸಂಘಟನೆಗಳು (ಹಿಂದೂ ಭಯೋತ್ಪಾದಕರಲ್ಲ) ಇರುವುದು ಈಗ ಸಾಬೀತಾಗಿದೆ. ಆದರೂ ಇದು ಕೇವಲ ಕೆಲವು ಬುದ್ಧಿಗೇಡಿ ವ್ಯಕ್ತಿಗಳು ಮಾಡಿರುವ ಕೆಲವೇ ಕೆಲವು ಪ್ರಕರಣಗಳು, ಇದನ್ನು ಇಸ್ಲಾಮಿಕ್ ಉಗ್ರಗಾಮಿಗಳು ನಡೆಸುತ್ತಿರುವ ಭಯೋತ್ಪಾದನೆಯೊಂದಿಗೆ ಹೋಲಿಸಲು ಬರುವುದಿಲ್ಲ ಎಂದು ಲಜ್ಜೆಗೇಡಿ ಆರೆಸ್ಸೆಸ್ಸಿಗರು ಮತ್ತು ಅವರ ಮಾಧ್ಯಮ ತುತ್ತೂರಿಗಳು ವಾದಿಸುತ್ತಿದ್ದಾರೆ. ಆದರೆ ಈ ಎಲ್ಲಾ ವ್ಯಕ್ತಿಗಳಿಗೂ ಮತ್ತು ಸಂಘಟನೆಗಳಿಗೂ ಆರೆಸ್ಸೆಸ್‌ನೊಂದಿಗೆ ನೇರ ಸಂಬಂಧವಿರುವುದು ಈಗ ಜಗಜ್ಜಾಹೀರಾಗಿದೆ. ಪ್ರಾರಂಭದಲ್ಲಿ ಅವರೆಲ್ಲಾ ಆರೆಸ್ಸೆಸ್‌ನ ಮಾಜಿ ಕಾರ್ಯಕರ್ತರೆಂದು ತಳ್ಳಿಹಾಕಲು ಸಂಘಪರಿವಾರ ಪ್ರಯತ್ನಿಸಿತ್ತು. ಆದರೆ ಅಜ್ಮೀರ್ ಭಯೋತ್ಪಾದನೆಯ ಪ್ರಕರಣದಲ್ಲಿ ಬಂಧಿತನಾದ ಇಂದ್ರೇಶ್ ಕುಮಾರ್ ಆರೆಸ್ಸೆಸ್‌ನ ಅಖಿಲ ಭಾರತ ನಾಯಕ ಗಣದಲ್ಲಿ ಪ್ರಮುಖ. ಹಾಗೆ ಇತ್ತೀಚೆಗೆ ಬಂಧಿತನಾದ ಸ್ವಾಮೀ ಅಸೀಮಾನಂದ ಆರೆಸ್ಸೆಸ್‌ನ ಮತ್ತೊಬ್ಬ ಪ್ರಮುಖಾತಿ ಪ್ರಮುಖ. ಹೀಗೆ ಈ ಹೊಸ ಹಿಂದೂತ್ವವಾದಿ ಬಾಂಬ್ ಭಯೋತ್ಪಾದನೆ ಯಾರೋ ಕೆಲವು ತಲೆಕೆಟ್ಟ ವ್ಯಕ್ತಿಗಳು ಅಥವಾ ಸಂಘಟನೆಗಳು ಮಾಡುತ್ತಿರುವ ತಿಳಿಗೇಡಿ ಕೃತ್ಯವಲ್ಲ. ಇದು ಈ ದೇಶದ ಸೌಹಾರ್ದತೆಯನ್ನು ನಾಶಮಾಡಲು ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ಹಿಂದೂತ್ವವಾದಿ ಆರೆಸ್ಸೆಸ್ ನಡೆಸುತ್ತಿರುವ ಸಂಘಟಿತ ಫ್ಯಾಸಿಸ್ಟ್ ದಾಳಿ.

ಹಲವು ಮುಸ್ಲಿಂ ದೇಶಗಳ ಮತ್ತು ಪ್ರಭುತ್ವದ ಬೆಂಬಲದೊಂದಿಗೆ ನಡೆಯುತ್ತಿರುವ ಇಸ್ಲಾಂ ಭಯೋತ್ಪಾದನೆಯನ್ನು ಯಾರೋ ಬೆರಳೆಣಿಕೆಯಷ್ಟು ಜನ ನಡೆಸುತ್ತಿರುವ ತಿಳಿಗೇಡಿ ಕೃತ್ಯದೊಂದಿಗೆ ಹೋಲಿಸುವುದು ತಪ್ಪೆಂಬುದು ಅವರ ಮತ್ತೊಂದು ಅಪಾಯಕಾರಿ ವಾದ.

▶▶ 15

ಪೊಲೀಸ್-ಮಾಧ್ಯಮ ಭಯೋತ್ಪಾದನೆಗೆ ಕೊನೆ ಎಂದು?



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ನಮ್ಮ ಚಿಕ್ಕಮಗಳೂರಿನ ಮೂಡಿಗೆರೆಯ ಹುಡುಗ, ...ಗಳೂರಿನ ವೈದ್ಯ, ಭಾರತದ ಓರ್ವ ಸುಸಂಸ್ಕೃತ ಪುತ್ರ ... ಮೊಹಮ್ಮದ್ ಹನೀಫ್‌ನಿಗೆ ಕೊನೆಗೂ ಆಸ್ಟ್ರೇಲಿಯಾ ...ರದ ಸರ್ಕಾರ ವಿಷಾದವನ್ನು ವ್ಯಕ್ತಪಡಿಸಿದೆ. ಅಷ್ಟೇ ...ದೆ, ಮೂರು ವರ್ಷಗಳ ಹಿಂದೆ ಹನೀಫನನ್ನು ...ಮವಾಗಿ ಬಂಧಿಸುವ ಮೂಲಕ ಆತನಿಗೆ ಮಾನಸಿಕ ...ಸೆ ನೀಡಿ, ಸಾರ್ವಜನಿಕವಾಗಿ ಅಪಮಾನ ಮಾಡಿದ್ದಕ್ಕೆ ...ಹಾರವಾಗಿ ಸುಮಾರು ಒಂದು ಮಿಲಿಯನ್ ಆಸ್ಟ್ರೇಲಿ...ನ್ ಡಾಲರ್‌ಗಳನ್ನು ನೀಡಿದೆ.

ಮೂಡಿಗೆರೆಯ ಒಂದು ಸಾಮಾನ್ಯ ಸಂಸಾರದಲ್ಲಿ ಜನಿಸಿ, ...ವನಿದ್ದಾಗಲೇ ಶಾಲಾ ಶಿಕ್ಷಕರಾಗಿದ್ದ ತನ್ನ ತಂದೆಯನ್ನು ...ದುಕೊಂಡು, ಮನೆಯ ಹಿರಿಯ ಮಗನಾಗಿ ಸಂಸಾರದ ...ಬ್ದಾರಿಯನ್ನು ಹೊತ್ತು ಪರೀಕ್ಷೆಗಳಲ್ಲಿ ಉನ್ನತ ಅಂಕಗಳನ್ನು ...ಸಿ, ಸ್ಕಾಲರ್‌ಶಿಪ್ ಪಡೆದು ವೈದ್ಯನಾದವನು ಹನೀಫ್. ...ನಂತರ ವಿದೇಶದಲ್ಲಿ ವಿದ್ಯಾಭ್ಯಾಸ ಮುಗಿಸಿ, ತನ್ನ ತಂಗಿಗೆ ...ದುವೆ ಮಾಡಿಸಿ, ತಮ್ಮನನ್ನು ಓದಿಸಿ, ತಾಯಿಗೆ ...ಧಾರಸ್ತಂಭವಾಗಿದ್ದು, ಕೈಹಿಡಿದ ಫಿರ್ದೋಸ್ ...ಯಾಳಿಗೆ ಒಳ್ಳೆಯ ಪತಿಯಾಗಿ ಸ್ವಾಭಿಮಾನದ, ಆದರ್ಶ ...ದುಕು ರೂಪಿಸಿಕೊಂಡಿದ್ದ ಹನೀಫ್.


ಸೌಮ್ಯ ಸ್ವಭಾವದ ಹನೀಫ್‌ನದ್ದು ಮಾತಿನಲ್ಲೂ ...ರನ್ನೂ ನೋಯಿಸದ ವ್ಯಕ್ತಿತ್ವ. ಅಂತಹ ಹನೀಫನನ್ನು ...ಯೋತ್ಪಾದಕ ಎಂದು ಆಸ್ಟ್ರೇಲಿಯಾದ ಪೊಲೀಸರು ...ಧಿಸಿದ್ದರು. ಇಲ್ಲಸಲ್ಲದ ಆರೋಪಗಳನ್ನು ಮಾಡಿದ್ದರು. ...ಟ್ಟಿ ದಾಖಲೆಗಳನ್ನು ಸೃಷ್ಟಿಸಿದ್ದರು. ಶತಾಯಗತಾಯ ...ಫ್ ಒಬ್ಬ ಅಪಾಯಕಾರಿ ಭಯೋತ್ಪಾದಕ ಎಂದು ...ಬಿಸಿ ಆತನನ್ನು ಜೈಲಿಗೆ ದೂಡಲು ಇನ್ನಿಲ್ಲದ ...ಯತ್ನಗಳನ್ನು ಮಾಡಿದ್ದರು.

...ಹನೀಫ್ ಓರ್ವ ಮುಸಲ್ಮಾನ ಎಂಬ ಏಕೈಕ ಕಾರಣಕ್ಕೆ ... ಭಯೋತ್ಪಾದಕ ಎಂಬ ಆರೋಪವನ್ನು ಹೊರಬೇಕಾ..., ಆದರೆ ಹನೀಫ್ ಎಂತಹ ಶುದ್ಧ ಮನಸ್ಸಿನ, ನಿಶ್ಚಲ ...ತ್ವದ ಮನುಷ್ಯನೆಂದರೆ ಆತನ ಅಮಾಯಕತನವೇ ಅವರೆಲ್ಲ ...ಯತ್ನಗಳನ್ನು ವಿಫಲಗೊಳಿಸಿತ್ತು.

...ಅಕ್ರಮ ಬಂಧನ, ಮಾನಸಿಕ ಹಿಂಸೆ ಮತ್ತು ...ಯೋತ್ಪಾದಕ ಎಂಬ ಸುಳ್ಳು ಹಣೆಪಟ್ಟಿಯನ್ನು ಒಂದು ...ಲಿಯನ್ ಡಾಲರ್‌ಗಳು ತೊಡೆದು ಹಾಕುವುದಿಲ್ಲ. ...ರೆ ಸರ್ಕಾರವೊಂದು ತಾನು ಮಾಡಿದ ತಪ್ಪಿಗೆ ಕೇಳಿದ ..., ಮತ್ತು ನೀಡಿದ ಪರಿಹಾರ ಒಂದಿಷ್ಟು ನೆಮ್ಮದಿಯ ...ದರೂ ನೀಡುತ್ತದೆ.

...ಮೂರು ವರ್ಷಗಳ ಹಿಂದೆ ಜುಲೈ 2 ರಂದು ಇತ್ತ ...ಲಿಯಾದಲ್ಲಿ ಹನೀಫನನ್ನು ಪೊಲೀಸರು ಬಂಧಿಸುವ ...ದು ದಿನಗಳ ಮುನ್ನ ಅತ್ತ ಜೂನ್ 30 ರಂದು ...ಗ್ಲೆಂಡಿನ ಪೊಲೀಸರು ಬೆಂಗಳೂರು ಮೂಲದ ಇಬ್ಬರು ...ಹೋದರರಾದ ಕಫೀಲ್ ಅಹಮದ್ ಮತ್ತು ಡಾ. ...ಬೀಲ್ ಅಹಮದ್‌ರನ್ನು ಬಂಧಿಸಿದ್ದರು. ಕಾರಣ ಬ್ರಿಟನ್ನಿನ ...ಗೋ ವಿಮಾನ ನಿಲ್ದಾಣದ ಮೇಲೆ ಕಫೀಲ್ ಅಹಮದ್ ...ಸಿದ್ದ ಕಾರ್ ಬಾಂಬ್ ದಾಳಿ. ಆ ದಾಳಿಯಲ್ಲಿ ಕಫೀಲ್‌ನ ...ರ ಬಹಳಷ್ಟು ಸುಟ್ಟು ಹೋಗಿ ಆತ ಇಂಗ್ಲೆಂಡಿನಲ್ಲೇ ...ಣ ಹೊಂದಿದ. ಆದರೆ ಆ ದಾಳಿಯ ಬಗ್ಗೆ ಅವನ ...ಹೋದರ ಡಾ. ಸಬೀಲ್‌ಗೆ ಮುಂಚಿತವಾಗಿ ಗೊತ್ತಿದ್ದರೂ ಆತ ಪೊಲೀಸರಿಗೆ ತಿಳಿಸಲಿಲ್ಲ ಎಂಬ ಆರೋಪ ಮಾಡಲಾಗಿತ್ತು. ಅಂದಹಾಗೆ ಇಂಗ್ಲೆಂಡಿನಲ್ಲಿ ಬಂಧಿತರಾದ ಅಹಮದ್ ಸಹೋದರರು ಮತ್ತು ಆಸ್ಟ್ರೇಲಿಯಾದಲ್ಲಿ ಬಂಧನಕ್ಕೊಳಗಾಗಿದ್ದ ಡಾ. ಮೊಹಮದ್ ಹನೀಫ್ ಸೋದರ ಸಂಬಂಧಿಗಳು.

ಈ ಮೂವರೂ ಬೆಂಗಳೂರಿನವರಾಗಿದ್ದರಿಂದ ಇಲ್ಲಿನ ಮಾಧ್ಯಮಗಳು ಪುಳಕಗೊಂಡವು. ಈ ಮೂವರು ಮಾತ್ರವಲ್ಲ, ಅವರ ಕುಟುಂಬದವರೂ ಸಹ ಉಗ್ರರು, ಅವರಿಗೆ ಅಲ್‌ಕೈದಾ ಜೊತೆಗೆ ನಂಟು ಇದೆ, ಪ್ಯಾಲೆಸ್ಟೀನ್ ಉಗ್ರರೊಂದಿಗೆ ಸಂಪರ್ಕ ಇದೆ, ಇದಕ್ಕೆಲ್ಲ ಸೌದಿ ಅರೇಬಿಯಾದಿಂದ ಹಣ ಬರುತ್ತಿದೆ ಎಂದೆಲ್ಲ ವರದಿ ಮಾಡುವ ಮೂಲಕ ಪತ್ರಿಕಾ ಭಯೋತ್ಪಾದನೆಯನ್ನು ನಡೆಸಿದ್ದರು. ಇದೆಲ್ಲದರಿಂದ ಬೇಸತ್ತಿದ್ದ ಅಹಮದ್ ಸಹೋದರರ ಕುಟುಂಬ "ಇನ್ನು ಮೀಡಿಯಾದವರನ್ನು ಮಾತನಾಡಿಸುವುದು ಅನವಶ್ಯಕ" ಎಂಬ ತೀರ್ಮಾನಕ್ಕೆ ಬಂದು ಅವರ ಮನೆ ಮುಂದೆ ಠಿಕಾಣಿ ಹೂಡಿದ್ದ ಪತ್ರಕರ್ತರನ್ನು ಮಾತನಾಡಿಸುವುದನ್ನೇ ನಿಲ್ಲಿಸಿದ್ದರು. ಆದರೂ ಆಗ ಅಹಮದ್ ಸಹೋದರರ ತಾಯಿ ಡಾ. ಜಕಿಯಾ ಅವರು ಸಂದರ್ಶನವನ್ನು ನೀಡಿದ್ದು 'ಲಂಕೇಶ್' ವಾರಪತ್ರಿಕೆಗೆ ಮಾತ್ರ (ಜುಲೈ 18, 2007 ರ ಸಂಚಿಕೆ).



ಆಗ ನಮ್ಮ ವಿರುದ್ಧವೂ ಕೆಲ ಮಾಧ್ಯಮಗಳು ಮತ್ತು ಪೊಲೀಸರು ಪಿತೂರಿ ನಡೆಸಿದ್ದರು. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ನಮ್ಮ ಸಂದರ್ಶನವನ್ನೇ 'ಮುಸ್ಲಿಂ ಭಯೋತ್ಪಾದಕರೊಂದಿಗೆ ನಕ್ಸಲರ ನಂಟು' ಎಂದು ದೊಡ್ಡದಾಗಿ ವರದಿ ಮಾಡಿತ್ತು, ಡೆಕ್ಕನ್ ಹೆರಾಲ್ಡ್ ಕೂಡ ಅಂತಹದ್ದೇ ವರದಿಯನ್ನು ಪ್ರಕಟಿಸಿತ್ತು, ಇದನ್ನು ನೋಡಿ ಕುಪಿತಳಾದ ನಾನು ಟೈಮ್ಸ್ ಪತ್ರಿಕೆಯ ಸಂಪಾದಕ ಮತ್ತು ಚೀಫ್ ರಿಪೋರ್ಟರ್‌ಗಳಿಗೆ ಫೋನ್ ಮಾಡಿ ಅವರಿಬ್ಬರನ್ನೂ ತರಾಟೆಗೆ ತೆಗೆದುಕೊಂಡಿದ್ದೆ.

ಅದೇನೇ ಇರಲಿ, ಕಫೀಲ್ ಅಹಮದ್ ಭಯೋತ್ಪಾದಕ ಕೃತ್ಯವೆಸಗಿ (ಅದೃಷ್ಟವಶಾತ್ ಆ ದಾಳಿಯಲ್ಲಿ ಬೇರೆ ಯಾರಿಗೂ ಹಾನಿ ಆಗಲಿಲ್ಲ) ತನ್ನ ಪ್ರಾಣವನ್ನೇ ತೆತ್ತ, ಆದರೆ ಆತನ ಕೃತ್ಯದಲ್ಲಿ ಯಾವುದೇ ರೀತಿಯಲ್ಲಿ ಭಾಗಿ ಆಗದಿದ್ದ ಆತನ ಸಹೋದರ, ಸಹೋದರಿ, ತಾಯಿ, ತಂದೆ, ಸ್ನೇಹಿತರು; ಸಂಬಂಧಿ ಹನೀಫ್ ಅವರನ್ನೆಲ್ಲ ಸಾರಾಸಗಟಾಗಿ ಭಯೋತ್ಪಾದಕರು ಎಂದು ಪೊಲೀಸರು ಮತ್ತು ಮಾಧ್ಯಮದವರು ಬಣ್ಣಿಸಿದ್ದು ಎಷ್ಟು ಸರಿ? ಆನಂತರ ಇವರೆಲ್ಲ ಅಪರಾಧಿಗಳಲ್ಲ ಎಂದು ಗೊತ್ತಾದ ನಂತರವೂ ಒಂದು ಸಾಲಿನ ವಿಷಾಧವನ್ನು ವ್ಯಕ್ತಪಡಿಸದಿರುವುದು ಎಂತಹ ಪತ್ರಿಕಾ ಧರ್ಮ?

ಈಗ ಡಾ. ಮೊಹಮದ್ ಹನೀಫ್‌ನಿಗಾದರೂ ನ್ಯಾಯ ಸಿಕ್ಕಿದೆ. ಆದರೆ ಆತನಂತೆ ಮುಸಲ್ಮಾನರು ಎಂಬ ಕಾರಣಕ್ಕೆ ಹಲವಾರು ಜನರ ಮೇಲೆ ವಿವಿಧ ಆರೋಪಗಳನ್ನು ಹೊರಿಸಿ ಅವರನ್ನೆಲ್ಲ ನಮ್ಮ ದೇಶದ ವಿವಿಧ ಜೈಲುಗಳಲ್ಲಿ ಕೂಡಿಡಲಾಗಿದೆಯಲ್ಲ? ಅವರೆಲ್ಲರ ವಿಚಾರಣೆಗಳು ಮುಗಿದು ಅವರಿಗೆ ಶಿಕ್ಷೆ ಅಥವಾ ಬಿಡುಗಡೆ ಆಗುವುದೆಂದು? ಅವರಲ್ಲಿ ಹಲವರು ಅಮಾಯಕರು ಎಂಬ ತೀರ್ಪು ಬಂದನಂತರ ಅವರಿಗಾದ ಅನ್ಯಾಯಕ್ಕೆ ನಮ್ಮ ಸರ್ಕಾರ ಅವರಿಗೆ ಪರಿಹಾರ ಧನ ನೀಡುತ್ತದೆಯೇ?

ಈ ಪ್ರಶ್ನೆ ಯಾಕೆಂದರೆ ನಮ್ಮ ದೇಶದಲ್ಲಿ ಅದೆಷ್ಟೋ ಅಮಾಯಕರಿಗೆ ಭಯೋತ್ಪಾದಕ ಎಂಬ ಹಣೆಪಟ್ಟ ಹಚ್ಚಿ ಜೈಲಿಗೆ ದೂಡಿದ್ದ ಪ್ರಕರಣಗಳು ನಡೆದಿದೆ.

ಉದಾಹರಣೆಗೆ 2007ರಲ್ಲಿ ಹೈದರಾಬಾದಿನ ಮೆಕ್ಕಾ ಮಸೀದಿಯಲ್ಲಿ ಸಂಭವಿಸಿದ ಬಾಂಬ್ ದಾಳಿಗೆ ಸಂಬಂಧಿಸಿದಂತೆ ಹೈದರಾಬಾದ್ ಪೊಲೀಸರು ಹತ್ತಾರು ಮುಸಲ್ಮಾನರನ್ನು ಬಂಧಿಸಿ ಅವರಿಗೆ ಇನ್ನಿಲ್ಲದ ಚಿತ್ರಹಿಂಸೆ ನೀಡಿದ್ದರು. ಆದರೆ ಆನಂತರ ಗೊತ್ತಾಗಿದ್ದೇನೆಂದರೆ ಆ ಬಾಂಬ್ ದಾಳಿಯ ಹಿಂದೆ ಮುಸಲ್ಮಾನ ಭಯೋತ್ಪಾದಕರ ಬದಲಾಗಿ ಹಿಂದೂತ್ವವಾದಿ ಭಯೋತ್ಪಾದಕರಿದ್ದಾರೆಂದು. ಈಗ ಆ ಅಮಾಯಕ ಮುಸಲ್ಮಾನರನ್ನೆಲ್ಲ ಹೈದರಾಬಾದ್ ಪೊಲೀಸರು ಬಿಡುಗಡೆ ಮಾಡಿದ್ದಾರಲ್ಲದೆ, ಅವರ ಕ್ಷಮೆ ಕೇಳಿ ಅವರೆಲ್ಲ ಮತ್ತೆ ತಮ್ಮ ಬದುಕನ್ನು ಮುಂದುವರಿಸುವಂತೆ ನೆರವನ್ನೂ ನೀಡುತ್ತಿದ್ದಾರೆ.

ಹಾಗೆಯೇ ಪಾರ್ಲಿಮೆಂಟ್ ಮೇಲೆ ನಡೆದ ದಾಳಿಗೆ ಸಂಬಂಧಿಸಿದಂತೆ ದೆಹಲಿ ವಿಶ್ವವಿದ್ಯಾಲಯದ ಅಧ್ಯಾಪಕ ಎಸ್.ಎ.ಆರ್. ಗಿಲಾನಿ ಪ್ರಕರಣವನ್ನು ಯಾರಾದರೂ ಮರೆಯಲಾದೀತೆ? ಆ ದಾಳಿಗೂ ಗಿಲಾನಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಅವರು ಕಾಶ್ಮೀರಿಗಳ ರಾಷ್ಟ್ರೀಯತೆಯಲ್ಲಿ ನಂಬಿಕೆ ಇಟ್ಟಿರುವವರು ಎಂಬ ಏಕೈಕ ಕಾರಣಕ್ಕೆ ಅವರನ್ನು ಬಂಧಿಸಿದ್ದ ದೆಹಲಿ ಪೊಲೀಸರು ಅವರಿಗೂ ಚಿತ್ರಹಿಂಸೆ ನೀಡಿದ್ದರು. ತನಗೂ ಪಾರ್ಲಿಮೆಂಟ್ ಮೇಲಿನ ದಾಳಿಗೂ ಸಂಬಂಧ ಇದೆ ಎಂದು ಒಪ್ಪಿಕೊಳ್ಳದಿದ್ದರೆ ಗಿಲಾನಿ ಅವರ ಪತ್ನಿಯ ಮೇಲೆ ಅತ್ಯಾಚಾರ ನಡೆಸುವುದಾಗಿಯೂ, ಅವರ ಪುಟ್ಟ ಮಗನನ್ನು ಕೊಂದು ಹಾಕುವುದಾಗಿಯೂ ಪೊಲೀಸರು ಬೆದರಿಸಿದ್ದರು. ಆದರೆ ಗಿಲಾನಿ ಅದ್ಯಾವುದಕ್ಕೂ ಹೆದರಿರಲಿಲ್ಲ.

ಗಿಲಾನಿ ವಿರುದ್ಧ ಪೊಲೀಸರು ನೀಡಿದ್ದ ಖೊಟ್ಟಿ ಸಾಕ್ಷ್ಯಗಳನ್ನೇ ನಂಬಿದ ವಿಶೇಷ ಪೊಟಾ ನ್ಯಾಯಾಲಯದ ಅವರಿಗೆ ಮರಣದಂಡನೆಯನ್ನು ವಿಧಿಸಿತ್ತು. ಇದನ್ನು ಪ್ರಶ್ನಿಸಿ ಗಿಲಾನಿ ಪರವಾಗಿ ಖ್ಯಾತ ವಕೀಲೆ ನಂದಿತಾ ಹಕ್ಸರ್ ಸುಪ್ರೀಂ ಕೋರ್ಟಿನ ಮೆಟ್ಟಿಲೇರಿದ್ದರು. ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ ಮುಂದುವರೆಯುತ್ತದೋ ಸಂದರ್ಭದಲ್ಲಿ ತಮ್ಮ ದುಷ್ಟತನ ಎಲ್ಲ ಬಯಲಾಗುತ್ತದೋ ಎಂದು ಹೆದರಿದ ದೆಹಲಿ ಪೊಲೀಸರು ಗಿಲಾನಿಯವರನ್ನೇ ಕೊಂದು ಹಾಕಲು ಪ್ರಯತ್ನಿಸಿದ್ದರು. ಅದೃಷ್ಟವಶಾತ್ ಗಿಲಾನಿ ಅವರ ದೇಹವನ್ನು ಬಂದೂಕಿನ ಗುಂಡುಗಳು ಹೊಕ್ಕಿದರೂ ಪ್ರಾಣಾಪಾಯದಿಂದ ಬಚಾವಾಗಿದ್ದರು. ಕೊನೆಗೆ ಸುಪ್ರೀಂಕೋರ್ಟ್ ಗಿಲಾನಿ ಅವರು ನಿರ್ದೋಷಿ ಎಂದು ತೀರ್ಪು ನೀಡುವ ಮೂಲಕ ಅವರನ್ನು ನೇಣುಕುಣಿಕೆಯಿಂದ ಬಚಾವು ಮಾಡಿತ್ತು.

ಅದೇ ಪಾರ್ಲಿಮೆಂಟ್ ಮೇಲಿನ ದಾಳಿಗೆ ಸಂಬಂಧಿಸಿದಂತೆ ಈಗ ಮರಣದಂಡನೆಗೆ ಗುರಿಯಾಗಿ ಜೈಲಿನಲ್ಲಿರುವ ಅಫಜಲ್ ಗುರು ಸನ್ನಿವೇಶವೂ ಇದಕ್ಕಿಂತ ಭಿನ್ನವಾಗಿಲ್ಲ. ಎಸ್.ಎ.ಆರ್. ಗಿಲಾನಿ ಅವರಂತೆ ಅಫ್ಜಲ್ ಗುರು ಅವರನ್ನು ಕೂಡ ಈ ಕೇಸಿನಲ್ಲಿ ಪೊಲೀಸರು ಬೇಕಂತಲೇ ಫಿಟ್ ಮಾಡಿದ್ದರು. ಸುಪ್ರೀಂಕೋರ್ಟ್ ಕೂಡ ಅಫ್ಜಲ್ ಗುರು ಯಾವುದೇ ಉಗ್ರಗಾಮಿ ಗುಂಪಿಗೆ ಅಥವಾ ಸಂಸ್ಥೆಗೆ ಸೇರಿದವನೆಂದು ಸಾಬೀತಾಗಿಲ್ಲವೆಂದೂ, ದಾಳಿಯಲ್ಲಿ ಆತನ ಪಾತ್ರ ಇತ್ತು ಎಂಬುದೂ ಸಾಬೀತಾಗಿಲ್ಲವೆಂದೂ ಹೇಳಿತಾದರೂ 'ಸಮಾಜದ ಸಮಷ್ಟಿ ಪ್ರಜ್ಞೆ'ಯನ್ನು ತೃಪ್ತಿಪಡಿಸಲು ಆತನಿಗೆ ಮರಣದಂಡನೆಯನ್ನು ವಿಧಿಸಿತು.

ಇದೆಲ್ಲ ದೂರದ ಹೈದರಾಬಾದ್ ಮತ್ತು ದೆಹಲಿಯ ಮಾತು. ನಮ್ಮ ರಾಜ್ಯದಲ್ಲೂ ಇಂತಹ ಹಲವಾರು ಪ್ರಕರಣಗಳು ನಡೆದಿವೆ. ಉದಾಹರಣೆಗೆ ಹುಬ್ಬಳ್ಳಿಯ ನ್ಯಾಯಾಲಯದಲ್ಲಿ ಸಂಭವಿಸಿದ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಮೊಹಮ್ಮದ್ ಆಸೀಫ್ ಎಂಬ ವೈದ್ಯಕೀಯ ವಿದ್ಯಾರ್ಥಿ ಸೇರಿದಂತೆ ಹಲವು ಮುಸಲ್ಮಾನ ಹುಡುಗರನ್ನು ಪೊಲೀಸರು ಬಂಧಿಸಿದರು. ಆಗಲೂ ಮಾಧ್ಯಮದವರು ಇವರೆಲ್ಲ ಲಷ್ಕರ್ ಏ ತೊಯಿಬಾದ ಸದಸ್ಯರು, ಎಕೆ-47, ಆರ್‌ಡಿಎಕ್ಸ್‌ನಂತಹ ಸಾಮಗ್ರಿಗಳನ್ನು ಸರಬರಾಜು ಮಾಡುತ್ತಿದ್ದರು, ಕಾಡಿನಲ್ಲಿ ಬಂದೂಕು ತರಬೇತಿ ಪಡೆಯುತ್ತಿದ್ದರು, ಎಂದೆಲ್ಲಾ ಪುಂಖಾನುಪುಂಖವಾಗಿ ವರದಿ ಮಾಡಿದ್ದವು.

ಇದೆಲ್ಲ ಯಾವ ಮಟ್ಟಕ್ಕೆ ಹೋಗಿತ್ತೆಂದರೆ ಹಿರಿಯ ಪೊಲೀಸ್ ಅಧಿಕಾರಿ ಶಂಕರ್ ಬಿದರಿ ಅವರು "ಇವರ ಮೇಲಿನ ಯಾವ ಆರೋಪಗಳೂ ಸಾಬೀತಾಗಿಲ್ಲ, ಇವರೂ ಕೂಡ ಡಾ. ಮೊಹಮದ್ ಹನೀಫ್‌ರಂತೆ ಅಮಾಯಕರಾಗಿರಬಹುದು" ಎಂದು ಎಷ್ಟೇ ಹೇಳಿದರೂ ಮಾಧ್ಯಮಗಳ ಭಯೋತ್ಪಾದನೆ ನಿಂತಿರಲಿಲ್ಲ. ಅದೆಲ್ಲ ಸ್ತಬ್ಧಗೊಂಡದ್ದು ಯಾವಾಗ ಗೊತ್ತಾ? ಹುಬ್ಬಳ್ಳಿ ನ್ಯಾಯಾಲಯದಲ್ಲಿನ ಬಾಂಬ್ ಸ್ಫೋಟದ ಹಿಂದಿದ್ದವರು ಹಿಂದೂತ್ವವಾದಿ ಪ್ರಮೋದ್ ಮುತಾಲಿಕನ ಶಿಷ್ಯ ನಾಗರಾಜ ಜಂಬಗಿ ಎಂಬ ರೌಡಿ ಮತ್ತು ಹಫ್ತಾ ವಸೂಲಿವೀರ ಎಂದು ಬಯಲುಗೊಂಡಾಗ. ಆನಂತರ ಈ ಜಂಬಗಿಯನ್ನು ಆತನ ಸಹಚರರೇ ಸೇರಿಕೊಂಡು ಬಾಗಲಕೋಟೆ ಜೈಲಿನಲ್ಲಿ ಕೊಂದು ಹಾಕಿದರು.

ಅದೆಲ್ಲ ಬದಿಗಿರಲಿ, ಮುಖ್ಯವಾದ ವಿಷಯ ಯಾವುದೆಂದರೆ ಇವತ್ತಿಗೂ ಹುಬ್ಬಳ್ಳಿ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತ ಬಂಧನಕ್ಕೊಳಗಾಗಿದ ಮೊಹಮ್ಮದ್ ಆಸೀಫ್ ಮತ್ತು ಇತರರು ಜೈಲಿನಲ್ಲೇ ಕೊಳೆಯುತ್ತಿದ್ದಾರೆ. ಬಡತನದಲ್ಲೇ ಬೆಳೆದು ಸಾಲಸೋಲ ಮಾಡಿ ಹುಬ್ಬಳ್ಳಿಯ ಕಿಮ್ಸ್ ಕಾಲೇಜಿನಲ್ಲಿ ವೈದ್ಯಕೀಯ ವಿದ್ಯಾರ್ಥಿಯಾಗಿದ್ದ ಆಸೀಫ್ ಬಂಧನಕ್ಕೊಳಗಾದಾಗ ಆತ ಮುಖ್ಯ ಪರೀಕ್ಷೆಗೆ ಸಿದ್ಧತೆ ನಡೆಸಿದ್ದ. ಆಗ ಆತ ಆ ಪರೀಕ್ಷೆಯನ್ನು ತೆಗೆದುಕೊಳ್ಳಲು ಪೊಲೀಸರು ಅನುಮತಿ ನೀಡಿದ್ದರಾದರೂ ಹಿಂದೂತ್ವವಾದಿ ಸಂಘಟನೆಗಳಲ್ಲಿ ಒಂದಾದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಸದಸ್ಯರು ಕಾಲೇಜಿನಲ್ಲಿ ಎಂತಹ ಗದ್ದಲ ಎಬ್ಬಿಸಿದ್ದರೆಂದರೆ ಆತ ಆ ಪರೀಕ್ಷೆಯನ್ನು ತೆಗೆದುಕೊಳ್ಳದಿರುವಂತೆ ಮಾಡಿದ್ದರು.

ಇನ್ನೆಷ್ಟು ವರ್ಷಗಳನ್ನು ಆಸೀಫ್ ಜೈಲಿನಲ್ಲೇ ಕಳೆಯುತ್ತಾನೆ ಎಂದು ಹೇಳಲಾಗುವುದಿಲ್ಲ. ಆದರೆ ಮುಂದೊಂದು ದಿನ ಆತ ನಿರಪರಾಧಿ ಎಂದು ನ್ಯಾಯಾಲಯ ತೀರ್ಪು ನೀಡಿದರೆ ಆತ ಕಳೆದುಕೊಂಡ ವಿದ್ಯಾಭ್ಯಾಸವನ್ನು, ಕನಸುಗಳನ್ನು, ಬದುಕನ್ನು ಕಟ್ಟಿಕೊಳ್ಳುವುದಾದರೂ ಹೇಗೆ? ಆತನಿಗೆ ಸರ್ಕಾರವಾಗಲಿ, ಪೊಲೀಸರಾಗಲಿ, ಹಿಂದೂತ್ವವಾದಿಗಳಾಗಲಿ ಪರಿಹಾರವನ್ನು ನೀಡುತ್ತಾರೆಯೇ? ಇನ್ನೊಂದು ಪ್ರಕರಣವನ್ನು ಇಲ್ಲಿ ಹೇಳಬೇಕಿದೆ. ನಾಲ್ಕು ವರ್ಷಗಳ ಹಿಂದೆ ಹಂಪಿಯಲ್ಲಿ ಕಾಶ್ಮೀರಿ ಉಗ್ರರ ಹಾವಳಿ ಜಾಸ್ತಿ ಆಗುತ್ತಿದೆ ಎಂದು ಹಿಂದೂತ್ವವಾದಿಗಳು ಬೊಬ್ಬೆ ಹಾಕಿದ್ದು ನೆನಪಿರಬೇಕು. ಆಗ ಚೆಡ್ಡಿಗಳ ಆಶೆಯನ್ನು ಈಡೇರಿಸುವಂತೆ ನಮ್ಮ ರಾಜ್ಯದ ಪೊಲೀಸರು ಹಂಪಿಯಲ್ಲಿ ಒಂದು ಅಂಗಡಿಯನ್ನು ಹೊಂದಿದ್ದ ಬಿಲಾಲ್ ಎಂಬ ಯುವಕನನ್ನು ಬಂಧಿಸಿದ್ದರು.

ಬಿಲಾಲ್ ಜೈಲುಪಾಲಾಗಿ ಈಗ ನಾಲ್ಕು ವರ್ಷಗಳಾಗಿವೆ. ಆದರೂ ಆತನ ಕೇಸ್ ಇವತ್ತಿನ ತನಕ ವಿಚಾರಣೆಯ ಹಂತಕ್ಕೂ ಬಂದಿಲ್ಲ. ಇನ್ನು ಅದೆಲ್ಲ ಮುಗಿದು ಬಿಲಾಲ್ ಕೇಸಿನಲ್ಲಿ ತೀರ್ಪು ಬರುವುದಕ್ಕೆ ಕನಿಷ್ಠ ನಾಲ್ಕೈದು ವರ್ಷಗಳಾಗಬಹುದು....

ಈಗಾಗಲೇ ಹಂಪಿಯಲ್ಲಿದ್ದ ಬಿಲಾಲ್‌ನ ಅಂಗಡಿ ಬಂದ್ ಆಗಿದೆ. ದೂರದ ಶ್ರೀನಗರದಿಂದ ಬಂದು ತಮ್ಮ ಮಗನನ್ನು ಭೇಟಿ ಆಗಿ ಹೋಗುವುದರಲ್ಲೇ ಆತನ ತಂದೆ ಪಾಪರ್ ಆಗುವ ಹಂತಕ್ಕೆ ಬಂದಿದ್ದಾರೆ. ಬಿಲಾಲ್ ಬಂಧನಕ್ಕೊಳಗಾದಾಗ ಹುಟ್ಟಿದ ಆತನ ಮಗ ತಂದೆ ಇಲ್ಲದೆ ಬೆಳೆಯುತ್ತಿದ್ದಾನೆ. ಹೆಂಡತಿ ಕಣ್ಣೀರಿನಲ್ಲೇ ಜೀವನ ಸಾಗಿಸುತ್ತಿದ್ದಾಳೆ....

ಅಕಸ್ಮಾತ್ ಬಿಲಾಲ್ ಕೂಡ ನಿರ್ದೋಷಿ ಎಂದು ನ್ಯಾಯಾಲಯದ ಮುಂದೆ ಸಾಬೀತಾದರೆ?

ಎಲ್ಲರೂ ಡಾ. ಮೊಹಮ್ಮದ್ ಹನೀಫ್‌ರಷ್ಟು ಅದೃಷ್ಟಶಾಲಿಗಳಲ್ಲ; ಭಾರತ ಖಂಡಿತವಾಗಿಯೂ ಆಸ್ಟ್ರೇಲಿಯಾ ಅಲ್ಲ; ನಮ್ಮ ಪೊಲೀಸರೂ ತಮ್ಮ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ; ನಮ್ಮ ಮಾಧ್ಯಮಗಳೂ ತಮ್ಮ ಜವಾಬ್ದಾರಿಯನ್ನು ನಿಸ್ಪಕ್ಷಪಾತವಾಗಿ ನಿರ್ವಹಿಸುತ್ತಿಲ್ಲ ಎಂಬುದನ್ನು ತೋರಿಸಲು ಇಷ್ಟು ಸಾಕಲ್ಲವೇ....

ಸ್ಪಷ್ಟೀಕರಣ

ನಮ್ಮ ಅಕ್ಟೋಬರ್ 22, 2010 ರ ಸಂಚಿಕೆಯಲ್ಲಿ 'ಗಣಿಕಳ್ಳ ಸ್ವಸ್ತಿಕ್ ನಾಗರಾಜ್- ಟಿವಿ ನಟಿಯ ...ಲೆಯಲ್ಲಿ' ಎಂಬ ವರದಿ ಪ್ರಕಟಗೊಂಡಿತ್ತು. ಆ ವರದಿಯಲ್ಲಿ ವೇಶ್ಯಾವಾಟಿಕೆಯನ್ನು ನಡೆಸುತ್ತಿರುವ ...ಪಾರ್ಟ್‌ಟೈಮ್ ಟಿವಿ ನಟಿ ನವ್ಯ ಎಂಬಾಕೆಯ ಬಗ್ಗೆ ಬರೆದಿದ್ದೆವು.

ಆದರೆ ದುರದೃಷ್ಟವಶಾತ್ ಅದರೊಂದಿಗೆ ಈಗ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ...ಕುಮಿ' ಸೀರಿಯಲ್‌ನ ನಟಿ ನವ್ಯಳ ಫೋಟೋವನ್ನು ಪ್ರಕಟಿಸಿ ಈ ನವ್ಯಳೇ ಆ ನವ್ಯ ಎಂದು ತಪ್ಪಾಗಿ ...ರೆದಿದ್ದೆವು. ವಾಸ್ತವವಾಗಿ 'ಎರಡನೇ ಮದುವೆ' ಎಂಬ ಸಿನಿಮಾ ಮತ್ತು 'ಲಕುಮಿ' ಧಾರಾವಾಹಿಯಲ್ಲಿ ...ನಟಿಸುತ್ತಿರುವ ನವ್ಯಳಿಗೂ ವೇಶ್ಯಾವಾಟಿಕೆ ನಡೆಸುತ್ತಿರುವ ನವ್ಯಳಿಗೂ ಸಂಬಂಧವಿಲ್ಲ.

'ಲಕುಮಿ' ನಟಿ ನವ್ಯಳ ಬಗ್ಗೆ ತಪ್ಪಾಗಿ ಬರೆದು ಆಕೆಗೆ ನೋವುಂಟುಮಾಡಿದ್ದಕ್ಕೆ ಈ ಮೂಲಕ ...ಷಾದವನ್ನು ವ್ಯಕ್ತಪಡಿಸುತ್ತೇವೆ. ಈ ನವ್ಯಳಿಗೆ ಇನ್ನೂ ಹೆಚ್ಚು ನಟಿಸುವ ಅವಕಾಶಗಳು ಸಿಕ್ಕಿ ಆಕೆ ...ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ.

-ಸಂ



'ಲಕುಮಿ' ನವ್ಯ

ಪತ್ನಿ ಶ್ವೇತಾ ಆರೋಪ


ಪೆದ್ದಗುಂಡನ ಮುಗಿಸಲು ಪೊಲೀಸ್ ಸುಪಾರಿ?


ಪೆದ್ದಗುಂಡ

ಬಿಜೆಪಿಗೆ ಅನುಕೂಲವಾಗಲಿ ಎಂದೇ ಯಲಹಂಕ ಶಾಸಕ ವಿಶ್ವನಾಥ್ ಪೊಲೀಸು ಮಂತ್ರಿ ಅಶೋಕ್ ಮೂಲಕ ಪೆದ್ದಗುಂಡನನ್ನು ಮುಗಿಸಿದರೆ? ಕಾಮಾಕ್ಷಿಪಾಳ್ಯದ ಗೋಪಾಲಯ್ಯ, ಕಡಬಗೆರೆ ರಾಮ, ನೆಲಮಂಗಲದ ಬಿನ್ನಮಂಗಲ ಕೃಷ್ಣಪ್ಪ, ಸುಂಕದಕಟ್ಟೆಯ ರಾಮಲಕ್ಷ್ಮಣ ಮತ್ತು ಸೈಕಲ್ ರವಿ-ಹೀಗೆ ಯಾರೆಲ್ಲ ಮಚ್ಚನ ಶಿಷ್ಯರ ಹಿಟ್‌ಲಿಸ್ಟ್‌ನಲ್ಲಿದ್ದರೋ ಅವರೆಲ್ಲರೂ ಸೇರಿ ಪೊಲೀಸರಿಗೆ ರೊಕ್ಕ ತಿನ್ನಿಸಿ ಪೆದ್ದಗುಂಡನನ್ನು ಖೊಟ್ಟಿ ಎನ್‌ಕೌಂಟರ್ ಮಾಡಿಸಿದರ? ಆ ಮೂಲಕ ಬೆಂಗಳೂರು ಪಾಪಕೂಟದ ಒಂದು ಗುಂಪಿನ ರೌಡಿಗಳ ಜೊತೆ ಪೊಲೀಸರು ಕೈಜೋಡಿಸಿದ್ದಾರಾ? ಎನ್‌ಕೌಂಟರ್ ಮಾಡುವುದೇ ಆದರೆ ಪೆದ್ದಗುಂಡನಿಗಿಂತಲೂ ಅಪಾಯಕಾರಿಗಳಾದ ಅನಾಹುತಕಾರಿಗಳಾದ ಎಷ್ಟು ಮಂದಿ ರೌಡಿಗಳಿರಲಿಲ್ಲ?



ಎನ್‌ಕೌಂಟರ್ ನಡೆದದ್ದು ಇಲ್ಲಿ

ರೌಡಿ ಪೆದ್ದಗುಂಡನನ್ನು ಪೊಲೀಸರು ಹೊತ್ತೊಯ್ದು ಕೊಂದು ಹಾಕಿದ್ದಕ್ಕೂ ಜಿಲ್ಲಾ ಪಂಚಾಯ್ತಿ ಚುನಾವಣೆಗೂ ಸಂಬಂಧವಿದೆಯೆ? ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲವಾಗಲಿ ಎಂದೇ ಯಲಹಂಕ ಶಾಸಕ ವಿಶ್ವನಾಥ್ ಪೊಲೀಸು ಮಂತ್ರಿ ಅಶೋಕ್ ಮೂಲಕ ಪೆದ್ದಗುಂಡನನ್ನು ಮುಗಿಸಿದರೆ? ಅಥವಾ ಇದೊಂದು ಪೊಲೀಸ್ ಸುಪಾರಿಯೆ? ಸರಿಸುಮಾರು ಒಂದು ಕೋಟಿಯಷ್ಟು ದುಡ್ಡೆತ್ತಿ ಸಿಸಿಬಿ ಪೊಲೀಸರ ಮೂಲಕ ಪೆದ್ದಗುಂಡನನ್ನು ನಿಕಾಲಿ ಮಾಡಲಾಯಿತೆ?



ಮಚ್ಚ

ಇಂಥ ಅನೇಕ ಪ್ರಶ್ನೆ, ಗುಮಾನಿಗಳೆಲ್ಲ ಒಟ್ಟೊಟ್ಟಿಗೇ ಎದ್ದು ನಿಂತಿದ್ದು ಪೆದ್ದಗುಂಡನ ಎನ್‌ಕೌಂಟರ್ ಮೂಲಕವೇ. ಸದ್ಯ ಪೊಲೀಸರು ಏನೇ ಕತೆ ಹೊಡೆದರೂ ಭೂಗತ ಲೋಕದ ವಾದವೇ ಬೇರೆಯಿದೆ. ಪೆದ್ದಗುಂಡನ ಪತ್ನಿ ಶ್ವೇತಾ ಮತ್ತು ಆತನ ಶೋಕತಪ್ತ ತಾಯಿಯೇ ಹೇಳುವಂತೆ ಒಂದು ಕೋಟಿ ಕಲೆಕ್ಷನ್ ಮಾಡಿಕೊಟ್ಟು ಪೊಲೀಸರ ಮೂಲಕ ಪೆದ್ದಗುಂಡನನ್ನು ಮುಗಿಸಲಾಗಿದೆಯಂತೆ.

ಕಾಮಾಕ್ಷಿಪಾಳ್ಯದ ಗೋಪಾಲಯ್ಯ, ಕಡಬಗೆರೆ ರಾಮ, ನೆಲಮಂಗಲದ ಬನ್ನಮಂಗಲ ಕೃಷ್ಣಪ್ಪ, ಸುಂಕದಕಟ್ಟೆಯ ರಾಮಲಕ್ಷ್ಮಣ ಮತ್ತು ಸೈಕಲ್ ರವಿ-ಹೀಗೆ ಯಾರೆಲ್ಲ ಮಚ್ಚನ ಶಿಷ್ಯರ ಹಿಟ್‌ಲಿಸ್ಟ್‌ನಲ್ಲಿದ್ದರೋ ಅವರೆಲ್ಲರೂ ಸೇರಿ ಪೊಲೀಸರಿಗೆ ರೊಕ್ಕ ತಿನ್ನಿಸಿ ಪೆದ್ದಗುಂಡನನ್ನು ಖೊಟ್ಟಿ ಎನ್‌ಕೌಂಟರ್ ಮಾಡಿಸಿದರೆ? ಆ ಮೂಲಕ ಬೆಂಗಳೂರು ಪಾಪಕೂಟದ ಒಂದು ಗುಂಪಿನ ರೌಡಿಗಳ ಜೊತೆ ಪೊಲೀಸರು ಕೈಜೋಡಿಸಿದ್ದಾರಾ? ಎನ್‌ಕೌಂಟರ್ ಮಾಡುವುದೇ ಆದರೆ ಪೆದ್ದಗುಂಡನಿಗಿಂತಲೂ ಅಪಾಯಕಾರಿಗಳಾದ ಅನಾಹುತಕಾರಿಗಳಾದ ಎಷ್ಟು ಮಂದಿ ರೌಡಿಗಳಿರಲಿಲ್ಲ? ಅವರೆಲ್ಲರನ್ನೂ ಬಿಟ್ಟು ಹಿಂದೆಮುಂದಿಲ್ಲದ ದಲಿತರ ಹುಡುಗ ಪೆದ್ದುಗುಂಡನನ್ನೇ ಪೊಲೀಸರು ಏಕೆ ಹತಕ್ಕೆ ಬದ್ದುಕೊಂದರು? ಎನ್‌ಕೌಂಟರ್ ನಡೆದ ರೀತಿಗೆ ಕಾರಣಕ್ಕೆ ಪೊಲೀಸರು ಹೇಳುತ್ತಿರುವ ಕತೆಗೂ ಏಕೆ ವಿರೋಧಾಭಾಸವಿದೆ?


ಮುಲಾಮು

ಈ ಥರದ ಅನೇಕ ಅನುಮಾನಗಳ ಮಧ್ಯೆಯೇ ಪೆದ್ದಗುಂಡ ಮಣ್ಣಾಗಿ ಮಲಗಿದ್ದಾನೆ. ಬಹುಶಃ ಇಂಥ ವಿರೋಧಾಭಾಸಗಳನ್ನೆಲ್ಲ ಲೆಕ್ಕ ಹಾಕಿಯೇ PUCL ಅಂದರೆ **Peoples Union For Civil Libertys** ಸಂಘಟನೆ ಪೆದ್ದಗುಂಡನ ಎನ್‌ಕೌಂಟರ್ ವಿರುದ್ಧ ನ್ಯಾಯಾಂಗ ತನಿಖೆಗೆ ಒತ್ತಾಯಿಸಿದೆ. PUCL ಪ್ರಕಾರ ಪೆದ್ದಗುಂಡನ ಎನ್‌ಕೌಂಟರ್ ಎಂಬುದು ಪೊಲೀಸ್ ಸುಪಾರಿ. ಇದೇ ಮಾತನ್ನು ಆತನ ತಾಯಿ ಮತ್ತು ಪತ್ನಿ ಕೂಡ ಎದೆ ಬಡಿದುಕೊಂಡು ಹೇಳುತ್ತಿದ್ದಾರೆ.


ಗೋಪಾಲಯ್ಯ

ಸಿಸಿಬಿಯ ಎಸಿಪಿ ಹಾದಿಮನಿಯ ಪ್ರಕಾರ ಡಿಸೆಂಬರ್ 18ರ ಶನಿವಾರ ರಾತ್ರಿ ಪೆದ್ದಗುಂಡ ರಾಜಗೋಪಾಲ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಪ್ರಿಯದರ್ಶಿನಿ ಹ್ಯಾಂಡ್‌ಲೂಮ್ಸ್ ಬಳಿ ತನ್ನ ಎದುರಾಳಿ ಮುಲಾಮುನನ್ನು ಮುಗಿಸಲು ಹೊಂಚು ಹಾಕಿ ಕೂತಿದ್ದಾನೆಂಬ ಮಾಹಿತಿ ಬಂದಿದೆ. ಇನ್ಸ್‌ಪೆಕ್ಟರ್‌ಗಳಾದ ಲೋಕೇಶ್, ರವಿಪ್ರಕಾಶ್ ಮತ್ತು ಕೆಲ ಪೇದೆಗಳೊಂದಿಗೆ ಹಾದಿಮನಿ ತಂಡ ಪೆದ್ದಗುಂಡನನ್ನು ಸುತ್ತುವರಿದಿದೆ. ಆದರೆ ಪೆದ್ದಗುಂಡ ಪೊಲೀಸರ ಮೇಲೆಯೇ ಗುಂಡು ಹಾರಿಸಿದ್ದಾನೆ. ಪೆದ್ದಗುಂಡನ ರಿವಾಲ್ವರ್‌ನಿಂದ ಹಾರಿದ ಗುಂಡು ಸಿಸಿಬಿ ಪೊಲೀಸ್ ಪೇದೆ ಕೃಷ್ಣಪ್ಪ ಎಂಬಾತನ ಕೈಗೆ ಬಡಿದಿದೆ. ಇದಕ್ಕೆ ಪ್ರತಿಯಾಗಿ ಎಸಿಪಿ ಹಾದಿಮನಿ ಮತ್ತು ಇನ್ಸ್‌ಪೆಕ್ಟರ್ ಲೋಕೇಶ್‌ರ ರಿವಾಲ್ವರ್‌ನಿಂದ ಹಾರಿದ ಗುಂಡು ಮಾತ್ರ ನಿಖರವಾಗಿ ಪೆದ್ದಗುಂಡನ ಹಣೆಗೇ ಬಡಿದಿದೆ!


ಮಾರನಹಳ್ಳಿ ಜಗ್ಗ

ಇದು ಪೊಲೀಸರ ವಾದವಾದರೆ ಪೆದ್ದಗುಂಡನ ಪತ್ನಿ ಶ್ವೇತಾ ಹೇಳುವ ಸತ್ಯವೇ ಬೇರೆಯಿದೆ. ಆಕೆಯ ಪ್ರಕಾರ ಪೆದ್ದಗುಂಡ ಇಲ್ಲಿಗೆ ತಿಂಗಳ ಹಿಂದೆಯೇ ಬೆಂಗಳೂರು ಜೈಲಿನಿಂದ ಬಿಡುಗಡೆಯಾಗಿದ್ದ. ಕೆಂಗೇರಿಯಲ್ಲಿ ನಡೆದ ಟೋನಿ-ಸೂರಿ ಹತ್ಯೆಯ ನಂತರ ಆತನ ಮೇಲೆ ಯಾವುದೇ ಕೇಸುಗಳಿರಲಿಲ್ಲ. ಸತತ ಮೂರು ವರ್ಷಗಳ ಕಾಲ ಜೈಲಿನಲ್ಲೇ ಕೊಳೆಯುತ್ತಿದ್ದ ಪೆದ್ದಗುಂಡ ಇತ್ತೀಚೆಗೆ ಇಡೀ ಕೊರಂಗು ಸಿಂಡಿಕೇಟನ್ನೇ ತೊರೆದು ತಾನೇ ಪ್ರತ್ಯೇಕ ಗ್ಯಾಂಗ್ ಕಟ್ಟಿಕೊಂಡಿದ್ದ. ಮಚ್ಚನ ಎಡಗೈ ಬಲಗೈಯಂತಿದ್ದ ಪೆದ್ದಗುಂಡ ಮತ್ತು ಕೋತಿರಾಮರ ಮಧ್ಯೆ ಜೈಲಿನಲ್ಲೇ ಬಿರುಕು ಸೃಷ್ಟಿಯಾಗಿತ್ತು.

ಅದು ಬೆಂಗಳೂರು ಜೈಲಲ್ಲೇ ನಡೆದ ಮಾರಾಮಾರಿ. ಕತ್ತಿಗುಪ್ಪೆ ಲಿಂಗನ ಹುಡುಗರಾದ ಡಬಲ್ ಮೀಟ್ರು ಮೋಹನ, ಮಚ್ಚು ಮುನಿಯ ದೀಪು, ಮಾರೇನಹಳ್ಳಿ ಜಗ್ಗನ ಶಿಷ್ಯರು ಮತ್ತು ಆಗ ಜೈಲಲ್ಲೇ ಇದ್ದ ಸೈಲೆಂಟ್ ಸುನೀಲನ ಗ್ಯಾಂಗ್ ಸೇರಿಕೊಂಡ. ಪೆದ್ದಗುಂಡನ ಮೇಲೆ ಜೈಲು ಬ್ಯಾರಕ್ಕಿನಲ್ಲೇ ಹಲ್ಲೆ ನಡೆಸಿದ್ದರು. ಈ ಘಟನೆಯ ನಂತರ ಪೆದ್ದಗುಂಡ ಇದ್ದಕ್ಕಿದ್ದಂತೆ ತೆಪ್ಪಗಾಗಿಬಿಟ್ಟಿದ್ದ. ಕೋತಿರಾಮ ಕೂಡ ಜಗ್ಗ ಮತ್ತು ಲಿಂಗನ ಹುಡುಗರು ನಡೆಸಿದ ಹಲ್ಲೆಯ ವಿರುದ್ಧ ತನ್ನನ್ನು ಬೆಂಬಲಿಸಲಿಲ್ಲ ಎಂಬ ಸಿಟ್ಟಿಗೆ ಬಿದ್ದು ಆತನ ಜೊತೆ ಮಾತಾಡುವುದನ್ನೇ ಪೆದ್ದಗುಂಡ ನಿಲ್ಲಿಸಿಬಿಟ್ಟಿದ್ದ. ತನ್ನ ಸಿಂಡಿಕೇಟಿನ ಹುಡುಗರೇ ತನ್ನ ಮೇಲೆ ಅಟ್ಯಾಕ್ ಮಾಡಿದ್ದು ಆತನನ್ನು ತಲ್ಲಣಗೊಳಿಸಿತ್ತು. ತನಗಿನ್ನು ಅಂಡರ್‌ವರ್ಲ್ಡ್ ಸಹವಾಸವೇ ಸಾಕೆಂಬ ನಿರ್ಧಾರಕ್ಕೆ ಆತ ಬಂದುಬಿಟ್ಟಿದ್ದ.

ಈ ಕಾರಣಕ್ಕೇ ಇರಬೇಕು ಕೇಸು ಮುಗಿದರೂ ಒಂದಲ್ಲ ಒಂದು ನೆಪವೊಡ್ಡಿ ಜೈಲಲ್ಲೇ ಇರುತ್ತಿದ್ದ ಪೆದ್ದಗುಂಡ ಇಲ್ಲಿಗೆ ತಿಂಗಳ ಹಿಂದೆ ಅಂದರೆ ನವೆಂಬರ್ 18ರಂದು ಜೈಲಿಂದ ಹೊರಬಿದ್ದ. ತಾನು ಯಾವುದೇ ಅನಾಹುತಕ್ಕೆ ಕೈಹಾಕದೇ ಇರುವುದರಿಂದ ತನ್ನನ್ನು ಪೊಲೀಸರು ಏನೂ ಮಾಡುವುದಿಲ್ಲ ಎಂದೇ ಭಾವಿಸಿದ್ದ. ಜೈಲಿನಲ್ಲಿ ತಾನು ಬಳಸುತ್ತಿದ್ದ ಮೊಬೈಲನ್ನೇ ಇಟ್ಟುಕೊಂಡಿದ್ದ. ಇದೇ ಮೊಬೈಲನ್ನು ಸಿಸಿಬಿ ಪೊಲೀಸರು ಟ್ಯಾಪ್ ಮಾಡುತ್ತಾರಾದ್ದರಿಂದ ತಾನು ತನ್ನ ಪಾಡಿಗಿರುವುದನ್ನು ಗಮನಿಸಿದ ಪೊಲೀಸರು ತನಗೇನೂ ತೊಂದರೆ ಮಾಡಲಿಕ್ಕಿಲ್ಲ ಎಂದೇ ಲೆಕ್ಕ ಹಾಕಿದ್ದ.


ಆದರೆ ಅಂಡರ್‌ವರ್ಲ್ಡ್ ಮತ್ತು ಪೊಲೀಸರ ಲೆಕ್ಕಾಚಾರವೇ ಬೇರೆಯಿರುತ್ತದೆಯಲ್ಲ. ಪೆದ್ದಗುಂಡ ಇಲ್ಲಿ ಎಡವಿಬಿಟ್ಟ. ನೆಲಮಂಗಲದ ಟಿ. ಬೇಗೂರು ಜಿಲ್ಲಾ ಪಂಚಾಯ್ತಿ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ನಿಂತಿದ್ದ ಭಿನ್ನಮಂಗಲ ಕೃಷ್ಣಪ್ಪ ಹೆಸರಿಗಷ್ಟೇ ಜೆಡಿಎಸ್ ಆದರೂ ಆಳದಲ್ಲಿ ಯಲಹಂಕದ ಬಿಜೆಪಿ ಶಾಸಕ ವಿಶ್ವನಾಥ್‌ಗೆ ಪರಮಾಪ್ತ. ಮತ್ತೊಂದೆಡೆ ಕಡಬಗೆರೆ ರಾಮ ಕೂಡ ಇತ್ತೀಚೆಗೆ ಬಿಜೆಪಿ ಸೇರಿದ್ದ. ಕಾಮಾಕ್ಷಿಪಾಳ್ಯದ ಗೋಪಾಲಯ್ಯ ನಂತೂ ಪೆದ್ದಗುಂಡ ಜೈಲಿಂದ ಹೊರಬಿದ್ದ ಸುದ್ದಿ ಕೇಳಿದ್ದೇ ಊರನ್ನೇ ಬಿಟ್ಟುಬಿಟ್ಟ!

ತನ್ನ ಪಾಡಿಗೆ ತಾನಿದ್ದು ಅಂಡರ್‌ವರ್ಲ್ಡ್‌ಗೇ ವಿದಾಯ ಹೇಳಲು ನಿರ್ಧರಿಸಿದ್ದ ಪೆದ್ದಗುಂಡ ಜೈಲಿಂದ ಹೊರಬಿದ್ದ ಸುದ್ದಿ ಎಂಥಾ ಕಲ್ಲೋಲವೆಬ್ಬಿಸಿತೆಂದರೆ, ಗೋಪಾಲಯ್ಯನ ತಮ್ಮ ಬಸವ, ಆತನ ಬಂಟ ಧರಣಿ, ಬಸವನ ಮತ್ತೊಬ್ಬ ಸಹಚರ ಹೇಮಂತ ಮುಂತಾದವರೆಲ್ಲ ಏರಿಯಾವನ್ನೇ ತೊರೆದು ಭೂಗತರಾದರು. ಅದ್ಯಾರು ಹುಯಿಲೆಬ್ಬಿಸಿದ್ದರೊ ಗೊತ್ತಿಲ್ಲ; ಪೆದ್ದಗುಂಡನ ಪಡೆ ಗೋಪಾಲಯ್ಯನ ಮನೆ ಮೇಲೆ ಬಾಂಬ್ ದಾಳಿಗೆ ಅಣಿಯಾಗಿದೆ ಎಂಬ ಸುದ್ದಿ ಬೇರೆ ಹಬ್ಬಿತು.

ಸುಂಕದಕಟ್ಟೆಯ ರಾಮ-ಲಕ್ಷ್ಮಣ ಸೇರಿದಂತೆ ಮಾಗಡಿ

ಕೊಲ್ಲಲು ಪೊಲೀಸರು ಯಾರು?

\- ಹಸನ್ ಮನ್ಸೂರ್



ಕೊಲ್ಲುವ ಹಕ್ಕು ಯಾರಿಗೂ ಇಲ್ಲ, ಸರ್ಕಾರವಾಗಲಿ, ಪೊಲೀಸರಾಗಲಿ, ಜನಸಾಮಾನ್ಯರೇ ಆಗಲಿ ಯಾರೇ ಕೊಂದರೂ ಈ ಬಗ್ಗೆ ಎಫ್‌ಐಆರ್ ದಾಖಲಿಸಲೇಬೇಕು. ಅದರಲ್ಲೂ ಪೊಲೀಸರಿಂದ ನಡೆಯುವ ಸೋಕಾಲ್ಡ್ ಎನ್‌ಕೌಂಟರ್‌ಗಳ ಬಗ್ಗೆಯಂತೂ ಅದಕ್ಕೆ ಕಾರಣರಾದ ಪೊಲೀಸರ ವಿರುದ್ಧ ಎಫ್‌ಐಆರ್ ದಾಖಲಿಸಲೇಬೇಕೆಂದು ರಾಷ್ಟ್ರೀಯ ಮಾನವಹಕ್ಕು ಆಯೋಗವೇ ಕಾಯ್ದೆ ರೂಪಿಸಿದೆ.

ಹಾಗೊಮ್ಮೆ ತಾವು ಆತ್ಮರಕ್ಷಣೆಗೆ ಆರೋಪಿಯನ್ನು ಕೊಲ್ಲಬೇಕಾಯ್ತು ಎಂದು ಪೊಲೀಸರು ವಾದಿಸಿದರೂ ಕೂಡ ಅದನ್ನು ಕೋರ್ಟಿನಲ್ಲಿ ಸಾಬೀತು ಮಾಡಬೇಕು. ಇದು **Rule of law.** ದುರಂತವೆಂದರೆ ಮೀಡಿಯಾಗಳೇ ಪೊಲೀಸರ ಸಮರ್ಥನೆಗೆ ನಿಂತುಬಿಡುತ್ತವೆ. ಪೊಲೀಸರಿಂದ ಹತನಾದವನು ರೌಡಿಯಿರಲಿ, ಪಾಪಿಯೇ ಇರಲಿ ಆತನಿಗೆ ಶಿಕ್ಷೆ ವಿಧಿಸಬೇಕಾದದ್ದು ನ್ಯಾಯಾಲಯ. ಆತ ಕೊಂದಿದ್ದರೂ ಕೂಡ ಅದು ಕೋರ್ಟಿನಲ್ಲಿ ಸಾಬೀತಾಗಬೇಕು. ಅದನ್ನು ಬಿಟ್ಟು ತಾವೇ ಗುಂಡಿಟ್ಟು ಕೊಲ್ಲಲು ಪೊಲೀಸರು ಯಾರು?

ಈ ನಿಟ್ಟಿನಲ್ಲಿ ಪೆದ್ದಗುಂಡನನ್ನು ಪೊಲೀಸರು ಗುಂಡಿಟ್ಟು ಕೊಂದ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಇದೊಂದು ಸ್ಪಷ್ಟ ಮಾನವಹಕ್ಕು ಉಲ್ಲಂಘನೆಯ ಪ್ರಕರಣವಲ್ಲದೇ ಮತ್ತೇನಲ್ಲ.

ಹಸನ್ ಮನ್ಸೂರ್
PUCL ಮುಖ್ಯಸ್ಥರು

ಮ ಗೊಲ್ಲರಹಟ್ಟಿಯ ತನಹ ಬಹುತೇಕ ಮಚ್ಚನ ವಿರೋಧಿ ಕೇಟಿನ ರೌಡಿಗಳೆಲ್ಲ ಏಕಾಏಕಿ ನಾಪತ್ತೆಯಾದರು. ಈ ನ್ನೆ ತುಮಕೂರು ಜೈಲಲ್ಲಿ ಕಡಬಗೆರೆ ರಾಮನ ಬಂಟ ನಿಯನ್ನು ಕೋತಿರಾಮನ ಗ್ಯಾಂಗ್ ಹಿಡಿದು ಬಡಿ ತು. ಇದು ನಡೆದದ್ದು ನವೆಂಬರ್ 22ಕ್ಕೆ. ಇದಕ್ಕೆ ದಂತವ್ನೋ ಎಂಬಂತೆ ತುಮಕೂರು ಜೈಲು ಸೂಪ ರಿಂಟೆಂಡ್ ಶಿವಣ್ಣ ಇಡೀ ಕೋತಿರಾಮನ ಹಿಂಡನ್ನು ಬರ್ಗಾ ಜೈಲಿಗೆ ಕಮಾನೆತ್ತಿಬಿಟ್ಟ.

ಹೀಗೆ ಕೋತಿರಾಮನನ್ನು ಗುಲ್ಬರ್ಗಾ ಜೈಲಿಗೆ ಕುವುದಕ್ಕೂ ವಾರದ ಮೊದಲೇ ಪೆದ್ದಗುಂಡ ಜೈಲಿಂದ ದಬಿದ್ದಿದ್ದ. ಆತನ ಜೊತೆ ಶಿವನಹಳ್ಳಿಯ ತಿಂಡಿಪೋತ, ಗಡಿ ರೋಡ್ ಪಾನ್, ಗೋವಿಂದನ ಕೊಲೆ ಕೇಸಿನಲ್ಲಿದ್ದ ಸೀನ, ವಿಜಿ, ಇಂದಿರಾಗಾನಗರದ ರಮೇಶ ಇತ್ಯಾದಿ ಮು ಹಿಂದೇ ಜೈಲಿಂದ ಹೊರಬಿದ್ದಿತ್ತು. ಬಹುಶಃ ತನ್ನ ಗಳಿಂದ ರಕ್ಷಣೆ ಪಡೆಯಲು ಪೆದ್ದಗುಂಡ ಗ್ಯಾಂಗನ್ನು ಕಿಗಿಟ್ಟುಕೊಂಡಿದ್ದನೇನೋ!

ಇಂಥ ಶಿಷ್ಯರ ಪಡೆ ಕಟ್ಟಿಕೊಂಡೇ ತನ್ನ ಕಮಲಾನಗರದ ಗೆ ಪ್ರತಿನಿತ್ಯ ಬರುತ್ತಿದ್ದದ್ದು ಆತನ ವಿರೋಧಿಗಳ ಕಣ್ಣಿಗೆ ದೆ. ಆತನ ಪತ್ನಿ ಶ್ವೇತಾ ಹೇಳುವಂತೆ ಡಿಸೆಂಬರ್ 16 ಬುರುವಾರ ರಾತ್ರಿ ಹನ್ನೆರಡು ಗಂಟೆ ಹೊತ್ತಿಗೆ ಮೂರು ಲೀಸ್ ಜೀಪುಗಳಲ್ಲಿ ಎಸಿಪಿ ಹಾದಿಮನಿ ತಂಡ ಮನೆ ನ್ನು ಸುತ್ತುವರಿದಿದೆ. ಆ ಹೊತ್ತಿಗೆ ಶ್ವೇತಾಳ ಸಂಬಂಧಿಕರೂ ಯಲ್ಲಿದ್ದರಂತೆ. ಏಕಾಏಕಿ ಬಾಗಿಲು ಬಡಿದು ಒಳಬಂದ ಲೀಸರು ಪೆದ್ದಗುಂಡನ ತಲೆಗೆ ರಿವಾಲ್ವರ್ ಹಿಡಿದದ್ದೇ ತುಳಿದು ಕೈಗೆ ಕೋಳ ತೊಡಿಸಿದ್ದಾರೆ. ಇಡೀ ಯನ್ನು ಜಾಲಾಡಿದ್ದಾರೆ. ಅದೇ ಹೊತ್ತಿಗೆ ಮಹಡಿ ಲೆ ಮಲಗಿದ್ದ ಪೆದ್ದಗುಂಡನ ಜೊತೆಗಾರರಾದ ಪೋತ ವಿಜಿ, ಇಂದಿರಾನಗರದ ರಮೇಶ ಮತ್ತು ಸೀನ ಕೂಡ ಪೊಲೀಸರಿಗೆ ಶರಣಾಗಿದ್ದಾರೆ. ನನ್ನೂ ಜೀಪಿಗೆ ತುರುಕಿಕೊಂಡು ಹೋದ ಪೊಲೀಸರು ಐದೇ ನಿಮಿಷಕ್ಕೆ ವಾಪಸ್ಸಾಗಿ 'ಏನಮ್ಮಾ, ಪೆದ್ದಗುಂಡ ಸಮೇತ ಜೀಪಿನಿಂದ ಹಾರಿ ಎಸ್ಕೇಪಾಗಿದ್ದಾನೆ. ಗೇನಾದ್ರೂ ಬಂದವ್ನಾ?' ಎಂದು ಕೇಳಿದ್ದಾರೆ.


ನಾನಾದ್ರೂ ಏನೂಂತ ಹೇಳ್ಲಿ? ಮೂರು ಜೀಪುಗಳಲ್ಲಿ ರಾತ್ರಿ ಕರೆದೊಯ್ದ ಪೊಲೀಸರು ಈಗ ನೋಡಿದ್ರೆ ತಂದು ಕೊಟ್ಟವ್ರೆ. ಕಾಮಾಕ್ಷಿಪಾಳ್ಯದ ಗೋಪಾಲಯ್ಯ, -ಲಕ್ಷ್ಮಣ... ಇತ್ಯಾದಿ ಯಾರ್ಯಾರಿಂದಲೋ ಕಾಸು ನನ್ನ ಗಂಡನನ್ನು ಕೊಂದು ಹಾಕಿದ್ದಾರೆ-

ಇದು ಪೆದ್ದಗುಂಡನ ಪತ್ನಿ ಶ್ವೇತಾಳ ಆಕ್ರಂದನವಾದರೆ ತಾಯಿಯ ಆರ್ತನಾದವೇ ಹೃದಯ ಕಲಕುತ್ತದೆ. ಗುಂಡನ ನಿಜವಾದ ಹೆಸರು ವೆಂಕಟಸ್ವಾಮಿ. ಮೊದಲು ಶಿಷ್ಯ ಕಮಲಾನಗರದ ಪುರುಷಿಯ ಜೊತೆಗಿದ್ದ. ರ ಮಚ್ಚನ ಜೊತೆ ಸೇರಿ ಜೈಲು ರವಿಯನ್ನು ಕೊಂದ. ಮಚ್ಚನೇ ಕೊಲೆಯಾದ ಮೇಲೆ ಅದಕ್ಕೆ ಪ್ರತೀಕಾರವಾಗಿ ರಿಯಲ್ಲಿ ಟೋನಿ-ಸೂರಿಯನ್ನು ಒಟ್ಟೊಟ್ಟಿಗೇ ಸಿಬಿಟ್ಟ. ಆವತ್ತೇ ಇನ್ಸ್‌ಪೆಕ್ಟರ್ ಎಸ್.ಕೆ. ಉಮೇಶ್ ಲ್ಲಿ ಪೆದ್ದಗುಂಡ ಹೆಣವಾಗಬೇಕಿತ್ತು. ಅದೃಷ್ಟವಶಾತ್ ಸೇರಿ ಸೇಫಾದ.

ಬಹುಶಃ ಜೈಲಲ್ಲೇ ಉಳಿದಿದ್ದರೆ ಬದುಕುತ್ತಿದ್ದನೋ ಏ. ಹೊರಗೆ ತನ್ನ ಪಾಡಿಗೆ ತಾನಿದ್ದರೂ ದುಷ್ಮನಿ ನ್ನು ಬಿಡುವುದಿಲ್ಲ ಎಂಬುದನ್ನು ಮರೆತುಬಿಟ್ಟಿದ್ದ. ಕಾರಣ ಪೊಲೀಸ್ ಎದುರೇ ಹೆಣವಾದ. ಹೆತ್ತ ತಾಯಿ, ಕೊಂಡ ಹೆಂಡತಿ ಮತ್ತು ಅನಾಥರಾದ ಆತನ ಇಬ್ಬರು ಳು ತಾನೇ ಅಳಬೇಕು?

• ರಾ. ಸೋಮನಾಥ್

'ಗೋರಿಪಾಳ್ಯದ ಅಲ್ತಾಫ್ ಹತ್ಯೆಗೆ ಜಾರ್ಖಂಡ್ ಶೂಟರ್' ಮೋಸ್ಟ್ ವಾಂಟೆಡ್ ಮೊಖ್ತಿಯಾರ್




ರೇಪಿಸ್ಟ್ ಶಂಕರ್ ಮತ್ತು ಪೆದ್ದಗುಂಡನಿಗೂ ಮುನ್ನ ಸಿಸಿಬಿ ಪೊಲೀಸರ ಹಿಟ್‌ಲಿಸ್ಟ್‌ನಲ್ಲಿದ್ದವನು ಮುಚ್ಚಡ್ ಮೊಖ್ತಿಯಾರ್!

ಅಂದರೆ ಮೀಸೆ ಮೊಖ್ತಿಯಾರ್. ವಯಸ್ಸು ಸರಿಸುಮಾರು 45 ಇರಬಹುದು. ಆತ ಜಾರ್ಖಂಡ್‌ನ ಶಾರ್ಪ್ ಶೂಟರ್ ಮತ್ತು ಖತರ್‌ನಾಕ್ ಸುಪಾರಿ ಕಿಲ್ಲರ್. ಲೈಟಾಗಿ ಗಡ್ಡ ಬಿಟ್ಟು ದಪ್ಪ ಮೀಸೆ ಬೆಳೆಸಿದ್ದರಿಂದಲೇ ಮುಸ್ಲಿಂ ಪಾತಕ ಲೋಕದಲ್ಲಿ ಆತನನ್ನು ಮುಚ್ಚಡ್ ಮೊಖ್ತಿಯಾರ್ ಅನ್ನುತ್ತಾರೆ. 2004ರಲ್ಲಿ ಅಲಸೂರಿನಲ್ಲಿ ನಡೆದ ನಾಗಾ ಥೇಟರ್ ಶೂಟೌಟ್‌ನಲ್ಲಿ ಈತನೇ ರೂವಾರಿಯಾಗಿದ್ದ. ಇನ್ನೇನು ಪೊಲೀಸರ ಕಣ್ಣು ಬಿತ್ತನ್ನುವಾಗಲೇ ಸದ್ದಿಲ್ಲದೆ ಬಿಹಾರಕ್ಕೆ ಪರಾರಿಯಾಗಿದ್ದ. ಮೊಖ್ತಿಯಾರ್ ಈಗ ಮತ್ತೆ ಬೆಂಗಳೂರಿಗೆ ಬಂದಿದ್ದಾನೆ. ಈ ಬಾರಿ ಆತನ ಗುರಿ ಗೋರಿಪಾಳ್ಯದ ಕಾಂಗ್ರೆಸ್ ನಾಯಕ ಅಲ್ತಾಫ್‌ಖಾನ್!

ಹೇಗಾದರೂ ಮಾಡಿ ಅಲ್ತಾಫ್‌ನನ್ನು ಮುಗಿಸಿಬಿಟ್ಟರೆ ಗೋರಿಪಾಳ್ಯದ ಕ್ರಿಮಿನಲ್‌ಗಳಾದ ಮಾಜಿ ಕೌನ್ಸಿಲರ್ ಆರಿಫ್ ಫಾಷಾ ಮತ್ತಾತನ ಮಗ ಇಮ್ರಾನ್ ಜೈಲು ಪಾಲಾಗುವುದು ತಪ್ಪುತ್ತದೆ. ಅಲ್ತಾಫ್ ತಮ್ಮಂದಿರಾದ ಏಜಾಜ್ ಮತ್ತು ಅಮ್ಜದ್‌ರ ಜೋಡಿಕೊಲೆ ಕೇಸಿನ ವಿಚಾರಣೆ ಇದೇ ಡಿಸೆಂಬರ್ ೨ರಿಂದ ಸೆಷನ್ಸ್ ಕೋರ್ಟ್‌ನಲ್ಲಿ ಶುರುವಾಗಿದೆ. ಏನೆಲ್ಲಾ ಮಸಲತ್ತು ನಡೆಸಿ ಅಲ್ತಾಫ್‌ಗೆ ಧಮಕಿ ಇಟ್ಟರೂ ಆತ ಮಾತ್ರ ರಾಜಿಗೆ ಒಪ್ಪುತ್ತಿಲ್ಲ. ಜೋಡಿ ಕೊಲೆ ಕೇಸಿನಲ್ಲಿ ತಾನು ಮಗ ಇಮ್ರಾನ್ ಸಮೇತ ಜೈಲುಪಾಲಾಗುವುದು ಶತಸ್ಸಿದ್ಧ ಎಂಬುದು ಗ್ಯಾರಂಟಿಯಾಗುತ್ತಿದ್ದಂತೆಯೇ ಆರಿಫ್ ಹತಾಶೆಗೆ ಬಿದ್ದು ಅಲ್ತಾಫ್‌ನನ್ನು ಮುಗಿಸಲು ಹವಣಿಸುತ್ತಿದ್ದಾನೆ. ಅದಕ್ಕೆಂದು ಆರಿಫ್ ಮತ್ತು ಇಮ್ರಾನ್ ಸುಪಾರಿ ಕೊಟ್ಟಿದ್ದು ಜಾರ್ಖಂಡ್‌ನ ಪಾತಕಿ ಮೊಖ್ತಿಯಾರ್‌ಗೆ.


ಬಹುಶಃ ಎ.ಕೆ.ಸಿಂಗ್ ಅಲಿಯಾಸ್ ಅಜಿತ್ ಸಿಂಗ್ ಉರ್ಫ್ ದೀಪಕ್‌ಸಿಂಗ್ ಇಲ್ಲಿಗೆ ಮೂರು ತಿಂಗಳ ಹಿಂದೆ ಎನ್‌ಕೌಂಟರ್ ಆಗದೇ ಹೋಗಿದ್ದರೆ ಈ ಮೊಖ್ತಿಯಾರ್ ಎಂಬ ಸುಪಾರಿ ಹಂತಕನೊಬ್ಬ ಬೆಂಗಳೂರಿಗೆ ಬಂದಿದ್ದಾನೆಂಬುದೇ ಪೊಲೀಸರಿಗೆ ಗೊತ್ತಾಗುತ್ತಿರಲಿಲ್ಲ. ಬಾಗಲೂರು ಕ್ರಾಸ್ ಬಳಿ ಪೊಲೀಸರ ಗುಂಡಿಗೆ ಬಲಿಯಾದ ಎ.ಕೆ.ಸಿಂಗ್ ಹೇಳಿಕೇಳಿ ಕುಖ್ಯಾತ ಕಾರುಗಳ್ಳ ಮತ್ತು ಅರ್ಧ ಬೆಂಗಳೂರಿನ ರೌಡಿಗಳಿಗೆ ವೆಪನ್ ಸರಬರಾಜು ಮಾಡುತ್ತಿದ್ದ ನಿಗೂಢ ಪಾತಕಿ. ಎನ್‌ಕೌಂಟರ್‌ಗೂ ಮುನ್ನ ಈತನ ಬಾಯಿ ಬಿಡಿಸಿದ ಪೊಲೀಸರೆದುರು ಸಿಂಗ್ ಹೊರಗೆಡಹಿದ್ದು ಮೊಖ್ತಿಯಾರ್‌ನ ಹೆಸರನ್ನು.

ತನಗೆ ರಿವಾಲ್ವರ್ ಕೊಡುತ್ತಿದ್ದದ್ದೇ ಮೊಖ್ತಿಯಾರ್ ಎಂದೂ ತಾನು ಮತ್ತು ಆತ ಸೇರಿಕೊಂಡು ಬೆಂಗಳೂರಿನ ಯಾವ್ಯಾವ ಪಾತಕಿಗಳಿಗೆ ಪಿಸ್ತೂಲು ಕೊಟ್ಟಿದ್ದೇವೆಂದೂ ಮೊಖ್ತಿಯಾರ್‌ನನ್ನು ತನಗೆ ಪರಿಚಯಿಸಿಕೊಟ್ಟಿದ್ದೇ ಗೋರಿಪಾಳ್ಯದ ಆರಿಫ್ ಮಗ ಇಮ್ರಾನ್ ಎಂದೂ ಈಗ ಇದೇ ಮೊಖ್ತಿಯಾರ್ ಅಲ್ತಾಫ್ ಹತ್ಯೆಗೆ ಮತ್ತೆ ಬೆಂಗಳೂರಿಗೆ ಬಂದಿದ್ದಾನೆಂದು ಸಿಂಗ್ ಬಾಯಿಬಿಟ್ಟಿದ್ದ.



ತಲೆಕೆಡಿಸಿಕೊಂಡ ಜಂಟಿ ಪೊಲೀಸ್ ಕಮೀಷನರ್ ಅಲೋಕ್‌ಕುಮಾರ್ ಮೊಖ್ತಿಯಾರ್‌ನ ಜಾತಕ ಕೆದಕುತ್ತಿದ್ದಂತೆ ಆತನ ಭಯಾನಕ ಹಿನ್ನೆಲೆಯ ಒಂದೊಂದೇ ಕತೆಗಳು ಹೊರಬಿದ್ದವು. ಮೊಖ್ತಿಯಾರ್ ಬಿಹಾರದ ರಾಜಧಾನಿ ಪಾಟ್ನಾದ ಜೋಗ್‌ಸಾಲಾ ಪೊಲೀಸ್ ಠಾಣೆಯ ರೌಡಿ ಶೀಟರ್. ಈತನ ವಿರುದ್ಧ ನಾಲ್ಕು ಕೊಲೆ, ಮೂರು ಡಕಾಯಿತಿ, ಎರಡು ಕಿಡ್ನ್ಯಾಪ್, ಮತ್ತು ಅಸಂಖ್ಯಾತ ಆರ್ಮ್ಸ್ ಕೇಸುಗಳಿವೆ. ಮೊದಲು ಮಿಲಿಟರಿಯಲ್ಲಿದ್ದ, ಒಂದಷ್ಟು ವರ್ಷ ಮಿಲಿಟರಿಯ ರೈಫಲ್ಸ್ ವಿಭಾಗದಲ್ಲಿ ತರಬೇತಿ ಪಡೆದು ಇದ್ದಕ್ಕಿದ್ದಂತೆ ಎಸ್ಕೇಪಾಗಿ ಪಾಟ್ನಾದ ಮಹಾಪಾತಕಿ ಹಿದಾಯತ್‌ಉಲ್ಲಾಖಾನ್‌ನ ಗ್ಯಾಂಗ್ ಸೇರಿಕೊಂಡ.

ಸದ್ಯ ಪಾಟ್ನಾದ ಡಾನ್ ಎಂದೇ ನಟೋರಿಟಿ ಪಡೆದ ಹಿದಾಯತ್ ಷಾಬುದ್ದೀನ್‌ನ ಬಲಗೈ ಬಂಟ. ಇಂಥವನ ಗ್ಯಾಂಗ್ ಸೇರಿದ ಮೊಖ್ತಿಯಾರ್‌ನ ಕುಖ್ಯಾತಿ ಯಾವ ಮಟ್ಟಕ್ಕೆ ಹಬ್ಬಿತೆಂದರೆ ಮುಂಬಯಿ, ಹೈದ್ರಾಬಾದ್ ಬೆಂಗಳೂರಿನ ಪಾತಕಿಗಳೂ ತಮ್ಮ ದುಷ್ಮನ್‌ಗಳ ವಿರುದ್ಧ ಈತನಿಗೆ ಸುಪಾರಿ ಒಪ್ಪಿಸುತ್ತಿದ್ದರು. ಹಾಗೇ ಮೊಖ್ತಿಯಾರ್ ಪಡೆದ ಒಂದು ಸುಪಾರಿಯೆಂದರೆ ಶಿವಾಜಿನಗರದ ಹಾಲೀ ಡಾನ್ ಮತ್ತು ಬಿಜೆಪಿಯ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಇಫ್ತಿಯಾಕ್ ಪೈಲ್ವಾನ್‌ನನ್ನು ಕೊಲ್ಲುವುದು!



ಇದಕ್ಕೆ ಮೊಖ್ತಿಯಾರ್ ಜೊತೆ ಕೈಜೋಡಿಸಿದ್ದು ಮತ್ತೊಬ್ಬ ಶೂಟರ್ ಹಾವೇರಿ ಅಸ್ಲಂ. ಸುಪಾರಿ ಕೊಟ್ಟವನು ಶಿವಾಜಿನಗರದ ಮತ್ತೊಬ್ಬ ಪಾತಕಿ ತನ್ವೀರ್. 2003ರಲ್ಲಿ ಅಲಸೂರಿನ ನಾಗಾ ಥಿಯೇಟರ್‌ಗೆ ಸಿನಿಮಾ ನೋಡಲೆಂದು ಇಫ್ತಿಯಾಕ್ ಪೈಲ್ವಾನ್ ಬಂದಿದ್ದ ಮಾಹಿತಿ ಮೊಖ್ತಿಯಾರ್‌ಗೆ ಸಿಕ್ಕಿತ್ತು. ಮೊಖ್ತಿಯಾರ್, ಹಾವೇರಿ ಅಸ್ಲಂ, ರಿಬೋಕ್ ನಸೀಮ್ ಮುಂತಾದವರೆಲ್ಲ ಸೇರಿ ನಾಗಾ ಥಿಯೇಟರ್‌ನ ಪಾರ್ಕಿಂಗ್‌ನಲ್ಲಿ ಹೊಂಚುಹಾಕಿದ್ದೇ ಸಿನಿಮಾ ಬಿಡುತ್ತಿದ್ದಂತೆ ಇಫ್ತಿಯಾಕ್‌ನನ್ನು ಮುಗಿಸಲು ಅಣಿಯಾದರು. ಆದರೆ ಇಫ್ತಿಯಾಕ್‌ನ ಆಯಸ್ಸು ಗಟ್ಟಿಯಿತ್ತು.

ಇಫ್ತಿಯಾಕ್‌ನನ್ನೇ ಹೋಲುತ್ತಿದ್ದ ಪ್ರಭಾಕರ್ ಶೆಟ್ಟಿ ಎಂಬ ಹೊಟೇಲಿಯರ್‌ನ ಮೇಲೆ ಮೊಖ್ತಿಯಾರ್ ಗುಂಡು ಹಾರಿಸಿದ್ದ. ಪಾಪಿ ಇಫ್ತಿಯಾಕ್ ಬಚಾವಾಗಿಬಿಟ್ಟ. ಪೊಲೀಸರು ತಾನೇ ಏನು ಮಾಡಿಯಾರು? ಇಫ್ತಿಯಾಕ್ ತನಗಾಗದ ಯಾರ್ಯಾರ ಹೆಸರು ಕೊಟ್ಟನೋ ಅವರನ್ನೇ ತಂದು ಜೈಲಿಗೆ ಸಾಗಿಸಿದರು. ಅನ್ಯಾಯವಾಗಿ ಯೂಸುಫ್ ಪಟೇಲ್ ಮತ್ತು ಬ್ರಿಗೇಡ್ ಅಜಮ್ ಜೈಲು ಪಾಲಾದರು. ಮೊಖ್ತಿಯಾರ್ ಸೇಫಾಗಿ ಬಿಹಾರಕ್ಕೆ ಎಸ್ಕೇಪಾದ.

ಆವತ್ತು ಮೊಖ್ತಿಯಾರ್‌ಗೆ ಸಹಚರನಾಗಿದ್ದ ಹಾವೇರಿ ಅಸ್ಲಂ ಕ್ರಮೇಣ ಗೋರಿಪಾಳ್ಯದ ಅಲ್ತಾಫ್ ಜೊತೆ ಕೈಜೋಡಿಸಿದ. ತನ್ನ ಇಬ್ಬರು ತಮ್ಮಂದಿರನ್ನು ನಡುರಸ್ತೆಯಲ್ಲಿ ಕೊಚ್ಚಿ ಹಾಕಿದ್ದ ಆರಿಫ್ ಮತ್ತು ಇಮ್ರಾನ್ ವಿರುದ್ಧ ಸೇಡಿಗೆ ಹಾತೊರೆಯುತ್ತಿದ್ದ ಅಲ್ತಾಫ್ ಅದಕ್ಕೆಂದೇ ಅಸ್ಲಂ ಮೂಲಕ ಜಾರ್ಖಂಡ್‌ನಿಂದ ಮೆಷಿನ್‌ಗನ್ನುಗಳನ್ನು ತರಿಸಲು ಹೋಗಿ ಜೈಲು ಪಾಲಾದ. ರೈಲಲ್ಲಿ ಸಾಗಿಸಿತಂದ ಮೆಷಿನ್‌ಗನ್‌ಗಳು ಕಂಟೋನ್ಮೆಂಟ್ ರೈಲ್ವೇ ಸ್ಟೇಷನ್‌ನಲ್ಲಿ ಪೊಲೀಸರ ಕೈವಶವಾಗಿತ್ತು. ಯಾರೋ ಮುಸ್ಲಿಂ ಉಗ್ರರ ಕೃತ್ಯ ಇದೆಂದು ಭಾವಿಸಿದ ಪೊಲೀಸರಿಗೆ ಅಂತಿಮವಾಗಿ ಗೊತ್ತಾಗಿದ್ದು ಇದು ಗೋರಿಪಾಳ್ಯದ ಜಿದ್ದಾಜಿದ್ದಿಗೆ ಬಂದಿದ್ದೆಂದು-



ಒಂದು ವರ್ಷಕಾಲ ಜೈಲಲ್ಲಿದ್ದು ಬಂದ ಅಲ್ತಾಫ್‌ನನ್ನು ಹಿರಿಯ ಪೊಲೀಸ್ ಅಧಿಕಾರಿಯೊಬ್ಬ ಕರೆದು ಬುದ್ಧಿ ಹೇಳಿ ಕಾನೂನು ಪ್ರಕಾರವೇ ತಮ್ಮಂದಿರ ಹತ್ಯೆಗೆ ಪ್ರತೀಕಾರ ಸಾಧ್ಯ ಎಂದು ಮನದಟ್ಟು ಮಾಡಿಕೊಟ್ಟರು. ಅಲ್ಲಿಂದಾಚೆಗೆ ಪಾತಕ ಮಾರ್ಗವನ್ನೇ ತ್ಯಜಿಸಿದ ಅಲ್ತಾಫ್ ಕೋರ್ಟು ಕಚೇರಿ ಎಂದು ಅಲೆಯಲಾರಂಭಿಸಿದ. ತನ್ನ ತಮ್ಮಂದಿರನ್ನು ಕೊಂದ ಆರಿಫ್ ಮತ್ತು ಇಮ್ರಾನ್ ವಿರುದ್ಧ ಸಾಕ್ಷ್ಯಾಧಾರಗಳನ್ನು ಕಲೆಹಾಕಿದ. ಪ್ರತೀಕಾರದ ಮಾರ್ಗ ತೊರೆದು ಕಾನೂನು ಸಮರಕ್ಕೆ ನಿಂತುಬಿಟ್ಟ.

ಯಾವತ್ತು ಕೋರ್ಟಿನಲ್ಲಿ ಕೇಸು ಕಚ್ಚುತ್ತದೆ ಎಂಬುದು ಪಕ್ಕಾ ಆಯಿತೋ ಆರಿಫ್ ಬೆಂಗಳೂರಿನ ಕಂಡಕಂಡ ಮುಸ್ಲಿಂ ರೌಡಿಗಳನ್ನು ಹಿಡಿದು ಅಲ್ತಾಫ್‌ನನ್ನು ಮುಗಿಸಲು ಹವಣಿಸಿದ. ಯಾವುದಕ್ಕೂ ಅಲ್ತಾಫ್ ಜಗ್ಗುವುದಿಲ್ಲ ಎಂದು ಗೊತ್ತಾಗುತ್ತಿದ್ದಂತೆ ಅಲ್ತಾಫ್‌ನನ್ನೇ ನಿಕಾಲಿ ಮಾಡಲು ನಿರ್ಧರಿಸಿಬಿಟ್ಟ. ತಮ್ಮಂದಿರ ಜೋಡಿಕೊಲೆಗೆ ಕಮ್ಮಿಯೆಂದರೂ ಜೀವಾವಧಿ ಶಿಕ್ಷೆ ಆಗೇ ತೀರುತ್ತದೆ. ಜೊತೆಗೆ ತನ್ನ ಮಗನೂ ಜೈಲು ಕಂಬಿ ಎಣಿಸಲೇಬೇಕು. ಬಚಾವಾಗಬೇಕೆಂದರೆ ಅಲ್ತಾಫ್‌ನನ್ನು ಮುಗಿಸದೇ ಬೇರೆ ದಾರಿಯಿಲ್ಲ ಎಂದು ಲೆಕ್ಕ ಹಾಕಿ ಮಗ ಇಮ್ರಾನ್‌ನ ಮೂಲಕ ಮೊಖ್ತಿಯಾರ್‌ಗೆ ಸುಪಾರಿ ಒಪ್ಪಿಸಿಬಿಟ್ಟ. ಮೊಖ್ತಿಯಾರ್ ಇಮ್ರಾನ್‌ನ ಸಂಪರ್ಕಕ್ಕೆ ಬಂದಿದ್ದು ಮುಂಬಯಿಯ ಮತ್ತೊಬ್ಬ ಶಾರ್ಪ್ ಶೂಟರ್ ಮತ್ತು ಅಂದೇರಿ ಈಸ್ಟ್ ಪೊಲೀಸ್ ಠಾಣೆಯ ರೌಡಿಶೀಟರ್ ರಾಕೇಶ್ ಅಲಿಯಾಸ್ ನಾಸಿರ್ ಎಂಬಾತನ ಮೂಲಕ ಎಂಬುದು ಬೆಂಗಳೂರು ಅಂಡರ್‌ವರ್ಲ್ಡ್‌ನಲ್ಲಿ ಸದ್ಯ ಚಾಲ್ತಿಯಲ್ಲಿರುವ ಮಾತು.

2008ರ ಫೆಬ್ರವರಿ 2ರಂದು ಕೋರ್ಟ್ ಆವರಣದಲ್ಲೇ ಅಲ್ತಾಫ್‌ನನ್ನು ಮುಗಿಸಲು ಮೊಖ್ತಿಯಾರ್ ಹೊಂಚುಹಾಕಿದ್ದ. ಅದಕ್ಕೆಂದು ತನ್ನ ಜೊತೆ ಜಾರ್ಖಂಡ್‌ನಿಂದ ಸಮದ್, ತೌಸಿಫ್ ಮತ್ತು ರೆಹಮಾನ್ ಎಂಬ ಮೂವರು ಹಂತಕರನ್ನು ಸಜ್ಜುಗೊಳಿಸಿದ್ದ ವಿಚಾರ ಸಿಸಿಬಿ ಪೊಲೀಸರ ಕಿವಿಗೆ ಬಿದ್ದಿತ್ತು. ಆವತ್ತು ಅಲ್ತಾಫ್ ರಕ್ಷಣೆಗೆಂದು ಅರ್ಧ ಡಜನ್ ಬಂದೂಕುಧಾರಿ ಪೊಲೀಸರನ್ನು ನೇಮಿಸಲಾಗಿತ್ತು. ಇದಾದ ನಂತರ ಮತ್ತೆ 2008ರ ಫೆಬ್ರವರಿ 27ರಂದು ಮೊಖ್ತಿಯಾರ್ ಬೆಂಗಳೂರಿಗೆ ಬಂದ. ಆವತ್ತೂ ಅಲ್ತಾಫ್ ಕೋರ್ಟ್‌ಗೆ ಬರಬೇಕಿತ್ತು. ತಮ್ಮಂದಿರ ಹತ್ಯೆ ವಿರುದ್ಧ ಸಾಕ್ಷಿ ಹೇಳುವುದಕ್ಕೆ!

ಇದಾಗಿ ನಾಲ್ಕನೇ ಬಾರಿ ಮೊಖ್ತಿಯಾರ್ ಬೆಂಗಳೂರಿಗೆ ಬಂದಿದ್ದು 2009ರ ರಂಜಾನ್ ಹೊತ್ತಿಗೆ. ಆವತ್ತು ಮೊಖ್ತಿಯಾರ್‌ಗೆ ಸಾಥ್ ಕೊಟ್ಟಿದ್ದು ಆರಿಫ್ ಮಗ ಇಮ್ರಾನ್. ಈ ವಿಷಯ ಕೂಡ ಎ.ಕೆ.ಸಿಂಗ್‌ನ ಮೂಲಕವೇ ಪೊಲೀಸರಿಗೆ ಗೊತ್ತಾಗಿತ್ತು. ಈಗ ಡಿಸೆಂಬರ್ 2ರಿಂದ ಮತ್ತೆ ತಮ್ಮಂದಿರ ಜೋಡಿಕೊಲೆ ಕೇಸಿನ ವಿಚಾರಣೆ ಶುರುವಾಗಿದೆ. ಶತಾಯಗತಾಯ ಅಲ್ತಾಫ್‌ನನ್ನು ಮುಗಿಸೇ ತೀರುತ್ತೇನೆಂದು ಮೊಖ್ತಿಯಾರ್ ಆರಿಫ್‌ಗೆ ಮಾತು ಕೊಟ್ಟಿದ್ದಾನೆ. ಹಿಂದಾದರೆ ಗನ್ ಸ್ಮಗ್ಲರ್ ಸಿಂಗ್‌ನ ಮೂಲಕ ಪೊಲೀಸರಿಗೆ ಮಾಹಿತಿ ಬರುತ್ತಿತ್ತು. ಈಗ ಸ್ವತಃ ಸಿಂಗ್ ಎನ್‌ಕೌಂಟರ್‌ಗೆ ಬಲಿಯಾಗಿದ್ದಾನೆ. ಮಾಹಿತಿ ಸಿಗುವುದೂ ಕಷ್ಟವೇ. ಹೀಗಾಗಿ ಇಡೀ ಬೆಂಗಳೂರಿನ ಅಷ್ಟೂ ಪೊಲೀಸ್ ಠಾಣೆಗಳಿಗೆ ಮೊಖ್ತಿಯಾರ್ ವಿರುದ್ಧ ಮಾಹಿತಿ ಕೊಟ್ಟಿದ್ದಾರೆ ಜಂಟಿ ಪೊಲೀಸ್ ಕಮೀಷನರ್ ಅಲೋಕ್ ಕುಮಾರ್‌ಸಿಂಗ್.

ಗೋರಿಪಾಳ್ಯದ ಕ್ರಿಮಿನಲ್ ಅಪ್ಪಮಗನ ಸುಪಾರಿ ಹಿಡಿದೇ ಅಲ್ತಾಫ್ ಬೆನ್ನಿಗೆ ಬಿದ್ದ ಮೊಖ್ತಿಯಾರ್ ಸದ್ಯ ಬೆಂಗಳೂರಿನಲ್ಲಿರುವುದಂತೂ ಸತ್ಯ. ಒಂದೆಡೆ ಅಲ್ತಾಫ್‌ನ ಗೋರಿಪಾಳ್ಯದ ಮನೆ ಸುತ್ತ ಪೊಲೀಸರ ಸರ್ಪಗಾವಲಾದರೆ ಮತ್ತೊಂದೆಡೆ ಸಿಸಿಬಿ ಪೊಲೀಸರು ಸೇರಿದಂತೆ ಅರ್ಧ ಬೆಂಗಳೂರಿನ ಪೊಲೀಸರೆಲ್ಲ ಮೊಖ್ತಿಯಾರ್ ಬೆನ್ನಿಗೆ ಬಿದ್ದಿದ್ದಾರೆ. ಬೆಂಗಳೂರಿನ ಪೊಲೀಸರ ಮಟ್ಟಿಗೆ ಮೊಖ್ತಿಯಾರ್ ಸದ್ಯ Most Wanted ಕ್ರಿಮಿನಲ್.

ಸಿಕ್ಕಿದ್ದರೆ ಪೆದ್ದಗುಂಡನಿಗೂ ಮೊದಲೇ ಮೊಖ್ತಿಯಾರ್‌ನ ಹೆಣಬೀಳುತ್ತಿತ್ತು. ಬಹುಶಃ ಮೊಖ್ತಿಯಾರ್ ಸಿಗದ ಹತಾಶೆಗೋ ಏನೋ; ಪಾಪ ಪೆದ್ದಗುಂಡ ಬಲಿಯಾದ.

• ರಾ. ಸೋಮನಾಥ್


ಉತ್ತರ ಕನ್ನಡ

ಗ್ರಾಮ ಸಮರಾಂಗಣದಲ್ಲಿ ಕಳ್ಳ-ಮಳ್ಳರ ಮುಖಾಮುಖಿ!

ಜಿಲ್ಲಾ ಪಂಚಾಯ್ತಿಯ 36 ಸ್ಥಾನ ಮತ್ತು ಹನ್ನೊಂದು ತಾಪಂನ 128 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಣಕ್ಕೆ ಇಳಿಸಿರುವ ಕ್ಯಾಂಡಿಡೇಟ್‌ಗಳಲ್ಲಿ ಒಂದೂ ಜನಪರ ಬದ್ಧತೆ-ಕಾಳಜಿಯ ಮುಖ ಕಾಣಿಸದು. ಗ್ರಾಮ ರಾಜ್ಯದ ಮೂಲಭೂತ ಆಶಯ- ಅಭಿವೃದ್ಧಿ ರಾಜಕಾರಣದ ಗಂಧವೇ ಇಲ್ಲದ ಪೆದ್ದರು-ಬಕಾಸುರರೇ ಜಿಪಂ-ತಾಪಂ ಮೆಂಬರಿಕೆಯ 'ಲಾಭ'ದ ಆಸೆಯಿಂದ ಇಲೆಕ್ಷನ್‌ಗೆ ಧುಮುಕಿದ್ದಾರೆ. . ಜಿಲ್ಲೆಯ 36 ಕ್ಷೇತ್ರಗಳ ಕಾದಾಟ-ಕಂತ್ರಿ ತಂತ್ರಿ-ತರಲೆ ನೋಡಿದರೆ ಯಾವ ಪಕ್ಷವೂ ಬಹುಮತ ಪಡೆಯುವುದಿಲ್ಲ ಅನ್ನಿಸುತ್ತದೆ. ಜೆಡಿಎಸ್ ಕಿಂಗ್ ಆಗಿದಿದ್ದರೂ ಕಿಂಗ್ ಮೇಕರ್ ಆಗುವುದು ಗ್ಯಾರಂಟಿ.

ಉತ್ತರ ಕನ್ನಡದ ಹಳ್ಳಿ ಅಖಾಡದಲ್ಲಿ ಸಾಂಪ್ರದಾಯಿಕ ಶತ್ರುಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯ 'ಜಗಜಟ್ಟಿ'ಗಳು ಪರಸ್ಪರ ಗುರಾಯಿಸುತ್ತ ತೊಡೆ ತಟ್ಟುತ್ತಿದ್ದಾರೆ. ಅಕ್ರಮ-ಅನ್ಯಾಯದಿಂದ ಕದಿಯುವುದನ್ನೇ ಕಸುಬು ಮಾಡಿಕೊಂಡಿರುವ ಆಡಳಿತಾರೂಢ ಬಿಜೆಪಿ ಕಳ್ಳರು ಮತ್ತು ತಮ್ಮ ಕಾಲಿನ ಮೇಲೆ ತಾವೇ ಕಲ್ಲು ಹಾಕಿಕೊಂಡು ಚೀರಾಡುವ ಕಾಂಗ್ರೆಸ್ಸಿನ ಮಳ್ಳರು ಕಟ್ಟುತ್ತಿರುವ ಛದ್ಮವೇಷ ಕಂಡು ಮತದಾರ ಟೋಟಲ್ ಕನ್ಫ್ಯೂಜನ್ನಿಗೆ ಬಿದ್ದಿದ್ದಾನೆ. ಈ ಬಲಾಢ್ಯ ಬಿಜೆಪಿ-ಕಾಂಗ್ರೆಸ್ ಕುಸ್ತಿಯಲ್ಲಿ ತಮಗೇನಾದರೂ ತಂತಾನೆ ಛಾನ್ಸ್ ಸಿಗಬಹುದೋ ಎಂಬ ಲೆಕ್ಕಾಚಾರ ಜೆಡಿಎಸ್ ಸರದಾರರು ಹಾಕುತ್ತಿದ್ದಾರೆ. ದುರಂತ ಎಂದರೆ, ಈ ಕಳ್ಳ-ಮಳ್ಳರಲ್ಲಿ ಒಬ್ಬರನ್ನು ಅಥವಾ ಜೆಡಿಎಸ್‌ನ ಜೊಳ್ಳನ್ನು ಆರಿಸಬೇಕಾದ ಇಕ್ಕಟ್ಟಿಗೆ ಓಟುಗಾರ ಪ್ರಭು ಬಿದ್ದು ಒದ್ದಾಡುತ್ತಿದ್ದಾನೆ.

ಜಿಲ್ಲಾ ಪಂಚಾಯ್ತಿಯ 36 ಸ್ಥಾನ ಮತ್ತು ಹನ್ನೊಂದು ತಾಪಂನ 128 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಕಣಕ್ಕೆ ಇಳಿಸಿರುವ ಕ್ಯಾಂಡಿಡೇಟ್‌ಗಳಲ್ಲಿ ಒಂದೂ ಜನಪರ ಬದ್ಧತೆ-ಕಾಳಜಿಯ ಮುಖ ಕಾಣಿಸದು. ಗ್ರಾಮ ರಾಜ್ಯದ ಮೂಲಭೂತ ಆಶಯ- ಅಭಿವೃದ್ಧಿ ರಾಜಕಾರಣದ ಗಂಧವೇ ಇಲ್ಲದ ಪೆದ್ದರು-ಬಕಾಸುರರೇ ಜಿಪಂ-ತಾಪಂ ಮೆಂಬರಿಕೆಯ 'ಲಾಭ'ದ ಆಸೆಯಿಂದ ಇಲೆಕ್ಷನ್‌ಗೆ ಧುಮುಕಿದ್ದಾರೆ. ಹೀಗಾಗಿ ಭರ್ಜರಿ ಕಾಸು ಖರ್ಚು ಮಾಡಿ ಗೆಲ್ಲುವ ಸ್ಕೆಚ್ ಹಾಕಿಕೊಂಡಿದ್ದಾರೆ. ರಾಜ್ಯ ಕೊಳ್ಳೆ ಹೊಡೆದು ಕೊಪ್ಪರಿಗೆ ಕಾಸು ಕೂಡಿಸಿರುವ ಸಿಎಂ ಯಡ್ಡಿ ಮಹಾತ್ಮನ ಟೀಮಿನ ಮಂತ್ರಿ ಕಾಗೇರಿ, ಸೋಗಲಾಡಿ ಸಂಸದ ಅನಂತ್ಮಾಣಿ ಇಡೀ ಜಿಲ್ಲೆ ಮೇಲೆ ಹಿಡಿತ ಸಾಧಿಸಿ ಹೈಗರ ಸಾಮ್ರಾಜ್ಯ ಸ್ಥಾಪಿಸುವ ಹಿಡನ್ ಅಜೆಂಡಾವನ್ನು ಈ ಗ್ರಾಮ ಸಮರದ ಮೂಲಕ ಅನುಷ್ಠಾನಗೊಳಿಸಲು ಸ್ಕೆಚ್ ಹಾಕಿಕೊಂಡಿದ್ದಾರೆ.


ಶಿವಾನಂದ ನಾಯ್ಕ

ನಾಜೂಕಯ್ಯ ಕಾಗೇರಿ ಅದೇನೇ ದೂ(ದು)ರಾಲೋಚನೆ ಹಾಕಿಕೊಂಡು ಕಟಪಿಟಿ ಮಾಡಿದರೂ ಬಿಜೆಪಿಗೆ ಹಳ್ಳಿ ಪ್ರದೇಶದಲ್ಲಿ ಸಮರ್ಥ-ಶಕ್ತಿವಂತ ಶ್ರೀಮಂತ ಹುರಿಯಾಳುಗಳೇ ಸಿಕ್ಕಿಲ್ಲ; ಧರ್ಮಾಧಾರಿತ ಕಿತಾಪತಿಯಿಂದ ಎಂಪಿ, ಎಮ್ಮೆಲ್ಲೆ ಗೆದ್ದಷ್ಟು ಸುಲಭವಾಗಿ ಜಿಪಂ-ತಾಪಂನಂಥ ತಳಮಟ್ಟದ ಸಂಸ್ಥೆಗಳಲ್ಲಿ ಪಾರುಪತ್ಯ ನಡೆಸಲಿಕ್ಕೆ ಬಿಜೆಪಿ ಭಂಡರಿಗಾಗುತ್ತಿಲ್ಲ. ಏಕೆಂದರೆ, ಜನಪರ ನೀತಿ-ನಿಲುವುಗಳೇ ಇಲ್ಲದ ಬಿಜೆಪಿ ಭೂಪರಾಕ್ ಬಂಡವಾಳ ಸಣ್ಣ-ಸಣ್ಣ ಜಿಪಂ-ತಾಪಂ ಕ್ಷೇತ್ರದ ಜನರಿಗೆ ನಿಚ್ಚಳವಾಗಿ ಕಾಣಿಸುತ್ತಿದೆ. ಹೀಗಾಗಿ ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಮತ್ತು ಹಲವು ತಾಪಂಗಳಲ್ಲಿ ಬಿಜೆಪಿ ಅದೆಷ್ಟೇ ದುಡ್ಡು ಚೆಲ್ಲಿದರೂ ಸ್ವತಂತ್ರವಾಗಿ ಅಧಿಕಾರ ಹಿಡಿಯುವುದಕ್ಕೆ ಆಗುತ್ತಿಲ್ಲ.

ಬಿಜೆಪಿಗೆ ಕ್ಯಾಂಡಿಡೇಟ್ ಬರ ಬಂದರೆ, ಎದುರಾಳಿ ಕಾಂಗ್ರೆಸ್‌ನಲ್ಲಿ ಉಮೇದು ವಾರರದೇ ಹಾವಳಿ. ಟಿಕೆಟ್ ಸಿಗದ ಹತಾಶೆ ಬಂಡಾಯವಾಗಿ ಭುಗಿಲೆದ್ದಿದೆ! ಜಿಪಂ-ತಾಪಂನ ಎಲ್ಲ ಕಡೆ ಮ್ಯಾಗಿ ವಿರೋಧಿ ಆರ್ವಿಡಿ ಬಣದ ಟೊಣಪರಿಗೇ ಟಿಕೆಟ್ ಕೊಡಲಾಗಿದೆ. ಇದು ಸಹಜವಾಗೇ ಮ್ಯಾಗಿ "ಇಲ್ಲದೆ" ಅನಾಥರಾಗಿರುವ ಆಕೆಯ ಹಿಂಬಾಲಕರನ್ನು ಕೆರಳಿಸಿದೆ. ಹಾಗೆ ನೋಡಿದರೆ ಈ ಮ್ಯಾಗಿ ಮತ್ತು 'ಬಂ' ಪಟಾಲಮ್‌ಗಳಿಗಿಂತ ದಗಲುಬಾಜಿ ರಾಜಕಾರಣದ ರಾಜ ಆರ್ವಿಡಿ ಪಡೆಯೇ ಸ್ಟ್ರಾಂಗು! ಜನಪರ ರಾಜಕಾರಣ ಹಿಂದೆಂದೂ ಮಾಡದ ಮುಂದೆಯೂ ಮಾಡಲಾರದ ಆರ್ವಿಡಿ ಲಡ್ಡು ಹೊಡೆದು ಹೋಗಿರುವ ಆಸಾಮಿಯಾದರೂ ಮ್ಯಾಗಿಗಿಂತ ಚೆನ್ನಾಗಿ ಜಿಲ್ಲೆಯ ರಾಜಕಾರಣದ ಪಲ್ಸ್ ರೇಟ್ ಪತ್ತೆ ಹಚ್ಚಬಲ್ಲವ. ಕಾಂಗ್ರೆಸ್ ಕಾಯಂ ತನ್ನ ವಶದಲ್ಲಿರಬೇಕಾದರೆ ಜಿಪಂ-ತಾಪಂ ಸದಸ್ಯರ ಗೆಲ್ಲಿಸಿ ಅಂಕುಶದಲ್ಲಿಟ್ಟುಕೊಳ್ಳಬೇಕೆಂದು ಆತ ಖಾತ್ರಿ ಪಡಿಸಿಕೊಂಡಿದ್ದಾನೆ.

ಆದರೆ 'ಬಂ' ಕಾಂಗ್ರೆಸ್ ಬಿಟ್ಟು ಹೋಗಿರುವುದು ಆರ್ವಿಡಿಯನ್ನು ಸಂದಿಗ್ಧಕ್ಕೆ ಸಿಲುಕಿಸಿದೆ. ಏನೇನೋ ದೂರಾಲೋಚನೆ ಹಾಕಿ 'ಬಂ'ರ ಸ್ವಜಾತಿ ದೀವರ ಓಟು ದಂಡಿಯಾಗಿ ಪಡೆದು ತನ್ನ ಮಗ ಪ್ರಶಾಂತ (ಕೇಂದ್ರ ಮಂತ್ರಿ ಪ್ರಫುಲ್ ಪಟೇಲ್ ಅಳಿಮಯ್ಯ)ನನ್ನು ಎಂಪಿ ಮಾಡಬೇಕು, ಮ್ಯಾಗಿಯನ್ನು ಜಿಲ್ಲೆಯಿಂದ ಓಡಿಸಬೇಕೆಂದು 'ಬಂ'ರನ್ನು ಕಾಂಗ್ರೆಸ್‌ಗೆ ಸೇರಿಸಿಕೊಂಡಿದ್ದ ಆರ್ವಿಡಿ! 'ಬಂ'ರ ಭಾಮೈದ ಭೀಮಣ್ಣ ನಾಯ್ಕ ಎಂಬ ಮುಖೇಡಿಯನ್ನು ಡಿಸಿಸಿ ಅಧ್ಯಕ್ಷ ಪಟ್ಟಕ್ಕೂ ಏರಿಸಿದ್ದ. 'ಬಂ' ಹೋಗುವಾಗ ಒಂದಿಷ್ಟು ಆತನ ಹಿಂದಿನ ಅನುಯಾಯಿಗಳ ಕರೆದೊಯ್ದಿದ್ದರೆ ಆರ್ವಿಡಿಗೆ ಈ ಪರಿ ಪರಿತಾಪ ಆಗುತ್ತಿರಲಿಲ್ಲ. ಈ ಬಾರಿ 'ಬಂ'ರ ಕಟ್ಟಾ ಬೆಂಬಲಿಗರು ಆತನ ಜೊತೆ ಜೆಡಿಎಸ್‌ಗೆ ಹೋಗಿಲ್ಲ, ಕಾಂಗ್ರೆಸ್‌ನಲ್ಲೇ ಉಳಿದು ಮ್ಯಾಗಿ ಬಣದಲ್ಲಿ ಲೀನವಾಗಿದ್ದಾರೆ. ಇದು ಆರ್ವಿಡಿಗೆ ಸಂಕಟ ಮೂಡಿಸಿದೆ.


ಜಿಪಂ ತಾಪಂ

• ನಹುಶ

'ಬಂ'ರ ಹೈಜಂಪ್‌ನಿಂದ ಜೆಡಿಎಸ್‌ಗೆ ಆನೆ ಬಲ ಬಂದಿದೆ ಎಂದು ಆ ಪಕ್ಷದ ಸ್ಥಳೀಯ ಡಬ್ಬಾ ಲೀಡರ್‌ಗಳು ಹೇಳುತ್ತಿದ್ದಾರೆ. ವಾಸ್ತವವಾಗಿ ಮರಕೋತಿ ಆಟದಿಂದ 'ಬಂ' ಬಣ್ಣಗೆಟ್ಟು ಹೋಗಿದ್ದಾರೆ. ಒಂದು ಕಾಲದಲ್ಲಿ 'ಬಂ' ಪಕ್ಷಾಂತರ ಮಾಡಿದರೆ ಇಡೀ ಉತ್ತರ ಕನ್ನಡದ ರಾಜಕಾರಣದ ಸಮೀಕರಣವೇ ಉಲ್ಟಾಪಲ್ಟಾ ಆಗುತ್ತಿತ್ತು. ಆದರೆ ಈಗ 'ಬಂ'ಗೆ ಆ ಫೇಸ್ ವ್ಯಾಲ್ಯೂ ಇಲ್ಲ. ಸಿದ್ದಾಪುರ ತಾಲ್ಲೂಕೊಂದನ್ನು ಬಿಟ್ಟರೆ ಜೆಡಿಎಸ್‌ಗೆ ಜಿಲ್ಲೆಯಲ್ಲಿ 'ಬಂ' ಬರುವಿಕೆಯಿಂದ ಫಾಯ್ದೆ ಏನೂ ಆಗಿಲ್ಲ; ಕಾಂಗ್ರೆಸ್‌ಗೂ ಅಂಥ ಹಾನಿಯಾಗಿಲ್ಲ. ಬಿಜೆಪಿಗಂತೂ ಇದರ ಅಡ್ಡ ಪರಿಣಾಮದಿಂದ ಬಿಲ್ಲಿ ಪ್ರಯೋಜನವೂ ಇಲ್ಲ. ಜೆಡಿಎಸ್ ಎಮ್ಮೆಲ್ಲೆಗಳಿರುವ ಕುಮಟಾ ಮತ್ತು ಹಳಿಯಾಳದಲ್ಲಿ ಬಿಜೆಪಿ-ಕಾಂಗ್ರೆಸ್‌ಗೆ ಅಡ್ಡಗಾಲು ಹಾಕಿ ಒಂದಿಷ್ಟು ಜಿಪಂ ಸೀಟು-ತಾಪಂ ಗದ್ದುಗೆ ಹಿಡಿಯುವ ಸಾಧ್ಯತೆಯಿದೆ. ಯಲ್ಲಾಪುರದಲ್ಲಿ ಅದಿರು ಉದ್ಯಮಿ-ಎಮ್ಮೆಲ್ಲೆ ಆಕಾಂಕ್ಷಿ ಅನಿಲ್‌ಕುಮಾರ್ ಎಂಬ 'ಮಲೆಯಾಳಿ ಬಿಲ್ಲ' ತನ್ನ ತಾಕತ್ತು ತೋರಿಸುವ ಹಠಕ್ಕೆ ಬಿದ್ದಿರುವುದರಿಂದ ಇಲ್ಲೂ ಜೆಡಿಎಸ್ ಆಟಕ್ಕಷ್ಟೆ ಅಲ್ಲ ಲೆಕ್ಕಕ್ಕೂ ಇದೆ!

ಕಾರವಾರ-ಅಂಕೋಲಾ

ಇದು 'ಅತಂತ್ರ' ಶಾಸಕ ಆನಂದ್ ಅಸ್ನೋಟಿಕರ್ ಕ್ಷೇತ್ರ. ಕಾರವಾರ-ಅಂಕೋಲಾ ಕ್ಷೇತ್ರದಲ್ಲಿ ಏಕಮೇವಾದ್ವಿತೀಯನಾಗಿ ಮೆರೆಯುತ್ತಿದ್ದ ಅಸ್ನೋಟಿಕರ್ (ಕಮಲ) ಅಡ್ಡಪರಿಣಾಮದಿಂದ ಒಂಥರಾ ತಿರಬೋಕಿಯಂತಾಗಿ ಹೋಗಿದ್ದಾನೆ. ಕಾಂಗ್ರೆಸ್ಸಿನಲ್ಲಿ ಒಳಸೇರಿಸಿಕೊಳ್ಳುತ್ತಿಲ್ಲ; ಬಿಜೆಪಿಯಲ್ಲಿದ್ದೇ ನೆಂದರೂ ಚೆಡ್ಡಿ-ಕಾವಿಗಳು ಮುಟ್ಟಿಸಿಕೊಳ್ಳುತ್ತಿಲ್ಲ; ಜೆಡಿಎಸ್‌ಗೆ ಹೋಗುವ ಅಥವಾ ಅಪ್ಪನ ಅಭಿಮಾನಿ ಸಂಘದಿಂದ ಕಣಕ್ಕಿಳಿಯಲು ಧೈರ್ಯವಿಲ್ಲ, ಅಸ್ನೋಟಿಕರ್‌ನ ಫಜೀತಿ ಹೇಳತೀರದು. ಬಿಜೆಪಿ ಅಸ್ನೋಟಿಕರ್‌ನ ಮೂರ್‍ನಾಲ್ಕು ಅನುಯಾಯಿಗಳಿಗೆ ಜಿಪಂ ಟಿಕೆಟ್ ಕೊಟ್ಟಿದೆ. ಆತನ ಗ್ಯಾಂಗ್ ಒಡೆಯುವ ತಂತ್ರಗಾರಿಕೆ ಇದೆ. ಇದನ್ನೇ ಬಿಜೆಪಿಗೆ ಮುಂದೆ ಬತ್ತಿ ಇಡಲು ಅಸ್ನೋಟಿಕರ್ ಬಳಸಿಕೊಳ್ಳುತ್ತಿದ್ದಾನೆ.


ಅಸ್ನೋಟಿಕರ್

ಕಾರವಾರದ ಚೆಂಡಿಯಾ ಕ್ಷೇತ್ರದಲ್ಲಿ ಉಮಾಕಾಂತ ಹರಿಕಂತ್ರ, ಮಲ್ಲಾಪುರದಲ್ಲಿ ಚೈತ್ರಾ ಕೋಠರಕರ್ ಮತ್ತು ಅಂಕೋಲಾದ ಶೇಟಗೇರಿ ಕ್ಷೇತ್ರದಲ್ಲಿ ಸುಜಾತಾ ಗಾಂವಕರ್‌ಗೆ ಬಿಜೆಪಿ ಅಭ್ಯರ್ಥಿಯಾಗಿಸಿದೆ. ಇವರೆಲ್ಲ ಆನಂದ್ ಅಸ್ನೋಟಿಕರ್‌ನ ಕಟ್ಟಾ ಬೆಂಬಲಿಗರು. ಇವರನ್ನು ಗೆಲ್ಲಿಸಲು ಅಸ್ನೋಟಿಕರ್ ಕಸರತ್ತು ಮಾಡುತ್ತಿದ್ದಾನೆ. ಇನ್ನುಳಿದ ಕೆಲವೆಡೆ ಪಕ್ಷೇತರರಾಗಿ ತನ್ನವರನ್ನು ಅಖಾಡಕ್ಕೆ ಇಳಿಸಿದ್ದಾನೆ. ಬಿಜೆಪಿ-ಅಸ್ನೋಟಿಕರ್ ಗ್ಯಾಂಗಿನ ವಿರುದ್ಧ ಕಾಂಗ್ರೆಸ್‌ನ ಕಿಂಗ್ ಸತೀಶ್ ಸೈಲ್ ತನ್ನ ನಿಷ್ಠಾವಂತರನ್ನು ನಿಲ್ಲಿಸಿದ್ದಾರೆ. ಎರಡೂ ತಾಲ್ಲೂಕಿನ 6 ಜಿಪಂ ಕ್ಷೇತ್ರಗಳಲ್ಲಿ ಗೆದ್ದು ಎಮ್ಮೆಲ್ಲೆ ಇಲೆಕ್ಷನ್ ಹೋರಾಟಕ್ಕೆ ಅಖಾಡ ಹದಗೊಳಿಸಿಕೊಳ್ಳುವ ಸ್ಕೆಚ್‌ಅನ್ನು ಅದಿರು ಎಕ್ಸ್‌ಪೋರ್ಟರ್ ಆಗಿರುವ ದುಡ್ಡಿನ ದೊರೆ ಸೈಲ್ ಹಾಕಿಕೊಂಡಿದ್ದಾನೆ. ಹೇಗಾದರೂ ಮಾಡಿ ಅಸ್ನೋಟಿಕರ್‌ನ ಹುಟ್ಟು ಈ ಜಿಪಂ-ತಾಪಂ ರಣರಂಗದಲ್ಲೇ ಅಡಗಿಸಲು ಸೈಲ್ ಹಠದಿಂದ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಚೆಂಡಿಯಾದಲ್ಲಿ ಪಕ್ಷೇತರ ಅಭ್ಯರ್ಥಿ ಗಣಪತಿ ಮಾಂಗ್ರೆ ಗೆಲ್ಲುವ ಲಕ್ಷಣವಿದೆ.

ಅಂಕೋಲಾದ ಅವರ್ಸಾದಲ್ಲಿ ಸ್ಪರ್ಧಿಸಿರುವ ಕಾಂಗ್ರೆಸ್‌ನ ಉದಯ ನಾಯ್ಕ, ಜಿಲ್ಲಾ ಪಂಚಾಯತಿಯ ಮಾಜಿ ಸದಸ್ಯ, ಒಂದು ಬಾರಿ ಹೆಂಡತಿ ಉಷಾ ನಾಯ್ಕರನ್ನು ಜಿಪಂಗೆ ಗೆಲ್ಲಿಸಿದಾತ. ಈತನ ವಿರುದ್ಧ ಅನಂತ್ಮಾಣಿಯ ಕಲೆಕ್ಷನ್ ಏಜೆಂಟ್ ಅರುಣಕುಮಾರ್ ನಾಯ್ಕ, ಬಿಜೆಪಿಯಿಂದ ಸೆಣಸಾಡುತ್ತಿದ್ದಾನೆ. ಕಾಂಗ್ರೆಸ್ ಟಿಕೆಟ್ ಸಿಗದ ಸಿಟ್ಟಿಂದ ಮಾರುತಿ ನಾಯ್ಕ್, ತನಗೆ ಹೆಲ್ಪ್ ಮಾಡಬಹುದೆಂಬ ಲೆಕ್ಕಾಚಾರ ಈತನದು. ಆದರೆ ಜನಾನುರಾಗಿ ತರುಣ ಉದಯನಾಯ್ಕ ಗೆಲ್ಲುವ ಛಾನ್ಸ್ ಹೆಚ್ಚಿದೆ. ಉದಯ-ಉಷಾ ದಂಪತಿಗಳು ಮಾಡಿದ ಜಾನಪರ ಕೆಲಸ, ಅರುಣನ ದುಡ್ಡಿನ ಬಲಕ್ಕಿಂತ ಜಾಸ್ತಿ, ಅಗಸೂರಲ್ಲಿ ಹಾಲಕ್ಕಿ ಒಕ್ಕಲಿಗರ ಮತದಾರರು ಗಣನೀಯ ಪ್ರಮಾಣದಲ್ಲಿದ್ದಾರೆ. ಈ ಸಮುದಾಯದ ಸರಸ್ವತಿ ಗೌಡ ಕಾಂಗ್ರೆಸ್ ಕ್ಯಾಂಡಿಡೇಟ್. ಬಿಜೆಪಿ ಹವ್ಯಕ ಬ್ರಾಹ್ಮಣ ಸಮುದಾಯದ ಮಹಾಲಕ್ಷ್ಮಿ ಭಟ್‌ಗೆ ನಿಲ್ಲಿಸಿದೆ. ಈ ಅನಂತ್ಮಾಣಿ ಕ್ಯಾಂಡಿಡೇಟ್ ಹೈಗತಿಗೆ ಗೌಡತಿ ಎದುರು ಗೆಲ್ಲಲಾಗದೆಂದೇ ಕ್ಷೇತ್ರದಲ್ಲಿ ಅಭಿಪ್ರಾಯವಿದೆ. ಇನ್ನೊಂದು ಕುತೂಹಲಕರ ಕ್ಷೇತ್ರ ಶೆಟಗೇರಿ. ಇದು ಸಾಮಾನ್ಯ ಕ್ಷೇತ್ರ. ಇಲ್ಲಿ ಬಿಜೆಪಿಗೆ ಸರಿಯಾದ ಕ್ಯಾಂಡಿಡೇಟೇ ಸಿಗದೆ ಮಾಜಿ ತಾಪಂ ಅಧ್ಯಕ್ಷೆ ಸುಜಾತರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಕ್ಯಾಂಡಿಡೇಟ್ ವಿನೋದ ನಾಯಕ್ ಎಂಬ ಸರಳ-ಸೌಮ್ಯ ತರುಣ ಹಿಂದೆ ಜಿಲ್ಲಾ ಪಂಚಾಯ್ತಿ ಸದಸ್ಯನಾಗಿ ಅನುಭವ ಹೊಂದಿರುವಾತ. ವಿನೋದ್ ಎದುರು ಸುಜಾತ ಗೆಲ್ಲುವುದು ಕಷ್ಟ.

ಕಾರವಾರ ತಾಲ್ಲೂಕಿನ ಚೆಂಡಿಯಾದಲ್ಲಿ ಕಾಂಗ್ರೆಸ್‌ನ ಮಧುಕರ್ ನಾಯ್ಕ ಮತ್ತು ಬಿಜೆಪಿಯ ಉಮಾಕಾಂತ ಹರಿಕಂತ್ರ ನಡುವೆ ಜಿದ್ದಾಜಿದ್ದಿ ಕಾಳಗ ಏರ್ಪಡಲಿದೆ. ಬಿಜೆಪಿ ಕ್ಯಾಂಡಿಡೇಟ್ ಅಸ್ನೋಟಿಕರ್ ಶಿಷ್ಯನಾದರೆ, ಕಾಂಗ್ರೆಸ್ ಉಮೇದುದಾರ ಸೈಲ್ ಸಹಚರ. ಪರೋಕ್ಷ ಕದನ ಸೈಲ್ V/s ಅಸ್ನೋಟಿಕರ್ ಮಧ್ಯ ನಡೆಯುತ್ತಿದೆ. ಅತ್ತ ಮಲ್ಲಾಪುರದಲ್ಲಿ ಬಿಜೆಪಿಯಿಂದ ನಿಂತಿರುವಾಕೆ ಮಾಜಿ ತಾಪಂ ಅಧ್ಯಕ್ಷ-ಅಸ್ನೋಟಿಕರ್ ಚೇಲಾ ಚಂದ್ರಹಾಸ್ ಕೋಠಾರಕರ್‌ನ ಹೆಂಡತಿ. ಇಲ್ಲಿ ಸೈಲ್‌ನ ಕ್ಯಾಂಡಿಡೇಟ್ ರಾಧಾ ಚಿಪ್ಕರ್ ಗೆಲ್ಲುವುದು ಅನುಮಾನ. ಚಿತ್ತಾಕುಲದಲ್ಲಿ ಬಿಜೆಪಿಯ ಕ್ಯಾಂಡಿಡೇಟಾಗಿರುವ ಮಾಜಿ ಜಿಪಂ ಸದಸ್ಯೆ ರೀನಾ ನಾಯಕ್ ಕಾಂಗ್ರೆಸ್‌ನ ಜಯಮಾಲಾರಿಗಿಂತ ಶಕ್ತಿಶಾಲಿ. ರೀನಾ ನಾಯಕ್ ತಂದೆ ಎಂ.ಜಿ. ನಾಯಕ್ ಜಿಪಂ ಅಧ್ಯಕ್ಷರೂ ಆಗಿದ್ದರು.


ಕಾರವಾರ-ಅಂಕೋಲಾ ತಾಪಂನಲ್ಲಿ ಅಸ್ನೋಟಿಕರ್ ಬೆಂಬಲಿಗರು ನಿರ್ಣಾಯಕರಾಗಲಿದ್ದಾರೆ.

ಮುಂಡಗೋಡ

ಈ ತಾಲ್ಲೂಕಿನ ಮೂರು ಜಿಪಂ ಕ್ಷೇತ್ರ-ತಾಪಂ ಇಲೆಕ್ಷನ್ ಬಿಜೆಪಿ ಶಾಸಕ ವಿ.ಎಸ್. ಪಾಟೀಲ್ ಎಂಬ ಮೊದ್ಮಣಿ, ಜೆಡಿಎಸ್‌ನ ಎಮ್ಮೆಲ್ಲೆ ತಲಬುದಾರ ಅನಿಲ್‌ಕುಮಾರ್, ಕಾಂಗ್ರೆಸ್‌ನ ಕರಾಮತ್ತುಗಾರ ಶಿವರಾಮ ಹೆಬ್ಬಾರ್‌ಗಳ ಪ್ರತಿಷ್ಠೆ ಅಖಾಡದಂತಾಗಿದೆ. ಒಂದು ಆ್ಯಂಗಲ್‌ನಿಂದ ನೋಡಿದರೆ ತ್ರಿಕೋನ ಕಾಳಗ ಏರ್ಪಟ್ಟಂತೆ ಕಾಣುತ್ತದೆ. ಇಲ್ಲಿ ಅಭ್ಯರ್ಥಿಗಳ ಫೇಸ್ ವ್ಯಾಲ್ಯೂಗಿಂತ ಅವರನ್ನು ಕಣಕ್ಕಿಳಿಸಿದ ಗಾಡ್‌ಫಾದರ್‌ಗಳ ಶಕ್ತಿಯೇ ನಿರ್ಣಾಯಕ. ಇಲ್ಲಿ ಎಲ್ಲ ಪಕ್ಷದಲ್ಲೂ ಬಂಡಾಯ ಭುಗಿಲೆದ್ದಿರುವುದು ಕದನ ಕುತೂಹಲಕರವಾಗಿಸಿದೆ.


ಯಲ್ಲಾಪುರ

ಯಲ್ಲಾಪುರ ಜೆಡಿಎಸ್ ಜಿಲ್ಲಾಧ್ಯಕ್ಷರ ಮಾತಿನಮಲ್ಲ ಪ್ರಮೋದ್ ಹೆಗಡೆಯ ತವರು. ಜೆಡಿಎಸ್‌ನ ಅನಿಲ್‌ಕುಮಾರ್ ಮತ್ತು ಕಾಂಗ್ರೆಸ್‌ನ ಎಮ್ಮೆಲ್ಲೆ ಚಟವಾರ ಶಿವರಾಮ ಹೆಬ್ಬಾರ ಹೆಡ್‌ಕ್ವಾಟರ್ಸ್. ಬಿಜೆಪಿ ಶಾಸಕ ವಿ.ಎಸ್. ಪಾಟೀಲ್‌ಗಿಂತ ಜಿಲ್ಲಾ ಮಂತ್ರಿ ಕಾಗೇರಿ-ಸಂಸದ ಅನಂತ್ಮಾಣಿಗಳು ಸ್ಥಳೀಯ ಬಿಜೆಪಿ ಯಜಮಾನರು. ತಾಲ್ಲೂಕಿನ ಎರಡು ಜಿಪಂ ಕ್ಷೇತ್ರಗಳಲ್ಲಿ ತೀವ್ರ ಕುತೂಹಲ ಕೆರಳಿಸಿರುವುದು ಕಂಪ್ಲಿ. ಇಲ್ಲಿ ಕಾಂಗ್ರೆಸ್ ತನ್ನ ಗುಲಾಮ ವಿಜಯ ಮಿರಾಶಿ ಎಂಬ ದಂಡಪಿಂಡಕ್ಕೆ ಟಿಕೆಟ್ ಕೊಟ್ಟಿರುವುದು ನಿಷ್ಠಾವಂತ ಕಾಂಗ್ರೆಸ್ಸಿಗ-ದೀವರ ಪ್ರಭಾವಿ ಎಮ್.ಎಸ್. ನಾಯ್ಕರನ್ನು ಕೆರಳಿಸಿದೆ. ಆತನಿಗೆ ಜೆಡಿಎಸ್ ಟಿಕೆಟ್ ಕೊಟ್ಟಿದೆ. ಬಿಜೆಪಿಯಿಂದ ಭಟ್ಟ ನಿಂತಿದ್ದಾರೆ. ಹೋರಾಟ ಕಾಂಗ್ರೆಸ್ V/s ಜೆಡಿಎಸ್ ಮಧ್ಯೆ ಇದೆ. ಇಡಗುಂಜಿಯಿಂದ ಮಾಜಿ ಜಿ.ಪಂ. ಸದಸ್ಯ ಅನಂತನಗರ ಬಿಜೆಪಿಯಿಂದ ಭಟ್ಟ ನಿಂತಿದ್ದಾರೆ. ಹೋರಾಟ ಕಾಂಗ್ರೆಸ್ V/s ಜೆಡಿಎಸ್ ಜಿದ್ದಿ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ತಾಪಂ ಅಧ್ಯಕ್ಷ ಪ್ರೇಮಾನಂದ ನಾಯ್ಕರನ್ನು ಕಣಕ್ಕಿಳಿಸಿದೆ. ಜೆಡಿಎಸ್ ಬುಡಕಟ್ಟು ಕುಣಬಿ ಜನಾಂಗದ ಗಂಗಾಧರ್ ಎಂಬುವರಿಗೆ ಟಿಕೆಟ್ ಕೊಟ್ಟಿದೆ. ಚೆಡ್ಡಿ ರಾಜಕೀಯದಲ್ಲಿ ಪಳಗಿದ ನಾಗರಜದ್ದಿಗೆ ಮಣಿಸಲು ಪ್ರೇಮಾನಂದ್ ಹೆಣಗಾಡಿದಷ್ಟು ಜೆಡಿಎಸ್‌ಗೆ ಲಾಭ.


ಕಾಗೇರಿ



ಭಟ್ಕಳ



ಜಿಲ್ಲೆಯಲ್ಲಿ ಅನೈತಿಕ-ಬಿಸಿನೆಸ್ ರಾಜಕಾರಣವೇನಾದರೂ ಜೋರಾಗಿದ್ದರೆ ಅದು ಭಟ್ಕಳದಲ್ಲಿ. ಈ ಹೊಲಸು ರಾಜಕಾರಣದ ಪಿತಾಮಹರು ಬಿಜೆಪಿ ಸಂಸದ ಅನಂತ್ಕುಮಾರ್ ಮತ್ತು ಕಾಂಗ್ರೆಸ್ ಶಾಸಕ ಜೆ.ಡಿ. ನಾಯ್ಕ. ಸ್ವಪಕ್ಷದವರಿಗೇ ಟಾಂಗ್ ಕೊಡಲು ಇವರಿಬ್ಬರು ಹೊತ್ತಲ್ಲದ ಹೊತ್ತಲ್ಲೂ ಕೂಡಾವಳಿ ನಡೆಸುತ್ತಾರೆ. ಅನಂತ್ಕುಮಾರ್‌ಗೆ ಮಾಜಿ ಮಂತ್ರಿ ದೀವರ ಕುಲತಿಲಕ ಶಿವಾನಂದ ನಾಯ್ಕ ವೈರಿಯಾದರೆ, ಪಿರ್ಕೀಸ್ ಜೆ.ಡಿ. ನಾಯ್ಕರಿಗೆ ಸ್ವಪಕ್ಷದ ...ೀದರ್ ಗರ್ಡಿಕರ್, ಮಂಕಾಳು ವೈದ್ಯರ ಮುಗಿಸುವುದೊಂದೇ ಕಾರ್ಯಕ್ರಮ. ಜಾಲಿ ಕ್ಷೇತ್ರದಲ್ಲಿ ...ನ ಬಂಡಾಯ ಅಭ್ಯರ್ಥಿ- ಮಾಜಿ ಜಿಪಂ ಉಪಾಧ್ಯಕ್ಷ ಮಂಕಾಳು ವೈದ್ಯನೆಂಬ ಡಿಸೈಲ್ ಕಳ್ಳ ಗೆಲ್ಲುವುದು ...ತಿ. ಈತ ಕಳೆದ ಬಾರಿ ಮಾವಳ್ಳಿ ಕ್ಷೇತ್ರದಲ್ಲೂ ಪಕ್ಷೇತರನಾಗಿ ಗೆದ್ದಿದ್ದ.

...ಾವಳ್ಳಿಯಲ್ಲಿ ತನ್ನ ಆಪ್ತಾಪ್ತ ಮಿತ್ರ ಆಲ್ಬರ್ಟ್ ಡಿ' ಕೊಸ್ತಾನಿಗೆ ಕಾಂಗ್ರೆಸ್ ಟಿಕೆಟ್ ಸಿಗುವಂತೆ ಟಾಕ್ಟೀಸ್ ...ದ್ದಾನೆ. ಕಾಂಗ್ರೆಸ್ ಬಲ ಮತ್ತು ಮಂಕಾಳು ವೈದ್ಯನ ಶಕ್ತಿ ಸೇರಿ ಆಲ್ಬರ್ಟ್ ಗೆಲ್ಲಲಿದ್ದಾನೆ. ಜಾಲಿ ಮತ್ತು ...ಿಯ ಬಿಜೆಪಿಯಲ್ಲಿನ ಅನಂತ್ಕುಮಾರ್-ಶಿವಣ್ಣ ಬಣದ ಬಡಿದಾಟ ವೈದ್ಯ-ಆಲ್ಬರ್ಟ್‌ರನ್ನು ಗೆಲ್ಲಿಸಲಿದೆ. ಇಲ್ಲಿ ... ಗ್ಯಾಂಗ್ ಬಂಡಾಯ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಶಿರಾಲಿ ಒಂದೇ ಬಿಜೆಪಿಗೆ ಅವಕಾಶ ಇರುವ ಕ್ಷೇತ್ರ. ... ಕಾಂಗ್ರೆಸ್ ಕ್ಯಾಂಡಿ ಡೇಟ್ ಒಳ್ಳೆಯವರಾದರೂ ಹೊರಗಿನವರೆಂಬ ಮೈನಸ್ ಅಂಶ ಕಾಡುತ್ತಿದೆ. ಇಲ್ಲಿ ಅನಂತ್ಕುಮಾರ್ ಮತ್ತು ಶಿವಣ್ಣ ಫ್ಯಾಕ್ಟರ್‌ಗಿಂತ ಕಮಲ ಕರಾಮತ್ತೇ ಜೋರಾಗಿದೆ. ಬೆಳ್ಕೆ ಕ್ಷೇತ್ರದಲ್ಲಿ ಮಾಜಿ ಜಿಪಂ ಅಧ್ಯಕ್ಷ ಗರ್ಡೀಕರ್ ಶಾಸಕ ಜೆಡಿ ಮೇಲಿನ ಸಿಟ್ಟುಬಿಟ್ಟು ಕೆಲಸ ಮಾಡಿದರೆ ಕಾಂಗ್ರೆಸ್ ಅಭ್ಯರ್ಥಿ ಮಂಜಮ್ಮಗೊಂಡ ಗೆಲ್ಲುತ್ತಾರೆ. ಶಿವಾನಂದ ನಾಯ್ಕರ ಬಂಡಾಯ ಬಿಜೆಪಿ ಅಭ್ಯರ್ಥಿ ಲಕ್ಷ್ಮೀಗೊಂಡರಿಗೆ ಗರ್ಡೀಕರ್ ತಟಸ್ಥರಾದರೆ ಗೆಲ್ಲುವುದು ಗ್ಯಾರಂಟಿ. ಭಟ್ಕಳದ ಅನೈತಿಕ ರಾಜಕಾರಣ ನೋಡಿದರೆ ಬಂಡಾಯ ಬಿಜೆಪಿ ಅಭ್ಯರ್ಥಿ ಲಕ್ಷ್ಮೀ ಅಧಿಕೃತ ಬಿಜೆಪಿ ಹುರಿಯಾಳು- ಅನಂತ್ಕುಮಾರ್ ಬಣದ ಸವಿತಾ ಗೊಂಡರಿಗೆ ಟಾಂಗ್ ಕೊಡುವ ಸೂಚನೆ ಕಾಣಿಸುತ್ತದೆ.



ಗೀತಾ



ಸವಿತಾ

ಹೊನ್ನಾವರ

ಜಿಲ್ಲೆಯ ದೊಡ್ಡ ತಾಲ್ಲೂಕು ಹೊನ್ನಾವರದಲ್ಲಿ ಐದು ಜಿಪಂ ಕ್ಷೇತ್ರವಿದೆ. ಇದರಲ್ಲಿ ಎರಡು ಕುಮಟಾ ಶಾಸಕ ದಿನಕರ ಶೆಟ್ಟಿಗೂ ಇನ್ನುಳಿದ ಮೂರು ಕಾಂಗ್ರೆಸ್‌ನ ಭಟ್ಕಳ ಶಾಸಕ ಜೆ.ಡಿ. ನಾಯ್ಕರಿಗೂ ಹಂಚಿಹೋಗಿದೆ. ಮುಗ್ವಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಗಜಾನನ ನಾಯ್ಕ, ಬಿಜೆಪಿಯ ಮಂಜುನಾಥ, ಜೆಡಿಎಸ್‌ನ ಕೃಷ್ಣ ಗೌಡರಿಗಿಂತ ಶಕ್ತಿಶಾಲಿ. ಮಂಜುನಾಥ ಗೌಡ ಸೋತರೆ ಆತನ ಗಾಡ್‌ಫಾದರ್ ಕುಮಟಾ ರೈಲ್ ಹೋಟೆಲ್ ಬಾಸ್-ಸಂಸದ ಅನಂತ್ಕುಮಾರ್‌ನ ಚೇಲಾ ಎಂ.ಜಿ. ಭಟ್ಟನ ಮಾನ ಹರಾಜಾಗುತ್ತದೆ. ಗಜಾನನ ನಾಯ್ಕ ಸೋತರೆ ಮಾಜಿ ಜಿಪಂ ಸದಸ್ಯ 'ಪ್ಲೇಬಾಯ್' ಸುಬ್ರಹ್ಮಣ್ಯ ಶಾಸ್ತ್ರಿಯ ಮೀಸೆ ಮಣ್ಣಾಗುತ್ತದೆ. ಕೃಷ್ಣ ಗೌಡ ಗಾಮೊಕ್ಕಲ ಗೌಡನಾದರಿಂದ ಗೆಲ್ಲುವ ಛಾನ್ಸ್ ಇಲ್ಲ. ಈತನಿಗೆ ಶಾಸಕ ಶೆಟ್ಟಿ ಅದ್ಯಾವ ಲೆಕ್ಕಾಚಾರದಿಂದ ಟಿಕೆಟ್ ಕೊಟ್ಟರೋ ಅದು ಆತನ ಸಲಹೆಗಾರರಿಗಷ್ಟೇ ಗೊತ್ತು.



ಅಬ್ದುಲ್

ಹಳದೀಪುರದಲ್ಲಿ ಕಾಂಗ್ರೆಸ್ ಹಂಚಿನ ಕಾರ್ಖಾನೆ ದೊರೆಯೊಬ್ಬನ ಮಡದಿಗೆ ಟಿಕೆಟ್ ಕೊಟ್ಟು ಮೂರ್ಖತನ ಮಾಡಿದೆ. ಈ ಸರೋಜಾ ಪೂಜಾರಿ ಉಡುಪಿ ಕಡೆಯ ಬಿಲ್ಲವಳು. ಈಕೆಗಿಂತ ಸ್ಥಳೀಯ ದೀವ (ಬಿಲ್ಲವ) ವೀಣಾ ನಾಯ್ಕಳೇ ಹತ್ತಿರದವಳಾಗಿ ಸ್ವಜಾತಿಯವರಿಗೆ ಕಂಡರೆ ಆಶ್ಚರ್ಯವಿಲ್ಲ. ಇವರಿಬ್ಬರಿಗಿಂತ ಜೆಡಿಎಸ್‌ನ ತಾರಾಗೌಡ ಗೆಲ್ಲುವಂತಾಗಬೇಕು. ಮಂಕಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಕ್ಯಾಂಡಿಡೇಟಾಗಿರುವ ವನಿತಾ ನಾಯಕ್ ಬಿಜೆಪಿಯ ಸರೋಜಾ ನಾಯಕ್ ಮತ್ತು ಜೆಡಿಎಸ್‌ನ ಸಾವಿತ್ರಿ ನಾಯ್ಕರಿಗಿಂತ ಪವರ್‌ಫುಲ್. ಆಕೆ ಹಿಂದೊಮ್ಮೆ ಜನತಾದಳದಿಂದ ಜಿಪಂ ಉಪಾಧ್ಯಕ್ಷೆಯೂ ಆಗಿದ್ದರು.

ಮಾವಿನಕುರ್ವಾದಲ್ಲಿ ತಾಪಂ ಅಧ್ಯಕ್ಷ ಕೃಷ್ಣಗೌಡರಿಗೆ ಕಾಂಗ್ರೆಸ್ ಟಿಕೆಟ್ ಕೊಟ್ಟಿದೆ. ಬಿಜೆಪಿಯ ಶಂಕರ ನಾಯ್ಕ ಮಾಜಿ ಮಂತ್ರಿ ಶಿವಾನಂದ ನಾಯ್ಕರ ಶಿಷ್ಯ. ಇವರಿಬ್ಬರಿಗಿಂತ ಜೆಡಿಎಸ್‌ನ ಪಿ.ಟಿ. ನಾಯ್ಕ ಅರ್ಹ ಅಭ್ಯರ್ಥಿ. ಹಿಂದೊಮ್ಮೆ ಜಿಪಂ ಸದಸ್ಯನಾಗಿದ್ದ ಪಿ.ಟಿ. ನಾಯ್ಕ ಹೆಸರು ಕೆಡಿಸಿಕೊಂಡವರಲ್ಲ. ಯಾವ ಹಮ್ಮು-ಬಿಮ್ಮು ಇಲ್ಲದೆ ಕೈಲಾದ ಕೆಲಸ ಜನರಿಗೆ ಮಾಡಿಕೊಡುವುದೇ ಆತನ ಹೈನೆಸ್. ಇಂಥವರು ಗೆಲ್ಲಬೇಕೆಂಬುದು ಬಹುತೇಕರ ಅಭಿಪ್ರಾಯ. ನಗರ-ಬಸ್ತಿಕೇರಿ ಕ್ಷೇತ್ರದಲ್ಲಿ ಜೆಡಿಎಸ್‌ನ ಜಿ.ಎನ್. ಗೌಡ, ಕಾಂಗ್ರೆಸ್‌ನ ಬಾಲಚಂದ್ರ ನಾಯ್ಕರಿಗಿಂತ ಬಿಜೆಪಿಯ ಕೇಶವ ನಾಯ್ಕನೇ ಸದ್ದು-ಸುದ್ದಿಯಲ್ಲಿದ್ದಾನೆ. ಈತ ಎಂಪಿ ಅನಂತ್ಕುಮಾರ್ ಹಿಂಬಾಲಕನಾದ್ದರಿಂದ ಮಾಜಿ ಮಂತ್ರಿ ಶಿವಾನಂದ ನಾಯ್ಕ ವಿರುದ್ಧವಾಗಿದ್ದಾರೆ. ಇದು ಆತನ ಗೆಲುವಿಗೆ ಅಡ್ಡಗಾಲು ಹಾಕಿದೆ. ಬಿಜೆಪಿ ಭಿನ್ನಮತ ಕಾಂಗ್ರೆಸ್‌ಗೆ ವರವಾಗುವ ಸಾಧ್ಯತೆಯಿದೆ.

ಕುಮಟಾ

...ಮಟಾದ ನಾಲ್ಕು ಕ್ಷೇತ್ರದಲ್ಲಿ ತ್ರಿಕೋನ ಕಾಳಗ ...ದೆ. ಇದಕ್ಕೆ ಎರಡು ಕಾರಣ. ಒಂದು ಇಲ್ಲಿ ...ನ ಶಾಸಕರಿದ್ದಾರೆ. ಇನ್ನೊಂದು 'ಬಂ' ಬಳಗ ...ದೆ. ಜೆಡಿಎಸ್ ಎಮ್ಮೆಲ್ಲೆ ದಿನಕರ್ ಶೆಟ್ಟಿ ತರತರದ ...ರಿಕೆ ನಡೆಸಿ, ಕಾಂಗ್ರೆಸ್‌ನಿಂದ ತೂಕದ ಅಭ್ಯರ್ಥಿ ... ಹೈಜಾಕ್ ಮಾಡಿ ಬಿ-ಫಾರ್ಮ್ ಕೊಟ್ಟಿದ್ದಾರೆ. ...ನಲ್ಲಿ ದಿನಕರ ಶೆಟ್ಟಿಯನ್ನು ಕೌಂಟರ್ ...ವ ತಾಕತ್ತಿನ ಲೀಡರ್‌ಗಳಿಲ್ಲ. ದಂಡ ...ಜೆಲ್ಲ ಸ್ವಯಂಘೋಷಿತ ಕಾಂಗ್ರೆಸ್ ...ದಾಗಿ ಅಂಡಲೆಯುತ್ತಿದ್ದಾರೆ. ಬಿಜೆಪಿಯ ...ಶಶಿಭೂಷಣ ಹೆಗಡೆಯನ್ನು ಬದಿಗೆ ...ಪುಂಡ ಅನಂತ್ಕುಮಾರ್ ಶಿಷ್ಯರಾದ ಪೊಕ್ಕು ...ವಪ್ರಭು, ಶೋಮ್ಯಾನ್ ಸೂರಜ್ ...ಗಳು ತಮಗೆ ಬೇಕಾದವರಿಗೆ ಟಿಕೆಟ್ ...ದ್ದಾರೆ. ಬಿಜೆಪಿ ಕ್ಯಾಂಡಿಡೇಟ್‌ಗಳಿಗೆ ...ಶಕ್ತಿಯಿಲ್ಲ; ಸೋನಿ-ಪ್ರಭು-ಅನಂತ್ಕುಮಾರ್ ಕಂಡರೆ ...ಾಗು ಮುರಿಯುತ್ತಿದ್ದಾರೆ. ಗೋಕರ್ಣ ಕ್ಷೇತ್ರದಲ್ಲಿ ...ನಿಂದ ಸ್ಪರ್ಧಿಸಿರುವ ನಾಗರಾಜ್ ಹಿತ್ತಲಮಕ್ಕಿ ...ವರಿಗೆ ಒಳ್ಳೆ ಅಭಿಪ್ರಾಯವಿಲ್ಲ. ಪುಂಡ ಹಿತ್ತಲಮಕ್ಕಿ ...ಾ ಆತನದೇ ಜಾತಿ(ನಾಡವ)ಯ ಪ್ರದೀಪ್ ... ಎಂಬ ಜೆಡಿಎಸ್ ಕ್ಯಾಂಡಿಡೇಟ್ ಬೆಟರ್. ...ನಾಡವರ ಕಿತ್ತಾಟದಲ್ಲಿ ವೈಶ್ಯ ಸಮುದಾಯದ ...ಖರ ಶೆಟ್ಟಿ ಪಕ್ಕಾ ಬಿಜೆಪಿ ಓಟು ಪಡೆದು ...ಶ್ಚರ್ಯವಿಲ್ಲ. ಮಿರ್ಜಾನ್ ಕ್ಷೇತ್ರದಲ್ಲಿ ಜೆಡಿಎಸ್‌ನ ವಿಜಯಾ ಪಟಗಾರ್ ಗೆಲ್ಲುವ ಕುದುರೆ ಎಂದೇ ತಾಲ್ಲೂಕಿನಾದ್ಯಂತ ಮಾತಾಡಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್‌ನವರು ಈಕೆಗೆ ಮಾಡಿದ ಅನ್ಯಾಯದ ಸಿಂಪಥಿ ಮತ್ತು ಜನಪರ ಕೆಲಸಗಾತಿ ವಿಜಯಾರ ಇಮೇಜು ಸೇರಿ ಜೆಡಿಎಸ್ ಗೆಲ್ಲಲಿದೆ. ಕಾಂಗ್ರೆಸ್‌ನ ಜಯಶ್ರೀ ಪಟಗಾರ ಮತ್ತು ಬಿಜೆಪಿಯ ದೇವೀಗೌಡ ದುರ್ಬಲ ಹುರಿಯಾಳುಗಳು.




ಜಯಶ್ರೀ

ಹೆಗಡೆ ಕಾನ್‌ಸ್ಟ್ಯೂಯೆನ್ಸಿಯಲ್ಲಿ ಹಾಲಿ ಜಿಂಪ ಅಧ್ಯಕ್ಷ-ದೇಶಪಾಂಡೆ ಚೇಲಾ ಎಲ್.ವಿ. ಶಾನಭಾಗನ 'ಯೋಗ್ಯತೆ' ಪಣಕ್ಕಿಟ್ಟಂತಾಗಿದೆ. ಆತ ಹಠ ಮಾಡಿ ತನ್ನ ಹಿಂಬಾಲಕಿ ಲಲಿತಾ ಪಟಗಾರ್‌ಗೆ ಟಿಕೆಟ್ ಕೊಡಿಸಿದ್ದಾನೆ. ಈತನ ಬಗ್ಗೆ ಕ್ಷೇತ್ರದಲ್ಲಿ ಕೆಟ್ಟ ಅಭಿಪ್ರಾಯವೇ ಜಾಸ್ತಿ. ಜೆಡಿಎಸ್ ಪಾರ್ವತಿ ಪಟಗಾರ್‌ಗೆ ಟಿಕೆಟ್ ಕೊಟ್ಟಿದೆ. ಈಕೆ ಬಿಜೆಪಿಯ ನಾಗರತ್ನ ನಾಯ್ಕ್ ಮತ್ತು ಕಾಂಗ್ರೆಸ್‌ನ ಲಲಿತಾಗಿಂತ ಮುಂದಿದ್ದಾರೆ. ಜೆಡಿಎಸ್ ಶಾಸಕ ಹೆಗಡೆ ಗೆಲ್ಲಲು ಶತಪ್ರಯತ್ನ ಮಾಡುತ್ತಿದ್ದಾರೆ. ಮೂರೂರು ಪ್ರತಿಷ್ಠೆಯ ಕಣ. ಇಲ್ಲಿ ತಾಲ್ಲೂಕಾ ಜೆಡಿಎಸ್ ಅಧ್ಯಕ್ಷ-ಶಾಸಕ ಶೆಟ್ಟಿ ಆಪ್ತ ಹರೀಶ್ ನಾಯ್ಕ ತನ್ನ ಹೆಂಡತಿಯನ್ನೇ ಅಖಾಡಕ್ಕೆ ಇಳಿಸಿದ್ದಾರೆ. ಜೆಡಿಎಸ್‌ನ ಕವಿತಾ ನಾಯ್ಕ ಎದುರು ಜಿಲ್ಲಾ ಯುವ ಬಿಜೆಪಿ ಅಧ್ಯಕ್ಷ ಸೂರಜ್ ಸೋನಿ ಎಂಬ ಎಂಪಿ ಅನಂತ್ಕುಮಾರ್ ಚೇಲಾ ತನ್ನ 'ಧರ್ಮ ಪತ್ನಿ' ವೀಣಾ ನಾಯ್ಕರನ್ನು ನಿಲ್ಲಿಸಿದ್ದಾರೆ. ಇವರಿಬ್ಬರಿಗಿಂತ ಕಾಂಗ್ರೆಸ್‌ನ ಲಲಿತಾ ಗೌಡ ಬೆಟರ್ ಕ್ಯಾಂಡಿಡೇಟ್. ಕುಮಟಾ ತಾಪಂ ಜೆಡಿಎಸ್ ಪಾಲಾಗುವ ಸೂಚನೆ ಗೋಚರಿಸುತ್ತಿದೆ.

ಜೋಯಿಡಾ


ಅತಿ ಹಿಂದುಳಿದ ಗಡಿ ತಾಲ್ಲೂಕು ಜೋಯಿಡಾದಲ್ಲಿ ಹಾರಾಡುವ ಪುಢಾರಿಗಳಿಗೇನೂ ಕೊರತೆಯಿಲ್ಲ. ವಿಲಾಸನಾಯ್ಕನಂಥ ಮಾಫಿಯಾ ದೊರೆ ಇಲ್ಲಿಂದ ಆಯ್ಕೆಯಾಗಿ ಜಿಪಂ ಉಪಾಧ್ಯಕ್ಷ ಪಟ್ಟವೇರಿದ್ದ. ಜೋಯಿಡಾ ಕಳೆದ ಬಾರಿಯಾದ ಕ್ಷೇತ್ರ ವಿಂಗಡಣೆಗೆ ಮೊದಲು ಕಾರವಾರ ಕ್ಷೇತ್ರದಲ್ಲಿತ್ತು. ಈಗ ಹಳಿಯಾಳ ಕ್ಷೇತ್ರಕ್ಕೆ ಸೇರಿದೆ. ಕಾರವಾರದ ಅಸ್ನೋಟಿಕರ್ ಫ್ಯಾಮಿಲಿ ಪ್ರಭಾವ ಇಲ್ಲಿ ಜಾಸ್ತಿ. ಅಸ್ನೋಟಿಕರ್ ಅಭಿಮಾನಿ ಬಳಗದ ಹಾವಳಿಯಿಂದಾಗಿ ದೇಶಪಾಂಡೆಗೆ ಹಿಂದೆ ಸೋಲಾಗಿತ್ತು. ಈ 'ಅಭಿಬ' ಈಗ ಕಾಂಗ್ರೆಸ್ ತೆಕ್ಕೆಗೆ ಸೇರಿದೆ. ವಿಲಾಸ ನಾಯ್ಕ ತಾಪಂಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದಾನೆ. ಇದು ಜೆಡಿಎಸ್ ಶಾಸಕ ಸುನಿಲ್‌ಗೆ ಮಾರಕವಾಗಿದೆ. ದೇಶಪಾಂಡೆಗೆ ಪ್ಲಸ್ ಆಗಿದೆ. ಈ ತಾಲ್ಲೂಕಿನ ರಾಮನಗರ ಮತ್ತು ಜೋಯಿಡಾ ಎರಡೂ ಮಹಿಳೆಯರಿಗೆ ಮೀಸಲಾಗಿರುವ ಕ್ಷೇತ್ರ. ಎರಡೂ ಕ್ಷೇತ್ರದಲ್ಲಿ ಬಿಜೆಪಿಗೆ ನೆಲೆ-ಬೆಲೆಯಿಲ್ಲ. ಕದನವೇನಿದ್ದರೂ ಜೆಡಿಎಸ್ V/s ಕಾಂಗ್ರೆಸ್. ಕಾಂಗ್ರೆಸ್‌ನ ಲಕ್ಷ್ಮೀ ಹಣಬರ ರಾಮನಗರದಲ್ಲಿ ಶುಭಂಗಿ ಗೌಡ ಮತ್ತೆ ಗೌಡ ಗೆಲ್ಲುವ ಛಾನ್ಸ್ ಇದೆ.



ಹಳಿಯಾಳ

ಇದು ಜೆಡಿಎಸ್ ಶಾಸಕ ಸುನಿಲ್ ಹೆಗಡೆ ಮತ್ತು ಕಾಂಗ್ರೆಸ್ ಪಾಳೆಗಾರ ದೇಶಪಾಂಡೆಗಳ ಪ್ರತಿಷ್ಠೆಯ ಕಣ. ಅದ್ಯಾಕೋ ಜೆಡಿಎಸ್‌ನ ಸುನೀಲ್ ಹೆಗಡೆ ವೀಕ್ ಆಗಿದ್ದಾರೆ. ಆತನ ಮೇಲೆ ಮುನಿಸಿಗೊಂಡು ಪ್ರಭಾವಿ ಜಿಪಂ ಸದಸ್ಯರು ಕಾಂಗ್ರೆಸ್ ಸೇರಿದ್ದಾರೆ. ದೇಶಪಾಂಡೆ ಮುಂದಿನ ಅಸೆಂಬ್ಲಿಯ ಹೋರಾಟದಲ್ಲಿ ಗೆಲ್ಲಲು ಜಿಪಂ-ತಾಪಂ ಸೆಮಿಫೈನಲ್ ಎಂದೇ ಭಾವಿಸಿ ಜಿದ್ದಾಜಿದ್ದಿಗೆ ಬಿದ್ದಿದ್ದಾರೆ. ಸುನಿಲ್ ಹೆಗಡೆ ಅಸ್ತಿತ್ವ ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆ. ಬಿಜೆಪಿಗಿಲ್ಲಿ ಗೆಲ್ಲುವುದಿರಲಿ, ಹೋರಾಡುವ ತಾಕತ್ತೂ ಇಲ್ಲ. ತೇರಗಾಂವ್ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ರೇಣುಕಾ ತಾಂಬಿಕಟಕರ್, ಜೆಡಿಎಸ್‌ನಿಂದ ಲಕ್ಷ್ಮೀ ವಾಲೇಕರ್, ಮುರ್ಕವಾಡದಲ್ಲಿ ಕಾಂಗ್ರೆಸ್‌ನ ಜೈವಂತ ಕೊರ್ಲೇಕರ್, ಜೆಡಿಎಸ್‌ನಿಂದ ಕುರುಬಗಟ್ಟಿ ಮತ್ತು ಅಂಬಿಕಾನಗರ ಕ್ಷೇತ್ರದಲ್ಲಿ ಕೆ.ಎನ್. ಗೌಡ, ಜೆಡಿಎಸ್‌ನಿಂದ ಟಿ.ಎಸ್. ಬಾಲಮಣಿ ಕತ್ತಿಕತ್ತಿನ ಕದನ ನಡೆಸಿದ್ದಾರೆ. ಮೂರೂ ಕ್ಷೇತ್ರದಲ್ಲಿ ಕಾಂಗ್ರೆಸ್-ಜೆಡಿಎಸ್‌ಗೆ ಗೆಲ್ಲುವ ಛಾನ್ಸ್ ಫಿಫ್ಟಿ-ಫಿಫ್ಟಿ.

ಶಿರಸಿ-ಸಿದ್ದಾಪುರ



...ಮು ಅಪಾಯಕಾರಿ ಚೆಡ್ಡಿ ಮಂತ್ರಿ ... ಕ್ಷೇತ್ರ. ಕಾಗೇರಿ ಢೋಂಗಿತನ, ...ರ್ಣೀದ್ಧಾರ, ಸ್ವಾಹಾ, ಬ್ರಾಹ್ಮಣಶಾಹಿ ...ಯಿಂದ ಕ್ಷೇತ್ರದಲ್ಲಿ ಕಿಮ್ಮತ್ತು ...ಡಿದ್ದಾರೆ. ಆದರೂ ಶಿರಸಿಯ ...ವಲಯದಲ್ಲಿ ಕಾಗೇರಿ ಪ್ರಭಾವಿ, ...ದಲ್ಲಿ ಜೆಡಿಎಸ್‌ನ 'ಬಂ' ಬಲ ...ರಡೂ ತಾಲ್ಲೂಕಲ್ಲಿ ಕಾಂಗ್ರೆಸ್ ... ಇಲ್ಲದ ಹಡಗಂತೆ ಹೊಯ್ದಾಡುತ್ತಿದೆ. ...ಡೆ ಚೇಲಾ ಶಾಂತಾರಾಮ ಹೆಗಡೆ ಮತ್ತು ... ಬೆಂ-ಬಾಲಕ ಪುಂಡ ದೀಪಕ್ ಹೊನ್ನಾವರ ...ೀದಿಯಲ್ಲೇ ಹೊಡೆದಾಡಿ ಕಾಂಗ್ರೆಸ್ ...ಟ್ಟಿದ್ದಾರೆ.


ಶಿರಸಿಯ ಜಾನ್ಮನೆ ಸಾಮಾನ್ಯ ಕ್ಷೇತ್ರ ಪ್ರತಿಷ್ಠೆಯ ಕಣವಾಗಿದೆ. ಇಲ್ಲಿ ಕಾಂಗ್ರೆಸ್ ಹಣವಂತ-ಹೈಗರಲ್ಲಿ ಪರಿಚಿತನಾದ ವೆಂಕಟೇಶ್ ಹೆಗಡೆ ಹೊಸಬಾಳೆ ಎಂಬ ಮಾಜಿ ಜಿಪಂ ಸದಸ್ಯನಿಗೆ ಟಿಕೆಟ್ ಕೊಟ್ಟಿದೆ. ಇಲೆಕ್ಷನ್ ಗೆಲ್ಲುವ ಕಲೆ ಕರಗತ ಮಾಡಿಕೊಂಡಿರುವ ಈತನೆದುರು ಬಿಜೆಪಿ ಕಾಗೇರಿಯ ಸಂಬಂಧಿ ಆರ್.ಡಿ. ಹೆಗಡೆಯನ್ನು ನಿಲ್ಲಿಸಿದೆ. ಈ ಅಪರಿಚಿತನ ಮಣಿಸಿ ಹೊಸಬಾಳೆ ಗೆಲ್ಲುವ ಅವಕಾಶ ಹೆಚ್ಚಿದೆ. ಜೆಡಿಎಸ್ ಲೆಕ್ಕಕ್ಕಿಲ್ಲ. 'ಅ' ವರ್ಗದ ಮಹಿಳಾ ಮೀಸಲು ಕ್ಷೇತ್ರ ಹುಲೇಕಲ್‌ನಲ್ಲಿ ಮೂರೂ ಪಕ್ಷದಿಂದ ದೀವರ ಮಹಿಳಾಮಣಿಗಳು ಸೆಣಸಾಡುತ್ತಿದ್ದಾರೆ. ಕಾಂಗ್ರೆಸ್‌ನ ರೇಣುಕಾನಾಯ್ಕ ಮತ್ತು ಬಿಜೆಪಿಯ ಶೋಭಾ ನಾಯ್ಕ ನಡುವೆ ತುರುಸಿದೆ. ಬಿಜೆಪಿ ಗೆಲ್ಲಬಹುದು. ಬದನಗೋಡು ಡಿಸಿಸಿ ಅಧ್ಯಕ್ಷ 'ಬಂ'-ಭಾವನೆಂಟ ಭೀಮಣ್ಣ ನಾಯ್ಕರ ಕ್ಷೇತ್ರ. ಹೀಗಾಗಿ ಆತ ಸ್ವ-ಪಕ್ಷದ ಲಕ್ಷ್ಮೀ ಭಟ್ಟರ ಗೆಲ್ಲಿಸಿ ತರಲೇಬೇಕಾದ ಪ್ರತಿಷ್ಠೆಗೆ ಬಿದ್ದಿದ್ದಾರೆ. ಜೆಡಿಎಸ್‌ನ 'ಗ್ಲಾಮರ್ ರಾಣಿ' ರಾಜೇಶ್ವರಿ ಹೆಗಡೆ ಮತ್ತು ಬಿಜೆಪಿಯ ಉಷಾ ಭಟ್‌ಗಿಂತ ಕಾಂಗ್ರೆಸ್ ಹುರಿಯಾಳೇ ಮುಂದಿದೆ. ಪರಿಶಿಷ್ಟ ವರ್ಗದ ಮೀಸಲು ಕ್ಷೇತ್ರ ಬನವಾಸಿಯಲ್ಲಿ ಮೂರೂ ಪಕ್ಷದವರೂ ಸಮಬಲದಿಂದ ಹೋರಾಡುತ್ತಿದ್ದಾರೆ. ಬಿಜೆಪಿಗೆ ಛಾನ್ಸ್ ಜಾಸ್ತಿ.

ಸಿದ್ದಾಪುರದ ಅಣಲೆಬೈಲ್‌ನಲ್ಲಿ ಆಶಾ ಪಾಟೀಲ್ (ಜೆಡಿಎಸ್), ಶಾಲಿನಿ ಗೌಡರ್ (ಬಿಜೆಪಿ) ಮತ್ತು ಹೇಮಾವತಿ ದೇಸಾಯಿ ಗೌಡರ್ (ಕಾಂಗ್ರೆಸ್) ಸಮ ಶಕ್ತಿಯಿಂದ ಸೆಣಸಾಡುತ್ತಿದ್ದಾರೆ. ಕಳೆದ ಬಾರಿ 'ಬಂ'ರ ಸಮಾಜವಾದಿ ಕ್ಯಾಂಡಿಡೇಟ್ ಇಲ್ಲಿ ಗೆದ್ದಿತ್ತು. ಈ ಬಾರಿ ಕಾಂಗ್ರೆಸ್ ಹೇಮಾವತಿಗೆ ಆಕೆಯ ಗಂಡನ ಬಗ್ಗೆ ಜನರಿಗಿರುವ ಪ್ರೀತಿ-ಸಿಂಪಥಿ ಹೆಲ್ಪ್ ಆಗುವ ಸೂಚನೆಯಿದೆ. ಹಲಗೇರಿ ಕ್ಷೇತ್ರದಲ್ಲಿ ಮಹಾಬಲ ನಾಯ್ಕ ಬಿಕ್ಕಳಸೆ ಒದ್ದಾಡಿ ಬಿಜೆಪಿ ಟಿಕೆಟ್ ತಂದಿದ್ದಾರೆ. ಕಾಂಗ್ರೆಸ್ ಈಶ್ವರ ನಾಯ್ಕಗೆ ಅಭ್ಯರ್ಥಿ ಮಾಡಿದೆ. ಜೆಡಿಎಸ್‌ನಿಂದ 'ಬಂ'ರ ಹಳೇ ಬಾಲಕ ಬಿ.ಆರ್. ನಾಯ್ಕ ನಿಂತಿದ್ದಾರೆ. ಬ್ಯಾಕ್‌ವರ್ಡ್ಸ್‌ಗಳ ನೋವು-ನಲಿವಿನ ಪ್ರಜ್ಞೆ ಇರುವ ಬಿ.ಆರ್. ನಾಯ್ಕ ಬೆಟರ್ ಕ್ಯಾಂಡಿಡೇಟ್. ಈತ ಗೆಲ್ಲುವಂತಾದರೆ ಕ್ಷೇತ್ರಕ್ಕೆ ಒಳಿತು. ಕಾಂಗ್ರೆಸ್ ಬಂಡಾಯದ ಸುಳಿಗೆ ಸಿಕ್ಕಿ ತತ್ತರಿಸುತ್ತಿದೆ. ಮಾಜಿ ಡಿಸಿಸಿ ಅಧ್ಯಕ್ಷ ಹಸ್ವಂತೆ ನಾಯ್ಕ, ಹಿರಿಯ ನ್ಯಾಯವಾದಿ ಎನ್.ಡಿ. ನಾಯ್ಕನಂಥವರು ಬಂಡಾಯ ಬಾವುಟ ಹಾರಿಸಿದ್ದಾರೆ.

ಜಿಲ್ಲೆಯ 36 ಕ್ಷೇತ್ರಗಳ ಕಾದಾಟ-ಕಂತ್ರಿ ತಂತ್ರಿ-ತರಲೆ ನೋಡಿದರೆ ಯಾವ ಪಕ್ಷವೂ ಬಹುಮತ ಪಡೆಯುವುದಿಲ್ಲ ಅನ್ನಿಸುತ್ತದೆ. ಜೆಡಿಎಸ್ ಕಿಂಗ್ ಆಗದಿದ್ದರೂ ಕಿಂಗ್ ಮೇಕರ್ ಆಗುವುದು ಗ್ಯಾರಂಟಿ. ●

ಧಾರವಾಡ ಜಿಪಂ ಬಿಜೆಪಿ-ಕಾಂಗ್ರೆಸ್ ಕದನ


ಎರಡನೇ ಹಂತದ ಲಿಸ್ಟ್‌ನಲ್ಲಿರುವ ಧಾರವಾಡ ಜಿಲ್ಲಾ ಪಂಚಾಯ್ತಿ ಚುನಾವಣಾ ಕಣ ಕಳೆಗಟ್ಟಿ ಹತ್ತಿದೆ. ಅಖಾಡದಲ್ಲಿರುವ ಅಭ್ಯರ್ಥಿಗಳು, ಅವರ ಕಾರ್ಯವೈಖರಿ ಹಾಗೂ ಮತದಾರನ ಮೂಡ್‌ಗಳನ್ನು ಗಮನಿಸಿದರೆ ಬಿಜೆಪಿ ಕಾಂಗ್ರೆಸ್ ನಡುವೆ ನೇರ ಹಣಾಹಣಿಯಿರುವುದು ಸ್ಪಷ್ಟವಾಗುತ್ತದೆ. ರಾಜ್ಯಾದ್ಯಂತ ಉತ್ಸಾಹದಿಂದ ಮುನ್ನುಗ್ಗುತ್ತಿರುವ ಜೆಡಿಎಸ್‌ಗೆ ವಿರೋಧ ಪಕ್ಷದ ಸ್ಥಾನವೇ ಗಟ್ಟಿಯಾಗುವ ಸೂಚನೆಗಳಿವೆ.


ಸಂತೋಷ್ ಲಾಡ್

ಸದ್ಯ ಸಮರ್ಥ ನಾಯಕರಿಲ್ಲದೆ ಸೊರಗಿದ ಸ್ಥಿತಿಯಲ್ಲಿರುವ ಕಾಂಗ್ರೆಸ್‌ಗೆ ಕಲಘಟಗಿ ಶಾಸಕ ಸಂತೋಷ್ ಲಾಡ್ ಹಾಗೂ ಮಾಜಿ ಶಾಸಕ ವಿನಯ ಕುಲಕರ್ಣಿ ಒಂದಷ್ಟು ಉಸಿರು ನೀಡಿದ್ದಾರೆ. ಆದರೆ ಕಾಂಗ್ರೆಸ್ ಅಧ್ಯಕ್ಷ ಶಿವಳ್ಳಿ ತನ್ನ ತವರು ತಾಲ್ಲೂಕಲ್ಲೇ ಹೈರಾಣಾಗಿದ್ದಾನೆ. ಹಲವಾರು ಗೊಂದಲಗಳಿಗೆ ಕಾರಣವಾದ ಮೀಸಲಾತಿಯಿಂದಾಗಿ ಕ್ಷೇತ್ರ ಕಳೆದುಕೊಂಡವರು ಅಂತರ್ ಪಿಶಾಚಿಗಳಂತಾಗಿದ್ದಾರೆ. ಆದರೆ ತಂತಮ್ಮ ಹಳೇ ಕ್ಷೇತ್ರಗಳಲ್ಲಿ ಹೆಂಡಿರನ್ನೇ ಕಣಕ್ಕಿಳಿಸಿ ಅಧಿಕಾರ ಹಿಡಿಯುವ ಕಸರತ್ತುಗಳು ಎಲ್ಲಾ ಪಕ್ಷಗಳಲ್ಲೂ ಅವ್ಯಾಹತವಾಗಿ ನಡೆಯುತ್ತಿವೆ.


ಅಮೃತ್‌ದೇಸಾಯಿ


ಕಲಘಟಗಿ ವಿಚಾರಕ್ಕೆ ಬಂದರೆ, ಕಾಂಗ್ರೆಸ್‌ನ ಏಕೈಕ ಶಾಸಕ ಸಂತೋಷ್ ಲಾಡ್ ಕಡೆಯಿಂದ ಗೆಲುವಿಗಾಗಿ ಒಂದಷ್ಟು ಕಸರತ್ತುಗಳು ನಡೆಯುತ್ತಿವೆ. ಈ ಹಿಂದೆ ಬಿಜೆಪಿಯಿಂದ ಕಣಕ್ಕಿಳಿದು ಇಕ್ಕಿಸಿಕೊಂಡಿದ್ದರೂ ಸಿ.ಎಂ. ಲಿಂಬಣ್ಣವರ ಪಕ್ಷದ ಗೆಲುವಿಗಾಗಿ ಅವಿರತ ಶ್ರಮಿಸುತ್ತಿದ್ದಾನೆ. ಕಲಘಟಗಿಯಲ್ಲೇ ಠಿಕಾಣಿ ಹೂಡಿರುವ ಈತ ಜಿಪಂಗೆ ಜೆಡಿಎಸ್‌ನಿಂದ ಈ ಕ್ಷೇತ್ರದಿಂದಲೇ ಆಯ್ಕೆಯಾಗಿದ್ದ ಮಾಲಾ ಗೋಕುಲ್, ಗೀತಾ ಮರಿಲಿಂಗಣ್ಣವರ, ಲಲಿತಾ ನಾಯ್ಕರ, ನಿಜನಗೌಡ ಪಾಟೀಲ, ಈರಣ್ಣ ಮುಂತಾದವರನ್ನು ಬಿಜೆಪಿಗೆ ಕರೆತರುವಲ್ಲಿ ಯಶಸ್ವಿಯಾಗಿದ್ದಾನೆ. ಇದು ಕಾಂಗ್ರೆಸ್ ಜೆಡಿಎಸ್ ಎರಡೂ ಪಕ್ಷಗಳಿಗೂ ತೊಡಕಾಗಿ ಪರಿಣಮಿಸಲಿದೆ.


ಶಿವಳ್ಳಿ

ಹುಬ್ಬಳ್ಳಿ ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯ್ತಿಯ ನಾಲ್ಕು ಸ್ಥಾನಗಳಿವೆ. ನವಲಗುಂದ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಎರಡು ಸ್ಥಾನಗಳು ಬರುತ್ತವೆ. ಕುಂದಗೋಳ ಕ್ಷೇತ್ರದಿಂದ ನಾಲ್ಕು ಮಂದಿ ಸದಸ್ಯರು ಆಯ್ಕೆಯಾಗಲಿದ್ದಾರೆ. ಬಿಜೆಪಿಯ ಚಿಕ್ಕನಗೌಡರ್ ಇಲ್ಲಿನ ಶಾಸಕ. ಆದರಿಲ್ಲಿ ಕಾಂಗ್ರೆಸ್ ಗ್ರಾಮೀಣ ಅಧ್ಯಕ್ಷ ಶಿವಳ್ಳಿಯ ತಂತ್ರಗಾರಿಕೆ ವರ್ಕೌಟ್ ಆಗೋ ಲಕ್ಷಣಗಳಿವೆ. ಈ ಭಾಗದಲ್ಲಿ ಕುರುಬರ ಮತಗಳೇ ನಿರ್ಣಯಕವಾಗಿರುವುದು ಹಾಗೂ ಶಿವಳ್ಳಿಯೂ ಅದೇ ಸಮುದಾಯದವನಾಗಿರುವುದು ಅದಕ್ಕೆ ಕಾರಣ. ಇದು ಕಾಂಗ್ರೆಸ್ ಗೆಲುವಾಗಿ ಮಾರ್ಪಾಡಾಗಲಿದೆ.


ರತ್ನವ್ವ

ಧಾರವಾಡ ಗ್ರಾಮೀಣ ಕ್ಷೇತ್ರದಲ್ಲಿ ವಿನಯ್ ಕುಮಾರ್ ಹಾಗೂ ಸಂತೋಷ್ ಲಾಡ್‌ಗೆ ಹಿಡಿತವಿದೆ. ಈ ಭಾಗದಿಂದಲೇ ಹೆಚ್ಚು ಸದಸ್ಯರು ಆಯ್ಕೆಯಾಗುವುದರಿಂದ ಕಾಂಗ್ರೆಸ್-ಬಿಜೆಪಿ ನಡುವೆ ನೇರ ಕದನ ಏರ್ಪಡಲಿದೆ. ಸಮ ಬಲದ ಹೋರಾಟದಂತೆ ಕಂಡುಬಂದರೂ ಕಾಂಗ್ರೆಸ್‌ಗೆ ಹೆಚ್ಚಿನ ಲಾಭವಾಗುವ ಲಕ್ಷಣಗಳಿವೆ.


ಗದಿಗಪ್ಪ

ಇನ್ನು ಮೀಸಲಾತಿಯಿಂದ ತಳ ಕಳಕೊಂಡಿರುವವರು ತಮ್ಮ ಮನೆಯ ಹೆಣ್ಣುಮಕ್ಕಳನ್ನು ಕಣಕ್ಕಿಳಿಸಿ ಅಧಿಕಾರ ಕಾಯ್ದುಕೊಳ್ಳುವ ತವಕದಲ್ಲಿದ್ದಾರೆ. ಈ ಹಿಂದೆ ಅದರಗುಂಚಿಯಿಂದ ಆಯ್ಕೆಗೊಂಡ ಬಿಜೆಪಿಯ ಗದಿಗೆಪ್ಪ ಕಳ್ಳಿಮನಿ ಕ್ಷೇತ್ರ ಕಳಕೊಂಡಿದ್ದಾನೆ. ಆತ ತನ್ನ ಪತ್ನಿ ರತ್ನವ್ವರನ್ನು ಕಣಕ್ಕಿಳಿಸಿದ್ದಾನೆ. ಉಪ್ಪಿನ ಬೆಟಗೇರಿಯ ತವನಪ್ಪ ಅಷ್ಟಗಿಯೂ ಕ್ಷೇತ್ರ ಕೈತಪ್ಪಿ ಕಂಗಾಲಾಗಿ ಹೆಂಡತಿ ಕಸ್ತೂರಿ ಅಷ್ಟಗಿಯನ್ನು ಕಣಕ್ಕಿಳಿಸಿದ್ದಾನೆ. ಆದರಿಲ್ಲಿ ಬಿಜೆಪಿ ಅಭ್ಯರ್ಥಿ ಸರೋಜಾ ಜವಳಗಿ ಆಯ್ಕೆಗೊಳ್ಳುವುದು ಸ್ಪಷ್ಟವಾಗಿದೆ.

ಧಾರವಾಡ ತಾಲ್ಲೂಕು ಕೊಟೂರು ಕ್ಷೇತ್ರದಲ್ಲಿ ಬಿಜೆಪಿಯ ಗೌರಮ್ಮ ಗಾಣಿಗೇರ, ಕಾಂಗ್ರೆಸ್‌ನ ಆನಂದ ಗೌಡ ಪಾಟೀಲ, ಉಪ್ಪಿನ ಬೆಟಗೇರಿಯಲ್ಲಿ ಬಿಜೆಪಿಯ ಜವಳಗಿ, ಹುಬ್ಬಳ್ಳಿಯಲ್ಲಿ ಕಾಂಗ್ರೆಸ್‌ನ ಬಸವ್ವ ಪ್ಯಾಟಿ, ನರೇಂದ್ರ ಕ್ಷೇತ್ರದಲ್ಲಿ ಬಿಜೆಪಿಯಿಂದ ಕಣದಲ್ಲಿರುವ ಬಸವರಾಜ ಕರಡಿಕೊಪ್ಪ ಮುಂತಾದವರು ಗೆಲ್ಲುವ ಅಭ್ಯರ್ಥಿಗಳು.


ದ್ಯಾ[illegible]ವರ

ನವಲಗುಂದ ಅಳಗವಾಡಿ ಕ್ಷೇತ್ರದಲ್ಲಿ ಬಿಜೆಪಿಯ ಶಾಂತದೇವಿ ಕುವಡಿಯಲ್ಲಿ ಫಕೀರಪ್ಪ, ಮೊರಬದಲ್ಲಿ ಬಿಜೆಪಿಯ ಅಡಿವೆಪ್ಪ, ನಲವಡಿಯಲ್ಲಿ ಬಿಜೆಪಿಯ ಸುರೇಶ್ ಗಾಣಿಗೇರ ಹಾಗೂ ಕುಂದಗೋಳ ತಾಲ್ಲೂಕಿನ ಗುಡಗೇರಿಯಲ್ಲಿ ಕಾಂಗ್ರೆಸ್‌ನ ವೆಂಕನಗೌಡ ಪಾಟೀಲ, ಸಂಶಿಯಲ್ಲಿ ಬಿಜೆಪಿಯ ನಿರ್ಮಲಾದೇವಿ, ಕಮಡೊಳ್ಳಿಯಲ್ಲಿ ಕಾಂಗ್ರೆಸ್‌ನ ಓಕಣಿ, ಯಲಬಾಳದಲ್ಲಿ ಬಿಜೆಪಿಯ ಮಮತಾ ಓಬಿ ಮತ್ತು ಹುಬ್ಬಳ್ಳಿ ತಾಲ್ಲೂಕಿನ ಅದರಗುಂಚಿಯಲ್ಲಿ ಬಿಜೆಪಿಯ ರತ್ನವ್ವ ಕಳ್ಳಿಮನಿ, ಬ್ಯಾಹಟ್ಟಿಯ ಮಹಾದೇವಿ, ಕೋಳಿವಾಡದ ಮಹಾಬಲೇಶ್ವರ ಮೊದಲಾದವರು ಗೆಲ್ಲಬಹುದಾದ ಅಭ್ಯರ್ಥಿಗಳಾಗಿದ್ದಾರೆ.

ಮೊರಬ ಕ್ಷೇತ್ರದಿಂದ ಮಾಜಿ ಜಿಪಂ ಸದಸ್ಯ ಸುಭಾಷ್ ದ್ಯಾಮಕ್ಕನವರ ಸ್ಪರ್ಧಿಸಬಯಸಿದ್ದರೂ ಟಿಕೆಟ್ ಸಿಗಲಿಲ್ಲ, ಇದರಿಂದಾಗಿಯೇ ಈ ಕ್ಷೇತ್ರವನ್ನು ಕಾಂಗ್ರೆಸ್ ಕಳೆದುಕೊಳ್ಳಬೇಕಾಗಿದೆ. ಇದಕ್ಕೆ ಕಾಂಗ್ರೆಸ್‌ನ ಗ್ರಾಮೀಣ ಜಿಲ್ಲಾಧ್ಯಕ್ಷ ಶಿವಳ್ಳಿಯೇ ನೇರ ಹೊಣೆಯೆಂಬ ಆರೋಪಗಳಿವೆ.

• ಹುಬ್ಬಳ್ಳಿಯಾಂವ




ಕಲಬುರ್ಗಿ ನಸೀಬುಗೆಟ್ಟ ಜಿಪಂ ಯಾರ ತೆಕ್ಕೆಗೆ?

ಗ್ರಾಮೀಣ ಪ್ರದೇಶದ ಜನಗಳ ಆಶಯಗಳಿಗೆ ಸ್ಪಂದಿಸುವ ಸಂಸ್ಥೆಯಾಗಬೇಕಾಗಿದ್ದ ಜಿಲ್ಲಾ ಪಂಚಾಯತ್ ಕಲಬುರ್ಗಿಯಲ್ಲಿ ಕಳೆದ ಸಲ ತೋರಿದ ಕ್ಷಮತೆ ನೆನೆದರೆ ಯಾರಿಗಾದರೂ ಒಂದುಕ್ಷಣ ಮೈ ಉರಿದುಹೋಗುತ್ತದೆ. ಪರಸ್ಪರ ಕೆಸರೆರಚಾಟವನ್ನೆ ಜಿಲ್ಲಾ ಪಂಚಾಯತ್‌ನ ಮುಖ್ಯ ಆಶಯ ಎಂಬಂತೆ ತಿಳಿದುಕೊಂಡಿದ್ದ ಎಬಡರಿಂದ ಜಿ.ಪಂ. ತುಂಬಿಹೋಗಿತ್ತು, ಹಾಗಾಗಿ ಮಾತೆತ್ತಿದ್ದರೆ ಅಧ್ಯಕ್ಷ - ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ಸಭೆಗಳನ್ನು ನಡೆಸಿದ್ದೇ ನಡೆಸಿದ್ದು. 2005 ರಿಂದ 2010 ರವರೆಗೆ ಸುಮಾರು ಐದು ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಪರವಾದ ಚರ್ಚೆಗಾಗಿ ನಡೆದ ಸಭೆಗಳಿಗಿಂತ ಅವಿಶ್ವಾಸದ ತೌಡು ಕುಟ್ಟಲು ಕರೆದ ಸಭೆಗಳೇ ಹೆಚ್ಚು. ಕೇವಲ ಐದು ವರ್ಷಗಳ ಅವಧಿಯಲ್ಲಿ 11 ಮಂದಿ ಅಧ್ಯಕ್ಷರನ್ನು ಕಂಡ ಹೆಗ್ಗಳಿಕೆ ಕಲಬುರ್ಗಿ ಜಿಲ್ಲಾ ಪಂಚಾಯತಿಗೆ ಇದೆ!



ರೇವೂನಾ[illegible]

ಇಂಥಾ ಹೆಗ್ಗಳಿಕೆ ಹೊಂದಿರುವ ಜಿಲ್ಲಾ ಪಂಚಾಯತ್‌ಗೆ ಈಗ ಮತ್ತೆ ಚುನಾವಣೆಯ ಕಾವು ಏರತೊಡಗಿದೆ. ಯಾದಗಿರಿ ಜಿಲ್ಲೆ ಪ್ರತ್ಯೇಕವಾಗಿ ತನ್ನ ಅಸ್ತಿತ್ವ ಗುರುತಿಸಿಕೊಂಡ ನಂತರ ಕಲಬುರ್ಗಿಯಲ್ಲಿ 43 ಸ್ಥಾನಗಳ ಜಿಲ್ಲಾ ಪಂಚಾಯತಿ ಕೇಂದ್ರಗಳಿವೆ. ಈಗಾಗಲೆ ಅವುಗಳಿಗೆ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಹಾಗೂ ಪಕ್ಷೇತರ ಸದಸ್ಯರಿಂದ 288 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಮಲ್ಲಿಕಾರ್ಜುನ ಖರ್ಗೆ, ಧರ್ಮ ಸಿಂಗ್, ಅಲ್ಲಮಪ್ರಭು ಪಾಟೀಲ, ಖಮರುಲ್ ಇಸ್ಲಾಂ ಒಂದು ಕಡೆ ಸನ್ನದ್ಧರಾಗಿ ನಿಂತಿದ್ದರೆ ಇನ್ನೊಂದು ಕಡೆ ಜೆಡಿಎಸ್‌ನ ಶಂಕ್ರಣ್ಣ ವಣಕಿಹಾಳ, ಸುಭಾಷ ಗುತ್ತೇದಾರ, ನಿತೀನ ಗುತ್ತೇದಾರ ಟಾಂಗುಕೊಡುವ ತಯಾರಿಯಲ್ಲಿದ್ದಾರೆ.




ಗುರುಶಾಂತ್

ಆದರೆ ಅಧಿಕಾರಾರೂಢ ಬಿಜೆಪಿಯ ನಾಯಕರು ಮಾತ್ರ ಇವತ್ತಿಗೂ ಒಬ್ಬರ ವಿರುದ್ಧ ಮತ್ತೊಬ್ಬರು ಕತ್ತಿ ಮಸೆಯುತ್ತ ಕಾಲೆಳೆಯುವ ಕೆಲಸದಲ್ಲಿ ನಿರತರಾಗಿದ್ದಾರೆ. ರೇವೂನಾಯಕ ಬೆಳಮಗಿ, ದೊಡ್ಡಪ್ಪಗೌಡ ನರಬೋಳಿ, ವೈಜನಾಥ ಪಾಟೀಲ, ವಾಲ್ಮೀಕಿನಾಯಕ, ಸುನೀಲ ವಲ್ಯಾಪುರೆ, ಶಶೀಲ ನಮೋಶಿ, ಅಮರನಾಥ ಪಾಟೀಲ, ಕೆ.ಬಿ.ಶ್ಯಾಣಪ್ಪ ಮುಂತಾದವರ ದಂಡೇ ಇದ್ದರೂ ಅವರಲ್ಲಿ ಐಕ್ಯತೆ ಇಲ್ಲದ್ದರಿಂದ ಬಿಜೆಪಿ ಅಕ್ಷರಶಃ ಒಡೆದ ಮನೆಯಾಗಿದೆ. ಬಾಂಬ್ ಕುಖ್ಯಾತಿಯ ಗಿರೀಶ್ ಮಟ್ಟಣ್ಣನವರಿಗೆ ಕಾಡಾ ಅಧ್ಯಕ್ಷಗಿರಿ, ಯಾದಗಿರಿಯ ಡಾ.ವೆಂಕಟೇಶ ಅವರಿಗೆ ತೊಗರಿ ಮಂಡಳಿ ಅಧ್ಯಕ್ಷಗಿರಿ ಕೊಟ್ಟಿರುವುದು ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ಕುಗ್ಗಿಸಿದೆ. ಸೇಡಂನ ರಾಜಕುಮಾರ ತೇಲ್ಕೂರ್ ಪಕ್ಷದ ಅಧ್ಯಕ್ಷರಾಗಿದ್ದರೂ ಗಿರೀಶ್ ಮಟ್ಟಣ್ಣನವರ್‌ಗೆ ಪಕ್ಷದ ಸಂಘಟನೆಯ ಉಸ್ತುವಾರಿ ನೀಡಿದ್ದು ಹಲವರ ಸಹನೆಗೆ ಕಾರಣವಾಗಿದೆ.


ಶಶಿಲ್ [illegible]

ಆಡಳಿತಾರೂಢ ಪಕ್ಷದ ಅಸಂಘಟನೆ ಹಾಗೂ ಒಳಗೊಳಗೆ ನಡೆದ ಹಗ್ಗಜಗ್ಗಾಟವನ್ನು ಒಂದು ನೆಪ ಮಾಡಿಕೊಂಡು ಹೇಗಾದರೂ ಸೈ ಈ ಸಲ ಗೆಲ್ಲಲೇಬೇಕು ಎಂದು ಶ್ರೀಮತಿ ಅರುಣಾ ಪಾಟೀಲ ಹಾಗೂ ಸುಭಾಷ ಗುತ್ತೇದಾರ ಸ್ಕೆಚ್ ಹಾಕಿಕೊಂಡಿದ್ದಾರೆ. ಕುಮಾರಸ್ವಾಮಿ ಎಂಬ ಮಾಜಿ ಮುಖ್ಯಮಂತ್ರಿಯ ಟ್ರಂಪ್ ಕಾರ್ಡನ್ನು ಬಳಸಿಕೊಂಡು ಜೆಡಿಎಸ್ ಜಿಲ್ಲೆಯಲ್ಲಿ ತನ್ನದೇ ಆದ ಸ್ಥಾನವನ್ನು ಹೊಡಕೊಳ್ಳಲು ಸಕಲ ಸಿದ್ಧತೆಗಳನ್ನು ಮಾಡಿಕೊಂಡಿದೆ. ಅಂದಂತೆ ಸುಭಾಷ ಗುತ್ತೇದಾರ ತನ್ನ ಮಗನಾದ ಹರ್ಷಾನಂದ ಗುತ್ತೇದಾರನನ್ನು ತಡಕಲ್ ಕ್ಷೇತ್ರದಿಂದ ಕಣಕ್ಕೆ ಇಳಿಸಿಯಾಗಿದೆ.

ಬಿಜೆಪಿಯ ರೇವೂನಾಯಕ ಬೆಳಮಗಿ ಹಾಗೂ ವೈಜನಾಥ ಪಾಟೀಲರು ಕೂಡ ಪುತ್ರ ಪ್ರೇಮದಿಂದ ಹಿಂದೆ ಸರಿದಿಲ್ಲ. ಕ್ರಮವಾಗಿ ರೇವೂನಾಯಕ ತನ್ನ ಮಗನಾದ ಗಣೇಶ ಬೆಳಮಗಿಯನ್ನು ಔರಾದ-ಬಿ ಕ್ಷೇತ್ರದಿಂದ ಹಾಗೂ ವೈಜನಾಥ ಪಾಟೀಲ ತಮ್ಮ ಪುತ್ರ ಗೌತಮ್ ಪಾಟೀಲನನ್ನು ಐನೋಳ್ಳಿ ಕ್ಷೇತ್ರದಿಂದ ಕಣಕ್ಕೆ ಇಳಿಸಿದ್ದಾರೆ. ಐನೋಳ್ಳಿ ಕ್ಷೇತ್ರದಿಂದಲೇ ಕಾಂಗ್ರೆ ಪಕ್ಷ ದೀಪಕನಾಗ್ ಪುಣ್ಯಶೆಟ್ಟಿಯನ್ನು ನಿಲ್ಲಿಸಿದೆ. ಇದರಿಂದ ಇಲ್ಲಿ ತುರುಸಿನ ಸ್ಪರ್ಧೆ ಕಂಡುಬರುತ್ತಿದೆ.


ಅಂಬಾರಾಯ

ಆಳಂದ ತಾಲೂಕಿನ ನಿಂಬರ್ಗಾದಲ್ಲಿ ಖಾಸಾ ಗೆಳೆಯರಾದ ಸುಭಾಷ ರಾಠೋಡ ಹಾಗೂ ಬಿ.ವಿ.ಚಕ್ರವರ್ತಿ ಜಿ.ಪಂ. ಕಣದಲ್ಲಿದ್ದಾರೆ. ಇಲ್ಲಿ ಸುಭಾಷ ರಾಠೋಡ ಜೆಡಿಎಸ್ ಹುರಿಯಾಳಾಗಿದ್ದರೆ, ಬಿ.ವಿ.ಚಕ್ರವರ್ತಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಹೀಗಾಗಿ ಈ ಗೆಳೆಯರಿಬ್ಬರ ಚುನಾವಣಾ ಕದನ ಕುತೂಹಲ ಜನರ ಗಮನ ಸೆಳೆದಿದೆ. ಅಫಜಲಪುರ ತಾಲೂಕಿನ ಗೊಬ್ಬೂರು ಕ್ಷೇತ್ರದಿಂದ ಸತತ ಎರಡು ಬಾರಿ ಆಯ್ಕೆಯಾಗಿದ್ದ ಗುರುಶಾಂತ ಪಟ್ಟೇದಾರ ಈ ಬಾರಿ ಬಡದಾಳ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ಗೆ ಪ್ರಯತ್ನಿಸಿದ್ದರು. ಆದರೆ ಕೊನೆಯ ಗಳಿಗೆವರೆಗೆ ಟಿಕೆಟ್ ಸಿಕ್ಕದಿದ್ದರೂ ಕಣದಿಂದ ಹಿಂದೆ ಸರಿಯದಿರುವುದು ವಿಚಿತ್ರ ಸನ್ನಿವೇಶ ಸೃಷ್ಟಿಸಿದೆ. ಜಿಡಗಾ ಮೀಸಲು ಕ್ಷೇತ್ರದಿಂದ ಈ ಹಿಂದೆ ಆಯ್ಕೆಯಾಗಿದ್ದ ಸುಭಾಷ ರಾಠೋಡ ಮತ್ತೊಮ್ಮೆ ತಮ್ಮ ಅದೃಷ್ಟ ಪರೀಕ್ಷೆಗೆ ನಿಂಬರ್ಗಾ ಜಿ.ಪಂ. ಕಣದಲ್ಲಿ ನಿಂತಿದ್ದಾರೆ. ಜಿಡಗಾ ಸಾಮಾನ್ಯ ಮಹಿಳಾ ಕ್ಷೇತ್ರವಾದ್ದರಿಂದ ಜೆಡಿಎಸ್ ಅಭ್ಯರ್ಥಿಯಾಗಿ ಗುರುದೇವಿ ಪಾಟೀಲ, ಕಾಂಗ್ರೆಸ್‌ನಿಂದ ಮೀನಾಕ್ಷಿದೇವಿ ಪಾಟೀಲ, ಬಿಜೆಪಿಯಿಂದ ಚಂದಮ್ಮ ಸಾವಳಿಯವರು ಸ್ಪರ್ಧಿಸಿ ಕುತೂಹಲಕ್ಕೆ ಕಾರಣವಾಗಿದ್ದಾರೆ.

ಕಳೆದ ಬಾರಿ ಆಯ್ಕೆಯಾಗಿದ್ದ ಅಂಬಾರಾಯ ಅಷ್ಟಗಿ ಅವರಾದ (ಬಿ) ಕ್ಷೇತ್ರದಿಂದ ಕಾಂಗ್ರೆ ಅಭ್ಯರ್ಥಿಯಾಗಿ ಮತ್ತೆ ಸ್ಪರ್ಧಿಸಿದ್ದಾರೆ. ಇವರು ಇಲ್ಲಿ ಸಚಿವ ರೇವೂನಾಯಕ ಬೆಳಮಗಿ ಅವರ ಪುತ್ರ ಗಣೇಶ ಅವರನ್ನು ಎದುರಿಸಲಿದ್ದಾರೆ. ಶಾಸಕ ದೊಡ್ಡಪ್ಪಗೌಡ ನರಬೋಳಿಯವರ ಸಹೋದರ ಬಸವರಾಜಪ್ಪಗೌಡ ನರಬೋಳಿ ಕಳೆದ ಸಲ ಸ್ಪರ್ಧಿಸಿದಂತೆ ಈ ಬಾರಿಯೂ ಅಂದೋಲಾ ಮತಕ್ಷೇತ್ರದಿಂದ ಸ್ಪರ್ಧಿಸಿದ್ದಾನೆ.

ಇನ್ನುಳಿದಂತೆ ಜೇವರ್ಗಿ, ಚಿತ್ತಾಪುರ, ಆಳಂದ, ಅಫಜಲಪುರ, ಚಿಂಚೋಳಿ, ಚಿತ್ತಾಪುರಗಳಲ್ಲಿ ಈ ಹಿಂದೆ ಆಯ್ಕೆಯಾಗಿದ್ದ ಆಯಾ ಕ್ಷೇತ್ರದ ಶಾಸಕರು, ತಮ್ಮ ಭವಿಷ್ಯವನ್ನು ಈ ಜಿಲ್ಲಾ ಪಂಚಾಯತ್ ಮೂಲಕವೇ ಗಟ್ಟಿಗೊಳಿಸಿಕೊಳ್ಳುವ ಇರಾದೆಯಲ್ಲಿದ್ದಾರೆ. ತಮ್ಮ ಮುಂದಿನ ಕುರ್ಚಿಯ ಭದ್ರತೆಗಾಗಿ ತನು-ಮನ-ಧನವನ್ನು ವ್ಯಯ ಮಾಡಿಕೊಂಡು ಚಳಿಯಿಂದ ಥರಗುಟ್ಟುತ್ತಿರುವ ನಾಡಿನಲ್ಲಿ ಚುನಾವಣೆಯ ಕಾವು ಏರಿಸುತ್ತಿದ್ದಾರೆ.

• ವಿಶ್ವಾರಾಧ್ಯ ಸತ್ಯಂಪೇಟೆ

ಬಾಗಲಕೋಟೆ : ಬಿಜೆಪಿಯಲ್ಲಿ ಬಣ-ಬಡಿದಾಟ!

ಚುನಾವಣೆಗಳು ಎದುರಾದಾಕ್ಷಣ ಪಕ್ಷಗಳ ನಡುವೆ ಜಗಳ ಹೊತ್ತಿಕೊಳ್ಳುವುದು, ಬಡಿದಾಟಗಳು ನಡೆಯುವುದು ಮಾಮೂಲಿ. ಆದರೆ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿ ಕದನದ ನಿಮಿತ್ತ ಬಾಗಲಕೋಟೆ ವಿಭಿನ್ನ ಘಟನಾವಳಿಗಳಿಗೆ ಸಾಕ್ಷಿಯಾಗುತ್ತಿದೆ. ಯಾಕೆಂದರೆ ಇಲ್ಲಿ ಬಿಜೆಪಿಯ ಬಣಗಳ ನಡುವೆಯೇ ಬಡಿದಾಟ ನಡೆದು ಜನಸಾಮಾನ್ಯರಿಗೆ ಬಿಟ್ಟಿ ಮನರಂಜನೆ ಸಿಗಹತ್ತಿದೆ.


ಮುರುಗೇಶ್ ನಿರಾಣಿ

ಬಿಜೆಪಿಯೊಳಗಿನ ಈ ಗುಂಪುಗಾರಿಕೆ ಬಹಿರಂಗವಾಗೇ ಹೊರಬಿದ್ದಿದೆ. ಪಕ್ಷದ ಜಿಲ್ಲಾ ಅಧ್ಯಕ್ಷ ಬಸವಲಿಂಗಪ್ಪ ನಾವಲಗಿಗೆ ಮುರುಗೇಶ್ ನಿರಾಣಿ ಬಣದವರು ಅಟ್ಟಾಡಿಸಿ ಹೊಡೆದಿದ್ದಾರೆ. ಇದು ಸದ್ಯ ಜಿಲ್ಲಾ ಬಿಜೆಪಿಯ ಸ್ಥಿತಿ. ಈ ಕಚ್ಚಾಟದ ಇತ್ಯರ್ಥಕ್ಕಾಗಿನ ಪ್ರಯತ್ನಗಳ ನಡುವೆ ಚುನಾವಣಾ ಕಸರತ್ತುಗಳು ಕಳೆಗುಂದಿವೆ. ದುರಂತವೆಂದರೆ ಇದನ್ನು ಎನ್‌ಕ್ಯಾಶ್ ಮಾಡಿಕೊಳ್ಳಬಲ್ಲ ತಾಕತ್ತು ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರುಗಳಿಗೆ ಇಲ್ಲವಾಗಿದೆ.

ಇದೀಗ ಬಹಿರಂಗವಾಗೇ ಪೆಟ್ಟುತಿಂದು ಮುಖಭಂಗಕ್ಕೊಳಗಾಗಿರುವ ಬಸವಲಿಂಗಪ್ಪ ನಾವಲಗಿ ಶಾಸಕ ವೀರಣ್ಣ ಚರಂತಿ ಮಠನ ಕಡೆಯವನು. ಚರಂತಿ ಮಠನ ನಿಷ್ಠಾವಂತ ಚೇಲಾ ಕೂಡಾ ಹೌದು. ಈ ಕ್ವಾಲಿಫಿಕೇಷನ್ನೇ ನಾವಲಗಿಯನ್ನು ಜಿಲ್ಲಾಧ್ಯಕ್ಷನನ್ನಾಗಿಸಿತ್ತು. ಈತ ಚರಂತಿಯ ಕೈಗೊಂಬೆಯೆಂಬ ಕಾರಣಕ್ಕೆ ನಿರಾಣಿ ಬಣದಲ್ಲೊಂದು ಅಸಹನೆ ಹಬೆಯಾಡಹತ್ತಿತ್ತು.


ಇದಲ್ಲದೆ, ಬಾಗಲಕೋಟೆ ತಾಲ್ಲೂಕಿನ ಕೆಲಹಳ್ಳಿಗಳು ನಿರಾಣಿಯ ಬೀಳಗಿ ಕ್ಷೇತ್ರಕ್ಕೆ ಸೇರಿವೆ. ಅದರಲ್ಲಿ ಮುರನಾಳವೂ ಒಂದು. ಇದು ಈ ಚುನಾವಣಾ ಸಂದರ್ಭದಲ್ಲಿ ಟಿಕೆಟ್ ಹಂಚಿಕೆ ತಗಾದೆಗೆ ಕಾರಣವಾಗಿದೆ. ತಾನು ಹೇಳಿದವರಿಗೆ ಟಿಕೆಟ್ ನೀಡಬೇಕೆಂಬ ಪಟ್ಟು ನಿರಾಣಿಯದ್ದಾದರೆ, ಚರಂತಿ ಮಠ 'ನನ್ನ ಕ್ಷೇತ್ರವನ್ನ ನಾನೇ ನೋಡಿಕಂತ್ತೀನಿ' ಅಂತ ರಚ್ಚೆ ಹಿಡಿದ. ಜಿಲ್ಲಾಧ್ಯಕ್ಷ ನಾವಲಗಿ ಸಹಜವಾಗಿಯೇ ಚರಂತಿಮಠನ ಮರ್ಜಿಗೆ ಬಿದ್ದ. ನಿರಾಣಿ ಅಭ್ಯರ್ಥಿ ಹೂವಪ್ಪ ರಾಠೋಡ ಹಾಗೂ ಚರಂತಿಮಠನ ಕಡೆಯ ಪಿರಪ್ಪ ಮ್ಯಾಗೇರಿ ಇಬ್ಬರಿಗೂ ನಾವಲಗಿ ಬಿ-ಫಾರಂ ನೀಡಿಬಿಟ್ಟ. ಇದರ ವಿರುದ್ಧ ಸಿಟಕೊಂಡ ನಿರಾಣಿ ಎ.ಸಿ.ಕಚೇರಿಗೆ ಬಂದು ಜಿಲ್ಲಾಧ್ಯಕ್ಷನಿಗೆ ಬುಲಾವ್ ನೀಡಿದರು. ಆದರೆ ಚರಂತಿಮಠ 'ನೀ ಅನ್ನತಾವ ಹೋಬ್ಯಾಡ'. ಅಂತ ತಾಕೀತು ಮಾಡಿದ. ಅಡಕತ್ತರಿಯಲ್ಲಿ ಸಿಕ್ಕಿದ ನಾವಲಗಿ ತನ್ನ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡು ಸುಮ್ಮನಾದ.

ಆದರೆ ಹೂವಪ್ಪನ ಕಡೆಯವರು ಮನೆಗೇ ನುಗ್ಗಿ ನಾವಲಗಿಯನ್ನ ಎಳೆತಂದು ಎಸಿ ಕಚೇರಿಯಲ್ಲಿ ನಿಲ್ಲಿಸಿದರು. ಹೂವಪ್ಪನೇ ಅಧಿಕೃತ ಅಭ್ಯರ್ಥಿ ಅಂತ ಪತ್ರ ಕೊಡೆಂದು ಹುಕುಂ ಹೊರಡಿಸಿದರು. ಚರಂತಿಯ ಮರ್ಜಿಗೆ ಬಿದ್ದು ನಾವಲಗಿ ಅದಕ್ಕೊಪ್ಪದಿದ್ದಾಗ ಭರ್ತಿ ಒದೆ ಬಿದ್ದಿದೆ.


ಹಾವೇರಿ: ಬಿಜೆಪಿಗೆ ಬಂಡಾಯದ ಎಂಟ್ರಿ ಉದಾಸಿ, ಬೊಮ್ಮಾಯಿಗೆ ಡಿಸೆಂಟ್ರಿ

ಸಾಪಿ ಚಿಡ್ಡಿಗಳ ಪೇಚಾಟ ಶವಾಗಿದೆ. ಕಳೆದ ಎರಡೂವರೆ ಗಳಲ್ಲಿ ಸಿಕ್ಕಿದ್ದನ್ನೆಲ್ಲಾ ಲೂಟಿ ಡಿ ತಿಜೋರಿ ತುಂಬಿಸಿಕೊಂಡ ತ್ರಿ ಉದಾಸಿ ಮತ್ತು ಮ್ಮಾಯಿ ತಮ್ಮ ಬೆನ್ನಿಗೆ ದ್ದ ಕಟ್ಟಾ ಹಿಂಬಾಲಕರನ್ನೇ ಮರೆತಿದ್ದಾರೆ. 'ನಿನ್ನ ಜಿಲ್ಲಾ ಚಾಯತ್ ಮತ್ತು ತಾಲೂಕು ಚಾಯತ್ ಮೆಂಬರ್ ಮಾಡ್ತೇನಿ' ಆಸೆ ತೋರಿಸಿ ಕಾರು ಸಿಕೊಂಡು ಓಟು ಪಡೆದ ತ್ರಿಗಳಿಬ್ಬರು ಇಂದು ಬೇಕಾಬಿಟ್ಟಿ ಫಾರಂ ಮಾರಿಕೊಂಡಿದ್ದಾರೆ. ಿಂದ ಅವರ ಪಕ್ಕಾ ರೈಟ್ ಡ್‌ಗಳೂ ಬಂಡಾಯದ ುಟ ಹಾರಿಸಿ ಬಿಜೆಪಿಯ ಕ್ಕೆ ಬೆಂಕಿ ಇಟ್ಟಿದ್ದಾರೆ. ದಕ್ಕೆ ಹೋಲಿಸಿದರೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಮನೋಹರ ೀಲ್ದಾರನ ಹುರುಪಿನಿಂದ ಮಾದಿಂದ ಹೊರ ಬಂದಿದ್ದು ವಣೆಯಲ್ಲಿ ಹೊಸ ಆಕಾಂಕ್ಷೆ ದೆ. ಲೆಕ್ಕಕ್ಕುಂಟು ಆಟಕ್ಕಿಲ್ಲ ರುವ ಜೆಡಿಎಸ್ ಧ್ಯಕ್ಷರಿಲ್ಲದೆ ಹಳೆ ತಲೆಗಳ ಳಾಟದಲ್ಲಿ ಇರುವೆ ನಂತಾಗಿದೆ. ಜಿಲ್ಲೆಯ 38 ಪಂಚಾಯತ್, 118 ಲೂಕು ಪಂಚಾಯತ್ ವಣಾ ಅಖಾಡ ಾದಂತಾಗಿದೆ.


ಅಧಿಕಾರಕ್ಕೆ ಬಂದು ೂವರೆ ವರ್ಷ ಗತಿಸಿದರೂ ುಲ್ಲಿ ಹೇಳಿಕೊಳ್ಳುವಂತಹ ು ಅಭಿವೃದ್ಧಿ ಕೆಲಸವನ್ನೂ ಶದ ದರಿದ್ರ ಮಂತ್ರಿಗಳಾದ ಸಿ ಮತ್ತು ಮ್ಮಾಯಿಗಳೀಗ ತಮ್ಮ ಛೇಲಾ ರುಗಳಾದ ರಾಣೇಬೆನ್ನೂರಿನ ್ಲಿ, ಬ್ಯಾಡಗಿಯ ಸುರೇಶಗೌಡ ೀಲ, ಹಾವೇರಿಯ ನೆಹರು ಕಾರ ಮತ್ತು ಎಂಎಲ್‌ಎಸಿ ಾಜ ಸಜ್ಜನನನ್ನು ಕಟ್ಟಿಕೊಂಡು ಕಂಡ ಹಳ್ಳಿಯಲ್ಲಿ ಜನರ ಗೆ ಬೀಳುತ್ತಿದ್ದಾರೆ. ಆದರೆ ಜನ ್ರ ಈ ಕರ್ಮಗೇಡಿಗಳನ್ನ ಕೂ ಸೇರಿಸಿಕೊಳ್ಳುತ್ತಿಲ್ಲ. ಜಿಲ್ಲೆಯ ಏಕೈಕ ಕಾಂಗ್ರೆಸ್ ಬಿ.ಸಿ. ಪಾಟೀಲನ ಕ್ಷೇತ್ರ ಕೆರೂರಿನ 5 ಜಿ.ಪಂ. ಗಳಲ್ಲಿ ಕಾಂಗ್ರೆಸ್ ಜಯ ಸುವ ಹುಮ್ಮಸ್ಸಿನಲ್ಲಿದೆ. ಯ ಮಾಜಿ ಶಾಸಕ ಯು.ಬಿ. ಾರ ಹಿಂದಿನ ವಿಧಾನಸಭಾ ವಣೆಯಲ್ಲಿ ಚಿಡ್ಡಿಗಳ ವಿರುದ್ಧ



ಸಿ.ಎಂ.ಉದಾಸಿ



ಕಮಲಾ ನಾಯಕ್


ಬಿ.ಸಿ.ಪಾಟೀಲ್


ಪ್ರೇಮಾ ಪಾಟೀಲ




ಮಂಜುನಾಥ


ನೆಹರು




ಸುಷ್ಮಾ

ತಿರುಗಿ ಬಿದ್ದು ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋತಿದ್ದ. ಈಗ ಮತ್ತೆ ಬಣಕಾರ ಬಿಜೆಪಿಯ ಅಂಗಳದಲ್ಲಿ ಕಾಣಿಸಿಕೊಂಡಿದ್ದಾನೆ. ವಿಧಾನಸಭೆಯ ಕನಸು ಕಾಣುತ್ತಿರುವ ಬಣಕಾರ ಜಿ.ಪಂ. ಚುನಾವಣೆಯನ್ನು ತನ್ನ ಮುಂದಿನ ರಾಜಕೀಯಕ್ಕೆ ಪ್ಲಾಟ್ ಫಾರ್ಮ್ ಮಾಡಿಕೊಳ್ಳುವ ಕನಸು ಕಾಣುತ್ತಿದ್ದಾನಾದರೂ ಅದು ಬಿ.ಸಿ. ಪಾಟೀಲನ ರಾಜಕೀಯ ನಾಟಕದಲ್ಲಿ ನನಸಾಗದ ಕನಸಾಗಲಿದೆ.

ಬ್ಯಾಡಗಿಯ ಮೂರು ಜಿ.ಪಂ. ಕ್ಷೇತ್ರದಲ್ಲಿ ಬಿಜೆಪಿ ಬಹುದೊಡ್ಡ ಬಂಡಾಯ ಎದುರಿಸುವಂತಾಗಿದೆ. ವ್ಯಾಪಾರಿಯಾಗಿದ್ದ ಸುರೇಶಗೌಡ ಪಾಟೀಲ ರಾಜಕಾರಣಕ್ಕೆ ಬಂದು ಬಿಜೆಪಿಯ ಅಲೆಯಲ್ಲಿ ಶಾಸಕನಾದವನು. ರಾಜಕೀಯದ ಗಂಧ, ಗಾಳಿಯೂ ಗೊತ್ತಿಲ್ಲದ ಸುರೇಶಗೌಡ ಈಗ ಬಂಡಾಯದ ಬಾವುಟ ಹಿಡಿದು ಗೂಡು ಸೇರಿದ್ದಾನೆ. ಮೋಟೆಬೆನ್ನೂರ ಜಿ.ಪಂ. ಕ್ಷೇತ್ರದಲ್ಲಿ ಮೂರು ಜನ, ಶಿಡೇನೂರ ಕ್ಷೇತ್ರದಲ್ಲಿ ನಾಲ್ಕು ಜನ ಬಂಡಾಯವೆದ್ದಿರುವುದರಿಂದ ಕಾಂಗ್ರೆಸ್ಸಿಗೆ ಗೆಲುವಿನ ದಾರಿ ತೋರಿಸಿದಂತಾಗಿದೆ. ಮಾಜಿ ಸಚಿವ ಬಸವರಾಜ ಶಿವಣ್ಣವರ ಈ ಭಾಗದಲ್ಲಿ ತಾವು ಹೊಂದಿರುವ ಪ್ರಭಾವವನ್ನು ಬಳಸಿಕೊಂಡಲ್ಲಿ ಬಿಜೆಪಿಗಳನ್ನ ಹೈರಾಣಗೊಳಿಸುವುದು ದೊಡ್ಡ ಮಾತೆನಲ್ಲ.

ಜಿಪಂ ತಾಪಂ

ಜಿ.ಪಂ.ನಲ್ಲಿ ಅಧಿಕಾರ ನಡೆಸುವ ಪಕ್ಷಕ್ಕೆ ನಿರ್ಣಾಯಕವಾಗಿರುವ ರಾಣೇಬೆನ್ನೂರಿನ ಆರು ಕ್ಷೇತ್ರಗಳಲ್ಲಿ ಕಾಂಗ್ರೆ ಮತ್ತು ಬಿಜೆಪಿ ನಡುವೆ ಸಮಬಲದ ಪೈಪೋಟಿ ನಡೆಯಲಿದೆ. ಮಾಜಿ ಸಚಿವ ಕೆ.ಬಿ. ಕೋಳಿವಾಡ ಹಿಂದಿನ ಜಿ.ಪಂ. ಚುನಾವಣೆಯಲ್ಲಿ ಈ ಆರೂ ಕ್ಷೇತ್ರಗಳನ್ನು ಕಾಂಗ್ರೆಸ್ಸಿನ ತೆಕ್ಕೆಗೆ ಹಾಕಿಕೊಂಡಿದ್ದರು. ಅಲ್ಲದೇ ತಾಲೂಕು ಪಂಚಾಯತಿಯನ್ನು ಕಾಂಗ್ರೆಸ್ ಪರ ಮಾಡಿಕೊಂಡಿದ್ದರು. ಸದ್ಯ ಹಾಲಿ ಶಾಸಕ ಬಿಜೆಪಿಯ ಜಿ. ಶಿವಣ್ಣ ಕವಲೆತ್ತಿನಂತೆ ಕೇಳಿದ್ದಕ್ಕೆಲ್ಲಾ ತಲೆ ಅಲ್ಲಾಡಿಸುವ ಸಾಧು ಪ್ರಾಣಿ. ಮಂತ್ರಿ ಉದಾಸಿಯ ಹತ್ತಿರದ ಬೀಗನಾದ ಶಿವಣ್ಣ ಪಕ್ಕಾ ಬಣಜಿಗ ಶೆಟ್ಟಿ. ರಾಣೇಬೆನ್ನೂರನಲ್ಲಿ ಈ ಬಾರಿ ಬಿಜೆಪಿ ನಾಲ್ಕು ಕ್ಷೇತ್ರಗಳಲ್ಲಿ ಖಾತೆ ತೆರೆಯುವ ಸೂಚನೆ ಕಂಡು ಬರುತ್ತಿದೆ.


ಕೋಳಿವಾಡನ ಸರ್ವಾಧಿಕಾರಕ್ಕೆ ಬೇಸತ್ತು ಆಪರೇಷನ್ ಕಮಲದ ಮೂಲಕ ಕಾಂಗ್ರೆಸ್ಸಿಗೆ ಗುಡ್ ಬೈ ಹೇಳಿದ್ದ ಮಾಜಿ ಜಿ.ಪಂ. ಸದಸ್ಯ ಎಸ್.ಎ. ರಾಮಲಿಂಗಣ್ಣವರ ಕ್ಷೇತ್ರದಲ್ಲಿ ಪ್ರಭಾವಿ ಮನುಷ್ಯ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು. ಈಗ ಮೀಸಲಾತಿ ಲಭ್ಯವಾಗದ ಕಾರಣ ತನ್ನ ಹಿಂದಿನ ಕ್ಷೇತ್ರ ಹಲಗೇರಿಯಿಂದ ತಮ್ಮ ಪುತ್ರಿ ಜ್ಯೋತಿ ರಾಮಲಿಂಗಣ್ಣವರನ್ನು ಬಿಜೆಪಿಯಿಂದ ಕಣಕ್ಕಿಳಿಸಿದ್ದಾರೆ. ರಾಣೇಬೆನ್ನೂರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಂಜುನಾಥ ಓಲೇಕಾರ ಲೂಟಿ ಲಪಟಾಯಿಸಿ ಈಗ ಆ ಸ್ಥಾನಕ್ಕೆ ರಾಜೀನಾಮೆ ನೀಡಿ ಕರೂರ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದಾನೆ. ಇಲ್ಲಿ ಕಾಂಗ್ರೆಸ ನಾಗರಾಜ ಹಳ್ಳಪ್ಪನವರ ಇವನ ಮಗ್ಗಲ ಮುರಿಯಲು ಸಜ್ಜಾಗಿದ್ದಾನೆ. ಇನ್ನು ಕಾಕೋಳ ಕ್ಷೇತ್ರದಲ್ಲಿ ಜೆಡಿಎಸ್ ಖಾತೆ ತೆರೆಯುವ ಸೂಚನೆ ನೀಡುತ್ತಿದೆ. ಹಿಂದಿನ ಜಿಲ್ಲಾ ಪಂಚಾಯತ ಉಪಾಧ್ಯಕ್ಷರಾಗಿದ್ದ ಕಮಲಾ ನಾಯಕ ಜೆಡಿಎಸ್‌ನಿಂದ ಮತ್ತೆ ಕಣಕ್ಕಿಳಿದಿದ್ದಾರೆ. ಲಂಬಾಣಿ ಜನಾಂಗವೇ ನಿರ್ಣಾಯಕವಾಗಿರುವ ಈ ಕ್ಷೇತ್ರದಲ್ಲಿ ಕಮಲಾ ಪ್ರಭಾವಿ ಅಭ್ಯರ್ಥಿ. ಒಟ್ಟಿನಲ್ಲಿ ರಾಣೇಬೆನ್ನೂರ ತಾಲೂಕಿನ ಕಾಂಗ್ರೆಸ್ ಪಕ್ಷದ ಒಳ ಜಗಳ ಬಿಜೆಪಿಗೆ ಲಾಭ ತಂದು ಕೊಡಲಿದೆ.


ಗೋಮಾಳ ಜಾಗೆಯನ್ನ ನುಂಗಿ ಕಾರ್ಖಾನೆ ಕಟ್ಟಿದ ಖದೀಮ ಶಾಸಕ ಸಜ್ಜನ ಹಾವೇರಿಯಲ್ಲಿ ಹಣ ತೂರಲು ಸಜ್ಜಾಗಿದ್ದಾನೆ. ಐದು ಜಿ.ಪಂ. ಹಾಗೂ 22 ತಾಲೂಕು ಪಂಚಾಯತಿ ಕ್ಷೇತ್ರಗಳನ್ನು ಹೊಂದಿರುವ ಹಾವೇರಿಯಲ್ಲಿ ಕಾಂಗ್ರೆ ಅಷ್ಟಕಷ್ಟೆ. ಕಳೆದ ಅವಧಿಯಲ್ಲಿ ಬಹುಪಾಲು ಕಾಂಗ್ರೆಸ್ ಅಭ್ಯರ್ಥಿಗಳು ಇಲ್ಲಿಂದ ಗೆದ್ದು ಬಂದಿದ್ದರೂ ಈ ಬಾರಿ ಆಡಳಿತಾರೂಢ ಪಕ್ಷದ ಕಡೆ ಜನ ವಾಲುತ್ತಿದ್ದಾರೆ. ದೇವಗಿರಿ ಕ್ಷೇತ್ರದಿಂದ ಸ್ವತಃ ತನ್ನ ಹೆಂಡತಿಯನ್ನ ಕಣಕ್ಕಿಳಿಸುವ ಅಬ್ಬರ ನಡೆಸಿದ್ದ ಶಿವರಾಜ ಸಜ್ಜನ ಕೊನೆಗೆ ಪಕ್ಷದ ಹಿರಿಯರಿಂದ ಉಗಿಸಿಕೊಂಡು ತನ್ನ ತಮ್ಮನ ಹೆಂಡತಿ ಸುಷ್ಮಾ ರಾಜೇಂದ್ರ ಸಜ್ಜನಗೆ ಬಿಜೆಪಿಯ 'ಬಿ' ಫಾರ್ಮ್ ಕೊಟ್ಟಿದ್ದಾರೆ. ಇದು ಸಜ್ಜನನ ಸ್ವ ಕ್ಷೇತ್ರವಾದರು ಇಲ್ಲಿಯ ಜನ ಇವನ ದುಷ್ಟತನಕ್ಕೆ ಬೇಸತ್ತು ಕಾಂಗ್ರೆಸ್‌ನ ಕಡೆ ವಾಲಿದ್ದಾರೆ.


ಗುತ್ತಲ ಕ್ಷೇತ್ರದಿಂದ ಕಾಂಗ್ರೆಸ ಈರಪ್ಪ ಲಮಾಣಿ ಗೆಲ್ಲುವ ಅಭ್ಯರ್ಥಿ. ಶಾಸಕ ನೆಹರು ಓಲೇಕಾರನೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಈರಪ್ಪನ ಗೆಲುವಿಗೆ ಸಹಕರಿಸಲು ಬಿಜೆಪಿ ಡಮ್ಮಿ ಅಭ್ಯರ್ಥಿಯನ್ನ ಕಣ್ಣಕ್ಕಿಳಿಸಿದೆ. ನೆಗಳೂರ ಕ್ಷೇತ್ರದಲ್ಲಿ ಬಿಜೆಪಿಗೆ ಬಂಡಾಯದ ಬಿಸಿ ತಟ್ಟಿದ್ದು ಕ್ಷೇತ್ರದ ಗ್ರಾಮೀಣ ಬಿಜೆಪಿ ಅಧ್ಯಕ್ಷ ವೆಂಕರೆಡ್ಡಿ ಚಪ್ಪರದ ತನ್ನ ಪತ್ನಿಯನ್ನ ಕಣಕ್ಕಿಳಿಸಿದರೆ ಆಕೆಯ ವಿರುದ್ಧ ಬಂಡಾಯವಾಗಿ ಶಾರದಾ ಕೋರಿ ಕಣಕ್ಕಿಳಿದಿದ್ದಾರೆ. ಕಬ್ಬೂರ ಕ್ಷೇತ್ರದಲ್ಲಿ ಕಾಂಗ್ರೆ ಖಾತೆ ತೆರೆಯುವ ಇರಾದೆಯಲ್ಲಿದೆ. ಹಾಲಿ ತಾ.ಪಂ. ಸದಸ್ಯ ಶೇಖರಗೌಡ ಗಾಜಿಗೌಡ್ರ ಗೆಲುವಿನ ಭರವಸೆ ಮೂಡಿಸಿದ್ದಾರೆ.

ಮಂತ್ರಿ ಉದಾಸಿಯ ಸ್ವಕ್ಷೇತ್ರ ಹಾನಗಲ್ಲನ ಆರು ಜಿ.ಪಂ. ಕ್ಷೇತ್ರಗಳಲ್ಲಿ ಬಿಜೆಪಿಗೆ ಪ್ರಬಲ ಎದುರಾಳಿ ಕಾಂಗ್ರೆಸ್ ಉದಾಸಿಯ ಮಗ್ಗಲ ಮುರಿಯಲು ಎಲ್ಲ ತಯಾರಿ ಮಾಡಿಕೊಂಡಿದೆ. ಕಾಂಗ್ರೆಸ್‌ನ ನೂತನ ಜಿಲ್ಲಾಧ್ಯಕ್ಷ, ಮಾಜಿ ಸಭಾಪತಿ ಮನೋಹರ ತಹಶೀಲ್ದಾರ ಎಲ್ಲ ಕ್ಷೇತ್ರಗಳಲ್ಲಿ ಪ್ರಬಲ ಅಭ್ಯರ್ಥಿಗಳನ್ನೆ ಕಣಕ್ಕಿಳಿಸಿದ್ದಾರೆ. ತಿಳವಳ್ಳಿ ಕ್ಷೇತ್ರದಲ್ಲಿ ಮಾಜಿ ಜಿ.ಪಂ. ಸದಸ್ಯ ಬಸವರಾಜ ಹಾದಿಮನಿ ಬಿಜೆಪಿಯಿಂದ ಕಣಕ್ಕಿಳಿದ್ದಿದ್ದಾರೆ. ಅಸಲಿಗೆ ಈತನ ಕ್ಷೇತ್ರ ಆಡೂರು. ಇವನ ವಿರುದ್ಧ ಕಾಂಗ್ರೆಸ್‌ನಿಂದ ಲೋಹಾರ ಜನೀರಹ್ಮದ್ ಮತ್ತು ಮಾಜಿ ಜಿ.ಪಂ. ಉಪಾಧ್ಯಕ್ಷ ಜಿ.ಎಸ್. ಗಂಟೇರ ಸ್ಪರ್ಧಿಸಿದ್ದಾರೆ. ಬೊಮ್ಮನಹಳ್ಳಿ ಕ್ಷೇತ್ರದಿಂದ ಉದಾಸಿಯ ಕೈಚೇಲ ಮಾಜಿ ತಾ.ಪಂ. ಅಧ್ಯಕ್ಷ ಪದ್ಮನಾಭ ಕುಂದಾಪುರ, ಆಡೂರಿನಿಂದ ಮಾಜಿ ತಾ.ಪಂ. ಉಪಾಧ್ಯಕ್ಷ ಶಂಕ್ರಣ್ಣ ಕಣದಲ್ಲಿರುವ ಪ್ರಮುಖರು.



ಸೋಮಣ್ಣ ಬೇವಿನಮರದ




ಸುರೇಶ್‌ಗೌಡ



ಪದ್ಮನಾಭ


ಜ್ಯೋತಿ


ಶಿವರಾಜ್ ಸಜ್ಜನ್




ರಾಮಲಿಂಗಣ್ಣನವರ್


ಶಿವಣ್ಣನವರ್

ಜಿಲ್ಲೆಯಲ್ಲಿ ಬಿಜೆಪಿಗೆ ಅತಿ ಹೆಚ್ಚು ಬಂಡಾಯ ಕಂಡು ಬಂದಿರುವುದು ಮಂತ್ರಿ ಬಸು ಬೊಮ್ಮಾಯಿಯ ಶಿಗ್ಗಾಂವ-ಸವಣೂರ ಕ್ಷೇತ್ರದಲ್ಲಿ, ಅಭ್ಯರ್ಥಿಗಳ ಆಯ್ಕೆಯಲ್ಲಿ ಮಂತ್ರಿ ಬೊಮ್ಮಾಯಿ ಜಿಲ್ಲಾಧ್ಯಕ್ಷ ಸೋಮಣ್ಣ ಬೇವಿನಮರದನನ್ನ ಮುಂದೆ ಬಿಟ್ಟಿದ್ದಾನೆ. ಬೇವಿನಮರದ ಕ್ಷೇತ್ರದ 'ಬಿ' ಫಾರ್ಮ್‌ಗಳನ್ನು ಪಕ್ಕಾ ಬಕರಿಗೆ ಹಚ್ಚಿದ್ದಾನೆ. ಬೊಮ್ಮಾಯಿ ಸಂಯುಕ್ತ ಜನತಾದಳದಲ್ಲಿ ಇದ್ದಾಗಿನಿಂದ ಇವನ ಎಡಗೈ ಬಲಗೈಗಳಂತಿದ್ದ ಗಂಗಾಧರ ಸಾತಣ್ಣವರ, ಶಿವಾನಂದ ಬಾಗೂರ, ರವಿ ಕುಡವಕ್ಕಲಿಗೇರ; ಕಾಂಗ್ರೆ ಬಿಟ್ಟು ಬಸು ಹಿಂದೆ ಬಿಜೆಪಿಗೆ ಬಂದ ಪಾಲಾಕ್ಷಪ್ಪ ಹಾವಣಗಿ, ಬಾಪುಗೌಡ ಹೊಸಗೌಡ್ರ ಶಿಗ್ಗಾಂವಿಯ ನಾಲ್ಕು ಜಿ.ಪಂ. ಕ್ಷೇತ್ರದ ಪ್ರಭಲ ಆಕಾಂಕ್ಷಿಗಳಾಗಿದ್ದರು. ಗೆಲ್ಲುವ ಅವಕಾಶವೂ ಇವರಿಗಿತ್ತು, ಆದರೆ ಬೊಮ್ಮಾಯಿಯ ರಾಜಕಾರಣಕ್ಕೆ ಇವರೆಲ್ಲಾ ಬಲಿಯಾಗಿ ಬಿಜೆಪಿಗೆ ಗುಡ್ ಬೈ ಹೇಳಿ ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ.

ಕುಂದೂರ ಕ್ಷೇತ್ರದಲ್ಲಿ ಅಹಿಂದ ನಾಯಕ ಶಿವಾನಂದ ರಾಮಗೇರಿ ಕಳೆದ ಬಾರಿ ಪರಾಭವಗೊಂಡಿದ್ದರೂ ಈ ಬಾರಿ ಗೆಲುವಿನ ಅಂಚಿನಲ್ಲಿ ನಿಂತಿದ್ದಾರೆ. ಮಾಜಿ ಸಂಸದ ಮಂಜುನಾಥ ಕುನ್ನೂರು ಮತ್ತು ಮಾಜಿ ಶಾಸಕ ಅಜ್ಜಂಪೀರ ಖಾದ್ರಿ ಹಿಂದಿನ ಅವಧಿಯಲ್ಲಿ ಜಯಗಳಿಸಿದ್ದ ಮೂರು ಕ್ಷೇತ್ರಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ಕುಂದೂರ ಕ್ಷೇತ್ರದಲ್ಲೂ ಖಾತೆ ತೆರೆಯುವ ಸೂಚನೆ ತೋರುತ್ತಿದೆ. ತಡಸ ಕ್ಷೇತ್ರದಿಂದ ಜಿ.ಪಂ. ಮಾಜಿ ಅಧ್ಯಕ್ಷ ಜೆ.ಡಿ.ಎಸ್ ರಾಜ್ಯ ನಾಯಕಿ ಪ್ರೇಮಾ ಪಾಟೀಲ, ದುಂಢಶಿ ಕ್ಷೇತ್ರದಿಂದ ಕಾಂಗ್ರೆಸ ಕಲಾವತಿ ಮಿಠ್ರಿಕೋಟಿ, ಹುಲಗೂರ ಕ್ಷೇತ್ರದಿಂದ ಜೆಡಿಎಸ್ ಗೆಲುವು ಸಾಧಿಸುವ ಸಂಭವವಿದೆ. ಸವಣೂರ ತಾಲೂಕಿನ ಕಾರಡಗಿ ಕ್ಷೇತ್ರದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಬೇವಿನಮರದ ತಮ್ಮ ಸಂಬಂಧಿ ನಿಸ್ಸಿಮಗೌಡ್ರಗೆ ಟಿಕೆಟ್ ಕೊಟ್ಟು ಪಕ್ಷದ ಕಾರ್ಯಕರ್ತರ ವಿರೋಧ ಕಟ್ಟಿಕೊಂಡಿದ್ದಾನೆ. ಯಲವಿಗಿ, ಹತ್ತಿಮತ್ತೂರ ಕ್ಷೇತ್ರದಲ್ಲಿ ಕಮಲಕ್ಕೆ 3-4 ಜನ ಬಂಡಾಯ ಕ್ಯಾಂಡಿಡೇಟ್‌ಗಳು ಕಾಣುತ್ತಿದ್ದಾರೆ. ಹೀಗಾಗಿ ಇಲ್ಲಿಯೂ ಕಾಂಗ್ರೆಸ್‌ಗೆ ಲಾಭವಾಗುವ ಎಲ್ಲ ಲಕ್ಷಣಗಳು ಸ್ಪಷ್ಟವಾಗುತ್ತಿವೆ.

ಜಿಲ್ಲೆಯಲ್ಲಿ ಅತಂತ್ರ ಜಿ.ಪಂ. ರಚನೆ ಆಗುವ ಲಕ್ಷಣಗಳು ಕಾಣುತ್ತಿದ್ದರೂ ಕೊನೆ ಗಳಿಗೆಯಲ್ಲಿ ಮತದಾರ ತೆಗೆದುಕೊಳ್ಳುವ ನಿರ್ಣಯ ನಿರ್ಣಾಯಕವಾಗುತ್ತೋ ಅಥವಾ ಚಿಡ್ಡಿಗಳು ಲೂಟಿ ಮಾಡಿದ ಕೋಟಿ ಕೋಟಿ ಹಣ ಕೆಲಸ ಮಾಡುತ್ತೋ ಕಾದು ನೋಡಬೇಕು.

• ಹುರುಳಿಕುಪ್ಪಿ ವಿನಯ್


ಬಿಜೆಪಿಯ ಇಂಥ ಕದನಗಳ ನಡುವೆ ಗೆಲುವಿನತ್ತ ನಡೆಯಬೇಕಿದ್ದ ಸ್ ನಿತ್ರಾಣಗೊಂಡಿದೆ. ಇಡೀ ಜಿಲ್ಲೆಯಲ್ಲಿ ಕಾಂಗ್ರೆಸ್‌ನ ಶಾಸಕರಿಗೆ ಲ್ಲ, ಎಲ್ಲವೂ ಬಿಜೆಪಿಮಯ. ಈ ಹಿಂದೆ ಕಾಂಗ್ರೆಸ್ ಹಿಡಿತದಲ್ಲಿದ್ದ ಗಳೂ ಕೈತಪ್ಪುವ ಸಾಧ್ಯತೆಗಳಿವೆ. ಆದರೆ ರಾಜ್ಯ ನಾಯಕರಾಗಲೀ, ು ಮುಖಂಡರಾಗಲಿ ಈ ಬಗ್ಗೆ ತಲೆಕೆಡಿಸಿಕೊಂಡಂತಿಲ್ಲ.

ಕಾಂಗ್ರೆಸ್‌ನ ಜಿಲ್ಲಾ ಅಧ್ಯಕ್ಷಗಿರಿ ಮಾಜಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷ ಗರ್ ಎಂಬಾತನ ಕೈಲಿದೆ. ಒಂದಷ್ಟು ಚುರುಕಾಗಿರುವ ಈತ ಮತಗಳನ್ನು ಕಬಲ್ಲ, ಆದರೆ ಅದಕ್ಕೆ ಪೂರಕವಾದ ಪರಿಸ್ಥಿತಿಯಿಲ್ಲ. ಕಾಲೆಳೆಯುವವರ ಪಕ್ಷವನ್ನೇ ಮುಗುಚಿ ಹಾಕಲು ಪಣತೊಟ್ಟು ನಿಂತಿದೆ. ಎಂತೆಂಥ ಸುಬ್ಬುಗಳಾಗಿವೆಯೆಂದರೆ ಜಿಪಂ ಅಧ್ಯಕ್ಷನಾಗಿದ್ದ ಸುಭಾಷ್ ತಾಳಿಕೋಟೆಗೆ ಕೊಟ್ಟಿಲ್ಲ, ಅದು ವಿಜಯಾನಂದನೆಂಬ ಗೂಂಡಾನ ಪಾಲಾಗಿದೆ. ಕೂಡಾ ಕಾಂಗ್ರೆಸ್‌ಗೆ ಸೋಲಾಗಿ ಸುತ್ತಿಕೊಳ್ಳಲಿದೆ.

ಬಾದಾಮಿ ಕ್ಷೇತ್ರದಲ್ಲಿ ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ ಮತ್ತು ಹುಲ್ಲಪ್ಪ ಗೆ ಸ್ವಜಾತಿ ಬಲವಿದೆ. ಆದರೆ ಇವರಿಬ್ಬರೂ ವಿಶ್ವಾಸ ಉಳಿಸಿಕೊಂಡಿಲ್ಲ. ಆದರೆ ಹುಲ್ಲಪ್ಪ ಮೇಟಿ ಯಾವ್ಯಾವುದೋ ಹಿತಾಸಕ್ತಿಗಳನ್ನಿಟ್ಟುಕೊಂಡು ಕಾಂಗ್ರೆಸ್ ವಿರುದ್ಧವೇ ಕೆಲ ಅಬ್ಬೇಪಾರಿಗಳನ್ನ ಅಹಿಂದಾ ಹೆಸರಲ್ಲಿ ಕಣಕ್ಕಿಳಿಸಿದ್ದಾನೆ. ಇದರಿಂದ ಕಾಂಗ್ರೆಸ್‌ನ ಒಂದಷ್ಟು ಮತಗಳು ಚದುರುವುದರಲ್ಲಿ ಸಂದೇಹವಿಲ್ಲ.

ಇನ್ನು ಜಮಖಂಡಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸಿದ್ದು ನ್ಯಾಮಗೌಡ ಕಾಂಗ್ರೆಸ್‌ಗೇ ನಾಮ ತೀಡಲು ಶ್ರಮಿಸುತ್ತಿದ್ದಾನೆ. ಕಷ್ಟಪಟ್ಟು ಬಿಜೆಪಿ ಮೂಲದವರಿಗೆ ಕರೆಕರೆದು ಟಿಕೆಟ್ ಕೊಟ್ಟಿರುವ ಈತ ಪಕ್ಷದೊಳಗೆ ಭಿನ್ನಮತ ಹೊತ್ತಿಕೊಳ್ಳಲು ಕಾರಣನಾಗಿದ್ದಾನೆ. ಒಂದು ಮೂಲದ ಪ್ರಕಾರ ಯಡ್ಡಿ ಮನೆಗೆ ಹೋಗಿಬಂದಿರುವ ಈತ ಕಾಂಗ್ರೆಸ್ ಉಸಿರುಗಟ್ಟಿಸಲು ಸುಪಾರಿ ಪಡೆದು ಬಂದಿದ್ದಾನೆ. ಯಡ್ಡಿ ಜಮಖಂಡಿಯಲ್ಲಿರುವ ಈತನ ಶುಗರ್ಸ್ ಕಂಪನಿಗೆ 6 ಕೋಟಿ ಅನುದಾನ ಕೊಡುವ ಆಸೆಯನ್ನು ತೋರಿಸಿದ್ದಾರೆ. ಇದಕ್ಕೆ ಕಾಂಗ್ರೆಸ್ ಬಲಿಯಾಗಲಿದೆ.

ಮುಧೋಳ ಕ್ಷೇತ್ರದಲ್ಲಿ ಮಾಜಿ ಸಚಿವ ಕಾಂಗ್ರೆಸ್‌ನ ತಿಮ್ಮಾಪುರ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಯಾಕೆಂದರೆ ಈತನಿಗಿದು ಅಳಿವು ಉಳಿವಿನ ಪ್ರಶ್ನೆ. ಇಲ್ಲಿ ಮಾಜಿ ಜಿಪಂ ಅಧ್ಯಕ್ಷ ಶಿವಕುಮಾರ್ ಕಣದಲ್ಲಿದ್ದಾರೆ. ಇವರ ಮುಂದೆ ಉಸ್ತುವಾರಿ ಸಚಿವ ಕಾರಜೋಳ ಕಂಗೆಟ್ಟಿದ್ದಾನೆ.


ಚರಂತಿಮಠ

ಬೀಳಗಿ ಕ್ಷೇತ್ರದಲ್ಲಿ ಮುರುಗೇಶ ನಿರಾಣಿ ನಿದ್ದೆಗೆಡುವಂಥ ಪರಿಸ್ಥಿತಿಯಿದೆ. ಜೆಡಿಎಸ್‌ನ ಬಸವಪ್ರಭು ಅವಿರತವಾಗಿ ಪಕ್ಷವನ್ನು ಗೆಲ್ಲಿಸಲು ಓಡಾಡುತ್ತಿದ್ದಾರೆ. ಕಾಂಗ್ರೆಸ್‌ನ ಸಾರಥ್ಯವಹಿಸಿರುವ ಸರನಾಯಕ ಕೂಡಾ ತನ್ನ ಪಕ್ಷಕ್ಕೆ ಲೀಡ್ ತಂದುಕೊಡಲು ಟೊಂಕಕಟ್ಟಿ ನಿಂತಿದ್ದಾರೆ. ಸೋಲು-ಗೆಲುವೆಂಬುದು ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಜೆಡಿಎಸ್ ನಡುವೆಯೇ ಹೊಯ್ದಾಡುತ್ತಿದೆ.

ಜಿ.ಪಂ.ನ ಒಟ್ಟು 32 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಬಿಜೆಪಿ ನಡುವೆ ಹಣಾಹಣಿಯಿದೆ. ಜೆಡಿಎಸ್ 22 ಕ್ಷೇತ್ರಗಳಲ್ಲಿ ಕಣಕ್ಕಿಳಿದಿದೆ. ಆದರೆ ಕಾಂಗ್ರೆಸ್-ಬಿಜೆಪಿ ಸಮಬಲದಲ್ಲಿದ್ದು ಕಾಂಗ್ರೆಸ್‌ನಲ್ಲಿ ನಾಯಕರಿಲ್ಲದ ಕಾರಣ ಬಿಜೆಪಿ ಬಿಡಿದಾಟಗಳ ನಡುವೆಯೂ ದಡ ಸೇರಿದರೆ ಆಶ್ಚರ್ಯವಿಲ್ಲ.

• ಮೋಹನ್‌ರಾಜ್



ಮಂಗಳೂರು: ಮಗು ಬಲಿ

• ನಹುಶ

ವಾಮಾಚಾರಿಗಳಿಂದಲಾ? ಲ್ಯಾಂಡ್ ಮಾಫಿಯಾದಿಂದಲಾ?

ಇದೊಂದು ಹೇಯ-ಬರ್ಬರ-ಅಮಾನುಷ ಪಾತಕ!

ವಿಪರ್ಯಾಸ ನೋಡಿ. ಜಾಣರ ಜಿಲ್ಲೆ ಎಂಬ ಹೆಗ್ಗಳಿಕೆಯ ದಕ್ಷಿಣ ಕನ್ನಡದ ಜಿಲ್ಲಾ ಕೇಂದ್ರ-ಹೈಟೆಕ್‌ನಗರ ಮಂಗಳೂರಿನ ನಟ್ಟ ನಡುವೆ ಅಮಾಯಕ ಹೆಣ್ಣು ಮಗುವೊಂದನ್ನು ಕೊಂದು ಎಸೆಯಲಾಗಿದೆ. ಇದು ವಾಮಾಚಾರಕ್ಕೆ ಮಾಡಿದ ಹತ್ಯೆಯೆಂದು ಪೊಲೀಸರು ಪಿಸುಗುಡುತ್ತಿದ್ದಾರೆ. ಮಂಗಳೂರಲ್ಲಿ ಮತ್ತೊಂದು ಅಭಿಪ್ರಾಯವೂ ಇದೆ. ಕೋಟ್ಯಂತರ ರೂಪಾಯಿ ಭೂಮಿಗಾಗಿ ಲ್ಯಾಂಡ್ ಮಾಫಿಯಾ ಯಾರದೋ ಮಗುವನ್ನು ಬಲಿ ಕೊಟ್ಟದೆ ಎಂಬುದು ಟಾಕ್ ಆಫ್ ದಿ ಟೌನ್!! ಏನೇ ಇರಲಿ, ಮನುಷ್ಯ ಪ್ರಪಂಚದಲ್ಲಿ ಆಗಲೇಬಾರದಂಥ ಪೈಶಾಚಿಕ ಕ್ರೌರ್ಯ ನರರಾಕ್ಷಸರು ಮಾಡಿ ಮುಗಿಸಿದ್ದಾರೆ!!



ಚಂದ್ರಕಲಾ ಮಾಧವ ಕಮಲಾಕ್ಷ

ಈ ಮಗು ಬಲಿ ಬಳಿಕ ಕರಾವಳಿ ಉದ್ದಗಲಕ್ಕೆ ಮಾಟ-ಮಂತ್ರದ್ದೇ ಚರ್ಚೆ ನಡೆಯುತ್ತಿದೆ. ವಾಮಾಚಾರದ ರೋಚಕತೆ ಅದೆಷ್ಟು ಜೋರಾಗಿ ನಡೆದಿದೆಯೆಂದರೆ, ಮಗು ಬಲಿಯಲ್ಲಿ ಲ್ಯಾಂಡ್ ಮಾಫಿಯಾದ ಸಂಚಿದ್ದರೆ ಅದು ಬಹಿರಂಗವಾಗದಷ್ಟು ಬಿರುಸಾಗಿದೆ. ಇದಕ್ಕೆ ಕಾರಣ ಎರಡು.

ಒಂದು, ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಗಳಲ್ಲಿ ಇವತ್ತಿಗೂ ಜೀವಂತವಾಗಿರುವ ಅಮಾನುಷ ಮೂಢನಂಬಿಕೆ ಸಂಪ್ರದಾಯ ಮತ್ತು ಮಂತ್ರವಾದಿಗಳ ಹಾವಳಿ. ಇನ್ನೊಂದು ರಾಜ್ಯದ ಸಾಕ್ಷಾತ್ ಮುಖ್ಯಮಂತ್ರಿ ಯಡ್ಡಿ ಮಹಾತ್ಮ ತನ್ನ ಅಧಿಕಾರ-ಅಂತಸ್ತಿಗಾಗಿ ವಾಮಾಚಾರ-ಹೋಮ-ಹವನದಲ್ಲಿ ಬಹಿರಂಗವಾಗೇ ತೊಡಗಿಕೊಂಡಿರುವುದು. ಈ ಹಿನ್ನೆಲೆಯಲ್ಲಿ 'ಮಗು ಬಲಿ' ಕರಾವಳಿಯಲ್ಲಿ ಭೀಭತ್ಸ ವಾಮಾಚಾರದ ಕತೆಗಳನ್ನು ದಿನಕ್ಕೊಂದರಂತೆ ಹುಟ್ಟುಹಾಕುತ್ತಿದೆ....



ದಕ್ಷಿಣ ಕನ್ನಡದ ಜಾಗತಿಕ ಗುಣಮಟ್ಟದ ಆರೋಗ್ಯ ಸೇವೆ, ನಾಲ್ಕು ಸ್ವಾಯತ್ತ ವಿಶ್ವವಿದ್ಯಾಲಯಗಳು, ಶಿಕ್ಷಣ ಕ್ರಾಂತಿ, ಬ್ಯಾಂಕ್‌ಗಳ ತವರು ಮತ್ತು ಪ್ರಜ್ಞಾವಂತರ ಬೀಡೆಂಬ ಪ್ರಸಿದ್ಧಿ ಪುರಾಣವೇನೇ ಇರಲಿ. ಇದೊಂದು ಅಪ್ಪಟ ಅನಾಹುತಕಾರಿ ಮೂಢನಂಬಿಕೆಗಳ ನೆಲ. ಮೆಟ್ಟಿಗೊಬ್ಬ ಮಂತ್ರವಾದಿ-ತಂತ್ರವಾದಿ-ವಾಮಾಚಾರಿ ದಕ್ಷಿಣ ಕರಾವಳಿಯಲ್ಲಿದ್ದಾನೆ. ಭೂತಾರಾಧನೆ, ದೈವ ನೇಮ-ನಿಷ್ಠೆ, ಮಡೆಸ್ನಾನ, ಶಿಶುಗಳನ್ನು ನಡುರಾತ್ರಿ ನದಿ ನೀರಲ್ಲಿ ಮುಳುಗಿಸೇಳಿಸುವುದು, ನಾಗಮಂಡಲ, ಕೋಲ, ಭೂತ್, ಕಲದಿ ಅದಲು (ಎಂಜಲು ತಿನ್ನಿಸುವ ಪದ್ಧತಿ), ಅಸ್ಪೃಶ್ಯತೆ-ಅಮಾನವೀಯತೆಯ ಮೂಢನಂಬಿಕೆಯ ಸಂಪ್ರದಾಯ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಯ ಉದ್ದಗಲಕ್ಕಿದೆ. ಗೊಡ್ಡು ಆಚರಣೆ ಮಾಡುವವರಲ್ಲಿ, ವಾಮಾಚಾರಿಗಳ ಬಳಿ ಹೋಗುವವರಲ್ಲಿ 'ಬುದ್ಧಿವಂತ'ರೇ ಹೆಚ್ಚು. ಕಲಿತವರು-ಕುಲೀನರೇ ಈ ಅನಿಷ್ಟವನ್ನು ಅನೂಚಾನವಾಗಿ ಪಾಲಿಸುತ್ತ ಬರುತ್ತಿದ್ದಾರೆ.

ಆಸ್ತಿ ಅಂತಸ್ತು, ಚಿನ್ನಾಭರಣ, ದ್ವೇಷ, ಕಲಹ, ಶತ್ರು ಸಂಹಾರಕ್ಕಾಗಿ ಕ್ಷುದ್ರ ದೇವತೆಗಳ ಸಂಪ್ರೀತಗೊಳಿಸುವುದೇ ವಾಮಾಚಾರ ಅಥವಾ ಮಾಟ-ಮಂತ್ರ. ಇಲ್ಲಿ ದೈವ-ಭೂತಗಳ ಕೆಲಸವೇ ಜಾಸ್ತಿ. ಕೇರಳದ ಮಾಂತ್ರಿಕರು ಇದರಲ್ಲಿ ಸಿದ್ಧಹಸ್ತರು. ಕೇರಳದ ಗಡಿಯಲ್ಲಿರುವ ದಕ್ಷಿಣ ಕನ್ನಡದಲ್ಲೂ ಸಹಜವಾಗಿ ವಾಮಾಚಾರದ ಪ್ರಭಾವ ವ್ಯಾಪಿಸಿದೆ. 'ಮದ್ದು' ಹಾಕುವವರು-ತೆಗೆವವರು ಕರಾವಳಿಯಲ್ಲಿದ್ದಾರೆ. 'ಮದ್ದು' ಎಂದರೆ ಮಾಟ-ವಾಮಾಚಾರ! ಕರಾವಳಿಯ ಜನತೆಯನ್ನು ಕಂಗೆಡಿಸಿದ್ದ ದರೋಡೆಕೋರ-ಕೊಲೆಗಡುಕ-ಅತ್ಯಾಚಾರಿ ರಿಪ್ಪರ್ ಚಂದ್ರನ್‌ನ ಹಿಡಿಯಲು ವಾಮಾಚಾರ ಮಾಡಲಾಗಿತ್ತೆಂದು ಮೂರು ದಶಕದ ಹಿಂದೆ ಗುಲ್ಲೆದ್ದಿತ್ತು. ಹಾಗೆಯೇ ಬರೋಬ್ಬರಿ 12 ವರ್ಷದ ಹಿಂದೆ ದಕ್ಷಿಣ ಕನ್ನಡ ಪಕ್ಕದ ಕಾಸರಗೋಡು-ಪೆರ್ಲದ ದೇವಲೋಕ ದಂಪತಿ ಹತ್ಯೆಯಲ್ಲಿ ವಾಮಾಚಾರ ಭಯಾನಕ ಸುದ್ದಿ ಮಾಡಿತ್ತು. ನಿಧಿ ಆಸೆಯಿಂದ ಮಂತ್ರವಾದಿ ಸಾಗರದ ಇಮಾಮ್ ಹುಸೇನ್‌ರ ಮುಂದೆ ಹೋಗಿದ್ದ ಕೃಷ್ಣಾ ಭಟ್-ಶ್ರೀಮತಿ ಭಟ್ ದಂಪತಿಗಳನ್ನು ಮಂತ್ರವಾದಿಯೇ ಮುಗಿಸಿ ಅವರ ಚಿನ್ನಾಭರಣ ದೋಚಿ ಪರಾರಿಯಾಗಿದ್ದ. ಇದು ಸಿಬಿಐ ತನಿಖೆಗೊಳಪಡಿಸಿದರೂ ಆರೋಪಿ ಮಾತ್ರ ಸಿಗಲೇ ಇಲ್ಲ. ಇದಕ್ಕೆ ವಾಮಾಚಾರದ 'ಪ್ರಭಾವ' ಥಳುಕು ಇವತ್ತಿಗೂ ಹಾಕಿಕೊಂಡಿದೆ. ಇಂಥ ಐಲಾಟದ ಕಥೆಗಳು ಕರಾವಳಿಯಲ್ಲಿ ಕಂಡಾಪಟ್ಟೆ ಇದೆ.

ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಲ್ಲಿ ಮತ್ತು ದೇಶದ ಕೆಲವೆಡೆ ಇಷ್ಟಾರ್ಥ ಸಿದ್ಧಿಗೆ ನರಬಲಿ ನಡೆದದ್ದು ಇದೆ. ಈ ವಾಮಾಚಾರ ಒಡಿಶಾದಲ್ಲಿ ಜಾಸ್ತಿ. ಸಿಎಂ ಯಡ್ಡಿ ಕುರ್ಚಿಗಾಗಿ ಇಂಥ ಬಲಿ-ವಾಮಾಚಾರ ಮಾಡಿಸುತ್ತಿರುವ ಸುದ್ದಿಗಳು ಬರುತ್ತಲೇ ಇದೆ. ಇಂಥದೊಂದು ಮಾಟ-ಮಂತ್ರದ ಮಗು ಬಲಿ ಮಂಗಳೂರಲ್ಲಿ ನಡೆದಿದೆಯೆಂಬುದು ಈಗ ಇದೀ ರಾಜ್ಯವನ್ನೇ ಬೆಚ್ಚಿ ಬೀಳಿಸಿದೆ. ಕಂಗಾಲಾಗಿರುವ ಮನಸ್ಸುಗಳ ಮಧ್ಯೆ ಮೂಢನಂಬಿಕೆಗಳ ರೋಚಕ ಚರ್ಚೆ ನಡೆಯುತ್ತಿದೆ....


ಪ್ರಿಯಾಂಕ ಬಲಿ

ಮಂಗಳೂರಿನ ಮಧ್ಯಭಾಗದಲ್ಲಿರುವ ಕದ್ರಿ ಯೆಯ್ಯಾಡಿಯ ಶರಬತ್‌ಕಟ್ಟೆ ಎಂಬಲ್ಲಿ ಬಿಹಾರದ ಮದುಬನಿ ಮೂಲದ ಫಿರಾನ್ ಕುಮಾರ್‌ನ ಕುಟುಂಬ ಕಳೆದ ಎರಡು ತಿಂಗಳಿಂದ ವಾಸವಾಗಿತ್ತು. ನಗರದ ಗಿರಿಯಾಸ್ ಎಲೆಕ್ಟ್ರಾನಿಕ್ಸ್ ಮಳಿಗೆಯಲ್ಲಿ ಸೆಕ್ಯುರಿಟಿ ಆಗಿರುವ ಫಿರಾನ್ ಝಾನ ಹೆಂಡತಿ ಅಂಜಲಿದೇವಿ. ಮೂರು ಮಕ್ಕಳ ಸಂಸಾರವದು. ಎರಡನೇ ಮಗಳೇ ಮೂರೂವರೆ ವರ್ಷದ ಪ್ರಿಯಾಂಕ. ಹತ್ತಿರದ ಪಾಲಿಟೆಕ್ನಿಕ್ ಕಾಲೇಜ್ ಬಳಿಯ ಅಂಗನವಾಡಿಗೆ ಹೋಗಿಬರುತ್ತಿದ್ದಳು.

ಭಯಾನಕ ಬಲಿ

ಏನೂ ಅರಿಯದ ಅಸಹಾಯಕ ಮಗು ಪ್ರಿಯಾಂಕಾಳ ಕೊಂದಿದ್ದು ಯಾರು? ಕಮಲಾಕ್ಷ ಪುರುಷನೋ? ಆತ 'ಇಟ್ಟುಕೊಂಡಿರುವ' ಚಂದ್ರಕಲಾಳೋ?

ಲ್ಯಾಂಡ್ ಲಫಡಾದಲ್ಲಿ ಬಿದ್ದು ಒದ್ದಾಡುತ್ತಿರುವ ಸಶಕ್ತ ಮುದುಕ ಕಮಲಾಕ್ಷ ಸುತ್ತಲಿನವರ ವಿರೋಧ ಕಟ್ಟಿಕೊಂಡಿದ್ದ. ಅಷ್ಟೇ ಅಲ್ಲ, ಲ್ಯಾಂಡ್ ಮಾಫಿಯಾದವರ ಹಿಡಿತಕ್ಕೆ ಸಿಲುಕಿ ತತ್ತರಿಸಿಹೋಗಿದ್ದ. ಆತನ ಜಮೀನು ಅತಿಕ್ರಮಿಸಿಕೊಂಡವರು ತಿರುಗಿಬಿದ್ದಿದ್ದರು. ಹೀಗಾಗಿ ಈ ಎಲ್ಲ 'ಬಾಧೆ' ನಿವಾರಣೆಗೆ ಪಕ್ಕದಲ್ಲಿ ಬಾಡಿಗೆಗಿದ್ದ ದೂರದ ಬಿಹಾರಿ ಕುಟುಂಬದ ಪುಟ್ಟ ಮಗು ಬಲಿ ಕೊಡಲು ಆತ ಹಲವು ದಿನದಿಂದ ಸ್ಕೆಚ್ ಹಾಕಿಕೊಂಡಿದ್ದ. ಎಂದೂ ನೆರೆಹೊರೆಯವರೊಂದಿಗೆ ಮಾತಾಡದ ಮಾಯಾವಿ ಚಂದ್ರಕಲಾ ಮೇಲಿಂದ ಮೇಲೆ ಪ್ರಿಯಾಂಕಳ ಮುದ್ದಿಸುವುದು, ತಿಂದಿ ಕೊಡುವುದು ಮಾಡಿ ಸಲಿಗೆ ಶುರು ಹಚ್ಚಿಕೊಂಡಿದ್ದಳು.



ಅಂದು ಗುರುವಾರ 'ಸಂಕ್ರಮಣ ಪರ್ಬ'ದಂದು ಮಾಟ-ಮಂತ್ರದ ಭೀಭತ್ಸ ಪೂಜೆ ಕಮಲಾಕ್ಷನ ಭೂತ ಅಡ್ಡೆಯಲ್ಲಿ ನಡೆದಿತ್ತು. 2.30 ಸುಮಾರಿಗೆ ಪ್ರಿಯಾಂಕಳ ಕರೆದೊಯ್ದಿದ್ದಳು ಚಂದ್ರಕಲಾ. ಮಗುವಿಗೆ ನಿದ್ದೆ ಗುಳಿಗೆ ಕೊಟ್ಟು ಮರದ ರೀಪಿಂದ ತಯಾರಿಸಿದ್ದ ಕೋಳಿ ಗೂಡಲ್ಲಿ ಬಚ್ಚಿಟ್ಟಿದ್ದರು. ರಾತ್ರಿ ಪಾಪಿ ಪೊಲೀಸರು ಬಂದಾಗ ಪ್ರಿಯಾಂಕ ಅಲ್ಲೇ ಪ್ರಜ್ಞೆಯಿಲ್ಲದೆ ಬಿದ್ದುಕೊಂಡಿದ್ದಳು. ಸರಿರಾತ್ರಿ ಮಗುವಿನ ಬಲಿಗೆ ಸ್ಕೆಚ್ ಹಾಕಲಾಗಿತ್ತು.

ಮೊದಲು ತಲೆಗೆ ಕುಂಕುಮ-ಮೈಗೆ ವಿಭೂತಿ ಹಚ್ಚಿದ್ದಾರೆ ಕಮಲಾಕ್ಷ ಮತ್ತು ಚಂದ್ರಕಲಾ. ನಂತರ ಮಗುವಿನ ಕತ್ತು ಹಿಸುಕಿ ಕೊಲ್ಲುವಂತೆ ಕಮಲಾಕ್ಷ ಗೆಳತಿಗೆ ಆಜ್ಞೆ ಮಾಡಿದ್ದಾನೆ. ಚಂದ್ರಕಲಾ ಪ್ರಯತ್ನಿಸಿದ್ದಾಳೆ. ಮಗು ಕೂಗಿ ಕೊಸರಾಡಿದಾಗ ಕೈಬಿಟ್ಟಿದ್ದಾಳೆ. ಕ್ರೂರಿಯೂ-ಕೋಪಿಷ್ಠನೂ ಆದ ರಕ್ಕಸ ಕಮಲಾಕ್ಷ ಸಿಟ್ಟಿನಿಂದ ಚಂದ್ರಕಲಾಳ ಕೆನ್ನೆಗೆರಡು ಬಾರಿಸಿ ತಾನೇ ಕುತ್ತಿಗೆ ಒತ್ತಿ 'ಬಲಿ' ಕೊಟ್ಟು ವಿಕಾರವಾದ ಖುಷಿಪಟ್ಟಿದ್ದಾನೆ.

ಆದರೆ ಆತ ತಾನು ಕೊಂದಿಲ್ಲ, ಪ್ರಿಯಾಂಕ ಸತ್ತೇ ಇಲ್ಲ, ಹಾಗೊಮ್ಮೆ ಸತ್ತಿದ್ದರೆ ಚಂದ್ರಕಲಾಳೇ ಯಾರೊಂದಿಗೋ ಸೇರಿ ಹತ್ಯೆ ಮಾಡಿರಬೇಕೆಂದು ಹೇಳುತ್ತಾನೆ. ಚಂದ್ರಕಲಾ ಕಮಲಾಕ್ಷನೇ ಕೊಂದಿದ್ದು ಎನ್ನುತ್ತಾಳೆ. ವಾಮಾಚಾರದಲ್ಲಿ 'ಬಲಿ' ರಕ್ತ ಹರಿಸಿಕೊಡುವುದು ವಾಡಿಕೆ. ಹಾಗೇಕೆ ಮಾಡಿಲ್ಲವೆಂದರೆ, ಆಕೆ "ಧನುರ್ಮಾಸದಲ್ಲಿ ರಕ್ತ ಹರಿಸದೇ ಬಲಿ ಕೊಡಬೇಕೆಂದು ಕಮಲಾಕ್ಷ ಹೇಳುತ್ತಾನೆ" ಎನ್ನುತ್ತಾಳೆ. ಧನುರ್ಮಾಸದಲ್ಲಿ ದೆವ್ವಗಳಿಗೆ ಬಲಿ ಕೊಡುವಾಗ ರಕ್ತ ನೆಲಕ್ಕೆ ಬೀಳಬಾರದೆಂಬ ನಿಯಮವಿದೆ ಅನ್ನುತ್ತಾನೆ ಪಾಪಿ ಪಿಂಡ ಪುರುಷ!

ಮಗುವಿನ ಜೀವ ಹೋದನಂತರ ಆಕೆಯ ಭುಜದ ಮೇಲೆ ಕರ್ಪೂರ ಉರಿಸಿ ಮನೆ ಹಿಂದಿನ ತೋಟದಲ್ಲಿ ಶವವನ್ನು ಈ ವಾಮಾಚಾರಿ ಜೋಡಿ ಎಸೆದಿದೆ. ಭಯಾನಕ-ಅಮಾನುಷ ಬಲಿ ವಿಧಾವಿಧಾನ ಈ ರಕ್ತಪಿಪಾಸುಗಳು ನಿರ್ವಿಕಾರವಾಗಿ ಮಾಡಿ ಮುಗಿಸಿದ್ದಾರೆ. ಸ್ವಯಂ ಪ್ರಚೋದನೆಯಿಂದಲೋ-ಲ್ಯಾಂಡ್ ಮಾಫಿಯಾದ ಕುಮ್ಮಕ್ಕಿನಿಂದಲೋ-ಒಟ್ಟಿನಲ್ಲಿ ಮುದ್ದು-ಮುಗ್ಧ ಮಗುವಿನ ಜೀವ ಸೊಸೆದಿದ್ದಾನೆ ಕಿರಾತಕ ಕಮಲಾಕ್ಷ; ಪೊಲೀಸರು ಸಹಕರಿಸಿದ್ದಾರೆ!



ಮನೆಹಾಳು ಪೊಲೀಸರು!

ಮಗುವನ್ನು ಕಳೆದುಕೊಂಡ ಹೆತ್ತೊಡಲ ಸಂಕಟವಿನ್ನೂ ನಿಂತಿಲ್ಲ; ಫಿರಾನ್ ಝಾ ದಂಪತಿಗಳ ನೋವು ಶಬ್ದಗಳಿಗೆ ನಿಲುಕದ್ದು. ಇತ್ತ ವಾಮಾಚಾರ ಪ್ರಯೋಗಕ್ಕೆ ಪ್ರಿಯಾಂಕಳ ಬಲಿ ಪಡೆದು ಕಂಬಿ ಎಣಿಸುತ್ತಿರುವ ನಿರ್ದಯಿ ಹಂತಕರನ್ನು ಬಚಾಯಿಸಲು ಲ್ಯಾಂಡ್ ಮಾಫಿಯಾ ರಹಸ್ಯ ಕಾರ್ಯಾಚರಣೆ ನಡೆಸುತ್ತಿದೆ. ಈ ಕಳ್ಳ ಹಣವಂತರಿಗೆ ಮಂಗಳೂರಿನ ಪೊಲೀಸರ ಸಖ್ಯವಿದೆ. ಮಂಗಳೂರು ಪೊಲೀಸರು ಭಜರಂಗಿಗಳ ಅಥವಾ ಲ್ಯಾಂಡ್ ಮಾಫಿಯಾದ ದೋಸ್ತರಾಗಿರುವುದು ಮಾಮೂಲು ಸಂಗತಿ ಎಂಬಂತಾಗಿಬಿಟ್ಟದೆ.

ಪ್ರಿಯಾಂಕ ಕಾಣೆಯಾಗಿದ್ದಾಗಲೇ ಆಕೆಯ ಹೆತ್ತವರು, ಶರಬತ್‌ಕಟ್ಟೆ ಪ್ರದೇಶದವರು ಚಂದ್ರಕಲಾ ಮತ್ತಾಕೆಯ ಮುದಿ ಪ್ರಿಯಕರ ಕಮಲಾಕ್ಷ ಪುರುಷನೆಂಬ ವಾಮಾಚಾರ ಚಟದವರ ಮೇಲೆ ಅನುಮಾನ ವ್ಯಕ್ತಪಡಿಸಿದ್ದರು. ಸಂಜೆ ಹೊತ್ತಿಗೆ ಎಸ್‌ಐ ನಿರಂಜನ ಅರಸನ ಪೊಲೀಸ್ ಪಡೆ ಪುರುಷನ ದೈವ ಸಾನಿಧ್ಯಕ್ಕೂ ಬಂದಿತ್ತು. ಪೊಲೀಸರ ಕಂಡವನೇ 'ಹಳೆ ಸ್ನೇಹಿತರ' ಬರಮಾಡಿಕೊಳ್ಳುವಂತೆ ಪುರುಷ ವರ್ತಿಸಿದ್ದ. "........ಹೊ ಏನು ಬಂದಿರಿ.....? ಬಂದಿದ್ದು ಒಳ್ಳೆಯದೇ ಆಯ್ತು.... ದೇವರ ಪೂಜೆ ವೇಳೆ ಬಂದಿರಿ... ಪ್ರಸಾದ ಸ್ವೀಕರಿಸಿ...." ಎಂದು ಹೇಳಿದ್ದ. ಆತ ಕೊಟ್ಟ ಪ್ರಸಾದ ಸ್ವೀಕರಿಸಿದ ಪೊಲೀಸರಿಗೆ ಹುಡುಗಿ ಹುಡುಕುವ ಆಸಕ್ತಿಯೇ ಇರಲಿಲ್ಲ. "ನಾಳೆ ಹುಡುಕೋಣ...." ಎಂದು ಪೊಲೀಸರು ಅಲ್ಲಿಂದ ಕಾಲ್ಕಿತ್ತ ಕ್ಷಣದಿಂದಲೇ ಆರೋಪಿಯನ್ನು ರಕ್ಷಿಸುವ ಕಳ್ಳ-ಪೊಲೀಸ್ ಆಟ ಆರಂಭವಾದಂತಾಗಿತ್ತು. ಕಮಲಾಕ್ಷ ಪೊಲೀಸರಿಗೆ ಆಪ್ತನೆಂಬುದು ಬಹಿರಂಗ ರಹಸ್ಯ!

ಪೊಲೀಸರು ಕಮಲಾಕ್ಷನ ಮನೆಗೆ ಬಂದಾಗ ಪ್ರಿಯಾಂಕ ಬದುಕಿರುವ ಸಾಧ್ಯತೆಯಿತ್ತು. ಸರಿಯಾಗಿ ಕಮಲಾಕ್ಷ ಅಥವಾ ಚಂದ್ರಕಲಾರ ಬಾಯಿ ಆಗ ಬಿಡಿಸಿದ್ದರೆ ಪ್ರಿಯಾಂಕಳ ಜೀವವಿರುತ್ತಿತ್ತು. ಆಕೆಯನ್ನು ಎಚ್ಚರ ತಪ್ಪಿಸಿ ಬಚ್ಚಿಟ್ಟು ರಾತ್ರಿ ವೇಳೆ ವಾಮಾಚಾರ ಪ್ರಯೋಗಕ್ಕೆ ಬಲಿಪಶು ಮಾಡಲಾಗಿದೆ. ಮೊದಲೇ ಹಲವು ಆರೋಪ-ದೂರುಗಳಿರುವ ಆಸಾಮಿ ಕಮಲಾಕ್ಷ. ಆತನ ಜಾತಕ ಗೊತ್ತಿದ್ದೂ ಪೊಲೀಸರು ಹಾಗೇ ಸುಮ್ಮನಿರುವುದು ಅನೇಕ ಅನುಮಾನಗಳನ್ನು ಮೂಡಿಸಿದೆ. ಕಮಲಾಕ್ಷ-ಲ್ಯಾಂಡ್ ಮಾಫಿಯಾ ಮತ್ತು ಪೊಲೀಸರ ದುಷ್ಟಕೂಟ ನಿಷ್ಪಾಪಿ ಮಗುವನ್ನು ಬಲಿ ಪಡೆದಿದೆ ಎಂಬುದು ಮಂಗಳೂರಲ್ಲಿ ಎಲ್ಲರ ಬಾಯಲ್ಲಿದೆ.

ಇಲ್ಲಿ ಪೊಲೀಸರ ಮೇಲೆ ಮತ್ತೊಮ್ಮೆ ಸಂಶಯಗಳು ಬರುತ್ತದೆ. ಪ್ರಿಯಾಂಕಳ ತಾಯ್ತಂದೆ ಬಾಡಿಗೆಗೆ ಉಳಿದುಕೊಂಡಿದ್ದು ಕಮಲಾಕ್ಷ ಪುರುಷನ ಸಹೋದರ ಮಾಧವನ ಮನೆಯಲ್ಲಿ. ಈತನೂ 70 ದಾಟಿದ ಮುದುಕ. ಕಿವಿ ಕೇಳಿಸದು, ಕಣ್ಣು ಕತ್ತಲಲ್ಲಿ ಕಾಣಿಸದು. ಈ ಅಣ್ಣ-ತಮ್ಮರಿಗೆ ಕಳೆದ 35 ವರ್ಷದಿಂದ ಬದ್ಧ ವೈರತ್ವವಿತ್ತು. ಲ್ಯಾಂಡ್ ಮಾಫಿಯಾ ಈಗೊಂದು ವರ್ಷದ ಹಿಂದೆ ಅವರ ಭೂಮಿ ಲಪಟಾಯಿಸಲೆಂದೇ ಅಣ್ಣ-ತಮ್ಮಂದಿರಿಗೆ ರಾಜಿ ಮಾಡಿಸಿದ್ದರು. ಆದರೆ ಮಾಧವನಿಗೆ ಕಮಲಾಕ್ಷನ ಒಡನಾಟವಿರಲಿಲ್ಲ. ಆತನ ಮನೆಗೂ ಹೋಗುತ್ತಿರಲಿಲ್ಲ, ಹಾಗಂತ ಊರವರಷ್ಟೆ ಅಲ್ಲ, ಝಾ ದಂಪತಿಗಳೂ ಹೇಳುತ್ತಾರೆ. ಸ್ಥಳೀಯರಿಗೂ ಮಾಧವನ ಬಗ್ಗೆ ಸದಭಿಪ್ರಾಯವಿದೆ. ಆದರೆ ಪೊಲೀಸರು ಆತನನ್ನೂ ಕೇಸಲ್ಲಿ ಫಿಕ್ಸ್ ಮಾಡಿದ್ದಾರೆ. ನೈಜ ಆರೋಪಿಗಳ ರಕ್ಷಿಸುವ ನೀಚತನವಿದು.

ಇದು ಲ್ಯಾಂಡ್ ಮಾಫಿಯಾ ಕರಾಮತ್ತು. ಅಮಾಯಕ ಮಾಧವನನ್ನೂ ಜೈಲಲ್ಲಿ ಕೊಳೆಯುವಂತೆ ಮಾಡಿದರೆ ಭೂಸ್ವಾಹಾ ಸಲೀಸಾಗುತ್ತದಲ್ಲವೇ? ಕೋಟ್ಯಂತರ ರೂಪಾಯಿ ವಾರಸುದಾರರಾದ ಅಣ್ಣ-ತಮ್ಮನನ್ನು ಒಂದೇ ಏಟಿಗೆ ಕಂಬಿ ಹಿಂದೆ ದೂಡಿದರೆ 'ತೊಂದರೆ' ತಪ್ಪುತ್ತದೆಂಬ ಧೋರಣೆ ಭೂ ಮಾಫಿಯಾದ್ದು. ಇದು ಸರಳ ಲೆಕ್ಕಾಚಾರ. ಇದೆಲ್ಲ ನೋಡಿದರೆ ಪ್ರಿಯಾಂಕಳ ಸಾವಿಗೆ ನ್ಯಾಯ ಸಿಗುವುದು, ವಾಮಾಚಾರ ಪ್ರಕರಣ ಸಂಪೂರ್ಣ ತನಿಖೆಗೊಳಪಡುವುದು ಅನುಮಾನ ಅನ್ನಿಸುತ್ತದೆ. ಪ್ರಕರಣ ಈಗಲೇ ಹಳ್ಳ ಹಿಡಿದಿದೆ!

ಗುರುವಾರ (16.12.10)ವೂ ಶಾಲೆಗೆ ಹೋಗಿಬಂದಿದ್ದಳು.

ಮನೆಯಲ್ಲಿ ಅಣ್ಣ-ತಮ್ಮಂದಿರ ಜೊತೆ ಆಟವಾಡಿಕೊಂಡಿದ್ದ ಪ್ರಿಯಾಂಕಳನ್ನು ಕಮಲಾಕ್ಷ ಪುರುಷ ಎಂಬ ವಿಕೃತ ವಾಮಾಚಾರಿಯ ಪರಿಚಾರಿಕೆ ಕಂ ...ತಮೆ ಚಂದ್ರಕಲಾ ಪುಸಲಾಯಿಸಿ ತನ್ನ ಮಾಟ-ಮಂತ್ರದ ಅಡ್ಡೆಗೆ ...ಯ್ದಿದ್ದಾಳೆ. ಬಟ್ಟೆ ಒಗೆಯುತ್ತಿದ್ದ ಅಂಜಲಿದೇವಿ ಮಗು ಚಂದ್ರಕಲಾ ... ಹೋಗಿದ್ದನ್ನ ನೋಡಿದ್ದಾಳೆ. ಆಗ ಸಮಯ ಸುಮಾರು 2.30 ...ಯಾದರೂ ಮಗು ಬರಲಿಲ್ಲ. ಕಂಗಾಲಾದ ಹೆತ್ತ ಕರುಳು ...ಲಾಕ್ಷ-ಚಂದ್ರಕಲಾರ ಮನೆಗೆ ಹೋಗಿ ವಿಚಾರಿಸಿದೆ. ಪ್ರಿಯಾಂಕ ಆಗಲೇ ...ಗಿದ್ದಾಳೆಂಬ ಹಾರಿಕೆ ಉತ್ತರ ಕೇಳಿ ಅಂಜಲಿದೇವಿ ಹೌಹಾರಿ ಹೋಗಿದ್ದಾಳೆ. ... ಗಂಡ ಮನೆಗೆ ಬರುತ್ತಲೇ ಕದ್ರಿ ಪೊಲೀಸ್ ಠಾಣೆಯಲ್ಲಿ ದಂಪತಿಗಳು ...ಂಟು ಕೊಟ್ಟಿದ್ದಾರೆ. ರಾತ್ರಿ ಕಮಲಾಕ್ಷ ಪುರುಷನ ಮನೆಗೆ ಕಾಟಾಚಾರಕ್ಕೆ ...ಗಿದ್ದ ಎಸ್‌ಐ ನಿರಂಜನರಾಜೇ ಅರಸ್ ತಂಡ ಪುರುಷ ಕೊಟ್ಟ 'ಪೂಜೆ ...ದ' ಸ್ವೀಕರಿಸಿ ಬಂದಿದ್ದಾರೆ.



...ಳಗಾಗುತ್ತಲೇ ಶಬರತ್‌ಕಟ್ಟೆ ಜನ ಗುಂಪು-ಗುಂಪಾಗಿ ಸೇರತೊಡಗಿದ್ದಾರೆ. ...ಲೇ ಕಮಲಾಕ್ಷ ಪುರುಷನ ಬಗ್ಗೆ ಸಿಟ್ಟಲ್ಲಿರುವ ಮಂದಿ ಈತನೇ ಪ್ರಿಯಾಂಕಳನ್ನು ...ಮಾಡಿದ್ದಾನೆಂದು ಆಕ್ರೋಶಿತರಾಗಿದ್ದಾರೆ. ಸಿಟ್ಟಿಗೆದ್ದ ಜನರು ಕದ್ರಿ ಪೊಲೀಸ್ ...ಮ ಮೇಲೆ ದಾಳಿ ಮಾಡಿದ್ದಾರೆ. ಲಾಠಿ ಜಾರ್ಜ್ ನಡೆದು ದೊಡ್ಡ ...ಲೇ ಆಗಿಹೋಗಿದೆ. ಆಗ ಗಡಿಬಿಡಿಗೆ ಬಿದ್ದ ಪೊಲೀಸರು ಕಮಲಾಕ್ಷ-ಚಂದ್ರಕಲಾ ... ಕುಮಲಾಕ್ಷನ ಸೋದರ ಮಾಧವನನ್ನು ಠಾಣೆಗೆ ತಂದು ಟ್ರೀಟ್‌ಮೆಂಟ್ ...ದ್ದಾರೆ. ಆಗ ಚಂದ್ರಕಲಾ 'ಮಗು ಬಲಿ' ಕತೆ ಬಿಚ್ಚಿಟ್ಟಿದ್ದಾಳೆ. ಪ್ರಿಯಾಂಕಳನ್ನು ...ಲಾಕ್ಷ ಪುರುಷ ಕೊಂದು ದೇವರಿಗೆ ಬಲಿ ಕೊಟ್ಟಿದ್ದಾನೆಂದು ಹೇಳಿದ್ದಾಳೆ. ...ದಕ್ಕೂ ಮೊದಲೇ ಊರವರಿಗೆ ಬೆತ್ತಲಾಗಿ ಕಮಲಾಕ್ಷ ಪುರುಷನ ...-ತೋಟದಲ್ಲಿ ಹೆಣವಾಗಿ ಬಿದ್ದಿದ್ದ ಪ್ರಿಯಾಂಕ ಕಂಡಿದ್ದಾಳೆ. ಆಕೆಯ ಶವದ



...ಲಿಂಬೆ ಹೋಳು, ಹೂ-ಕುಂಕುಮ ಬಿದ್ದುಕೊಂಡಿತ್ತು. ಅಲ್ಲಿಗೆ ...ಗಾರ-ಮಾಟಗಾತಿ ಜೋಡಿಯೇ ಪ್ರಿಯಾಂಕಳ ಮುಗಿಸಿದ್ದು ಜನರಿಗೆ ... ಪ್ರಿಯಾಂಕಳ ತಾಯ್ತಂದೆಗೆ ಖಾತ್ರಿಯಾಗಿ ಹೋಯ್ತು. ಅಂದು 'ಸಂಕ್ರಾಂತಿ ...'! ವಾಮಾಚಾರಿಗಳಿಗೆ ಬಲಿ ಕೊಡಲು ಪ್ರಶಸ್ತ ದಿನ. ಮಗುವಿಗೆ ...ಮ ಬರುವ ಶರಬತ್ತು ಕುಡಿಸಿ, ಬಾಯಿಗೆ ಕದ್ರಿ ದೇವಿಯ ಪ್ರಸಾದ ...ಕದ ಚಂದ್ರಕಲಾ-ಕಮಲಾಕ್ಷ ರಾತ್ರಿ ತನಕ ಪೂಜೆ-ಮಂತ್ರ-ತಂತ್ರ ಮಾಡಿದ್ದಾರೆ. ... ಮಗುವಿನ ಕತ್ತು ಹಿಸುಕಿ ಕೊಂದು ಕಾಲಭೈರವ-ರಕ್ತೇಶ್ವರಿಗೆ ಬಲಿ ...ದ್ದಾರೆ. ಆನಂತರ ಬೆಳಗಿನ ಜಾವ ಮೂರರ ತನಕವೂ ಆ ಮಾಟದ ...ಸಲ್ಲಿ ಪೂಜೆ ಕ್ಷುದ್ರ ದೇವತೆ ಆರಾಧನೆ-ಆವಾಹನೆ ನಡೆದಿದೆ.

'ಪುರುಷ' ಪುರಾಣ

...ದ್ರಿ-ಯಯ್ಯಾಡಿ ಏರಿಯಾದಲ್ಲಿ ವಾಮಾಚಾರ-ಭೂಮಾಲೀಕತ್ವ ಫ್ಯೂಡಲ್ ...ಾರಿಕೆಯಿಂದ ಕುಖ್ಯಾತನಾಗಿರುವ ಕಮಲಾಕ್ಷ ಪುರುಷ ಸಣ್ಣ-ಸಾಮಾನ್ಯ ...ಲ್ಲ. 74 ವರ್ಷದ ಸದೃಢ ಮುದುಕ ಕಮಲಾಕ್ಷ ಮನೆ ಹತ್ತಿರ ರಕ್ತೇಶ್ವರ, ... ಕಾಲಭೈರವರಂಥ ರಕ್ತ ಬಯಸುವ ಖತರ್‌ನಾಕ್ ದೇವರ ಗುಡಿ ...ಂಡು ಉಪಾಸನೆ-ಆವಾಹನೆ ಮಾಡುತ್ತಿರುತ್ತಾನೆ. ಈತನಿಗೆ ಹೆಂಡತಿ


ಮಕ್ಕಳಿಲ್ಲ. ಆದರೆ ಕೋಟ್ಯಂತರ ರೂಪಾಯಿಗಳ ಅಡಿಕೆ ತೋಟ, ಜಮೀನು ಇದೆ. ಪ್ರತಿ ತಿಂಗಳು ಅಮಾವಾಸ್ಯೆ- ಹುಣ್ಣಿಮೆ- ಸಂಕ್ರಮಣ ದಿನದಂದು ಈತನ ವಾಮಾಚಾರದ ...ಜೋರು. ದುರಾಸೆ-ದುಷ್ಟಶಕ್ತಿ ಭಕ್ತಿಯ ಕಮಲಾಕ್ಷನ ಕಂಡರೆ ...ನವರಿಗಷ್ಟೇ ಅಲ್ಲ ಸ್ವಂತ ಸಹೋದರ ಮಾಧವ ಪುರುಷನಿಗೂ ...ರುದಿಲ್ಲ. ಅಂಥ ಅನಿಷ್ಟ ಸ್ವಭಾವ-ದುರುಳತನ ಆತನದು.


...ತ ಪಕ್ಕಾ ವಿಕೃತ ಆಸಾಮಿ. ನೈತಿಕತೆಯೂ ನಾಸ್ತಿ. ಸುಮಾರು ಹದಿನಾರು ... ಕೆಎಸ್‌ಆರ್‌ಟಿಸಿಯಲ್ಲಿ ಕಸಗುಡಿಸುವ ಚಾಕರಿ ಮಾಡಿಕೊಂಡಿದ್ದ ರೇವತಿ ...ಕೆಯನ್ನು ತನ್ನ ಮನೆಗೆ ತಂದಿಟ್ಟುಕೊಂಡಿದ್ದ. ಈಗ 24 ರ ...ದವಳಾಗಿರುವ ಚಂದ್ರಕಲಾ ಆಗ 8 ವರ್ಷದ ಬಾಲಕಿಯಾಗಿದ್ದಳು. ...ಜತೆ ಸರಸವಾಡಿದ ಕಮಲಾಕ್ಷ ಕಂಡಕಂಡಲ್ಲಿ ಚಂದ್ರಕಲಾಳನ್ನು ತನ್ನ ...ಮಗಳೆಂದು ಹೇಳುತ್ತಿದ್ದ. ಆದರೆ ಆಕೆ ದೊಡ್ಡವಳಾಗುತ್ತಲೇ ಆಕೆಯನ್ನೂ ...ಮುಕ್ಕಿದ್ದಾನೆಂದು ಆತನ ಚರಿತ್ರೆ ಬಲ್ಲವರು ಹೇಳುತ್ತಾರೆ. ಮುಸ್ಲಿಮ್ ...ನ್ನು ಮದುವೆಯಾಗಿದ್ದ ಚಂದ್ರಕಲಾ ಆತನಿಂದಲೂ ಪರಿತ್ಯಕ್ತಳಾಗಿ ಕಮಲಾಕ್ಷನ ...ರಿಕೆ ಕಂ ಪ್ರೇಯಸಿ ಧ್ವಿಪಾತ್ರವಾಡುತ್ತಿದ್ದಾಳೆ. ಸುತ್ತಲೆಲ್ಲಾ ವಾಮಾಚಾರಿ ...3 ಎಂದೇ ಚಂದ್ರಕಲಾ-ಕಮಲಾಕ್ಷ ಕುಖ್ಯಾತರಾಗಿದ್ದರು.

...ಪೊಲೀಸ್ ಕಸ್ಟಡಿಯಲ್ಲಿರುವ ಕಮಲಾಕ್ಷ ಮತ್ತು ಚಂದ್ರಕಲಾ ವಾಮಾಚಾರ- ...ಬಲಿಗೆ ಸಂಬಂಧಿಸಿದಂತೆ ಕ್ಷಣಕ್ಕೊಂದು ಹೇಳಿಕೆ ಕೊಡುತ್ತಿದ್ದಾರೆ. ಚಂದ್ರಕಲಾ ...ಕ್ಷನೇ ಕತ್ತು ಹಿಸುಕಿ ಕೊಂದಿದ್ದಾನೆಂದು ಹೇಳಿದರೆ, ಕಮಲಾಕ್ಷ "ಇಲ್ಲ... ...ಮ್ಮ, ಯಾರೂ ಕೊಂದಿಲ್ಲ... ಆಕೆ ಎದ್ದು ಬರ್ತಾಳೆ........" ಎಂದು ... [illegible] ಇಲ್ಲದವರಂತೆ ಮಾತಾಡುತ್ತಾನೆ. ... [illegible] ಮತ್ತು ಚಂದ್ರಕಲಾ ... ಇರುವುದರಿಂದ ... [illegible] ಎಂಬುದು ಪೊಲೀಸರ ವಾದ. ಆದರೆ ... [illegible]

▶▶ 12

ಕೇರಳ ದೇವಸ್ಥಾನದಲ್ಲಿ ಯಡ್ಡಿ & ಶ್ರೀಮತಿ ಶೋಭಾ




ಕರ್ನಾಟಕ ದೇಶದೊಳ್ ರಾಜ್ಯಭಾರವಂ ನಡೆಸುತ್ತಿರುವ ಸಂಘಪರಿವಾರದ ನಿಷ್ಠಾವಂತ ಕಾರ್ಯಕರ್ತೆ 'ಕುಮಾರಿ' ಶೋಭಾ ಕರಂದ್ಲಾಜೆಯು ನೆರೆಯ ಕೇರಳ ರಾಜ್ಯದೊಳ್ 'ಶ್ರೀಮತಿ' ಶೋಭಾ ಕರಂದ್ಲಾಜೆಯಾಗಿ ಅವತರಿಸಿ ಅನೇಕರಲ್ಲಿ ಯಡ್ಡಿ ಮತ್ತು ಶೋಭಾ ಬಗ್ಗೆ ಅನುಮಾನ ಬರುವಂತೆ ಮಾಡಿರುವ ಒಂದು ಘಟನೆ ನಡೆದಿದೆ.



ಮುಖ್ಯಮಂತ್ರಿ ಯಡಿಯೂರಪ್ಪನ ಸಂಪುಟದ ಆಪ್ತ ಸಚಿವೆಯಾಗಿ ತನ್ನ ಕೈಲಾದಷ್ಟು ಸ್ವಾಮಿಕಾರ್ಯ ಹಾಗೂ ಸ್ವಕಾರ್ಯಗಳೆರಡನ್ನೂ ಶ್ರದ್ಧಾ ಭಕ್ತಿಯಿಂದ ನೆರವೇರಿಸುತ್ತಿರುವ ಶೋಭಾರ ದೈವಭಕ್ತಿ ಲೋಕ ಪ್ರಸಿದ್ಧವಾಗಿರುವುದು ನಿಮಗೆಲ್ಲಾ ತಿಳಿದಿರಬಹುದು.

ಯಡಿಯೂರಪ್ಪನಿಗೆ ಕಷ್ಟ ಬಂದಾಗೆಲ್ಲಾ 'ಸಂಕಲ್ಪ ವ್ರತ' ನಡೆಸುತ್ತಾ ಆತನ ಒಳಿತಿಗಾಗಿ ಪ್ರಾರ್ಥಿಸುವ ಶೋಭಾರವರು ಈಗ್ಗೆ ಹದಿನೈದು ದಿನಗಳ ಹಿಂದೆ ಕೇರಳದಲ್ಲಿ ಒಂದು ಯಡವಟ್ಟು ಮಾಡಿಕೊಂಡಿದ್ದಾರೆ. ನಂತರ ಆ ಯಡವಟ್ಟನ್ನು ಅರ್ಜೆಂಟಾಗಿ ಸರಿಪಡಿಸಲು ಹೋಗಿ ಇನ್ನೊಂದು ಹೊಸ ಯಡವಟ್ಟು ಮಾಡಿಕೊಂಡಿದ್ದಾರೆ. ಕೊನೆಗೆ ಇದೆಲ್ಲದರಿಂದ ಕಕ್ಕಾಬಿಕ್ಕಿಯಾಗಿ ಈಗ ಯಡ್ಡಿ ಒಂದು ದಿಕ್ಕಿನಲ್ಲೂ ಶೋಭಾ ಮತ್ತೊಂದು ಮೂಲೆಯಲ್ಲೂ ಜಿಲ್ಲಾ ಪಂಚಾಯತಿಗಾಗಿ ಓಟು ಬೇಡುತ್ತಾ ಬೀದಿ ಸುತ್ತುತ್ತಿದ್ದಾರೆ.



ಕುಮಾರಿ ಹೋಗಿ ಶ್ರೀಮತಿ ಬಂತು... ಡುಂ...ಡುಂ...

ಕುಮಾರಿ ಶೋಭಾ ಕರಂದ್ಲಾಜೆಯವರು ಕರ್ನಾಟಕದಲ್ಲಿ ಅನೇಕ ಸಾರಿ ಶ್ರೀಮತಿ ಶೋಭಾ ಅನ್ನಿಸಿಕೊಂಡಿರುವುದುಂಟು. ಅವೆಲ್ಲ ಸುದ್ದಿ ಮಾಧ್ಯಮಗಳಲ್ಲಿ ಹಾಗೂ ಸಭೆ ಸಮಾರಂಭಗಳಲ್ಲಿ ಶೋಭಾರವರನ್ನು ಉದ್ದೇಶಿಸಿ ಮಾತನಾಡುವಾಗ ಗೊಂದಲ ಗಡಿಬಿಡಿಯಿಂದಾಗುವ ತಪ್ಪುಗಳು....

ಆದರೆ ಸ್ವತಃ ಶೋಭಾರವರೇ ತಮ್ಮನ್ನು 'ಶ್ರೀಮತಿ' ಎಂದು ಬರೆಸಿಕೊಂಡರೆ, ಯಡಿಯೂರಪ್ಪನ ಪರವಾಗಿ ದೇವಸ್ಥಾನವೊಂದಕ್ಕೆ ಅನ್ನ ಛತ್ರ ಕಟ್ಟಿಸಿ ಅಲ್ಲಿನ ನಾಮಫಲಕದಲ್ಲಿ ಇಬ್ಬರ ಹೆಸರನ್ನೂ ಕೆತ್ತಿಸಿಕೊಂಡರೆ...!

ಸಾಮಾನ್ಯ ಜನರಿರಲಿ, ಸಾಕ್ಷಾತ್ ಭಗವಂತನಿಗೂ ಕನ್‌ಫ್ಯೂಸ್ ಆಗಲೇಬೇಕು.


ಏನಾಯಿತೆಂದರೆ,

ಕೇರಳದ ಕಣ್ಣೂರು ಜಿಲ್ಲೆಯ ಪಯ್ಯನ್ನೂರುನಲ್ಲಿ ಮಡಾಮ ಕಾವು ಭದ್ರಕಾಳಿ ದೇವಸ್ಥಾನ ಎಂಬುದಿದೆ. ತಮಿಳುನಾಡಿನ ತಿರುಚೆಂಡೂರಿಗೆ ಏಕಾಂಗಿ ವೀರನಂತೆ ಹೋಗಿ ಶತ್ರುಸಂಹಾರ ಹೋಮ ಮಾಡಿಸಿ ಬರುವ ಯಡ್ಡಿ ಕೇರಳದ ಈ ಭದ್ರಕಾಳಿ ದೇವಸ್ಥಾನಕ್ಕೆ ಒಬ್ಬರೇ ಹೋಗುವುದಿಲ್ಲ, ಜೊತೇಲಿ ಶೋಭಾರನ್ನೂ ಕರೆದೊಯ್ಯುತ್ತಿರುತ್ತಾರೆ.



ತಮಗೆ ರಾಜಕೀಯ ಆಪತ್ತು ಬಂದಾಗಲೆಲ್ಲಾ ಪಯ್ಯನೂರಿನ ಭದ್ರಕಾಳಿ ದೇವಸ್ಥಾನಕ್ಕೆ ಓಡಿಹೋಗುತ್ತಿದ್ದ ಇವರು ಈಗೊಂದು ಮೂರು ತಿಂಗಳ ಹಿಂದೆ ಅಲ್ಲಿ ೨೫ ಲಕ್ಷ ಖರ್ಚಿನ ಅನ್ನಛತ್ರವೊಂದನ್ನು ಕಟ್ಟಿಸಲು ಹೊರಟರು. ಅದೀಗ ಸಿದ್ದವಾಗಿ ನಿಂತಿದೆ. ಆದರೆ ದಾನಿಗಳ ನಾಮಫಲಕದ ವಿಚಾರದಲ್ಲಿ ಮಾತ್ರ ಒಂದು ಯಡವಟ್ಟಾಯಿತು.

ಆ ವಿಚಾರಕ್ಕೆ ಹೋಗುವ ಮುನ್ನ ಮೊದಲಿದ್ದ ನಾಮಫಲಕದತ್ತ ಒಮ್ಮೆ ಕಣ್ಣು ಹಾಯಿಸಿ.



[illegible]

"ಕರ್ನಾಟಕ ಮುಖ್ಯಮಂತ್ರಿ ಶ್ರೀ ಯಡಿಯೂರಪ್ಪನ ಪರವಾಗಿ ಶ್ರೀಮತಿ ಶೋಭಾ ಕರಂದ್ಲಾಜೆಯವರು ನಿರ್ಮಿಸಿ ಅರ್ಪಿಸಿರುವ... " ಎಂಬುದಾಗಿ ನಾಮಫಲಕ ಸಾರಿ ಹೇಳುತ್ತಿತ್ತು.

ಇಲ್ಲಿ ಕೇಳಬೇಕಾದ ಎರಡು ಪ್ರಶ್ನೆಗಳಿವೆ.

ಮಾತೆತ್ತಿದರೆ 'ನಾನು ಸಾಲಗಾತಿ ಕಷ್ಟದಲ್ಲಿದ್ದೇನೆ' ಎಂದು ಹಲುಬುವ ಶೋಭಾರಿಗೆ ಅನ್ನಛತ್ರ ಕಟ್ಟಿಸಲು 25 ಲಕ್ಷ ರೂಪಾಯಿ ಎಲ್ಲಿಂದ ಬಂತು?

ಯಾವ ದುಡಿಮೆಯಿಂದ, ಅದಿನ್ಯಾವ ಮೂಲದಿಂದ ಶೋಭಾ 25 ಲಕ್ಷ ಗಳಿಸಿ ಅನ್ನಛತ್ರ ಕಟ್ಟಿಸಿದರು?

ಕೊಡಗಿನ 160 ಎಕರೆ ಕಾಫಿ ತೋಟ ಖರೀದಿಸಲು ಆದರ್ಶ ಡೆವಲಪರ್ಸ್‌ನ ಭೂಗಳ್ಳ ಜಯಶಂಕರ್‌ನಿಂದ ಒಂದೂವರೆ ಕೋಟಿ ರೂಪಾಯಿ ಸಾಲ ಪಡೆದಿದ್ದೇನೆ ಎಂದಿದ್ದ ಶೋಭಾ ಮೊದಲು ಆ ಸಾಲ ತೀರಿಸುವ ಬದಲಾಗಿ ಯಾರೋ ಬಂದು ಅನ್ನ ತಿಂದು ಹೋಗಲು ಛತ್ರ ಕಟ್ಟಿಸಿದ್ದರೆಂದರೆ ಯಾರು ನಂಬುತ್ತಾರೆ?

ಎಚ್.ಡಿ.ಕುಮಾರಸ್ವಾಮಿ ಶೋಭಾರ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡಿದಾಗ 'ಅದೆಲ್ಲಾ ಸುಳ್ಳು, ಬೇಕಿದ್ದರೆ ಧರ್ಮಸ್ಥಳದ ಮಂಜುನಾಥನ ಸನ್ನಿಧಿಗೆ ಕುಮಾರಸ್ವಾಮಿ ಬರಲಿ, ಆಣೆ ಮಾಡುತ್ತೇನೆ' ಅಂತೆಲ್ಲಾ ಶಾಲಾಬಾಲಕಿಯಂತೆ ಚೀರಿಕೊಂಡಿದ್ದರು ಶೋಭಾ.

ಮಜಾ ಅಂದರೆ ಈ ಪರಿಯ ದೈವಭಕ್ತಿ ಇರುವ ಇದೇ ಶೋಭಾ ಭದ್ರಕಾಳಿ ದೇವಸ್ಥಾನದಲ್ಲಿ ಅನ್ನಛತ್ರ ಕಟ್ಟಿಸಿದ ನಾಮಫಲಕವನ್ನೇ ರಾತ್ರೋರಾತ್ರಿ ಕಿತ್ತು ಹಾಕಿಸಿದ್ದಾರೆ!

ಅವರಿಗೆ ದೇವರು ಬೇಡವಾಯಿತೇ? ಅಥವಾ ದಾನ ನೀಡಿದ್ದರ ಬಗ್ಗೆ ಪ್ರಚಾರ ಬೇಡವೆನಿಸಿತೆ??

ಅಥವಾ


ಯಡಿಯೂರಪ್ಪನ ಪರವಾಗಿ ಶ್ರೀಮತಿ ಶೋಭಾ ಅಂತ ಡಂಗುರ ಹೊಡೆಯುವಂತಿದ್ದ ಆ ನಾಮಫಲಕ ಯಾರಿಗೂ ಕಾಣಿಸಬಾರದು ಎಂಬುದಾಗಿತ್ತಾ???

ಒಟ್ಟಿನಲ್ಲಿ ಪಯ್ಯನೂರಿನ ಭದ್ರಕಾಳಿ ದೇವಸ್ಥಾನದಲ್ಲಿದ್ದ ಯಡ್ಡಿ ಮತ್ತು ಶ್ರೀಮತಿ ಶೋಭಾ ಕರಂದ್ಲಾಜೆಯ ನಾಮಫಲಕ ಈಗ ನಾಪತ್ತೆಯಾಗಿದೆ.

ಆ ದೇವಸ್ಥಾನದ ಪೂಜಾರಿ ಒಂದು ಟಿವಿ ಚಾನೆಲ್ ಜೊತೆ ಮಾತನಾಡುತ್ತಾ 'ಯಡಿಯೂರಪ್ಪ ಮತ್ತು ಶೋಭಾ ಇಲ್ಲಿಗೆ ಜೊತೆಯಾಗಿ ಅನೇಕ ಬಾರಿ ಬಂದು ಹೋಗಿದ್ದಾರೆ' ಅಂದಿರುವುದನ್ನು ಕಸ್ತೂರಿ ಟಿವಿ ಇತ್ತೀಚೆಗೆ ಪ್ರಸಾರ ಮಾಡಿತು...

ಆ ನಾಮಫಲಕಗಳೊಂದಿಗೆ ಸಂಕಲ್ಪವ್ರತ ಮಹಾತ್ಮೆ

ಕರ್ನಾಟಕದ ಅನೇಕ ನಿರುದ್ಯೋಗಿ ಮಹಿಳೆಯರು ಹದಿನಾರು ಸೋಮವಾರ ವ್ರತ, ಸಂಕಷ್ಟ ವ್ರತ, ಲಕ್ಷ್ಮಿ ಕಟಾಕ್ಷ ವ್ರತ... ಇತ್ಯಾದಿಗಳನ್ನು ಮಾಡುತ್ತಾ ಬ್ಯುಸಿಯಾಗಿರುವುದು ನಿಜ. ಪಾಪ ಅವರಿಗೆಲ್ಲಾ ತಮ್ಮ ಗಂಡ, ಮನೆಮಕ್ಕಳಿಗೆ ಈ ವ್ರತಗಳಿಂದ ಒಳ್ಳೆಯದಾಗುತ್ತದೆ ಎಂದು ಪುರೋಹಿತರು ನಂಬಿಸಿದ್ದಾರೆ.



ಇದೆಲ್ಲಾ ನಿರುದ್ಯೋಗಿ ಸ್ತ್ರೀಯರ, ಪೆದ್ದು ಗೃಹಿಣಿಯರ ಪಾಡು ಬಿಡಿ.

ಆದರೆ ಶೋಭಾ ಆರ್ಡಿನರಿ ಗೃಹಿಣಿಯಂತಲ್ಲ. ಆಕೆ ಸಚಿವೆ. ಇನ್ನೂ ಮೇಲಾಗಿ ನಿರುದ್ಯೋಗಿಯಲ್ಲ. ಆದರೂ ಯಡ್ಡಿಗೆ ರಾಜಕೀಯ ಬಿಕ್ಕಟ್ಟು ಬಂದಾಗೆಲ್ಲಾ ಮೊದಲು ದೇವರ ಮೊರೆ ಹೋಗುವುದು ಶೋಭಾ ಮೇಡಂ!

ಯಡ್ಡಿಗಾಗಿ 'ಶ್ರೀಮತಿ' ಶೋಭಾರವರು ಇದುವರೆಗೂ ನಾಲ್ಕು ಬಾರಿ ಸಂಕಲ್ಪ ವ್ರತ ನಡೆಸಿದ್ದಾರೆ. 2007ರಲ್ಲಿ ಕುಮಾರಸ್ವಾಮಿ ಯಡ್ಡಿಗೆ ಸಿಎಂ ಕುರ್ಚಿ ಬಿಟ್ಟುಕೊಡದಿದ್ದಾಗ, 2008ರ ಅಸೆಂಬ್ಲಿ ಎಲೆಕ್ಷನ್ ಆದಾಗ ನಂತರ ಇತ್ತೀಚೆಗೆ ಬಿಜೆಪಿ ಭಿನ್ನಮತೀಯರ ಬಿಕ್ಕಟ್ಟು ಬಂದಾಗ ಯಡ್ಡಿಗೆ ಒಳಿತಾಗಲೆಂದು ಶೋಭಾ ಸಂಕಲ್ಪ ವ್ರತ ನಡೆಸಿದ್ದರು.

ಯಡ್ಡಿ ಹೋದಲ್ಲಿ ಬಂದಲ್ಲೆಲ್ಲಾ ಸದಾ ಪಕ್ಕದಲ್ಲೇ ಕಾಣಿಸಿಕೊಳ್ಳುವ ಶೋಭಾ ಕೇರಳದ ದೇವಸ್ಥಾನದಲ್ಲಿ ಯಡಿಯೂರಪ್ಪ ಮತ್ತು ಶ್ರೀಮತಿ ಶೋಭಾ ಆಗಿಯೂ ಕಾಣಿಸಿಕೊಂಡದ್ದು ಗಮನಾರ್ಹ.

... ತಪ್ಪೇನು? ಇರಬಿಡ್ಲಿ. ರಾತ್ರೋರಾತ್ರಿ ಆ ... [illegible]

ರಂಜನೆ | ಬೋಧನೆ | ಪ್ರತಿಭಟನೆ ಲಂಕೇಶ್



ABVP ಹೊಲಸು ಕೆಲಸ ಟಾಯ್ಲೆಟ್ ಆದ ಮಹಾರಾಣಿ ಕಾಲೇಜ್!

ಡಿಸೆಂಬರ್ 25 ರಿಂದ 28 ರವರೆಗೆ ಎಬಿವಿಪಿಯ ಅಖಿಲ ಭಾರತ 56 ನೇ ವಾರ್ಷಿಕ ಸಮಾವೇಶ ಬೆಂಗಳೂರಿನಲ್ಲಿ ನಡೆಯುತ್ತಿದೆ.

ಅಖಿಲ ಭಾರತೀಯ. ಚೆಡ್ಡಿ ವಿದ್ಯಾರ್ಥಿ ಸಂಘಟನೆಯ ಈ ಸಮಾವೇಶಕ್ಕಾಗಿ ಬೆಂಗಳೂರಿನ ಅನೇಕ ಸರ್ಕಾರಿ ಕಾಲೇಜುಗಳನ್ನೇ ದುರ್ಬಳಕ್ಕೆ ಮಾಡಿಕೊಳ್ಳಲು ರಾಜ್ಯದ ಬಿಜೆಪಿ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ದೇಶದ ಅನೇಕ ಕಡೆಗಳಿಂದ ಬರುತ್ತಿರುವ 10 ಸಾವಿರ ವಿದ್ಯಾರ್ಥಿಗಳ ಊಟ-ವಸತಿಗಾಗಿ ಹಾಗೂ ಶೌಚಾಲಯ ವ್ಯವಸ್ಥೆಗಾಗಿ ಬೆಂಗಳೂರಿನ ಸರ್ಕಾರಿ ಕಾಲೇಜುಗಳನ್ನೇ ಬಳಸಲು ಕೊಟ್ಟು ಸ್ಥಳೀಯ ವಿದ್ಯಾರ್ಥಿಗಳಿಗೆ ಪಾಠಪ್ರವಚನಗಳೇ ಇರದಂತೆ ಮಾಡಲಾಗಿದೆ. ಮಹಾರಾಣಿ ಸೈನ್ಸ್ ಕಾಲೇಜು, ಆರ್ಟ್ಸ್ ಕಾಲೇಜು, ಮಹಾರಾಣಿ ಹೋಂ ಸೈನ್ಸ್ ಕಾಲೇಜು ಹಾಗೂ ಆರ್.ಸಿ. ಕಾಲೇಜುಗಳನ್ನು ಪೂರ್ತಿಯಾಗಿ ABVP ಸಮಾವೇಶಕ್ಕಾಗಿ ಈಗ ಬಳಸಲಾಗುತ್ತಿದೆ.

ಕ್ಲಾಸ್‌ರೂಮೇ ಈಗ ಟಾಯ್ಲೆಟ್


ಮಹಾರಾಣಿ ಹೆಸರಿನ ಎಲ್ಲಾ ಮೂರು ಮಹಿಳಾ ಕಾಲೇಜುಗಳನ್ನು ABVP ಕಾರ್ಯಕರ್ತರ ವಸತಿಗಾಗಿ ಈಗ ಬಿಟ್ಟುಕೊಡಲಾಗಿದೆ. ಸುಮಾರು 5 ಸಾವಿರ ಚೆಡ್ಡಿಗಳನ್ನು ಇಲ್ಲಿ 3 ದಿನ ಇರಿಸಲಾಗುತ್ತಿದೆ. ಆದರೆ ಅಷ್ಟು ಸಂಖ್ಯೆಯ ಜನರಿಗೆ ಮಲಗಲು ಜಾಗ ಸಾಕಾಗುತ್ತಿತ್ತಾದರೂ ಕಾಲೇಜಿನೊಳಗೆ ಈಗ ಇರುವ ಟಾಯ್ಲೆಟ್‌ಗಳು ಸಾಲಬೇಕಲ್ಲ. ಅವರೇನು ಬರಿ ದೇಶಭಕ್ತಿಯನ್ನೇ ತಿಂದುಂಡು ಮಲಗುವವರಲ್ಲವಲ್ಲ, ಹಾಗಾಗಿ ABVP ನಾಯಕರು ಈಗ ಏನು ಮಾಡುತ್ತಿದ್ದಾರೆಂದರೆ ಮಹಾರಾಣಿ ಕಾಲೇಜಿನ ಕೆಲವು ಕ್ಲಾಸ್ ರೂಮುಗಳನ್ನೇ ಸಾಮೂಹಿಕ ಟಾಯ್ಲೆಟ್‌ಗಳಾಗಿ ಬದಲಾಯಿಸುತ್ತಿದ್ದಾರೆ. ಆರ್ಟ್ಸ್ ಕಾಲೇಜಿನ ರೂಂ ನಂಬರ್ 24 ಇದಕ್ಕೊಂದು ಸಾಕ್ಷಿಯಾಗಿದೆ. ಅಲ್ಲಿ ಈ ಮೊದಲು ಮೊದಲನೇ ವರ್ಷದ ಬಿಎ/ಬಿಕಾಂ ವಿದ್ಯಾರ್ಥಿನಿಯರಿಗೆ ಪಾಠ ಮಾಡಲಾಗುತ್ತಿತ್ತು. ಅಂದಾಜು 15x30 ಅಳತೆಯ ಈ ಇಡೀ ರೂಂ ಅನ್ನೇ ABVPಗಳು ಈಗ 8 ಟಾಯ್ಲೆಟ್‌ಗಳ ಶೌಚಾಲಯವಾಗಿ ಬದಲಾಯಿಸಿಕೊಂಡಿದ್ದಾರೆ. ನಿನ್ನೆ ಮೊನ್ನೆಯವರೆಗೂ ತರಗತಿಗಳು ನಡೆಯುತ್ತಿದ್ದ ಈ ಕೊಠಡಿ ಈಗ ಚೆಡ್ಡಿಗಳ ಸಮಾವೇಶಕ್ಕಾಗಿ ಟಾಯ್ಲೆಟ್ ಆಗಿ ಬದಲಾಗಿದೆ.

ಮಹಾರಾಣಿ ಕಾಲೇಜಿನಲ್ಲಿ ಒಟ್ಟು 3 ಸಾವಿರ ವಿದ್ಯಾರ್ಥಿನಿಯರಿದ್ದಾರೆ. ಇರುವವರಿಗೆ ಈಗ ಕೊಠಡಿಗಳು ಸಾಲದೆ ಶಿಫ್ಟ್‌ಗಳಲ್ಲಿ ಕ್ಲಾಸ್‌ಗಳು ನಡೆಯುತ್ತಿವೆ. ಪರಿಸ್ಥಿತಿ ಹೀಗಿರುವಾಗ ಈ ಅರೆಬರೆ ಕ್ಲಾಸುಗಳನ್ನು ಈಗ ರದ್ದು ಮಾಡಿ ABVPಗಳು ಬರುತ್ತಿರುವುದರಿಂದ ರಜೆ ಕೊಟ್ಟು ಬಿಟ್ಟಿದ್ದಾರೆ.

ಮತ್ತೊಂದೆಡೆ ಸೈನ್ಸ್ ಕಾಲೇಜಿನಲ್ಲಿ ಪರಿಸ್ಥಿತಿ ಇನ್ನೂ ಅಧ್ವಾನವಾಗಿದೆ. ಈಗ ಅಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಯುತ್ತಿದೆ. ಆದಕ್ಕಾಗಿ ಇಡೀ ಮಹಾರಾಣಿ ಸೈನ್ಸ್ ಕಾಲೇಜ್ ಕಟ್ಟಡವನ್ನೇ ಬಳಸಲಾಗುತ್ತಿದೆ. ಮೌಲ್ಯಮಾಪನ ಕೆಲಸ ಇನ್ನು ಮುಗಿದಿಲ್ಲ ಆದರೂ ಈ ಕಾಲೇಜಿಗೂ ABVPಗಳು ಬಂದು ತಂಗುತ್ತಾರಾದ್ದರಿಂದ ಇಡೀ ವಾಲ್ಯುಯೇಷನ್ ಪ್ರಕ್ರಿಯೆಯನ್ನೇ ತರಾತುರಿಯಿಂದ ಮುಗಿಸಲು .ಶಿಕ್ಷಕರ ಮೇಲೆ ಒತ್ತಡ ಹಾಕಲಾಗುತ್ತಿದೆ. ಆದರೂ ಕೆಲಸ ಮುಗಿಯುವ ಸಾಧ್ಯತೆ ಇಲ್ಲವಾದ ಕಾರಣ ಈಗ ಮೌಲ್ಯಮಾಪಕರನ್ನು ಕೆಲವೇ ರೂಂಗಳಲ್ಲಿ ಕೂರಿಸಿ ಉಳಿದ ರೂಂಗಳನ್ನು ABVPಗಳಿಗೆ ಕೊಡಲು ಪ್ರಿನ್ಸಿಪಾಲ್ ಲಲಿತಮ್ಮ ರೆಡಿಯಾಗಿದ್ದಾರೆ. ಮೌಲ್ಯಮಾಪನ ನಡೆಯುವ ಸ್ಥಳವು ಹೀಗೆ ಸಾವಿರಾರು ABVPಗಳು ಓಡಾಡುವ ಸಂತೆಯಾಗಿ ಬದಲಾದರೆ ಅಲ್ಲಿ ಅದಿನ್ಯಾವ ತರದ ಮೌಲ್ಯಮಾಪನದ ಕೆಲಸ ನಡೆಸಲು ಸಾಧ್ಯ?

ಪ್ರಿನ್ಸಿಪಾಲ್ ಲಲಿತಮ್ಮನವರ ಈ .ABVP ಪರ ನಿಲುವು ಕಾನೂನಿನ ಉಲ್ಲಂಘನೆಯಾಗಿದೆ.

ಇದಿಷ್ಟೇ ಅಲ್ಲದೆ ಇದೇ ಕಾಲೇಜಿನ ಆವರಣದಲ್ಲಿ ABVPಗಳು ಒಂದರ ಪಕ್ಕ ಇನ್ನೊಂದರಂತೆ 20 ಟಾಯ್ಲೆಟ್



ಕಟ್ಟಿಸುತ್ತಿದ್ದಾರೆ. **make shift toilet**ಗಳವು. ಈ ನಕಲಿ ದೇಶಭಕ್ತರು ಪ್ರತಿದಿನ ಬೆಳಗ್ಗೆ ಹೊರಚೆಲ್ಲುವ ಮಲಮೂತ್ರಗಳು ಅದೇ ಕಾಲೇಜಿನ ಆವರಣದಲ್ಲಿ ತೆಗೆದಿರುವ ಗುಂಡಿಯೊಳಕ್ಕೆ ಹೋಗಿ ಬೀಳುವಂತೆಯೂ ಮಾಡಿದ್ದಾರೆ.

ಇಡೀ ಕಾಲೇಜನ್ನು ಗಬ್ಬೆಬ್ಬಿಸುವ ಈ ಹೊಲಸು ಕೆಲಸಕ್ಕೆ ಅನುಮತಿ ಕೊಟ್ಟವರ್‍ಯಾರು?

"ನನಗೆ ಗೊತ್ತಿಲ್ಲ" ಅನ್ನುತ್ತಾರೆ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಲ್ ಶ್ರೀಮತಿ ವಿಜಯಲಕ್ಷ್ಮಿ.

"ಆಯುಕ್ತ ಮದನ್‌ಗೋಪಾಲ್ ಮತ್ತು ಹಿರಿಯ ಅಧಿಕಾರಿಯಾದ ತುಷಾರ್ ಗಿರಿನಾಥ್ ಹೇಳಿದ್ದಾರೆ" ಅನ್ನುತ್ತಾರೆ ಸೈನ್ಸ್ ಕಾಲೇಜಿನ ಪ್ರಿನ್ಸಿಪಾಲ್ ಲಲಿತಮ್ಮ.

"ಒಂದು ರಾಜಕೀಯ ಪಕ್ಷದ ವಿದ್ಯಾರ್ಥಿ ಘಟಕದವರಿಗೆ ಸರ್ಕಾರಿ ಕಾಲೇಜನ್ನೇ ಬಿಟ್ಟು ಕೊಡಲು ಕಾನೂನಿನಲ್ಲಿ ಅವಕಾಶ ಇದೆಯಾ?" ಎಂದು ಕೇಳಿದರೆ ಲಲಿತಮ್ಮನವರು "ಯಾಕೆ ಕೊಡಬಾರದು?" ಅನ್ನುತ್ತಾರೆ.

ಇವರಿಬ್ಬರಿಗೂ ಕಾನೂನಿನ ಪರಿಜ್ಞಾನವೂ ಇದ್ದಂತಿಲ್ಲ, ಮುಂದಿನ ಪರಿಣಾಮಗಳ ಬಗ್ಗೆ ಭೀತಿಯೂ ಇದ್ದಂತೆ ಕಾಣುತ್ತಿಲ್ಲ. ಒಂದು ವೇಳೆ SFIನವರೋ ಬೇರೆ ಪ್ರಗತಿಪರರೋ ಇದೇ ಕಾಲೇಜನ್ನು ನಾಳೆ ತಮ್ಮ ಸಮಾವೇಶಗಳಿಗೂ ಕೊಡೆಂದರೆ ಇವರು ಒಪ್ಪುತ್ತಾರಾ?

ಲೆಕ್ಚರರ್‌ಗಳಿಂದಲೂ ಹಣ ವಸೂಲಿ


ABVP ಚೆಡ್ಡಿ ಸಮ್ಮೇಳನಕ್ಕಾಗಿ ಸರ್ಕಾರಿ ಕಾಲೇಜುಗಳನ್ನೇ ಬಿಟ್ಟು ಕೊಟ್ಟಿರುವುದಲ್ಲದೆ ಅದೇ ಕಾಲೇಜಿನ ಮೇಷ್ಟ್ರುಗಳಿಂದಲೂ ತಲಾ ಒಂದೊಂದು ಸಾವಿರ ರೂಪಾಯಿ ಚಂದಾ ವಸೂಲಿ ಮಾಡುವ ಕೆಲಸವೂ ನಡೆಯುತ್ತಿದೆ. ಇದೊಂಥರಾ ರೋಲ್‌ಕಾಲ್! ಅನೇಕ ಉಪನ್ಯಾಸಕರು ಹಣ ಕೊಡಲು ನಿರಾಕರಿಸಿದಾಗ ಹೋಂ ಸೈನ್ಸ್ ಕಾಲೇಜಿನ ಪ್ರಿನ್ಸಿಪಾಲರೇ ABVP ಚೆಡ್ಡಿ ನಾಯಕರನ್ನು ಖುಷಿಪಡಿಸಲು ತಾವೇ ಉಳಿದ ಹಣ ನೀಡಿ ಕಾಣಿಕೆ ಸಲ್ಲಿಸುತ್ತಿದ್ದಾರೆ.

ABVP ಪ್ರತಿನಿಧಿಗಳು ಉಳಿದುಕೊಳ್ಳಲು ಜಾಗಬೇಕೆಂದು ಮಹಾರಾಣಿ ಕಾಲೇಜಿನ ಹಾಸ್ಟೆಲ್‌ಗಳಲ್ಲಿದ್ದ ಹುಡುಗಿಯರನ್ನೆಲ್ಲಾ ಹಾಸ್ಟೆಲ್‌ನಿಂದ ಆಚೆಗೆ ಅಟ್ಟಲಾಗಿದೆ. ಇಷ್ಟೆಲ್ಲಾ ಅನಾಹುತ, ಅರಾಜಕತೆ ಸೃಷ್ಟಿಸಿ ಅಚ್ಚುಕಟ್ಟಾಗಿರುವ ಕಾಲೇಜಿನ ಆವರಣವನ್ನು ಗಬ್ಬೆಬ್ಬಿಸಿ, ಕ್ಲಾಸ್ ರೂಮುಗಳನ್ನೇ ಟಾಯ್ಲೆಟ್ ಆಗಿ ಬದಲಾಯಿಸಿ, ABVP ಸಮಾವೇಶ ಮಾಡುತ್ತಾರೆಂದರೆ ಇವರೆಂಥ ಶಿಕ್ಷಣ ವಿರೋಧಿಗಳಿರಬೇಕು ಯೋಚಿಸಿ.

ಮಾತೆತ್ತಿದರೆ ದೇಶಪ್ರೇಮ, ತ್ಯಾಗ, ಆದರ್ಶಗಳೆಂಬ ಬೊಗಳೆ ಹೊಡೆಯುವ ABVPಗಳು ಸಾವಿರಾರು ಮುಗ್ಧ ವಿದ್ಯಾರ್ಥಿನಿಯರನ್ನು ಬೀದಿಯಲ್ಲಿ ನಿಲ್ಲಿಸಿ ತಮ್ಮ ಸಮಾವೇಶ ಮಾಡಿಕೊಳ್ಳುತ್ತಿದ್ದಾರೆ.

ಬಿಜೆಪಿಗಳ ಅಧಿಕಾರ ದುರುಪಯೋಗಕ್ಕೆ ಕೊನೆಯಿಲ್ಲಿ?

▶▶ 11



ಲ್ಯಾಂಡ್ ಮಾಫಿಯಾ

ಕಮಲಾಕ್ಷ ಪುರುಷ ದುರಾಸೆಯ ಮುದುಕ. ವಾರಸುದಾರರು ಯಾರೂ ಇಲ್ಲದಿದ್ದರೂ ಭೂದಾಹಿ! ಆತನಿಗೆ 40 ಎಕರೆ ಜಮೀನಿದೆಯಂತೆ. ಇದರಲ್ಲಿ ಕರ್ನಾಟಕ ಪಾಲಿಟೆಕ್ನಿಕ್ ಕಾಲೇಜನ್ನು ಸರ್ಕಾರ ಕಟ್ಟಿದೆಯಂತೆ. ಸುಮಾರು ಎಕರೆಯಲ್ಲಿ ತಲತಲಾಂತರದಿಂದ ಒಂದಿಷ್ಟು ಭೂಹೀನರು ವಾಸವಾಗಿದ್ದಾರೆ. ಅಕ್ಕಪಕ್ಕದವರೊಂದಿಗೆ ಬೆರೆಯದ ಒಂಥರಾ ಸಂಶಯಾಸ್ಪದ ಚಲನವಲನ-ನಿಗೂಢತೆಯ ಕಮಲಾಕ್ಷನ ಜಮೀನುದಾರಿಕೆ ಕಂಡೇ ಒಂದಿಷ್ಟು ಲ್ಯಾಂಡ್ ಬ್ರೋಕರ್‌ಗಳು-ಭೂಮಾಫಿಯಾದವರೂ ಆತನ ಸುತ್ತಿಕೊಂಡಿದ್ದರು. ಕಮಲಾಕ್ಷನ ಲ್ಯಾಂಡ್ ಮಾಫಿಯಾದ ಲಿಂಕುಗಳನ್ನೇ ಹಿಡಿದುಹೊರಟರೆ ಪ್ರಿಯಾಂಕ ಹತ್ಯೆ ಗುಟ್ಟು ರಟ್ಟಾಗುತ್ತದೆಂದು ಸ್ಥಳೀಯರು ಹೇಳುತ್ತಾರೆ.

ಒಂದು ಮೂಲದ ಪ್ರಕಾರ ಕಮಲಾಕ್ಷ ತನ್ನ ಜಾಗದಲ್ಲಿ ಅತಿಕ್ರಮಣ ಮಾಡಿದವರನ್ನು ಲ್ಯಾಂಡ್ ಮಾಫಿಯಾ ಬಲದಿಂದ ಕಾನೂನು-ಪೊಲೀಸ್ ಬಳಸಿ ಎತ್ತಂಗಡಿ ಮಾಡಲು ಕರಾಮತ್ತು ಶುರು ಹಚ್ಚಿಕೊಂಡಿದ್ದನಂತೆ. ಆದರೆ ಭೂ ಮಾಫಿಯಾದವರು ಕಮಲಾಕ್ಷನ ಬಳಸಿ ತಮ್ಮ ಮಾಲ್, ಜಾಗ ಕಬಳಿಸಲು ಸಂಚು ಮಾಡಿದ್ದಾರೆಂದು ದಾರೆಬೈಲು (ಕದ್ರಿ ಬಗ್ರಾಮ) ನಿವಾಸಿಗಳು ಆರೋಪಿಸುತ್ತಿದ್ದಾರೆ. ದಾರೆಬೈಲು ಫ್ರೆಂಡ್ಸ್ ಸರ್ಕಲ್ ಮತ್ತು ಕಮಲಾಕ್ಷ ಪುರುಷನ ನಡುವೆ 2010 ಫೆಬ್ರವರಿಯಿಂದ ಪೊಲೀಸ್-ಕೋರ್ಟ್ ಕದನ ನಡೆಯುತ್ತಿದೆ.

ಈ ವ್ಯಾಜ್ಯದಿಂದ ತಲೆ ರೋಸಿಹೋಗಿದ್ದ ಕಮಲಾಕ್ಷ ಪುರುಷ ಆಯಕಟ್ಟಿನ ಸ್ಥಳದಲ್ಲಿರುವ ಹಲವು ಕೋಟಿ ರೂ.ಗಳ ಜಮೀನು ಉಳಿಸಿಕೊಳ್ಳಲು-ಕಿರಿಕಿರಿಯಿಂದ ಮುಕ್ತನಾಗಲು ಆಗಾಗ ಭರ್ಜರಿ ವಾಮಾಚಾರಿಗಳ ಮೊರೆ ಹೋಗುತ್ತಿದ್ದ. ಲ್ಯಾಂಡ್ ಮಾಫಿಯಾದ ಮಸಲತ್ತಿಗಾದರೂ ಕಮಲಾಕ್ಷನಿಗೆ ವಾಮಾಚಾರಿಗಳ ಸಂಧಿಸುವಾಗ ಸಾಥ್ ನೀಡುತ್ತಿದ್ದರಂತೆ. ಈ ಲ್ಯಾಂಡ್ ಲಫಡಾದಾರರೇ ಪುರುಷನ ದೌರ್ಬಲ್ಯ ಉಪಯೋಗಿಸಿ ಕೊಂಡು ಮಂತ್ರವಾದಿಗಳ ಬಳಿ ಕರೆದೊಯ್ಯುತ್ತಿದ್ದರೆನ್ನುವವರೂ ಇದ್ದಾರೆ. ಕುಟುಂಬದ ವಾಕ್-ಶಾಪ್ ಪ್ರೇತಬಾಧೆ ನಿವಾರಣೆಗೆ ದೈವಗಳಿಗೆ ಸಂತೃಪ್ತಿ ಮಾಡಬೇಕೆಂದು ಕೊನ್ನೂರಿನ (ಕೇರಳ) ದೊಡ್ಡ ಮಂತ್ರವಾದಿಯೊಬ್ಬ ಹೇಳಿದ್ದನಂತೆ. ಆಸ್ತಿ ಉಳಿಸಿಕೊಳ್ಳಲು ಈ ಜ್ಯೋತಿಷಿ ಸಲಹೆಯಂತೆ 'ನರಬಲಿ'ಗೆ ರೆಡಿಯಾದ ಕಮಲಾಕ್ಷ ಪಕ್ಕದ ಮನೆಯಲ್ಲಿ ಬಾಡಿಗೆಗಿದ್ದ ಮುಗ್ಧ ಮಗು ಪ್ರಿಯಾಂಕ ಮೇಲೆ ಕಣ್ಣಿಟ್ಟಿದ್ದ.

ಎಂಟ್ಹತ್ತು ದಿನದಿಂದ ಚಂದ್ರಕಲಾ ಬಿಹಾರಿ ಕುಟುಂಬದ ಪ್ರಿಯಾಂಕಳೊಂದಿಗೆ ಸಲುಗೆ ಶುರು ಹಚ್ಚಿಕೊಂಡಿದ್ದಳು. ಯಾರೊಂದಿಗೂ ಬೆರೆಯದ ಚಂದ್ರಕಲಾ-ಕಮಲಾಕ್ಷ ವ್ಯವಸ್ಥಿತ ಸ್ಕೆಚ್ ಹಾಕಿ ಪ್ರಿಯಾಂಕಳ ಹತ್ಯೆ ಮಾಡಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ. ಪುರುಷನ ಭೂದಾಹ-ಕೋಟ್ಯಂತರ ರೂ.ಗಳ ಆಸೆಯ ವೀಕ್‌ನೆಸ್-ಜಿಗಟು ಸ್ವಭಾವ ಅರ್ಥಮಾಡಿಕೊಂಡಿದ್ದ ಭೂ ಮಾಫಿಯಾದವರು ಆತನನ್ನು ಶಾಶ್ವತವಾಗಿ ಜೈಲಲ್ಲಿ ಕೊಳೆಯುವಂತೆ ಮಾಡಿ ಬಾಳೆಬೈಲು ಪ್ರದೇಶದ ಎಕರೆಗಟ್ಟಲೆ ಭೂಮಿ ಕಬಳಿಸಲು ಯೋಜನೆ ರೂಪಿಸಿಕೊಂಡಿದ್ದರೆಂಬ ಸುದ್ದಿಯೂ ಕರಾವಳಿಯಲ್ಲಿ ಹಬ್ಬಿದೆ. ಲ್ಯಾಂಡ್ ಮಾಫಿಯಾದವರೇ ಮಾಟ-ಮಂತ್ರದ ಭ್ರಮೆ ಮೂಡಿಸಿ ಕೋಟ್ಯಂತರ ರೂ.ಗಳ ಆಸೆ ಹುಟ್ಟಿಸಿ ಅಮಾಯಕ ಬಾಲೆ ಪ್ರಿಯಾಂಕಳ ಹತ್ಯೆಗೆ ಪುರುಷನನ್ನು ಪ್ರಚೋದಿಸಿದ್ದಾರೆ. ಹುಚ್ಚು ಮುದುಕ ಮಗುವನ್ನು ಕೊಂದು ಕಂಬಿ ಎಣಿಸುತ್ತಿದ್ದಾನೆ. ಈ ಅನುಮಾನ ಪೊಲೀಸರ ಬಿಟ್ಟು ಎಲ್ಲರಿಗೂ ಇದೆ. ಹೊತ್ತಲ್ಲದ ಹೊತ್ತಲ್ಲಿ ಕಮಲಾಕ್ಷನ ಮನೆಗೆ ಲ್ಯಾಂಡ್ ಮಾಫಿಯಾದ ಪ್ರತಿಷ್ಠಿತರು-ಪ್ರಭಾವಿಗಳು-ಪೊಲೀಸರ ಸಖ್ಯದವರೂ ಬಂದುಹೋಗುತ್ತಿದ್ದರು. ಈ ಕಾಣದ ಕೈಗಳು ಪ್ರಿಯಾಂಕ ಹತ್ಯೆಯಲ್ಲಿ ಕೆಲಸ ಮಾಡಿರುವ ಸಾಧ್ಯತೆಯಿದೆ.

ಒಂದಂತೂ ಖರೆ. ಜಾಣರ ಬೀಡಲ್ಲಿ ವಾಮಾಚಾರ ಕಂಡವರ ಮನೆ ಮಗಳು ಬಲಿಯಾಗಿದ್ದಾಳೆ. ಅದು ಪಕ್ಕಾ ವಾಮಾಚಾರವೇ ಆಗಿರಲಿ ಅಥವಾ ಲ್ಯಾಂಡ್ ಮಾಫಿಯಾ ಮಾಟ-ಮಂತ್ರದ ಚಿತಾವಣೆಯಿಂದ ಕಮಲಾಕ್ಷ-ಚಂದ್ರಕಲಾರನ್ನು ಹಳ್ಳಕ್ಕೆ ಹಾಕಿರಲಿ. ಒಟ್ಟಿನಲ್ಲಿ ವಾಮಾಚಾರದ ಪಾತಕವೇ ಇದು. ಇನ್ನಾದರೂ ಕರಾವಳಿಯಲ್ಲಿ ಭೂತ-ದೈವ-ಮಾಟ-ಮಂತ್ರದ ಹುಚ್ಚು ಬಿಟ್ಟು ಮಾನವೀಯತೆ ಮೂಡಿದರೆ ಸಾಕು! ಹಾಗಂತ ಪ್ರಜ್ಞಾವಂತರು ಬಾಯ್ಬಾಯಿಂದ ಬಡಿದುಕೊಳ್ಳುತ್ತಿದ್ದಾರೆ. ಈ ಕಳಕಳಿ ಖಾಕಿ ಕಿರಾತಕರಿಗೆ ಅರ್ಥವಾದೀತಾ?

ಸತ್ತ ರೈತನ ಮನೆ ಬಾಗಿಲಿಗೆ ಯಡ್ಡಿಯ ಭಾಗ್ಯ!!

ಮಾತೆತ್ತಿದರೆ ತನ್ನ ಸರ್ಕಾರ ರೈತಪರ ಸರಕಾರ ಎಂದೆಲ್ಲಾ ಬುರುಡೆ ಬಿಡುತ್ತಿದ್ದ ಯಡ್ಡಿ ಅಧಿಕಾರ ಹಿಡಿಯುತ್ತಿದ್ದಂತೆಯೇ ಬೀಜ-ಗೊಬ್ಬರ ಕೇಳಿದ ಹಾವೇರಿಯ ರೈತರ ಮೇಲೆ ಗೋಲೀಬಾರ್ ಮಾಡಿಸಿ ಇಬ್ಬರು ರೈತರ ಬಲಿ ತೆಗೆದುಕೊಂಡು ತನ್ನ ಅಸಲಿ ಚಹರೆಯನ್ನ ಪರಿಚಯಿಸಿದ್ದರು. ಇದೂ ಸಾಲದೆಂಬಂತೆ ಆನಂತರ ಗೋಲೀಬಾರ್‌ನಲ್ಲಿ ಸತ್ತವರು ರೈತರೇ ಅಲ್ಲ ಬದಲಾಗಿ ಗೂಂಡಾಗಳು ಎಂದಿತ್ತು ಯಡ್ಡಿಯ ಚೆಡ್ಡಿ ಸರ್ಕಾರ.


ಅಧಿಕಾರಕ್ಕೆ ಬರುವ ಮುನ್ನ ಪ್ರಣಾಳಿಕೆಯಲ್ಲಿ ರೈತರಿಗೆ ಉಚಿತ ವಿದ್ಯುತ್, ಬೀಜಗೊಬ್ಬರಗಳಿಗೆ ಅಪರಿಮಿತ ರಿಯಾಯಿತಿ, ಸಾಲ ಸೌಲಭ್ಯ ಎಂತೆಲ್ಲಾ ಬಡಾಯಿ ಕೊಚ್ಚಿಕೊಂಡಿದ್ದ ಯಡ್ಡಿ ಅಧಿಕಾರ ಹಿಡಿದ ನಂತರ ಮಾಡಿದ್ದೇನು? ಉಚಿತ ವಿದ್ಯುತ್ ಗೋತಾ! ಸಾಲ ಸೌಲಭ್ಯ ಬೆರಳೆಣಿಕೆ ರೈತರಿಗೆ! ಚೀನಾ, ಇಸ್ರೇಲ್ ಟೂರು ತನ್ನ ಚೆಡ್ಡಿ ಹಿಂಬಾಲಕ ಖೊಟ್ಟಿ ರೈತರಿಗೆ! ಕೈಗಾರಿಕೆ ಅಭಿವೃದ್ಧಿ ಹೆಸರಿನಲ್ಲಿ ರೈತರ ಸಾವಿರಾರು ಎಕರೆ ಭೂಮಿಯನ್ನ ಯಾವ ಭಯ-ಮುಜುಗರವೂ ಕಿತ್ತುಕೊಂಡು ಬ್ರಹ್ಮಾಂಡ ಭ್ರಷ್ಟಾಚಾರ ನಡೆಸಿತು!

ಇಷ್ಟಾದರೂ ತಾ.ಪಂ ಮತ್ತು ಜಿ.ಪಂ ಚುನಾವಣೆ ಎದುರಾದಾಗ ತಾನು ರೈತ ಪರ ಎಂದು ತೋರಿಸಿಕೊಳ್ಳಲು ಹೊರಟ ಯಡ್ಡಿ ಸರ್ಕಾರ ಪತ್ರಿಕೆಗಳಲ್ಲಿ ಸುಳ್ಳು ಸುಳ್ಳಿನ ಜಾಹಿರಾತುಗಳನ್ನು ನೀಡಿ ಮತ್ತೊಮ್ಮೆ ಮುಖಭಂಗ ಅನುಭವಿಸಿದೆ.

ಡಿ. 19ರಂದು ಪ್ರಮುಖ ಪತ್ರಿಕೆಗಳಲ್ಲಿ 'ಬಿಜೆಪಿ ಸರ್ಕಾರ ಬಂದಾಗಿನಿಂದ ನನ್ನ ಭಾಗ್ಯದ ಬಾಗಿಲು ತೆರೆದಿದೆ' ಎಂದು ಟ್ರಾಕ್ಟರ್‌ನಲ್ಲೊಬ್ಬ ರೈತ ಉಳುಮೆ ಮಾಡುತ್ತಿದ್ದ ಮತ್ತು ಕಬ್ಬು ಕಡಿಯುತ್ತಿದ್ದ ರೈತನೊಬ್ಬನ ದೊಡ್ಡ ದೊಡ್ಡ ಫೋಟೋಗಳನ್ನೊಳಗೊಂಡ ಜಾಹಿರಾತು ಪ್ರಕಟವಾಗಿತ್ತು, ಆ ಜಾಹಿರಾತಿನಲ್ಲಿ ರೈತರಿಗಾಗಿ ಬಿಜೆಪಿ ಸರ್ಕಾರ ಅದು ಮಾಡಿದೆ, ಇದು ಮಾಡಿದೆ, ರೈತರ ಮನೆ ಬಾಗಿಲಿಗೆ ಸ್ವರ್ಗವನ್ನೇ ಇಳಿಸಿದೆ ಎಂಬೆಲ್ಲಾ ಅರ್ಥ ಬರುವಂತಹ ವಿವರಣೆಗಳಿದ್ದವು!! ಆದರೆ ಅಸಲಿಗೆ ಆ ಜಾಹೀರಾತಿನಲ್ಲಿ ಕಬ್ಬು ಕಡಿಯುತ್ತಿದ್ದವನ ಮನೆ ಬಾಗಿಲಿಗೆ ಯಡ್ಡಿ ಸ್ವರ್ಗ ತಂದಿರಲಿಲ್ಲ, ಬದಲಾಗಿ ಆತನನ್ನು ಮಸಣಕ್ಕೆ ದೂಡಿ ಒಂದೂವರೆ ವರ್ಷವಾಗಿದೆ.

ಜಾಹಿರಾತಿನಲ್ಲಿ ಕಾಣಿಸಿಕೊಂಡು ಭಾಗ್ಯದ ಬಾಗಿಲು ತೆರೆಸಿಕೊಂಡಿದ್ದ ವ್ಯಕ್ತಿಯ ಅಸಲಿ ವಿಚಾರವೇನೆಂದರೇ ಆತ ಶ್ರೀರಂಗಪಟ್ಟಣ ತಾಲ್ಲೂಕಿನ ಬಾಬುರಾಯನ ಕೊಪ್ಪಲು





ಗ್ರಾಮದವ. ಆತನ ಹೆಸರು ನಾಗರಾಜು. ಯಡ್ಡಿಯ ಪ್ರಕಾರ ಆತ ರೈತ, ಅದರಲ್ಲೂ ಕಬ್ಬು ಬೆಳೆಯುವ ರೈತ! ಆದರೆ ವಾಸ್ತವವಾಗಿ ಉಳುಮೆ ಮಾಡಲು ನಾಗರಾಜನ ಬಳಿ ಒಂದೇ ಒಂದು ಗುಂಟೆ ಜಮೀನಿರಲಿಲ್ಲ, ಆತ ಓರ್ವ ಬಡ ರೈತ ಕಾರ್ಮಿಕನಷ್ಟೆ. ತನ್ನ ಕುಟುಂಬ ಸಾಕಲು ನಾಗರಾಜ ಮಾಡಿಕೊಂಡಿದ್ದ ಸಾಲ ತೀರಿಸಲಾಗದೆ ಒಂದೂವರೆ ವರ್ಷದ ಹಿಂದೆ (20-05-2009) ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ ನತದೃಷ್ಟ.

ಈತ ಒಂದು ದಿನ ಕೂಲಿ ಕೆಲಸಕ್ಕೆ ಹೋಗಿದ್ದಾಗ ಹವ್ಯಾಸಿ ಛಾಯಾಚಿತ್ರಕಾರರು ಕ್ಲಿಕ್ಕಿಸಿಕೊಂಡ ಫೋಟೋವನ್ನ ಇಂಟರ್‌ನೆಟ್‌ನಲ್ಲಿ ಹರಿಯಬಿಡಲಾಗಿತ್ತು, ದುರ್ಬೀನು ಹಾಕಿ ಹುಡುಕಿದರೂ ಯಡ್ಡಿಯಿಂದಾಗಿ ಉದ್ಧಾರವಾದ ಯಾವ ರೈತನೂ ಕರ್ನಾಟಕದಲ್ಲಿ ಸಿಗುವುದಿಲ್ಲವಾದ್ದರಿಂದ ಯಡ್ಡಿಯ ಸರ್ಕಾರ ಆ ಚಿತ್ರವನ್ನೇ ಜಾಹೀರಾತಿನಲ್ಲಿ ಪ್ರಕಟಿಸಿ ತನ್ನ ಸುಳ್ಳು ಸುಳ್ಳು ಪುಂಗಿಯನ್ನು ಊದಿಕೊಂಡಿತ್ತು.

ಇವತ್ತಿಗೂ ನಾಗರಾಜನ ಮನೆಯಲ್ಲಿ ಕಿತ್ತು ತಿನ್ನುವ ಬಡತನ ತಾಂಡವವಾಡುತ್ತಿದೆ. ಆತನ ವಯಸ್ಸಾದ ತಂದೆ ತಾಯಿ, ಲಕ್ಷ್ಮಮ್ಮ ಎಂಬ ಹೆಂಡತಿ, ಭವ್ಯ ಮತ್ತು ಉಮೇಶ ಎಂಬಿಬ್ಬರು ಪುಟ್ಟಪುಟ್ಟ ಮಕ್ಕಳು ದಿನ ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಹಾಗಿರುವಾಗ ಯಡ್ಡಿಯ ಸರ್ಕಾರ ಆತನ ಮನೆಯ ಭಾಗ್ಯದ ಬಾಗಿಲನ್ನು ಹೇಗೆ ತೆರೆಯಿತು ಎಂದು ಸ್ಥಳೀಯ ಜನ ಯಡ್ಡಿ ವಿರುದ್ಧ ಪ್ರತಿಭಟಿಸಿದ್ದಾರೆ.

ಅಧಿಕಾರಕ್ಕೆ ಬಂದಾಗಿನಿಂದ ಯಡ್ಡಿ ಮತ್ತು ಬಿಜೆಪಿ ಸರ್ಕಾರ ಹಸಿ ಹಸಿ ಸುಳ್ಳುಗಳನ್ನು ಹೇಳುತ್ತಲೇ ಸಿಕ್ಕಿಬಿದ್ದು ಜನರಿಂದ ಉಗಿಸಿಕೊಳ್ಳುತ್ತಿದೆ. ಈಗಲಾದರೂ ಮತದಾರರು ಈ ದುಷ್ಟರ ಕಪಟತನವನ್ನು ಅರಿತು ಅವರಿಗೆ ಚುನಾವಣೆಯಲ್ಲಿ ತಕ್ಕ ಪಾಠವನ್ನು ಕಲಿಸಬೇಕಿದೆ.

– ಲಕ್ಷ್ಮಣ್ ಚೀರನಹಳ್ಳಿ

ಧಾರವಾಡದ ಪೊಲೀಸ್ ವಲಯದಲ್ಲಿ ಸಿಪಿಐ ...ಯ್ ಬಿರಾದಾರ್ ಸಾಹೇಬರ ಬಗ್ಗೆ ಭರ್ಜರಿ ಚರ್ಚೆಗಳಾ...ವೆ. ಹಾಗಂತ ಈತ ನಗರದಲ್ಲಿ ಅವ್ಯಾಹತವಾಗಿರುವ ...ಗಳ ಮೇಲೆ ರೇಡು ಬಿದ್ದವರಂತಲೋ, ಗರಿಗೆದರಿರುವ ...ಸಂ ಬುಡಕ್ಕೆ ಲಾಠಿ ಬೀಸಿದರಂತಲೋ ಅಂದುಕೊಳ್ಳ...ಲ್ಲ. ಯಾಕೆಂದರೀತ ಹುಡುಗೀರಿಬ್ಬರ ಹಿಂದೆ ಬಿದ್ದು ...ಂದಲೇ ಗೂಸಾ ತಿಂದಿದ್ದಾನೆ!

...ನಗರದ ವಿದ್ಯಾಗಿರಿ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್ ...ದಾರ್ ತನ್ನ ಚೆಂಗಲು ಬುದ್ಧಿಯಿಂದ ಸಹೋದ್ಯೋಗಿ ...ಯುದಲ್ಲೇ ಮರ್ಯಾದೆ ಕಳೆದುಕೊಂಡಿದ್ದಾನೆ. ಫುಟ್‌ಪಾತಿನ ...ಪಾಪಿನಲ್ಲಷ್ಟೇ ಶೌರ್ಯ ಪ್ರದರ್ಶನ ನಡೆಸುವ ಈತ ...ಸ್ ಅಧಿಕಾರಿ ಅಂತ ಅಮಾಯಕರೊಂದಷ್ಟು ಮಂದಿ ...ತುಕೊಂಡಿರುವುದೂ ಸುಳ್ಳಲ್ಲ. ಆದರೆ 'ಖಡಕ್' ...ದಾರ್ ಹಣವಂತರು, ರಾಜಕಾರಣಿಗಳ ಮುಂದೆ ಬಾಲ ... ಕಮಾಯಿ ನಡೆಸುವುದೂ ಸುಳ್ಳಲ್ಲ!

...ಇಂಥಾ ಬಿರಾದಾರ್ ಹುಡುಗೀರ ವಿಚಾರದಲ್ಲಿ ...ಈತ ಬಲಹೀನತೆಗಳಿರುವ ಆಸಾಮಿ. ಅದು ಯಾವ ...ಮೆಂದರೆ, ಈತನ ಬಳಿ ದೂರು ಹಿಡಿದುಬರುವ ...ಡುಗಿಯರು ಚೆಂದಗಿದ್ದರೆ ಮುಗಿದೇ ಹೋಯ್ತು- ...ರಾತ್ರಿಯಲ್ಲಿ ಅವರ ಮೊಬೈಲ್‌ಗೆ ಮೆಸೇಜು ಬಿಡಲಾ...ರುತ್ತಾನೆ. ಹೀಗೆ ಮೆಲ್ಲಗೆ ಪಳಗಿಸಿಕೊಂಡು ರಹಸ್ಯವಾಗಿ ...ರವನ್ನೇ ಶುರುವಿಟ್ಟುಕೊಳ್ಳುತ್ತಾನೆ. ಒಂದಷ್ಟು ದಿನಗಳ ... ಅಂಥ ಹುಡುಗಿಯರದ್ದು ಉಂಡು ಎಸೆದ ...ಲೆಯಂಥ ಸ್ಥಿತಿ. ಆದರೆ ವಂಚನೆಗೊಳಗಾದ ...ಡುಗಿಯರು ತಿರುಗಿ ಬಿದ್ದ ಉದಾಹರಣೆಗಳಿಲ್ಲ. ಇಂಥಾ ...ಮಾಯಕತೆಯೇ ಬಿರಾದಾರನಿಗೆ ಹೊಸಾ ಬೇಟೆ ...ಡುಕಲು ಉತ್ತೇಜಿಸುತ್ತಿತ್ತು.

ಆದರೆ... ಇದೀಗ ವಂಚನೆಗೊಳಗಾದ ಹುಡುಗೀರಿಬ್ಬರು ...ಗಿ ಬಿರಾದಾರನ ಬೇಟೆಗಳಿಗೊಂದು ಬ್ರೇಕ್ ಹಾಕಿದ್ದಾರೆ. ...ದ ಮನೆಯೊಂದಕ್ಕೆ ಜಾಣತನದಿಂದ ಕರೆಸಿಕೊಂಡು ...ಪೊಲೀಸಪ್ಪನ ಕಾಮಪಿತ್ಥವೆಲ್ಲ ಇಳಿಯುವಂತೆ ಸರಿಯಾಗಿ ...ಸಿದ್ದಾರೆ! ಈ ಬಗೆಗಿನ ವಿವರ ಹೇಳುವ ಮೊದಲು ...ಹುಡುಗಿಯರಿಬ್ಬರು ಈತನ ಖೆಡ್ಡಾಕ್ಕೆ ಬಿದ್ದ ಬಗ್ಗೆ ...ಳುವುದೊಳಿತು.

...ನಗರದಲ್ಲೇ ಕಾನೂನು ಪದವಿ ಓದುತ್ತಿರುವ ಶ್ರುತಿ (...ರು ಬದಲಿಸಲಾಗಿದೆ) ಕೌಟುಂಬಿಕ ಸಮಸ್ಯೆಯೊಂದರ ...ಥ ವಿದ್ಯಾಗಿರಿ ಠಾಣೆಗೆ ಬಂದಿದ್ದಳು. ನೋಡಲು ...ಗಿರುವ ಈಕೆಯ ಅಹವಾಲುಗಳ ಬಗ್ಗೆ ವಿಶೇಷ ...ವಹಿಸಿದವನು ಬಿರಾದಾರ್. ತನಿಖೆಯ ನೆಪ ಹೇಳಿ ...ದು ಮೊಬೈಲ್ ನಂಬರ್ ಪಡೆದುಕೊಂಡು ಮಧ್ಯ ...ರು ಬಳಿಕ ಮೆಸ್ಸೇಜು ಬಿಡತೊಡಗಿದ.

...ದ್ಯಾವ ಆಕರ್ಷಣೆಯೋ ಗೊತ್ತಿಲ್ಲ, ಅಂತೂ ಬಿರಾದಾರ್ ... ಮಗುವಿರುವ ವಿವಾಹಿತನೆಂದು ಗೊತ್ತಿದ್ದರೂ ಈ ...ಗಿ ಆತನನ್ನು ಹಚ್ಚಿಕೊಂಡುಬಿಟ್ಟಳು. ನೋಡಲು ... ಆಗಿರುವ ಬಿರಾದಾರ್ ಅದನ್ನೇ ಬಳಸಿಕೊಂಡು ...ಮುಂದುವರೆದ. ಇಬ್ಬರ ನಡುವೆ ನಿರಂತರವಾಗಿ ಮೆಸೇಜು ...ಡತೊಡಗಿದವು. ಈ ಲಂಪಟನಿಗೆ ಇದು ಎಷ್ಟನೆಯ ...ವವೋ. ಆದರೆ ಶ್ರುತಿಯದ್ದು ಮಾತ್ರ ಪ್ರಾಂಜಲ

ಈ ನಡುವೆಯೇ ಪಾಸ್‌ಪೋರ್ಟ್ ತಗಾದೆಯೊಂದರ ವಿಚಾರವಾಗಿ ಠಾಣೆಗೆ ಬಂದವಳು ಶಕೀಲಾ(ಹೆಸರು ಬದಲಿಸಲಾಗಿದೆ). ಪಕ್ಕಾ ವಂಚಕ ಬಿರಾದಾರ್ ಇಲ್ಲೂ ಕೂಡಾ ತನ್ನ ಅಸಲೀ ಬುದ್ಧಿ ಹರಿಬಿಟ್ಟ. ಶಕೀಲಾಳ ದೂರಿನೆಡೆಗೊಂದು ಪರ್ಸನಲ್ ಇಂಟ್ರೆಸ್ಟ್ ತೋರಿಸಿದ ಆತ ಅವಳ ಮೊಬೈಲ್ ನಂಬರ್ ಅನ್ನು ಇಸಿದುಕೊಂಡ. ತದನಂತರ ಮಾಮೂಲಿ ಮಧ್ಯರಾತ್ರೀಲಿ ಮೆಸೇಜು ಬಿಡುವ ಖಯಾಲಿ ಆರಂಭಿಸಿದ. ಶಕೀಲಾ ಅನಾಯಾಸವಾಗಿ ಕಚ್ಚಿಕೊಂಡಳು.

ಪ್ರಸ್ತುತ ಎಂ.ಎ. ಜರ್ನಲಿಸಂ ಕಲಿಯುತ್ತಿರುವ ಶಕೀಲಾಳದ್ದು ಶ್ರುತಿಯಂಥ ವ್ಯಕ್ತಿತ್ವವಲ್ಲ. ಈಕೆ ಹಣವಂತರನ್ನು ಬಲೆಗೆ ಬೀಳಿಸಿಕೊಂಡು ಶೋಕಿಜೀವನ ನಡೆಸುವ ಆಸೆಗೆ ಬಿದ್ದಿರುವಾಕೆ. ಇದೀಗಲೇ ನಗರಾದ್ಯಂತ ಹೆಸರು ಕೆಡಿಸಿಕೊಂಡಿದ್ದಾಳೆ. ಬಿರಾದಾರನೂ ಹರುಕು ಬುದ್ಧಿಯವನೇ ಆದುದರಿಂದ ಇಬ್ಬರ ನಡುವೆ ಬೇಗನೆ ಅಫೇರು ಬೆಳೆಯಿತು. ಅದು ಬಿರಾದಾರ್ ಸಾಹೇಬರು ಶಕೀಲಾಳ ಮನೆಯಲ್ಲೇ ರಾತ್ರಿ ಡ್ಯೂಟಿ ಮಾಡುವಷ್ಟರವರೆಗೂ ಮುಂದುವರೆಯಿತು.

ಚೆಂದಗೆ ಕಲಿತು ಭವಿಷ್ಯ ರೂಪಿಸಿಕೊಳ್ಳಬೇಕಿದ್ದ ಶಕೀಲಾ ಹಣವಂತರಿಗೆ ಬಲೆ ಬೀಸಿ ನುಣ್ಣಗೆ ಬೋಳಿಸೋ ಕಲೆಯನ್ನು ಕರಗತವಾಗಿಸಿಕೊಂಡಿದ್ದಾಳೆ. ಇಂಥ ಹಣದಲ್ಲೇ




ಗೊತ್ತಾಗಿ ಹೋಯಿತು.

ಆದರ ಪರಿಣಾಮವೆಂಬಂತೆ ಶ್ರುತಿ-ಶಕೀಲಾ ನಡುವೆ ಕಾಳಗವೇ ಹೊತ್ತಿಕೊಂಡಿತು. ಅದು ಪೊಸ್ಟ ಗಾಂಧಿನಗರ ರಸ್ತೆಯಲ್ಲಿ ಬಹಿರಂಗವಾಗೇ ಆಸ್ಫೋಟಗೊಂಡಿತು. ಭಂಗ ಬಿರಾದಾರನ ಸಲುವಾಗಿ ಈ ಹುಡುಗಿಯರಿಬ್ಬರು ನಡುರಸ್ತೆಯಲ್ಲೇ ಕಿತ್ತಾಡಿಕೊಂಡರು. ಶಕೀಲಾಳಂತೂ ಕೊಂದೇ ಹಾಕುವ ಬೆದರಿಕೆಯೊಡ್ಡಿದಳು. ಬೀದಿಯ ಜನರೂ ಪುಗಸಟ್ಟೆ ಮನರಂಜನೆ ಅನುಭವಿಸಿದರು.

ಇದೆಲ್ಲದರಿಂದಾಗಿ ಬಿರಾದಾರನದ್ದೀಗ ನಾಯಿಪಾಡಾಗಿದೆ. ಈ ಇಬ್ಬರೂ ಹುಡುಗಿಯರು ಠಾಣೆಗೇ ಬಂದು ಬೆವರಿಳಿಸಹತ್ತಿದ್ದಾರೆ. ಶ್ರುತಿ-ಶಕೀಲಾ ಯಾರೇ ಬಂದರೂ ಠಾಣೆಯ ಇತರೆ ಅಧಿಕಾರಿಗಳಿಗೆ ಭರ್ಜಿ ಮನರಂಜನೆ. ಶಕೀಲಾ ಬಂದರಂತೂ ಖಾಕಿ ಒದ್ದೆಯಾಗುವಷ್ಟರಮಟ್ಟಿಗೆ ಹೆದರುವ ಬಿರಾದಾರ್ ಆಕೆಯನ್ನು ಆದಷ್ಟು ಬೇಗ ಸಾಗಹಾಕಲೆತ್ನಿಸುತ್ತಾನೆ. ಆದರಾಕೆ ಏಕವಚನದಲ್ಲೇ ಆತನನ್ನು ಅಟ್ಟಾಡಿಸಿ ಬಿಡುತ್ತಾಳೆ!

ಖಾಕಿಯ ಘನತೆಯನ್ನೆಲ್ಲಾ ಹೆಣ್ಣುಬಾಕತನಕ್ಕೆ ಅಡವಿಟ್ಟಿರುವ ಅವಿವೇಕಿ ಬಿರಾದಾರ್‌ಗೆ ಅದೇ ಮುಳುವಾಗಿದೆ. ಈತನ ಹೆಂಡತಿ ಸಂಸ್ಕಾರವಂತ ಮನೆತನದ ಮುಗ್ಧ ಹೆಣ್ಣು ಮಗಳು.

ಧಾರವಾಡ: ತಿರುಗಿಬಿದ್ದ ಹುಡುಗೀರು ಸಿಪಿಐ ಬಿರಾದಾರ್‌ಗೆ ಭರ್ಜಿ ಗೂಸಾ!



ಬಿರಾದಾರ್ ಸಾಹೇಬರ ಈ ಎರಡು ದೋಣಿಯ ಪಯಣದ ಎಪಿಸೋಡು ಕ್ಲೈಮ್ಯಾಕ್ಸ್ ಹಂತ ತಲುಪಿದ ಘಟನೆ ಬಲು ರೋಚಕವಾಗಿದೆ. ವಂಚನೆಗೊಳಗಾದ ಹುಡುಗೀರಿಬ್ಬರು ಒಟ್ಟಾಗಿ ಬಿರಾದಾರನ ಬೇಟೆಗಳಿಗೊಂದು ಬ್ರೇಕ್ ಹಾಕಿದ್ದಾರೆ. ನಗರದ ಮನೆಯೊಂದಕ್ಕೆ ಜಾಣತನದಿಂದ ಕರೆಸಿಕೊಂಡು ಈ ಪೊಲೀಸಪ್ಪನ ಕಾಮಪಿತ್ಥವೆಲ್ಲ ಇಳಿಯುವಂತೆ ಸರಿಯಾಗಿ ಬಾರಿಸಿದ್ದಾರೆ! ಈ ಬಗೆಗಿನ ವಿವರ ಹೇಳುವ ಮೊದಲು ಆ ಹುಡುಗಿಯರಿಬ್ಬರು ಈತನ ಖೆಡ್ಡಾಕ್ಕೆ ಬಿದ್ದ ಬಗ್ಗೆ ಹೇಳುವುದೊಳಿತು.

ನಗರದಲ್ಲೊಂದು ಬಾಡಿಗೆ ಮನೆಯಲ್ಲಿರುವ ಈಕೆ ತುಂಡುಡುಗೆ ತೊಟ್ಟು ಸ್ಕೂಟಿಯಲ್ಲಿ ಊರು ತುಂಬ ರೌಂಡ್ ಹೊಡೆಯುತ್ತಾಳೆ. ಅಪರೂಪಕ್ಕೊಮ್ಮೆ ಕಾಲೇಜಿನತ್ತ ಮುಖಹಾಕುವುದೂ ಇದೆ.

ಬಿರಾದಾರ್ ಸಾಹೇಬರ ಈ ಎರಡು ದೋಣಿಯ ಪಯಣದ ಎಪಿಸೋಡು ಕ್ಲೈಮ್ಯಾಕ್ಸ್ ಹಂತ ತಲುಪಿದ ಘಟನೆ ಬಲು ರೋಚಕವಾಗಿದೆ. ಇತ್ತಿತ್ತಲಾಗಿ ಒಂದು ದಿನ ಬಿರಾದಾರ್ ಶಕೀಲಾಳೊಂದಿಗೆ ನೈಟ್ ಡ್ಯೂಟಿಯಲ್ಲಿದ್ದ. ತೆವಲು ತೀರುವುದಾದರೆ ಯೂನಿಫಾರಂ ಅನ್ನು ಪಿಸ್ತೂಲಿನ ಸಮೇತ ಹುಡುಗೀರ ಪಾದದಡಿ ಹಾಕಬಲ್ಲ ಆತ ತನ್ನ ಮೊಬೈಲನ್ನು ಶಕೀಲಾ ಸುಪರ್ದಿಗೊಪ್ಪಿಸಿದ್ದ. ಈ ಸಂದರ್ಭದಲ್ಲೇ ಶ್ರುತಿ ಒಂದು ಮೆಸೇಜು ಕಳಿಸಿದ್ದಾಳೆ. ಪೊಲೀಸಪ್ಪನ ವಂಚನೆಯ ವಾಸನೆ ಹತ್ತಿಸಿಕೊಂಡ ಶಕೀಲಾ ಆ ನಂಬರ್ ನೋಟ್ ಮಾಡಿಕೊಂಡಿದ್ದಾಳೆ.

ಮಾರನೇ ದಿನ ಆ ನಂಬರಿಗೆ ಫೋನಾಯಿಸಿದ ಶಕೀಲಾ ವಿಚಾರಿಸಿಕೊಂಡರೆ, ಆತ್ತಲಿಂದ ಶ್ರುತಿ 'ನಾನು ವಿಜಯ್ ಬಿರಾದಾರ್‌ರ ಹೆಂಡತಿ' ಅಂದಿದ್ದಾಳೆ. ಕುದ್ದು ಹೋದ ಶಕೀಲಾ 'ನಾನು ಅವ್ನ ಲವ್ವರ್' ಅಂತ ದಬಾಯಿಸಿದ್ದಾಳೆ. ನಂತರ ನೇರವಾಗಿ ಮುಖಾಮುಖಿಯಾಗುವ ಒಪ್ಪಂದದೊಂದಿಗೆ ಈ ಮಾತುಕತೆ ಸ್ಥಗಿತಗೊಂಡು, ಶಕೀಲಾ ಮತ್ತು ಶ್ರುತಿ ಭೇಟಿಯಾದರು. ಆಗ ಬಿರಾದಾರನ ವಂಚನೆಗಳು ಬೆತ್ತಲಾದವು!

ನಿಜವಾಗಿಯೂ ಬಿರಾದಾರನನ್ನು ಪ್ರೀತಿಸುತ್ತಿದ್ದ ಶ್ರುತಿ ಆತ ಬೇರೊಬ್ಬಳೊಂದಿಗೆ ಅಫೇರ್ ಇಟ್ಟುಕೊಂಡಿದ್ದಾನೆಂದು ತಿಳಿದಾಕ್ಷಣ ತತ್ತರಿಸಿಹೋಗಿದ್ದಾಳೆ. ಶಕೀಲಾ ಪೊಲೀಸ್ ಮಾಮಾನಿಂದ ಲಾಭ ಕೈ ತಪ್ಪಬಹುದೇನೋ ಅಂತ ಕಂಗಾಲಾಗಿದ್ದಾಳೆ. ಇದೆಲ್ಲದರಿಂದಾಗಿ ಇಬ್ಬರೂ ಸೇರಿ ಹರುಕು ಬುದ್ಧಿಯ ಬಿರಾದಾರನಿಗೊಂದು ಬುದ್ಧಿ ಕಲಿಸಬೇಕೆಂಬ ತೀರ್ಮಾನಕ್ಕೆ ಬಂದು ವ್ಯವಸ್ಥಿತ ಐಡಿಯಾವೊಂದನ್ನು ಹೆಣೆದರು.

ಆದರನ್ವಯ ಶಕೀಲಾ ರಾಣಿಚೆನ್ನಮ್ಮ ನಗರದ ಮನೆಯೊಂದಕ್ಕೆ ಬಿರಾದಾರನನ್ನು ಕರೆದಳು. ಸಿನ್ನಿಯರ್ ಆಗಿ ಡ್ಯೂಟಿ ನಡೆಸುವ ಅತ್ಯುತ್ಸಾಹದಿಂದ ಓಡೋಡಿ ಬಂದ ಬಿರಾದಾರ್ ಬೆವೆತುಹೋದ. ಯಾಕೆಂದರೆ ಅಲ್ಲಿ ಶಕೀಲಾ-ಶ್ರುತಿ ಇಬ್ಬರೂ ಧುಮುಗುಡುತ್ತಾ ನಿಂತಿದ್ದರು. ನಂತರ ಇಬ್ಬರೂ ಸೇರಿ ಖಾಕಿ ಖದೀಮನನ್ನ ಕೆಡವಿಕೊಂಡು ಬಾರಿಸಿದರು!

ಇಷ್ಟಾದರೂ ಬಿರಾದಾರನ ಹೀನಬುದ್ಧಿ ಬದಲಾಗಲಿಲ್ಲ. ಪ್ರತ್ಯೇಕವಾಗಿ ಶಕೀಲಾ-ಶ್ರುತಿ ಇಬ್ಬರೊಂದಿಗೂ ಮತ್ತೆ ಲಲ್ಲೆ ಶುರುವಿಟ್ಟುಕೊಂಡ. ಒಬ್ಬಳೊಂದಿಗಿನ ವ್ಯವಹಾರ ಇನ್ನೊಬ್ಬಳಿಗೆ ತಿಳಿಯದಂತೆ ಎಚ್ಚರ ವಹಿಸಿದ. ಈ ನಡುವೆ ಶ್ರುತಿ-ಶಕೀಲಾ ಕೂಡಾ ದೂರಾದರು. ಆದರೆ ಬಿರಾದಾರನ ನಾಟಕ ಇಬ್ಬರಿಗೂ

ಈ ದಂಪತಿಗೆ ಮುದ್ದಾದುದೊಂದು ಮಗುವೂ ಇದೆ. ಇಂಥ ಸಂಸಾರದೊಂದಿಗೆ ಆರಾಮವಾಗಿರಬಹುದಾಗಿದ್ದ ಬಿರಾದಾರ್ ಸಾಹೇಬರಿಗ್ಯಾಕೋ ಬೇಲಿ ಹಾರುವ ಉಮೇದು ಇಳಿಯುವಂತೆ ಕಾಣಿಸುತ್ತಿಲ್ಲ.

ಈತ ತನ್ನ ತೆವಲಿಗೆ ಎಂತೆಂಥ ಅನಾಹುತ ಮಾಡುತ್ತಾನೆ ನೋಡಿ. ಈತ ಬಲೆಗೆ ಬೀಳಿಸಿಕೊಂಡ ಶ್ರುತಿಗೆ ಮನೆಯವರು ಮದುವೆ ಗೊತ್ತು ಮಾಡಿದ್ದರು. ಹುಡುಗನೂ ಉದ್ಯೋಗಸ್ಥನಾಗಿದ್ದ, ಚೆಂದಗೂ ಇದ್ದ. ಆದರೆ ಬಿರಾದಾರ್ ಮದುವೆಯಾಗುವುದಾಗಿ ಶ್ರುತಿಯನ್ನು ಬಲವಾಗಿ ನಂಬಿಸಿದ. ಆಕೆಯೂ ನಂಬಿ ಮನೆಯವರ ನಿರ್ಧಾರ ಧಿಕ್ಕರಿಸಿದಳು. ಹೋಗಲಿ, ತನಗಾಗಿ ಮನೆಯವರನ್ನೇ ಎದುರಿಸಿದಾಕೆಗಾದರೂ ನಿಷ್ಠನಾಗಿದ್ದಾನಾ ಅಂತ ನೋಡಹೋದರೆ ಆದಾಗಲೇ ಈತನ ನಿಯತ್ತು ಶಕೀಲಾಳತ್ತ ಹೊರಳಿಕೊಂಡಿತ್ತು.

ಶಕೀಲಾ ಬಿರಾದಾರ ಕೈಕೊಟ್ಟರೂ ಜಗ್ಗುವಂಥವಳಲ್ಲ. ಅವಳಿಗಲೇ ಪಿಎಸ್ಸೈ ಒಬ್ಬನನ್ನು ಪಳಗಿಸಿಕೊಂಡಿರುವ ವದಂತಿಗಳಿವೆ. ಆಕೆಗೆ ಇಂಥವೆಲ್ಲ 'ಮಾಮೂಲು. ಶಕೀಲಾ ಒಂದು ಮನೆ ಕಟ್ಟಿಸಿಕೊಟ್ಟರೆ ತಂಟೆಗೆ ಬರುವುದಿಲ್ಲ ಅಂತ ಬಿರಾದಾರನೆದುರು ಡಿಮ್ಯಾಂಡ್ ಇಟ್ಟಿದ್ದಾಳೆ. ಆದರೆ ಈ ಹುಡುಗಿ ಶ್ರುತಿಯದ್ದು ಏನೂ ಬೇಡ ನೀನಿದ್ದರೆ ಸಾಕೆಂಬ ಉತ್ಕಟ ಪ್ರೀತಿ. ಸದ್ಯ ಬಿರಾದಾನ ಚೆಂಗಲು ಬುದ್ಧಿಯ ಅಡಕತ್ತರಿಯಲ್ಲಿ ಸಿಲುಕಿರುವವರು ಶ್ರುತಿ ಮತ್ತು ಆತನ ಹೆಂಡತಿ ಇಬ್ಬರೆ!

ಬಿರಾದಾರನ ನೈಟ್ ಡ್ಯೂಟಿಯ ಸಾಹಸಗಾಥೆಗಳು ಹಿರಿಯ ಅಧಿಕಾರಿಗಳಿಗೆ ಗೊತ್ತಿಲ್ಲವೆಂದೇನೂ ಅಲ್ಲ. ಆದರ್‍ಯಾಕೋ ಯಾವ ಕ್ರಮವನ್ನೂ ಕೈಗೊಳ್ಳದೆ ತೆಪ್ಪಗಿದ್ದಾರೆ. ಅವರು ಇನ್ನಾದರೂ ಎಚ್ಚೆತ್ತುಕೊಂಡು ಬಿರಾದಾರನ ಚೆಂಗಲಾಟಕ್ಕೊಂದು ಬ್ರೇಕ್ ಹಾಕದಿದ್ದರೆ ಅನೇಕ ಹುಡುಗಿಯರು ಬದುಕು ಕಳೆದುಕೊಳ್ಳುತ್ತಾರೆ. ಜೊತೆಗೆ ಪೊಲೀಸ್ ಇಲಾಖೆಯ ಮಾನವೂ ಬೀದಿಗೆ ಬರುತ್ತದೆ.

• ಸಂತೋಷ್ ಬಾಗಿಲಗದ್ದೆ

ಹೋದಲ್ಲೆಲ್ಲಾ ಹರುಕು ಬುದ್ಧಿ!

ವಿಜಯ್ ಬಿರಾದಾರ್‌ನ ಹಿನ್ನೆಲೆಯನ್ನು ಕೆದಕುತ್ತಾ ಹೋದರೆ ಹೆಣ್ಣುಬಾಕತನದ ವಿಚಾರಗಳು ದಂಡಿದಂಡಿಯಾಗಿ ...ರಾಗುತ್ತವೆ. ಈತ ಈವರೆಗೆ ಎಲ್ಲೆಲ್ಲಿ ಕೆಲಸ ಮಾಡುತ್ತಿದ್ದನೋ ಅಲ್ಲೆಲ್ಲಾ ಹರುಕು ಬುದ್ಧಿ ಹರಿಬಿಟ್ಟು ಅನೇಕ ...ಮುಕ್ಕಳನ್ನು ಬಳಸಿಕೊಂಡ ವಿಚಾರವೂ ಬೆಳಕಿಗೆ ಬರುತ್ತದೆ.

ಈತ ಬಳ್ಳಾರಿಯ ಕೊಟ್ಟೂರಿನಲ್ಲಿ ಪಿಎಸ್ಸೈ ಆಗಿದ್ದಾಗಲೂ ಇಂಥಾದ್ದೇ ಕೆಲಸ ಮಾಡಿದ್ದ. ಇದೇ ಧಾರವಾಡದಲ್ಲಿ ...ಲಾ, ಶ್ರುತಿಯನ್ನು ಹೊರತುಪಡಿಸಿ ಇನ್ನೂ ನಾಲ್ಕೈದು ಹುಡುಗಿರೊಂದಿಗೆ ಅಫೇರ್ ಇದೆ ಎಂಬ ...ತುಗಳೂ ಕೇಳಿ ಬರುತ್ತಿವೆ. ಈತ ರಾಯಚೂರಿನಲ್ಲಿದ್ದಾಗಲೂ ಏಳೆಂಟು ಹುಡುಗೀರನ್ನ ಹೀಗೆಯೇ ತನ್ನ ...ಗೆ ಬೀಳಿಸಿದ್ದ. ಅವರೆಲ್ಲ ಧಾರವಾಡಕ್ಕೆ ಬಂದು ಬಿರಾದಾರನ ಮುಸುಡಿಗೆ ಮಂಗಳಾರತಿ ಎತ್ತುವ ...ರಂಭವೂ ಇತ್ತೀಚೆಗೆ ಫಿಕ್ಸ್ ಆಗಿತ್ತು. ಆದರದ್ಯಾಕೋ ಕಡೇ ಕ್ಷಣದಲ್ಲಿ ರದ್ದಾಗಿತ್ತು.

ಇಂಥವನು ತನ್ನ ತೆವಲನ್ನು ಭರಿಸಿಕೊಳ್ಳುವುದಕ್ಕೋಸ್ಕರ ಕೆಲ ಸಂದರ್ಭಗಳಲ್ಲಿ ಪೊಲೀಸರನ್ನೇ ಬಳಸಿಕೊಳ್ಳುತ್ತಾನೆ. ...ಲಾ-ಶ್ರುತಿ ವಿಚಾರದಲ್ಲಿ ಅವರು ಎಲ್ಲೆಲ್ಲಿ ಯಾರ್‍ಯಾರನ್ನು ಭೇಟಿಯಾಗುತ್ತಾರೆ ಅಂತೆಲ್ಲ ಮಾಹಿತಿ ಕಲೆ ಹಾಕಲು ...ಪ ಪೇದೆಗಳನ್ನು ಬಳಸಿಕೊಂಡಿದ್ದ!

ಈತನ ಶೌರ್ಯ ಪ್ರದರ್ಶನಗಳು ಎಷ್ಟು ಫೇಮಸ್ ಆಗಿವೆಯೆಂದರೆ ಈತ ಕೆಲಸ ಮಾಡಿಬಂದ ಕಡೆಗಳಲ್ಲಿ ...ಪ ಹೊಗಳಿಕೆ ... 'ಅಣ್ಣಾ ಸಾರ್... ಮಹಾ ಕಚ್ಚೆಹರುಕ' ಎಂಬ ಮಾತು ಸಾರ್ವತ್ರಿಕವಾಗಿ ಕೇಳಿಬರುತ್ತದೆ!


ಕಾಲಿಗೆ ಬೀಳ್ತೀನಿ ಅಂದ!

[illegible] ತೂಟಿಯನ್ನಾಗಿಸಿಕೊಂಡಿರುವ ಬಿರಾದಾರ್ ಇದೀಗ [illegible] ... ಹಿಡಿದೆದ್ದಿರುವ ಶ್ರುತಿ ಮಾಧ್ಯಮಗಳ ಮುಂದೆ ಮಾನ [illegible] ... ಯುವ ವರದಿಗಾರರು 'ಹೋಗಲೋ' ಅಂದರು.

ಈ ಪ್ಲಾನ್ ಫ್ಲಾಪ್ ಆದದ್ದೇ ಬಿರಾದಾರ ಇನ್ನೊಂದು ಸಂಚು ರೂ[illegible] ... ಬಳಿ ಹೋಗಿ ಬ್ಲಾಕ್‌ಮೇಲ್ ಮಾಡಲೆತ್ನಿಸಿದ. ಮಾಧ್ಯಮದ ಗೆಳೆಯರ ಸಮಯ ಪ್ರಜ್ಞೆಯಿಂದ ಅದೂ ಕೂಡಾ ಫ್ಲಾಪ್ ಆಯ್ತು. ಬಿರಾದಾರನೆದುರಿಗೆ ಬಚಾವಾಗಬಹುದಾದ ಎಲ್ಲಾ ದಾರಿಗಳೂ ಇಲ್ಲವಾದಾಗ ಆತ ಅತ್ಯಂತ ಹೀನಾಯ[illegible] ... ಶ್ರುತಿಯ ಸಂಬಂಧಿಯೊಬ್ಬರ ಮೊಬೈಲ್‌ಗೆ ಮೆಸೇಜು ರವಾನಿಸಿದ ಬಿರಾದಾರ್ 'ನಿಮ್ಮ ಕಾಲಿಗೆ ಬೀಳ್ತೀನಿ [illegible] ಮಾನ ಉಳಿಸಿ. ಶ್ರುತಿ ವಿಷಯ ಪಬ್ಲಿಕ್ ಮಾಡದಂತೆ ತಡೀರಿ' ಅಂತೆಲ್ಲಾ ಅಲವತ್ತುಕೊಂಡ!

ಖಾಕಿ ಹಾಕಿಕೊಂಡು ಮಾಡಬಾರದ್ದನ್ನೇ ಮಾಡುತ್ತಾ ಬಂದ ಬಿರಾದಾರ್ ತನ್ನ ಮುಗ್ಧ [illegible] ... ಮೋಸ ಈ ರೀತಿ ಆಟವಾಯಿಸಿಕೊಂಡಿರಬಹುದು. ಹೀಗಂತ ಆತನ ಸಹೋದ್ಯೋಗಿಗಳೇ [illegible]

'ನಮ್ಮ ನಾಡಿನ ನಾಡೋಜ'ರಾದ ಬರಗೂರು



ಬರಗೂರು ರಾಮಚಂದ್ರಪ್ಪನವರಿಗೆ ಕನ್ನಡ ವಿಶ್ವವಿದ್ಯಾಲಯ ನಾಡೋಜ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಕನ್ನಡ ವಿಶ್ವವಿದ್ಯಾಲಯದ ಈ ಪ್ರಶಸ್ತಿ ಬರಗೂರು ಅವರಿಗೆ ಸಂದಿರುವುದು ಅತ್ಯಂತ ಅರ್ಥಪೂರ್ಣವಾಗಿದ್ದು ನಮ್ಮಂತಹವರಿಗೆ ಇದು ತುಂಬಾ ಸಂತಸ ತಂದಿದೆ. ನಮ್ಮ ನಾಡು-ನುಡಿಯ ಸಂದರ್ಭಕ್ಕೆ ಮಹತ್ವದ ಕಾಣಿಕೆ ನೀಡಿದವರನ್ನು ನಾಡಿನ ಗುರುಗಳೆಂದು ಗುರುತಿಸಿ ಗೌರವಿಸುವುದು ಕನ್ನಡ ವಿಶ್ವವಿದ್ಯಾಲಯದ ಪರಿಪಾಠ. ಈ ಹಿನ್ನೆಲೆಯಲ್ಲಿ ನೋಡಿದರೆ ಬರಗೂರು ಅವರು ನಾಡೋಜರೆಂಬುದರಲ್ಲಿ ಎರಡು ಮಾತಿಲ್ಲ.

70ರ ದಶಕದಲ್ಲಿ ರೂಪುಗೊಳ್ಳುತ್ತಾ ಬಂದ ಕನ್ನಡನಾಡಿನ ಹೊಸ ಸಾಂಸ್ಕೃತಿಕ, ಸಾಹಿತ್ಯಕ ಸಂದರ್ಭದಲ್ಲಿ ನಾವು ಮುಖ್ಯವಾಗಿ ಗುರುತಿಸಬೇಕಾಗಿರುವ ಕ್ರಿಯಾಶೀಲ ವ್ಯಕ್ತಿತ್ವಗಳಲ್ಲಿ ಬರಗೂರು ರಾಮಚಂದ್ರಪ್ಪ ಮುಂಚೂಣಿ ಸಾಲಿನವರು. ವಯಸ್ಸಿನ ದೃಷ್ಟಿಯಿಂದ ಹೇಳುವುದಾದರೆ ಸರಿಯಾದ ಸಮಯಕ್ಕೆ 'ನಾಡೋಜ' ಪ್ರಶಸ್ತಿ ಅವರನ್ನು ಗೌರವಿಸಿದೆ ಎನ್ನಬಹುದಾದರೂ ಅವರು ಕನ್ನಡದ ಸಾಂಸ್ಕೃತಿಕ ಲೋಕದಲ್ಲಿ ನಿರ್ವಹಿಸಿದ ಪಾತ್ರ, ಕೊಟ್ಟ ಕೊಡುಗೆಯನ್ನು ಗಮನಿಸಿದರೆ ಈ ಗೌರವ ಅವರಿಗೆ ಸ್ವಲ್ಪ ತಡವಾಗಿ ಸಂದಿದೆ ಎನ್ನಬೇಕಾಗುತ್ತದೆ. ಕನ್ನಡ ವಿಶ್ವವಿದ್ಯಾಲಯವು ಇತರೆ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಆಶೋತ್ತರಗಳೊಂದಿಗೆ ಆರಂಭವಾದದ್ದು. ಕನ್ನಡದ ಪ್ರಾಚೀನತೆಯ ಹಿರಿಮೆಯನ್ನು, ಅದರ ಪರಂಪರೆಯ ಗರಿಮೆಯನ್ನು ಕುರಿತ ಕಾಳಜಿಗಳ ಹಾಗೆಯೇ ವರ್ತಮಾನದ ಅದರ ನಡೆಯನ್ನು, ಅದರ ಹೊರಳುಗಳನ್ನು ಪೋಷಿಸುವ ಆಶಯ ಅದರದ್ದಾಗಿದೆ. ಆ ಹಿನ್ನೆಲೆಯಿಂದ ಯೋಚಿಸಿದರೆ ಬರಗೂರು ಈ ಮೊದಲೇ ನಾಡೋಜರಾಗಬೇಕಿತ್ತು.

ಸಾಮಾಜಿಕ ಚಲನಶೀಲತೆಯ ದೃಷ್ಟಿಯಿಂದ ಕನ್ನಡ ಸಾಹಿತ್ಯದ ವ್ಯಾಪ್ತಿಯನ್ನು ದಲಿತ ಬಂಡಾಯ ಸಾಹಿತ್ಯ ಚಳವಳಿಗಳು ಅತ್ಯಂತ ವಿಸ್ತೃತವಾಗಿ ಬದಲಿಸಿವೆ. ಆ ಸಾಹಿತ್ಯ ಚಳವಳಿಗಳ ಒತ್ತಾಸೆಯಿಂದ ಕರ್ನಾಟಕದಲ್ಲಿ ಈವರೆಗೆ ಲಿಖಿತ ಲೋಕದಲ್ಲಿ ತಮ್ಮ ಅನುಭವಗಳನ್ನು ದಾಖಲಿಸಿರದಿದ್ದ ನೂರಾರು ದನಿಗಳು ತಮ್ಮ ಸಾಂಸ್ಕೃತಿಕ ಅಸ್ಮಿತೆಯ ಸಮೇತ ಹಾಜರಾದವು. ಕನ್ನಡ ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಈ ಪಾಲ್ಗೊಳ್ಳುವಿಕೆ ಅತ್ಯಂತ ಪರಿಣಾಮಕಾರಿಯಾಗಿದ್ದು, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವ್ಯವಹರಿಸಬೇಕಾದ ಭಾಷೆಯೊಂದು ತನ್ನ ಅಭಿವ್ಯಕ್ತಿ ಮಜಲುಗಳನ್ನು ಈ ಘಟ್ಟದಲ್ಲಿ ಪ್ರಜಾತಾಂತ್ರಿಕಗೊಳಿಸಿಕೊಂಡಿತು. ಇಂತಹ ಮುಖ್ಯ ಬೆಳವಣಿಗೆಯ ಸಂದರ್ಭದಲ್ಲಿ ಬರಗೂರು ಬಂಡಾಯ ಸಾಹಿತ್ಯ ಚಳವಳಿಯ ವಕ್ತಾರರಾಗಿ, ಸಿದ್ಧಾಂತಿಯಾಗಿ, ಮುಖಂಡರಾಗಿ ಅವಿಚಲಿತ ಶ್ರದ್ಧೆಯಿಂದ ಕೆಲಸ ಮಾಡುತ್ತಾ ಬಂದಿದ್ದಾರೆ.

ಕವಿಯಾಗಿ, ಕಾದಂಬರಿಕಾರರಾಗಿ, ಸಂಸ್ಕೃತಿ ಚಿಂತಕರಾಗಿ ಅವರು ಬರೆದ ಕೃತಿಗಳು ಹಾಗೂ ಅವರು ನಿರ್ದೇಶಿಸಿದ ಚಲನಚಿತ್ರಗಳು ಅವರ ವ್ಯಕ್ತಿಗತ ಸೃಜನಶೀಲತೆಗೆ ನಿದರ್ಶನವಾದರೆ, ಬಂಡಾಯ ಸಾಹಿತ್ಯ ಚಳವಳಿಯ ಚಾಲಕಶಕ್ತಿಗಳಲ್ಲೊಬ್ಬರಾಗಿ ಅವರು ನಿರ್ವಹಿಸುತ್ತಲೇ ಬಂದಿರುವ ಕ್ರಿಯಾಶೀಲತೆ ಕನ್ನಡದ ಸಾಂಸ್ಕೃತಿಕ ಲೋಕದ ಸತ್ವವನ್ನು ಎತ್ತರಿಸಿದಂತಾಗಿದೆ. ಕಥೆ, ಕಾದಂಬರಿ ಬರೆಯುವುದರಿಂದ ಲೇಖಕನೊಬ್ಬ ತನ್ನ ಸೃಜನಶೀಲ ಪ್ರತಿಭೆಯನ್ನು ಅನಾವರಣಗೊಳಿಸುತ್ತಲೇ ಭಾಷೆಯೊಂದರ ಚೈತನ್ಯವನ್ನು ಹೆಚ್ಚಿಸುತ್ತಾನೆ. ಆದರೆ ಬಂಡಾಯ ಸಾಹಿತ್ಯ ಚಳವಳಿಯಂತಹ ಚಳವಳಿ ಒಂದು ನಾಡಿಗೆ ಒದಗಿಸುವ ಹೊಸ ದೃಷ್ಟಿಕೋನ ಹಾಗೂ ಅದು ವಿವಿಧ ಜನಸಮುದಾಯಗಳ ನಡುವೆ ಉಂಟುಮಾಡುವ ಸೃಜನಶೀಲ ಆತ್ಮವಿಶ್ವಾಸ ಒಟ್ಟಾರೆ ಸಮಾಜವೊಂದರ ಪ್ರತಿಭಾ ಚೈತನ್ಯವನ್ನು ಅನಾವರಣಗೊಳಿಸುತ್ತದೆ. ಆದ್ದರಿಂದಲೇ ಅಂತಹ ಒಂದು ಸಾಂಸ್ಕೃತಿಕ ಮುನ್ನಡೆಗೆ ಇರುವ ಪರಿಣಾಮ ಅತ್ಯಂತ ಮಹತ್ವದ್ದು ಹಾಗೂ ದೀರ್ಘ ಕಾಲದ್ದೂ ಆಗಿರುತ್ತದೆ.

ಉಪಸಂಸ್ಕೃತಿಗಳ ಅಧ್ಯಯನ ಎಂಬ ಮಾಲಿಕೆಯನ್ನು ಬರಗೂರು ಅವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದಾಗ ಪ್ರಕಟಿಸಿದರು. ಜನ ಸಂಸ್ಕೃತಿಗಳನ್ನು ಅದರ ನಗಣ್ಯ ಸ್ತರಗಳಿಂದ ಗ್ರಹಿಸಿಕೊಳ್ಳುವ ನಡಿಗೆಯ ಆರಂಭವನ್ನು ಈ ಮಾಲಿಕೆಯ ಪ್ರಕಟಣಾ ಯೋಜನೆಯೊಂದಿಗೆ ನಾವು ಗುರುತಿಸಬಹುದಾಗಿದೆ. ಆಗ್ಗಿನಿಂದ ತಳ ಸಂಸ್ಕೃತಿಗಳ ಅಧ್ಯಯನವೆಂಬುದು ಒಂದು ಮಹತ್ವದ ಅಧ್ಯಯನ ಮಾರ್ಗವಾಗಿ ಮುನ್ನಡೆದಿದೆ. ಜಾಗತೀಕರಣದ ಸಾಂಸ್ಕೃತಿಕ ದಾಳಿಗೆ ವಿರೋಧವಾಗಿ ಜನಮುಖಿ ದೇಸಿ ಅಸ್ಮಿತೆ ರೂಪುಗೊಳ್ಳಬೇಕೆಂದರೆ ಅದು ನಗಣ್ಯ ಸಂಸ್ಕೃತಿಗಳ ಸತ್ವದಿಂದಲೇ ಪರಿಪುಷ್ಟಗೊಳ್ಳಬೇಕಾಗುತ್ತದೆ. ಈ ಹಿನ್ನೆಲೆಯಿಂದ ನೋಡಿದರೆ ಉಪಸಂಸ್ಕೃತಿಗಳ ಅಧ್ಯಯನ ಮಾಲಿಕೆಯು ಕನ್ನಡದ ಅಧ್ಯಯನ ಮಾರ್ಗವು ಹೊಸ ಆಯಾಮ ಪಡೆದುಕೊಳ್ಳಬೇಕಿರುವುದನ್ನು ಅತ್ಯಂತ ಸೂಕ್ತವಾಗಿ ಪ್ರತಿಪಾದಿಸಿತ್ತು.

ಇಂತಹ ಹಲವಾರು ಮಾರ್ಗ ಪ್ರವರ್ತಕ ಯೋಜನೆಗಳನ್ನು ಬರಗೂರು ಪ್ರತಿಪಾದಿಸಿದ್ದಾರೆ. ಉನ್ನತ ತಾಂತ್ರಿಕ ಶಿಕ್ಷಣದಲ್ಲಿ ಕೂಡ ಕನ್ನಡವನ್ನು ಒಂದು ಪತ್ರಿಕೆಯಾಗಿ ಪಠ್ಯಕ್ರಮದಲ್ಲಿ ಅಳವಡಿಸಬೇಕೆಂಬುದು, ಕನ್ನಡ ಮಾಧ್ಯಮದಲ್ಲಿ ಕಲಿತವರಿಗೆ ಉದ್ಯೋಗಾವಕಾಶಗಳಲ್ಲಿ ಮೀಸಲಾತಿ ಒದಗಿಸಬೇಕೆಂಬುದು, ಪ್ರಾಥಮಿಕ ಶಿಕ್ಷಣದಲ್ಲಿ ಇಂಗ್ಲಿಷ್‌ಅನ್ನು ಒಂದು ಭಾಷೆಯಾಗಿ ಸರ್ಕಾರಿ ಶಾಲೆಗಳಲ್ಲೂ ಕಲಿಸಬೇಕೆಂಬುದು ಬರಗೂರು ಅವರ ಮನುನಿಷ್ಠ ದೂರದರ್ಶಿತ್ವದ ಚಿಂತನೆಗಳಲ್ಲಿ ಕೆಲವು. ವರ್ತಮಾನದ ಬಿಕ್ಕಟ್ಟುಗಳ ಸಂದರ್ಭದಲ್ಲಿ ಕನ್ನಡ ಭಾಷೆ ಹಾಗೂ ಸಂಸ್ಕೃತಿಯ ಬೆಳವಣಿಗೆಗೆ ಅವರು ಪರಿಹಾರಗಳನ್ನು ಸೂಚಿಸಿದ್ದಾರೆ.

ನಮ್ಮಂತಹ ಸಮಾಜದಲ್ಲಿರುವ ಯಾವುದೇ ಲೇಖಕ ರಾಜಕಾರಣದಿಂದ ವಿಮುಖನಾಗಿರಲು ಸಾಧ್ಯವಿಲ್ಲ. 'ಹಾಗೆ ನೋಡಿದರೆ ರಾಜಕೀಯದ ಕರ್ತವ್ಯವನ್ನು ಪೂರೈಸುವುದಕ್ಕಾಗಿಯೇ ನಾನು ಸಾಹಿತ್ಯ ಲೋಕದಲ್ಲಿದ್ದೇನೆ' ಎಂದು ಹೇಳುವ ಗೂಗಿ ವಾ ಥಿಯಾಂಗೋನ ಹೇಳಿಕೆಯ ಸಾಕಾರ ರೂಪದಂತೆ ಬರಗೂರು ನಮ್ಮ ನಡುವೆ ಇದ್ದಾರೆ. 'ಸಾಹಿತ್ಯ ಮತ್ತು ರಾಜಕಾರಣ' ಎಂಬ ಬರಗೂರರ ಕೃತಿ ಈ ಸಮಾಜದಲ್ಲಿ ಸಾಹಿತ್ಯ ನಿರ್ವಹಿಸಬೇಕಿರುವ ಜವಾಬ್ದಾರಿಯನ್ನು ಅತ್ಯಂತ ಸ್ಪಷ್ಟವಾಗಿ ಎರಡು ದಶಕಗಳ ಹಿಂದೆಯೇ ನಮ್ಮ ಮುಂದಿಟ್ಟಿದೆ. ಸಾಹಿತಿ ರಾಜಕಾರಣ ದಲ್ಲಿರುತ್ತಾನೆ ಆದರೆ ರಾಜಕಾರಣಿಯಾಗಿ ಅಲ್ಲ ಎಂಬುದು ಬರಗೂರು ಅವರ ನಿಲುವು.

ವ್ಯಕ್ತಿಗತ ರಾಜಕಾರಣ ಅವರ ಆಯ್ಕೆಯಲ್ಲ, ಸಮೂಹಗಳ ಸಾಂಸ್ಕೃತಿಕ ರಾಜಕಾರಣ ಅವರ ದಾರಿ. ಅದಕ್ಕಾಗಿ ಅವರು ನಿಷ್ಠುರ ಹೊರಲು ಸಿದ್ಧ. ಸಾಂಸ್ಕೃತಿಕ ಲೋಕದ ಕಾರ್ಯಕರ್ತರಾಗಿ ಜನ ಸಮೂಹಗಳ ಆಶೋತ್ತರಗಳಿಗೆ ಅಧಿಕಾರ ರಾಜಕಾರಣವು ಕಿವಿಗೊಡುವಂತೆ ಮಾಡುವುದಕ್ಕಾಗಿಯೇ ಮಾತುಕತೆ, ಸಂಧಾನ, ಒತ್ತಡ ನಿರ್ಮಾಣ ಹಾಗೂ ಪ್ರತಿಭಟನೆ ಎಂಬ ವಿಧಾನಗಳನ್ನು ಬರಗೂರು ಅವಿರತವಾಗಿ ನಿಷ್ಠುರಗಳ ನಡುವೆಯೇ ನಡೆಸಿಕೊಂಡು ಬಂದಿದ್ದಾರೆ.

ಬಂಡಾಯ ಸಾಹಿತ್ಯದ ದೃಷ್ಟಿಕೋನ ಹಾಗೂ ಅದರ ಬದ್ಧತೆಯ ಪ್ರತಿಪಾದನೆಗಳು ಹಲವು ಸಲ ಗೇಲಿಗೊಳಗಾಗಿವೆ. ಅದರ ಮುಖ್ಯ ಗುರಿಯಾಗಿ ಬರಗೂರು ಕೂಡ ಟೀಕೆಗೆ, ವಿಮರ್ಶೆಗೆ ಅನಾರೋಗ್ಯಕರ ಈರ್ಷ್ಯೆಗೆ ಹಲವು ಸಲ ಗುರಿಯಾಗಿದ್ದಾರೆ. ಅದೇ ಸಂದರ್ಭದಲ್ಲಿ ಸಾಮಾಜಿಕ ಕಾಳಜಿಗಳುಳ್ಳ ಸಮಾಜದ ಕೆಳಸ್ತರಗಳಿಂದ ಬಂದ ಸಾವಿರಾರು ಯುವಕ, ಯುವತಿಯರಿಗೆ ಮಾರ್ಗದರ್ಶಕರೂ, ಪ್ರೇರಕರೂ, ಆತ್ಮ ಸ್ಥೈರ್ಯ ನಿರ್ಮಾಪಕರೂ ಆಗಿ ಅಭಿಮಾನ ಸೂರೆಗೊಂಡಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ಲೋಕವನ್ನು ಜನಸಮೂಹಗಳ ಪ್ರಾತಿನಿಧಿಕ ದನಿಯನ್ನಾಗಿಸುವಲ್ಲಿ ಬರಗೂರು ರಾಮಚಂದ್ರಪ್ಪ ಅವರು ನಿರ್ವಹಿಸುತ್ತಿರುವ ಕ್ರಿಯಾಶೀಲತೆ ಅವರನ್ನು ನಾಡೋಜ ಎನ್ನುವ ಪದವಿಗೆ ಅತ್ಯಂತ ಸೂಕ್ತ ಆಯ್ಕೆಯನ್ನಾಗಿಸಿದೆ.

ಕರ್ನಾಟಕದಲ್ಲಿ ಎಷ್ಟು 'ನಾಡು'ಗಳಿವೆಯೋ ಅಷ್ಟು ಬಗೆಯ ನಾಡೋಜರೂ ಇರುವುದು ಸಹಜವಾಗಿದೆ. ಬರಗೂರು 'ನಮ್ಮ ನಾಡಿನವರು. ನಮ್ಮ ನಾಡು ಅತ್ಯಂತ ವೈವಿಧ್ಯಮಯವಾದುದು, ವಿಸ್ತಾರವಾದುದು, ತಳದ ಬೇರುಗಳಿಂದ ಜೀವ ಪಡೆಯುತ್ತಾ ಇನ್ನೂ ನಿರ್ಮಾಣಗೊಳ್ಳುತ್ತಲೇ ಇರುವಂಥದ್ದು. ಈ 'ನಮ್ಮ ನಾಡಿನ ನಾಡೋಜ'ರಲ್ಲೊಬ್ಬರಾಗಿ ಗೌರವ ಪಡೆದಿರುವ ಬರಗೂರು ಅವರಿಗೆ ಅವರ ಅಪಾರ ಶಿಷ್ಯ ವೃಂದದ ಪರವಾಗಿ ಅಭಿನಂದನೆಗಳು. ಈ ಆಯ್ಕೆ ಮಾಡಿದ್ದಕ್ಕೆ ಕನ್ನಡ ವಿವಿಯ ಕುಲಪತಿಗಳಾದ ಪ್ರೊ. ಮುರಿಗೆಪ್ಪ ಹಾಗೂ ಕುಲಸಚಿವರಾದ ಡಾ. ಬೇವಿನಕಟ್ಟಿ ಮಂಜುನಾಥ ಮತ್ತವರ ಸಹೋದ್ಯೋಗಿಗಳು ಕೂಡ ಅಭಿನಂದನಾರ್ಹರಾಗಿದ್ದಾರೆ.

• ಡಾ. ಬಂಜಗೆರೆ ಜಯಪ್ರಕಾಶ್

ರಹಮತ್ ತರೀಕೆರೆ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವ ಹೆಚ್ಚಿಸಿದ ಚಿಂತಕ



ಕನ್ನಡದ್ದೇ ಆದ ಚಿಂತನೆಯ ಹುಡುಕಾಟದ ಹಂಬಲವಿರುವ ಚಿಂತಕ ರಹಮತ್ ತರೀಕೆರೆ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸುವ ಮೂಲಕ ಆ ಪ್ರಶಸ್ತಿಯ ತೂಕ ಇಮ್ಮಡಿಯಾಗಿದೆ. ಕನ್ನಡದ ಚಿಂತನಾಕ್ರಮವನ್ನು ರೂಪಿಸುವಲ್ಲಿ ನಿರಂತರ ಅಧ್ಯಯನ, ಬರಹ, ತಿರುಗಾಟದಲ್ಲಿ ತೊಡಗಿದ ದಣಿವರಿಯದ ದುಡಿಮೆಗಾರನಿಗೆ ಸಂದ ಗೌರವವಿದು. ಕನ್ನಡ ಸಾಹಿತ್ಯ ಸಂಸ್ಕೃತಿ ಚಿಂತನೆಯಲ್ಲಿ ತರೀಕೆರೆ ಅವರು ತಮ್ಮದೇ ಆದ ಆಲೋಚನ ವಿನ್ಯಾಸಗಳನ್ನು ರೂಪಿಸಿದ್ದಾರೆ. ಇದು ಈ ತನಕದ ತಿಳಿವಳಿಕೆಯ ವ್ಯಾಪ್ತಿಯನ್ನು ಅಗಾಧವಾಗಿ ವಿಸ್ತರಿಸಿದೆ. ಅವರ ಮೊದಲ ಕೃತಿ 'ಪ್ರತಿಸಂಸ್ಕೃತಿ'ಯಲ್ಲೇ ಹೊಸ ಆಲೋಚನೆಯ ಒಳನೋಟಗಳನ್ನು ನೀಡಿ, ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರಲ್ಲಿ ಭರವಸೆಯನ್ನು ಹುಟ್ಟಿಸಿದ್ದರು. ಅದು ಅವರ 'ಮರದೊಳಗಣ ಕಿಚ್ಚು' ಕೃತಿಯಲ್ಲಿ ಇನ್ನಷ್ಟು ಖಚಿತವಾಯಿತು. ಈಚಿನ ಅವರ 'ಚಿಂತನೆಯ ಪಾಡು' ಕೃತಿ ತನಕ ಪ್ರತಿಸಂಸ್ಕೃತಿ ಹುಡುಕಾಟದ ನೆಲೆಗಳಿಗೆ ಬೇರೆ ಬೇರೆ ಪ್ರವೇಶಗಳನ್ನು ಒದಗಿಸಿಕೊಟ್ಟಿದ್ದಾರೆ.



ಕನ್ನಡಕ್ಕೆ ಬೇಕು ಕನ್ನಡದ್ದೇ ಚಿಂತನಾಕ್ರಮ ಎನ್ನುವ ಅವೈದಿಕ ಆಲೋಚನೆಯ ಬಿತ್ತಿ ತರೀಕೆರೆ ಅವರ ಒಟ್ಟು ಬರಹದ ತಾತ್ವಿಕತೆ. ಗೆರೆ ಕೊರೆದು ಬೇರ್ಪಟ್ಟಂತಹ ಹಲವು ಜ್ಞಾನಶಾಖೆಗಳ ಸಾಂಪ್ರದಾಯಿಕ ಕಟ್ಟುಗಳನ್ನು ಮುರಿದು, ಅವುಗಳ ನಡುವೆ ಒಡನಾಡುವ ಸಂಬಂಧವನ್ನು ಸಾಧ್ಯವಾಗಿಸಿದ್ದು ಅವರ ಚಿಂತನೆಯ ಶಕ್ತಿ. ಹಾಗಾಗಿ ಅವರನ್ನು ಯಾವುದೋ ಒಂದು ಚೌಕಟ್ಟಿನಲ್ಲಿ ಕೂರಿಸಲು ಸಾಧ್ಯವಿಲ್ಲ. ಅವರೊಳಗೊಬ್ಬ ಇತಿಹಾಸಕಾರ, ಸಂಸ್ಕೃತಿ ಚಿಂತಕ, ಮಾನವಶಾಸ್ತ್ರಜ್ಞ, ಸಾಹಿತ್ಯ ವಿಮರ್ಶಕ, ಜಾನಪದ ವಿದ್ವಾಂಸ, ಚಳವಳಿಗಾರ, ಸೃಜನಶೀಲ ಬರಹಗಾರ, ಇವೆಲ್ಲಕ್ಕಿಂತ ಮುಖ್ಯವಾಗಿ ಮಾನವೀಯ ಅಂತಃಕರಣದ ವ್ಯಕ್ತಿ ಇದ್ದಾನೆ. ಹಾಗಾಗಿಯೇ ಅವರ ಚಿಂತನೆಯೊಳಗೆ ಇವೆಲ್ಲವುಗಳನ್ನು ಹೀರಿಕೊಂಡಂತಹ ಆಲೋಚನಾ ಕ್ರಮವಿದೆ. ಇದು ಅವರು ಏಕಕಾಲದಲ್ಲಿ ಸಂಸ್ಕೃತಿ ಚಿಂತಕರಾಗಿ, ವಿಮರ್ಶಕರಾಗಿ, ಇತಿಹಾಸಕಾರರಾಗಿ, ನಾಡುನುಡಿ ಚಿಂತಕರಾಗಿ ಹಲವು ವಿದ್ವತ್ತುಗಳ ಸಂಗಮವಾಗಲು ಸಾಧ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯದ ದೇಸಿ ಚಿಂತನೆಯ ಆಲೋಚನಾ ಕ್ರಮವನ್ನು ರೂಪಿಸುತ್ತಿರುವವರಲ್ಲಿ ತರೀಕೆರೆ ಪ್ರಮುಖರು.


'ಕರ್ನಾಟಕದ ಸೂಫಿಗಳು' ಮತ್ತು 'ಕರ್ನಾಟಕದ ನಾಥಪಂಥ' ಈ ಎರಡೂ ಕರ್ನಾಟಕದ ಸಾಂಸ್ಕೃತಿಕ ಅಧ್ಯಯನದ ಬಹಳ ಮುಖ್ಯವಾದ ರಚನೆಗಳು. ಇವು ಕನ್ನಡನಾಡಿನ ತಿಳುವಳಿಕೆಯನ್ನು ತೀರಾ ಭಿನ್ನವಾಗಿ ವಿಸ್ತರಿಸಿವೆ. ಅವರ ಸಂಸ್ಕೃತಿಯನ್ನು ಕುರಿತ ವ್ಯಾಖ್ಯಾನಗಳಲ್ಲಿ ಜನಸಾಮಾನ್ಯರ ಜ್ಞಾನಕೋಶವನ್ನು, ಅವರ ಬದುಕಿನ ಕ್ರಮವನ್ನೂ, ಚೈತನ್ಯದ ಶಕ್ತಿಯನ್ನೂ ಒಳಗೊಳ್ಳಲು ಸಾಧ್ಯವಾಗಿದೆ. ಜನರ ಆಲೋಚನಾ ಕ್ರಮದ ಕಣ್ಣೋಟದಿಂದ ಕನ್ನಡ ಸಾಹಿತ್ಯವನ್ನು, ಸಂಸ್ಕೃತಿಯನ್ನು ನೋಡಿದ ಒಂದು ವಿಶಿಷ್ಟ ಮಾದರಿ ಅವರದು. ಕನ್ನಡದ್ದೇ ಆದ ಚಿಂತನಾ ಮಾದರಿಯನ್ನು ವರ್ತಮಾನದ ಎಚ್ಚರದ ಮೂಲಕ ಕಟ್ಟುತ್ತಿರುವ ಕಾರಣಕ್ಕೆ ತರೀಕೆರೆ ಅವರು ನಮ್ಮ ಕಾಲದಲ್ಲಿ ಮುಖ್ಯರಾಗುತ್ತಾರೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ ಭಾಜನವಾದ 'ಕತ್ತಿಯಂಚಿನ ದಾರಿ' ಕನ್ನಡದ ಸಾಹಿತ್ಯ ವಿಮರ್ಶೆ, ಸಾಂಸ್ಕೃತಿಕ ವಿಮರ್ಶೆಯಾಗಿ ರೂಪಾಂತರಗೊಳ್ಳುತ್ತಿರುವ ಛಾಯೆ ದಟ್ಟವಾಗಿರುವ ಕೃತಿ. ಕುವೆಂಪು, ರಾಮಚಂದ್ರಶರ್ಮ, ನಿಸಾರ್, ತೇಜಸ್ವಿ, ಡಿ. ಆರ್ ನಾಗರಾಜ, ಶಾಂತಿನಾಥ ದೇಸಾಯಿ, ಕಾರಂತ, ದೇವಚಂದ್ರ, ಬಸವಣ್ಣ, ರಾಘವಾಂಕ, ಶಿವಕೋಟ್ಯಾಚಾರ್ಯ, ಸುಬ್ಬಣ್ಣ, ಚನ್ನಯ್ಯ, ಲಂಕೇಶ್, ಮೊಕಾಶಿ ಪುಣೇಕರ, ಕುಂವಿ –ಹೀಗೆ ಕನ್ನಡ ಸಾಹಿತ್ಯ ಪರಂಪರೆಯನ್ನು ಕಟ್ಟಿದ ಮನಸ್ಸುಗಳ ಜತೆ ತರೀಕೆರೆ ಅವರು ಮುಖಾಮುಖಿಯಾಗಿ ವಾಗ್ವಾದಗಳನ್ನು ಹುಟ್ಟಿಸಿದ್ದಾರೆ. ಇಲ್ಲಿನ ಕೆಲವು ಗ್ರಹಿಕೆಗಳು ಕನ್ನಡದ ವಿಮರ್ಶೆಯಲ್ಲಿಯೇ ಅಪರೂಪದ ಒಳನೋಟಗಳಾಗಿವೆ. ಇಂತಹ ಕೃತಿಗೆ ಅಕಾಡೆಮಿ ಪ್ರಶಸ್ತಿ ಲಭಿಸಿರುವುದು ಕನ್ನಡದ ಸಂಸ್ಕೃತಿ ಚಿಂತನೆಗೆ ಸಂದ ಗೌರವವಾಗಿದೆ. ಕರ್ನಾಟಕದಾದ್ಯಂತ ತಿರುಗಾಡಿ, ಜನಬದುಕಿನ ತಳಮಳಗಳನ್ನೂ, ಚೈತನ್ಯವನ್ನೂ ಗುರುತಿಸುತ್ತಾ ಬರಹ ಮಾಡುತ್ತಿರುವ ಕನ್ನಡದ ಸೂಕ್ಷ್ಮ ಸಂವೇದನೆಯ ರಹಮತ್ ತರೀಕೆರೆ ಅವರಿಗೆ ಈ ಸಂದರ್ಭದಲ್ಲಿ ಹೃತ್ಪೂರ್ವಕವಾಗಿ ಅಭಿನಂದಿಸೋಣ.

• ಡಾ.ಅರುಣ್‌ಜೋಳದ್, ಕೂಡ್ಲಿಗಿ

ಅಷ್ಟೊತ್ತಿಗೆ ವಿರಾಮವಾಗಿ ಕೂತಿದ್ದೆ ಹೊರಗೆ ಗೇಟಿಗೆ ...ದ ಸದ್ದು ಕೇಳಿದಾಗ, ಆಲಸ್ಯದಿಂದಲೇ ಹೊರಳಿ ...ದಿದೆ. ಒಬ್ಬ ಹೆಣ್ಣುಮಗಳು ತಲೆಯ ಮೇಲೆ ಮೂಟೆ ...ತ್ತು ನಿಂತಿದ್ದು ಕಾಣಿಸುತ್ತಿತ್ತು. ಏನೋ ಮಾರಾಟ ...ತಲು ಬಂದವಳು ಎಂದು ಅರಿತೊಡನೆ, ಏನು ಎಂದು ...ಸುವ ಬದಲು "ಏನೂ ಬೇಡ ಹೋಗಮ್ಮ ಮುಂದೆ" ...ದೆ. ಹೀಗನ್ನಲು ಕಾರಣವಿತ್ತು.

"ನೋಡು, ಯಾರೇ ಮಾರಾಟಗಾರರು ಬಂದರೂ ...ಲು ತೆಗೆಯಲು ಬಿಡಬೇಡ. ಹಾಗೆ ಬರುವವರಲ್ಲಿ ...ಡಾ ಜನರಿಗಿಂತ ಠಕ್ಕರೇ ಜಾಸ್ತಿ. ಒಮ್ಮೆ ನೀನು ಮಾತಾಡಿಸಿ, ...ಗೆ ಕೊಟ್ಟೆಯೆಂದರೆ, ನಿನ್ನ ಪೂರ್ವಾಪರ ಎಲ್ಲ ತಿಳಿದು ...ಂಡು, ನಿಂಗೆ ಮಂಕುಬೂದಿ ಎರಚಿ, ಮನೆಯೊಳಗೆ ... ಎಲ್ಲ ದೋಚಿಕೊಂಡು ಹೋದಾರು. ಅಪರಿಚಿತರಾದ ...ರಿಗೂ ನೀನು ಒಬ್ಬೆ ಇದ್ದಾಗ ಮುಂಬಾಗಿಲು ತೆಗೆ ...ಲೇ ಬೇಡ. ಮೊದಲು ಬಾಗಿಲಲ್ಲಿರುವ ಕಿಂಡಿಯಲ್ಲಿ ...ಡಿ, ಪರಿಚಿತರಿಗೆ ಮಾತ್ರ ಬಾಗಿಲು ತೆಗೆ" ಎಂದು



...ಗೆ ಹೇಳಿದಂತೆ ಈತ ಸಾರಿಸಾರಿ ಹೇಳಿದ್ದು ನನಗಿನ್ನೂ ...ಯಾಗಿ ನೆನಪಿತ್ತು. ಹೀಗಾಗಿ "ಮುಂದೆ ಹೋಗಮ್ಮ" ...ದೆ. ಅಷ್ಟರಲ್ಲಿ "ಅಕ್ಕಾ, ಗರಿಗರಿ ಮಂಡಕ್ಕಿ ಕಣಕ್ಕ ...ಗೈತೆ....ರವಷ್ಟು ನೋಡಿ....ಬನ್ನಿ ಅಕ್ಕಾ" ಎಂದದ್ದು ...ತು. 'ಮಂಡಕ್ಕಿ' ಅನ್ನೋ ಪದ ಕಿವಿಗೆ ಬಿದ್ದಿದ್ದೇ ನನ್ನ ... ಚುರುಕಾಗಿ, ಆಲಸ್ಯ ಮೈಲುದೂರ ಹಾರಿಹೋಗಿ, ...ಲೇ ಉಸಿರಲ್ಲಿ ಮುಂಬಾಗಿಲ ಚಿಲಕ ತೆಗೆದು ಗೇಟಿನ ... ಓಡಿದೆ.

...ಧಾರವಾಡ ಸೀಮೆಯ ಜನರಿಗೂ ಮಂಡಕ್ಕಿಗೂ ಒಂದು ...ಯ ಅವಿನಾಭಾವ ಸಂಬಂಧ. ಬೆಳಗಿನಿಂದ ಇರುಳಿನವರೆಗೆ ...ರೇ ಅಪರಿಚಿತರು ಎಷ್ಟೇ ಹೊತ್ತಿಗೆ ಮನೆಗೆ ಬಂದರೂ, ...ಕ್ಕೆ ಒಗ್ಗರಣೆ ಹಾಕಿದ ಗರಿಗರಿ 'ಚುರುಮುರಿ' ...ಡಕ್ಕಿ) ಇಲ್ಲವೆ ಅದರ 'ಸೂಸಲ' (ನೆನೆಯಿಸಿ, ಅನಂತರ ...ಕ್ಕಿ ಉಪ್ಪಿಟ್ಟಿನಂತೆ ಮಾಡಿದ್ದು) ಮಾಡಿಹಾಕುತ್ತಾರೆ. ...ರ ಮನೆಗಳಲ್ಲೂ ಚೀಲಗಟ್ಟಲೆ ಮಂಡಕ್ಕಿ ಸದಾ ಇರುತ್ತದೆ. ...ರ ಒಂದಿಷ್ಟು ಹಿನ್ನೆಲೆ ಇರುವ ... ಇಲ್ಲಿಗೆ ಬಂದೊಡನೆ ...ಲದ ನಾಡಿಗೆ ಬಂದಂತಾ... 'ಮಂಡಕ್ಕಿ ತಿನ್ನುವವರು ...ಗೆ ಗತಿ ಇಲ್ಲದವರು' ಎಂಬ ...ಧರ್ಮದ ಈತನಿಗೆ ಮಂಡಕ್ಕಿ ...ಲಿನ ನನ್ನ ಮೋಹ ಅರ್ಥವಾಗುವಂಥದ್ದಲ್ಲ. ಹಾಗಂತ ... ಊರಲ್ಲಿ ಮಂಡಕ್ಕಿ ಸಿಗೋದಿಲ್ಲ ಅಂತೇನಿಲ್ಲ. ...ಪ್ಪತ್ತು ಕಿಲೋಮೀಟರ್ ಹೋಗಿ, ನಗರದ ಕೇಂದ್ರ ...ರುಕಟ್ಟೆಯ ಆಜೂಬಾಜೂವಿನ ಸಂದಿಗೊಂದಿಗಳಲ್ಲಿ ...ಸು, ಕೊಳೆತ ತರಕಾರಿಗಳ ನಾತವನ್ನೆಲ್ಲ ಹೀರಿಕೊಂಡು ...ಳಿಹೋದರೆ ನನಗೆ ಬೇಕಾದ ಮಂಡಕ್ಕಿ ಸಿಗುವ ...ಡಿ ಸಿಗುತ್ತದೆ. ಅಷ್ಟೆಲ್ಲ ಸುತ್ತಾಡುವಷ್ಟರಲ್ಲಿ ಉತ್ಸಾಹವೆಲ್ಲ ...ರಿಹೋಗಿ, ಒಂದೆರಡು ಸೇರು ಮಂಡಕ್ಕಿ ಕಟ್ಟಿಸಿಕೊಂಡು, ...ಾಸ್ ಬಸ್ಸಿನಲ್ಲಿ ಎಲ್ಲರ ಚೂಪುದೃಷ್ಟಿಯನ್ನು ಕಂಡೂ ...ದಂತೆ ನಿವಾರಿಸಿಕೊಂಡು, ಮನೆ ಸೇರುವಷ್ಟರಲ್ಲಿ ...ಸಾಕಾಗಿರು ತ್ತದೆ. ಆಗೆಲ್ಲ ಈ ಪಂಚಾಯತಿಕೆಯೇ ... ಎನಿಸುತ್ತಿತ್ತು. ಹೀಗಿರುವಾಗ ಮನೆ ಮುಂದೆಯೇ ...ಡಕ್ಕಿ ಮಾರಿಕೊಂಡು ಬಂದಿದ್ದಾಳೆ ಎಂದರೆ ಎಷ್ಟು ...ಮವಾದೀತು ಎಂದು ನೀವು ಲೆಕ್ಕ ಹಾಕಿಕೊಬಹುದು. ...ಕ ಎಚ್ಚರಿಸುವ ಮೊದಲು, ತಲೆಬಾಗಿಲು ಹಾರುಹೊಡೆ... ತೆರೆದಿಟ್ಟು, ಗೇಟಿನ ಬಳಿ ಜಿಗಿದಿದ್ದೆ. ಅವಳೇನೂ ... ಹೇಳಿರಲಿಲ್ಲ; ಮಂಡಕ್ಕಿ ಗರಿಗರಿಯಾಗಿ ಚೆನ್ನಾಗೇ ಇತ್ತು ಆಸೆಬುರುಕಳಂತೆ "ಹತ್ತು ಸೇರು ಹಾಕಮ್ಮ" ಎಂದಾಗ ಅವಳಿಗೂ ಖುಷಿಯೋ ಖುಷಿ.

ಸಂಜೆ ಮಂಡಕ್ಕಿ ಚೂಡಾ ಮುಂದಿಟ್ಟು, ಅದರ ಸುತ್ತಮುತ್ತಲಿನ ಘಟನೆಗಳನ್ನು ಸವಿಸ್ತಾರವಾಗಿ ವರದಿ ಮಾಡಿದಾಗ, ಅರ್ಧಗಂಟೆ ಈತನಿಂದ ಎಚ್ಚರಿಕೆಯ ಪಾಠ ಕೇಳಬೇಕಾಯ್ತು. ಅಷ್ಟೂ ಹೊತ್ತು ಆತ ಮೆಲ್ಲುತ್ತಿದ್ದುದು ಮಾತ್ರ ನಾನು ಮಾಡಿದ ಮಂಡಕ್ಕಿ ಚೂಡಾವನ್ನು! ನಾನೂ ವಿಧಿಯಿಲ್ಲದೆ ಹೂಂಗುಟ್ಟುತ್ತ ಆತ ಹೇಳಿದ್ದಕ್ಕೆ ತಲೆಯಾಡಿಸುತ್ತಿದ್ದೆ. ಅಲ್ಲಿಂದ ಪ್ರತಿ ಹದಿನೈದು ದಿನಕ್ಕೊಮ್ಮೆ ಮಂಡಕ್ಕಿ ಮಾರಾಟದಾಕೆ ಬೋಣಿ ವ್ಯಾಪಾರ ನನ್ನಿಂದಲೇ ಆಗಬೇಕೆಂದು ಬಸ್ ಇಳಿದು ನೇರವಾಗಿ ಮನೆಗೆ ಬರತೊಡಗಿದಳು. ನಿಧಾನವಾಗಿ ನನ್ನ ನೆರೆಕರೆಯ ಮನೆಯವರೂ ಮಂಡಕ್ಕಿ ರುಚಿ ಹಿಡಿಸಿಕೊಂಡರು. ಹೀಗೆ ಆರಂಭವಾದ ನನ್ನ–ಅವಳ ನಂಟು ತಿಂಗಳುಗಳು ಉರುಳಿದಂತೆ ಬಲವಾಗುತ್ತ ಬಂದಿತು. ಆಕೆ ಅಪರಿಚಿತಳಾಗಿದ್ದಾಗ, ಗೇಟಿನ ಹೊರಗೇ ನಡೆಯುತ್ತಿದ್ದ ನಮ್ಮ ವ್ಯವಹಾರ ಸಹಜವೆನ್ನಿಸಿತ್ತು. ಈಗ ಅದೇ ಒಳಮುಳ್ಳಾಗಿ ಅಂತರಂಗಕ್ಕೆ ಚುಚ್ಚತೊಡಗಿತು. ಒಬ್ಬ ವ್ಯಕ್ತಿಯನ್ನು ಅರಿಯಲು ಎಷ್ಟು ಭೇಟಿ ಬೇಕು? ನನ್ನಲ್ಲಿ ಒಂದು ಬಗೆಯ ಹೊಯ್ದಾಟವನ್ನು, ಸರಿ–ತಪ್ಪುಗಳ ತರ್ಕವನ್ನು ಅವಳ ಆಗಮನ ಉಂಟುಮಾಡುತ್ತಿತ್ತು. ಹಾಗಂತ ಇವನ ಎಚ್ಚರಿಕೆಯನ್ನು ಮರೆಯುವುದು ಸಾಧ್ಯವಿತ್ತೇ? ಅಂತೂ ಇಂತೂ ಅಡಕತ್ತರಿಯ ನಡುವಿನ ಅಡಕೆಯ ಸ್ಥಿತಿ ನನ್ನದಾಯಿತು. ಈ ಭಾವ ಮಾತ್ರ ನನ್ನಲ್ಲಿ ಸ್ಥಾಯಿಯಾಗಿರದೆ, ಅವಳ ನಿರ್ಗಮನದೊಂದಿಗೆ ಉಪಶಮನಗೊಳ್ಳುತ್ತಿತ್ತು.

ಅದೊಂದು ದಿನ ವ್ಯಾಪಾರ ಮುಗಿಯುತ್ತಿದ್ದಂತೆಯೇ "ಅಕ್ಕಾ ಇಲ್ಲಿ ಹೊರ್ಗೆ ಕಕ್ಕಸ್ ರೂಮ್ ಇದೇನಾ" ಎಂದಳು. ಅದು ಹೊರಗೆಲ್ಲಿ ಇರುತ್ತದೆ? ಮನೆ ಒಳಗೆ ಒಂದಲ್ಲ ಎರಡೆರಡು ಇದ್ದರೂ ಅವಳನ್ನು ಒಳಗೆ ಕರೆಯಬೇಕೇ ಬೇಡವೇ ಎಂಬ ಅಳುಕು ಕಾಡಿತು. ಹೀಗೆ ದೂರಾಬಾರಾ ಓಡಾಡುವಾಗ ಪ್ರಕೃತಿಕರೆಗೆ ಎಲ್ಲಿಗೆ ಹೋಗಬೇಕು? ಅದೇನು ನಮ್ಮನ್ನ ಯಾವಾಗ್ಲೂ ಹೇಳಿ ಕೇಳಿ ಬರತ್ತಾ? ಬಂದ್ರೂ.... ಗಂಡಸ್ರೇನೋ ಮಾನ–ಮರ್ಯಾದೆ ಅಂತ ಚೂರೂ ಯೋಚ್ನೆ ಮಾಡ್ದೆ, ಬೀದಿಯಲ್ಲಿ ಒತ್ತಡವನ್ನು ನಿವಾರಿಸಿಕೊಳ್ತಾರೆ. ಹೆಂಗಸರೇನು ಮಾಡಬೇಕು? ದೂರದೂರದ ಊರಿಗೆ ರಾತ್ರಿ ಪ್ರಯಾಣಿಸುವಾಗ ನನ್ನೊಳಗೆ ತುಂಬಿರುತ್ತಿದ್ದ ಆತಂಕವನ್ನು ಮರೆಯಲಾದೀತೇ? ಎಂಬುದು ನೆನಪಾಗುತ್ತಿದ್ದಂತೆ ಇವಳನ್ನು ಒಳಗೆ ಕರೆಯೋದು ಸರಿಯೇ ಅಲ್ಲವೇ ಎಂದು ಹೊಯ್ದಾಡಿದ್ದ ಮನ, ಎಚ್ಚೆತ್ತು ಅವಳಿಗೆ ದಾರಿ ತೋರಿತು.

ಕತೆ

ದಿನಗಳು ಉರುಳಿ ಅವಳ ಆಗಮನದ ಮತ್ತೊಂದು ದಿನ ಬಂದಿತು. ಆಕೆ ಬಂದಾಗ ನಾನು ಬೆಳಗಿನ ತಿಂಡಿ ತಿನ್ನುತ್ತಿದ್ದೆ. ಗೇಟಿನ ಸದ್ದು ಕೇಳಿ ಎಂಜಲು ಕೈಯಲ್ಲಿ ಹೊರಹೋದ ನನಗೆ ಅವಳನ್ನು ಒಳಕರೆಯುವುದು ಅನಿವಾರ್ಯವಾಯಿತು. ಕರೆದೊಡನೆ ಒಳಬಂದು, ಹೊರೆ ಇಳಿಸಿ, ತುಸು ಸಂಕೋಚದಿಂದಲೇ ಕುಳಿತ ಆಕೆ, ಕೊಟ್ಟ ತಿಂಡಿ–ಚಹಾ ಸೇವಿಸಿ ತೃಪ್ತಳಾದಾಗ, ನನಗೂ ಎದೆಮೇಲಿನ ಹೊರೆ ಇಳಿದಂತಾಯಿತು. ದೂರದ ಬೆಂಗಳೂರಿಂದ ಇಲ್ಲಿಗೆ ಬಂದು, ಮಂಡಕ್ಕಿ ವ್ಯಾಪಾರವನ್ನೇ ಮಾಡಿ ಬದುಕುತ್ತಿರುವುದು, ಹಾಗೆ ಬಂದ ಆಕೆಯ ಸಂಗಡಿಗರ ವಿವರ, ಊರಲ್ಲಿ ಬಿಟ್ಟುಬಂದ ಮಕ್ಕಳ ವಿಚಾರ, ಅವರ ವಿದ್ಯಾಭ್ಯಾಸ ಎಲ್ಲ ಒಂದೊಂದೇ ಹೇಳುತ್ತಿದ್ದರೆ, ನನಗೆ ಮಾಸ್ತಿಯವರ 'ಮೊಸರಿನ ಮಂಗಮ್ಮ' ನೆನಪಾದಳು. ಆಕೆಗೆ ಚಹಾ–ತಿಂಡಿ ಕೊಟ್ಟದ್ದನ್ನು ಇವನಿಗೆ ತಿಳಿಸಿದೊಡನೆ ಮತ್ತೆ ಬಿಟ್ಟಿ ಉಪದೇಶ ಕೇಳುವುದು ಮಾತ್ರ ನನಗೆ ತಪ್ಪಲಿಲ್ಲ. "ನಾನು ತಪ್ಪು ಮಾಡಿದ್ದೇನೇ" ಎಂದು ಆತಂಕದಿಂದ ಕೇಳಿದಾಗ "ತಪ್ಪಲ್ಲ, ಆದ್ರೆ ಯಾರ್‍ಯಾರು ಹೇಗ್ಹೇಗೋ... ಯಾರಿಗೆ ಗೊತ್ತು? ಇನ್ನೊಬ್ಬರ ಅಂತರಂಗಕ್ಕೆ ಇಣುಕಿ ಇವರು ಹೀಗೇ ಅಂತ ಹೇಳಲು ಬಂದೀತೇ? ನೀನು ಒಬ್ಬಳೇ ಇದ್ದಾಗ ಹೀಗೆಲ್ಲ ಕರೆದು ಆತಿಥ್ಯ ಮಾಡುವ ಮೊದಲು ಯೋಚ್ನೆ ಮಾಡು. ಅವ್ಳು ಒಬ್ಳೇನಾ.... ಅವಳದೇ ಒಂದು ತಂಡ ಇದೇನಾ ಅಂತೇನಾದ್ರೂ ನಿಂಗೆ ಗೊತ್ತಾ? ಏನೋ ಮಂಕುಬೂದಿ ಎರಚಿ... ಸಂಗಡಿಗರಿಗೆ ಸನ್ನೆ ಮಾಡಿ... ಅವ್ರು ಬಂದು... ಇದೆಲ್ಲಾ ಬೇಕಾ ಅಂತ" ಎಂದ. ಅವನ ಮಾತೂ ನಿರಾಕರಿಸುವಂಥದ್ದಲ್ಲ. ಆದ್ರೆ....ಆದ್ರೆ ನಿರುಮ್ಮಳವಾಗಿ ಮನೆ ಮುಂದೆ ವ್ಯಾಪಾರಕ್ಕೆ ಬಂದವರೊಡನೆ ವ್ಯವಹರಿಸಲಾಗದ, ಅವರ ಭಾವನೆಗಳಿಗೆ ಸ್ಪಂದಿಸಲಾಗದ, ಮನುಷ್ಯ ಸಂಬಂಧಗಳ ಇಂದಿನ ರೀತಿ ನನಗಂತೂ ಗಂಟಲ ಬಿಸಿತುಪ್ಪ ಎನಿಸಿತು.

ಮತ್ತೊಂದು ತಿಂಗಳು ಉರುಳಿ ಮಂಡಕ್ಕಿಯಾಕೆ ಮನೆಬಾಗಿಲಲ್ಲಿ ನಿಂತಿದ್ದಳು. ಈ ಬಾರಿ ಎಂದಿನಂತೆ ಅಲ್ಲೇ ನಿಲ್ಲದೆ, ಆಕೆ ಸರಾಗವಾಗಿ ಗೇಟ್ ತೆರೆದು ಒಳಬರಲು

ಮಂಡಕ್ಕಿ ಮೀರಕ್ಕ

ಹೊರಟದ್ದು ಕಂಡಾಗ, ಎದೆ ಢವಢವ ಹೊಡೆದುಕೊಳ್ಳತೊಡಗಿತು. 'ಹಿಂದಿನ ಬಾರಿ ಕಾಫಿ ತಿಂಡಿ ಕೊಟ್ಟು ಸತ್ಕರಿಸಿದ್ದಕ್ಕೆ ತಾನೇ ಅವಳಿಗೆ ಈ ಸಲಿಗೆ ಬಂದದ್ದು! ಅವನು ಹೇಳಿರೋದ್ರಲ್ಲಿ ಏನಿದೆ ತಪ್ಪು? ಈಗೇನ್ ಮಾಡ್ತೀಯಾ? ನಿಜವಾಗ್ಲೂ ಅವಳು ಮೋಸಗಾರಳೇ ಆಗಿದ್ರೆ....' ಎಂದು ಕಳ್ಳಮನಸ್ಸು ಒಳಗೊಳಗೇ ಬೇಯುತ್ತಿತ್ತು; ನೋಯುತ್ತಿತ್ತು; ಜೊತೆಗೆ ಪರಿತಪಿಸುತ್ತಿತ್ತು. ಗೇಟಿನಿಂದ ನಾಲ್ಕು ಹೆಜ್ಜೆ ಆಕೆ ಒಳಬರುವಷ್ಟರಲ್ಲಿ "ತಾಳು....ತಾಳು.... ನಾನೇ ಬರ್ತೀನಿ.... ನಾಯಿ ಓಡಿಬರತ್ತೆ.... ಅಲ್ಲೇ ಇರು" ಎಂದು ಗಾಬರಿಯಿಂದ ನಾನು ಮುಗ್ಗರಿಸುವುದನ್ನೂ ಮರೆತು ಓಡಿದ್ದೆ. ಆ ಓಟ ಎಷ್ಟು ಅಸಹಜವಾಗಿತ್ತು ಎಂಬುದನ್ನು ಅವಳ ಪ್ರಶ್ನಾರ್ಥಕ ನೋಟವೇ ತಿಳಿಸಿದಾಗ ಮೈಯೆಲ್ಲ ಸಂಕೋಚದಿಂದ ಹಿಡಿಯಾಯಿತು. ಮಾತು ಆಡಿದರೆ ಹೋಯ್ತು ಮುತ್ತು ಒಡೆದರೆ ಹೋಯ್ತು ಗಾದೆ ನೆನಪಾದರೂ ಏನಾದರೂ ಮಾಡಿ ಆದದ್ದನ್ನು ರಿಪೇರಿ ಮಾಡಲೇಬೇಕಿತ್ತು. ಹೀಗಾಗಿ ಎಂದಿಗಿಂತ ಹೆಚ್ಚೇ ಮಂಡಕ್ಕಿ ಖರೀದಿಸಿದೆ. ಅವಳಲ್ಲಿ ಮೂಡಿದ್ದ ಉದಾಸಭಾವ ನನ್ನ ಅಪರಾಧೀಪ್ರಜ್ಞೆಯನ್ನು ಇನ್ನಿಷ್ಟು ಮೊನಚುಗೊಳಿಸುತ್ತಿತ್ತು. ಹೀಗಾಗಿ ನಾನೇ ಗೇಟಿನ ಹೊರಗೆ ಹೋಗಿ ನಿಂತು ಅವಳೊಂದಿಗೆ ಮಾತಿಗೆ ತೊಡಗಿದೆ.

"ನಿನ್ನ ಹೆಸರೇನು? ಮರ್ತೇ ಬಿಟ್ಟೆ?"

"ಮೀರಕ್ಕ ಅಂತ. ನೀವೆಲ್ಲಿ ಕೇಳಿದ್ರಿ ಮರೆಯೋಕೆ.... ಈಗ್ಲೇ ಕೇಳ್ತಿರೋದು."

"ಹೌದಾ.... ಕೇಳಿದ್ದೆ ಅಂದ್ಕೊಂಡೆ.... ಯಾಕೆ ತಿಂಗ್ಳಿಂದ ಬರ್ತಾ ಇಲ್ಲ.... ಊರಿಗೆ ಹೋಗಿದ್ಯಾ? ಮಕ್ಳು ಚೆನ್ನಾಗಿ ಓದ್ತಾ ಇದ್ದಾರಾ?"

"ಹೂಂನಪ್ಪಾ... ಊರಿಗೆ ಹೋಗಿದ್ದೆ... ಮಗಳ್ಗೆ ಫೀಸ್ ಕಟ್‌ಬೇಕಿತ್ತು"

"ಪಿಯುಸಿ ಓದ್ತಾಳೆ ಅಂದಿದ್ದೆ ಅಲ್ವಾ.... ಎಷ್ಟು ಫೀಸ್?"

"ಈ ಸಲ ಅದೇನೋ ಐಟಿಐ ಕೋರ್ಸ್ ಅಂತೆ... ಅದ್ನ ಮಾಡ್ತಾ ಅವ್ಳೆ. ಇಪ್ಪತ್ ಸಾವ್ರ ಫೀಸ್ ಕಟ್ಟ್‌ಬೇಕಿತ್ತು... ಹಂಗಾಗಿ ಹೋಗ್ ಬಂದೆ."

'ಇಪ್ಪತ್ ಸಾವ್ರಾನಾ?' ಎಂದು ಹೊರಟಿದ್ದ ಉದ್ಗಾರವನ್ನು ನುಂಗಿಕೊಂಡೆ. ನುಂಗಿಕೊಳ್ಳಲೇ ಬೇಕಿತ್ತು; ನನ್ನ ಮಾತು ಹೆಚ್ಚಾದಷ್ಟೂ ಅವಳ ಉದಾಸಭಾವ ಹಿಗ್ಗುತ್ತಿತ್ತು. ಅದು ನನ್ನದೇ ಗ್ರಹಿಕೆಯೋ ಅಥವಾ ಅವಳ ನಿಜವಾದ ಭಾವವೋ? ಹೇಗೆ ತೀರ್ಮಾನಿಸಲಿ? "ಚಿಲ್ಲರೆ ಇಲ್ಲಕ್ಕ" ಎಂದಾಗ, "ಹೋಗ್ಲಿ ಇಟ್ಕೊಂಡಿರು... ಮುಂದಿನ್ ಸಾರಿ ನೋಡಿದ್ರಾಯ್ತು" ಎಂದು ಉದಾರತೆ ತೋರಿದೆ. ಸ್ವಾಭಿಮಾನದಲ್ಲಿ ಅವಳು ನನ್ನ ಅಜ್ಜಿಯಂತಿದ್ದಳು! ಉಹೂಂ... ಎಷ್ಟು ಹುಡುಕಿದರೂ ಅವಳ ಸಂಚಿಯಲ್ಲಿ ಚಿಲ್ಲರೆ ದೊರೆಯದಾದಾಗ ಅದರ ಬೆಲೆಯ ಮಂಡಕ್ಕಿಯನ್ನೇ ಸುರಿದು, ಲೆಕ್ಕ ಚುಕ್ತಾ ಮಾಡಿ ನನ್ನನ್ನು ಇನ್ನಿಷ್ಟು ಪಾತಾಳಕ್ಕೆ ತಳ್ಳಿದಳು.

ಎಲ್ಲಿ? ನಾನು ತಪ್ಪಿದ್ದೆಲ್ಲಿ? ಅವನಂತೆ ಕಟು ನಿಷ್ಠುರತೆ ತಾಳದೇ ಹೋದದ್ದೇ? ಅವನ ಎಚ್ಚರಿಕೆಯ ಪಾಠವನ್ನು ಅಕ್ಷರಶಃ ಪಾಲಿಸದೇ ಹೋದದ್ದೇ? ಉಣ್ಣುವಾಗ ತಿನ್ನುವಾಗ ಎದುರು ಕಂಡವರನ್ನು ಕರೆದು ನೀಡಬೇಕೆಂಬ ಹಿರಿಯರ ಮಾದರಿಯನ್ನು ಅನುಸರಿಸಿದ್ದೇ? ಒಮ್ಮೆ ಸಲಿಗೆ ಕೊಟ್ಟು, ಆ ಬಳಿಕ ಲಕ್ಷ್ಮಣ ರೇಖೆಯನ್ನು ಎಳೆಯುವ ಮತ್ತು ಅವಳಿಗೆ ಅದನ್ನು ಸೂಚಿಸುವ ಕೆಲಸ ಮಾಡಿದ್ದೇ? ತಪ್ಪಿನ ಮೂಲ ಯಾವುದು? ನನ್ನ ಹೊಣೆ ಅದರಲ್ಲೆಷ್ಟು? ಅಥವಾ... ಅಥವಾ.... ಇದು ತಪ್ಪೇ? ಸರಿಯೇ? ವ್ಯಾವಹಾರಿಕತೆಯೇ ಬದುಕೇ? ಭಾವನಾತ್ಮಕತೆಯೇ ಬದುಕೇ? ಅಥವಾ ಅವುಗಳ ಸಮ್ಮಿಳನವೇ? ಅವುಗಳನ್ನು ಮೇಳೈಸುವ ಬಗೆ ಹೇಗೆ? ಒಂದೇ ಎರಡೇ? ಪ್ರಶ್ನೆಗಳು ಸಾಲುಸಾಲು.... ಮನಸ್ಸೆಲ್ಲ ಬೆಕೋ ಎನ್ನುತ್ತಿತ್ತು. ಬಾಯಿಗೆ ರುಚಿಯಿಲ್ಲ ಮಾತಿಗೆ ಒ(ಬ)ಲವಿಲ್ಲ ಮನಸ್ಸಿಗೆ ಹಿತವಿಲ್ಲ!

ಮತ್ತೊಂದು ಪಕ್ಷ ಉರುಳಿ, ಅವಳು ಬಾಗಿಲಲ್ಲಿ ನಿಂತಾಗ, ನಾನಿನ್ನೂ ಹಾಸಿಗೆ ಬಿಟ್ಟು ಎದ್ದಿರಲಿಲ್ಲ. ಈತ ಅವಳ ಕರೆಕೇಳಿ "ನೋಡು ಆಯಮ್ಮ ಬಂದಿದ್ದಾಳೆ. ಅದೇನ್ ಬೇಕೋ ತಗೋ" ಎಂದ. "ಉಹೂಂ.... ಏನೂ ಬೇಡ ಅಂತ ಹೇಳು. ನಾನು ಹೋಗಲ್ಲ" ಎಂದೆ. ಪ್ರಶ್ನಾರ್ಥಕವಾಗಿ ಅವನ ದೃಷ್ಟಿ ತಿವಿದರೂ ಮುಖ ತಿರುಗಿಸಿ ಮಲಗಿದೆ. ಅವನೆಷ್ಟೇ ಹೇಳಿದರೂ ಆಕೆ ಬೋಣಿಯಾಗದೆ ಹೋಗೆನು ಎಂದು ಮೊಂಡುತನದಿಂದ ನಿಂತಾಗ ಅವನಿಗೆ ಇಬ್ಬರ ಮೇಲೂ ರೇಗತೊಡಗಿತು. "ಅವರಿಲ್ಲ ಅಂದ್ರೆ ನೀನ್ ಒಪ್ತಾ ಇಲ್ಲಲ್ಲಮ್ಮ.... ಹೋಗ್ಲಿ ಎರಡ್ ಸೇರು ಹಾಕು, ಸಾಕು" ಎಂದ. ಅಲ್ಲಿಗೆ ನನ್ನ ಮತ್ತು ಮೀರಕ್ಕನ ಬಾಂಧವ್ಯ ಮುಗೀತು ಎಂದುಕೊಂಡೆ. 'ಇನ್ನು ನೀನು ಹೊಲಿಗೆ ಹಾಕಿಕೊಂಡು ತೆಪ್ಪಗಿರು' ಎಂದು ನಾಲಿಗೆಗೆ ಆದೇಶ ನೀಡಿ ಮನಸ್ಸನ್ನು ಒಗ್ಗಿಸಿಕೊಳ್ಳುವ ಯತ್ನದಲ್ಲಿ ಇದ್ದಾಗಲೇ ಮೀರಕ್ಕ ಮತ್ತೆ ಮನೆಮುಂದೆ ನಿಂತಳು.

ಈ ಬಾರಿ ಅವಳೊಂದಿಗೆ ಮಾತಿಗೆ ನಿಂತಾತ ಈತ ನಾಯಿಯನ್ನು ಕಟ್ಟಿಹಾಕಿ, ತಲೆಬಾಗಿಲ ಬಳಿ ಕರೆದು, ವ್ಯಾಪಾರ ಆರಂಭಿಸಿದ. "ಹೂ... ಕಣಣ್ಣ... ಆಯ್ತು ಕಣಣ್ಣ...." ಎಂಬ ಅವಳ ಧ್ವನಿಯೂ ಕೇಳುತ್ತಿತ್ತು. ನಾನು ಅಡುಗೆಮನೆಯಿಂದ ಹೊರಗೆ ಬರಲೇ ಇಲ್ಲ. ಈತನೇ ಒಳಗೆ ಬಂದು, "ಅವಳಿಗೂ ಒಂದಿಷ್ಟು ಟೀ ಮಾಡು. ಪಾಪ, ಹೊಟ್ಟೆಪಾಡಿಗೆ ಎಷ್ಟು ದೂರ್‌ದಿಂದ ಬರ್ಬೇಕು.... ಎಷ್ಟ್ ತಿರಗ್‌ಬೇಕು.... ಅವ್ರ ಕಷ್ಟ ನೋಡಿದ್ರೆ.... ಏನಪ್ಪಾ ಬದುಕು ಅನ್ನುತ್ತೆ ಕಷ್ಟ... ತುಂಬಾ ಕಷ್ಟ" ಎಂದು ಮರುಗುತ್ತ ಅವನಿಗೆಂದು ತೆಗೆದಿರಿಸಿದ್ದ ತಿಂಡಿಯ ತಟ್ಟೆ ಮತ್ತು ಚಹಾವನ್ನು ಅವಳಿಗೊಯ್ದು ನೀಡುತ್ತಿದ್ದರೆ ನಾನು ಬಾಯಿ ಕಳೆದುಕೊಂಡಂತೆ ಅವನನ್ನೇ ನೋಡುತ್ತಿದ್ದೆ.

• ಸಬಿಹಾ ಭೂಮೀಗೌಡ

► 2

ಹಿಂದೂತ್ವ....

ಹಿಂದೂತ್ವವಾದಿಗಳು ನಡೆಸಲು ಪ್ರಾರಂಭಿಸಿರುವ ...ಬ್ ಭಯೋತ್ಪಾದನೆ ಹೊಸದಿರಬಹುದು. ಆದರೆ ...ರು ರಾಮನ ಹೆಸರಲ್ಲಿ ಮತ್ತು ಹಿಂದೂತ್ವದ ಹೆಸರಲ್ಲಿ ...ದನೆ ನಡೆಸಿದ ಮತ್ತು ನಡೆಸುತ್ತಿರುವ ತ್ರಿಶೂಲ ...ಭಯೋತ್ಪಾದನೆ, ಗ್ಯಾಸ್ ಸಿಲಿಂಡರ್ ಭಯೋತ್ಪಾದನೆ, ...ಬಾಂಬುಗಳ ಭಯೋತ್ಪಾದನೆ ಶೀರಾ ಹಳೆಯದು. ... ಅಷ್ಟೇ, ಅಷ್ಟೇ, 1980ರ ನಂತರ ಪ್ರಭುತ್ವದ ...ಬಹಿರಂಗ ಬೆಂಬಲ ದೊರೆತಿರುವುದನ್ನು, 1993ರ ಬಾಂಬೆ ...ಗಲಭೆಗಳನ್ನು, ತನಿಖೆ ಮಾಡಿದ ಶ್ರೀ ಕೃಷ್ಣ ಆಯೋಗ, ಗುಜರಾತ್ ಗಲಭೆಗಳ ಬಗ್ಗೆ ಮಾನವ ಹಕ್ಕು ಆಯೋಗ ನೀಡಿರುವ ವರದಿಗಳೆಲ್ಲವೂ ಅನುಮಾನಕ್ಕೆಡೆಯಿಲ್ಲದಂತೆ ಸಾಬೀತುಮಾಡಿವೆ. ವಾಸ್ತವವಾಗಿ ಈ ದೇಶದ ಎಲ್ಲಾ ಮಾನವ ಹಕ್ಕು ಸಂಘಟನೆಗಳು ತಮ್ಮ ಸತತ ಅಧ್ಯಯನದಿಂದ ಹೊರತಂದಿರುವ ಸಂಗತಿಯೆಂದರೆ 1990ರ ನಂತರ ಈ ದೇಶದಲ್ಲಿ ನಡೆದಿರುವ ಎಲ್ಲಾ ಕೋಮುಗಲಭೆಗಳೂ ಅಲ್ಪಸಂಖ್ಯಾತರ ಮೇಲೆ ಸಂಘಪರಿವಾರದ ಅಂಗಸಂಸ್ಥೆಗಳು ಪ್ರಭುತ್ವದ ಬೆಂಬಲದೊಂದಿಗೆ ನಡೆಸಿರುವ ಏಕಪಕ್ಷೀಯ ದಾಳಿ ಎಂದು ವರ್ಣಿಸಿವೆ. ಇಂತಹ ನರಮೇಧಗಳನ್ನು ನಡೆಸಿದ ಮೋದಿ, ಠಾಕ್ರೆಗಳನ್ನು, ಬಾಬ್ರಿ ಮಸೀದಿ ಕೆಡವಲು ನೇರವಾಗಿ ಕಾರಣರಾದ ಕಾರ್ಯಕರ್ತರನ್ನಿರಲಿ, ಮುಖಂಡರನ್ನೂ ಈ ದೇಶದ ಪ್ರಭುತ್ವ ಶಿಕ್ಷಿಸುವುದಿರಲಿ, ಬಂಧಿಸಲೂ ಆಗಿಲ್ಲ. ಅರ್ಥಾತ್ ಪ್ರಭುತ್ವ ಬೆಂಬಲದೊಂದಿಗೇ ಹಿಂದೂತ್ವ ಭಯೋತ್ಪಾದನೆ ಈ ದೇಶದಲ್ಲಿ ಅವ್ಯಾಹತವಾಗಿ ಸಾಗುತ್ತಿದೆ.

ಈ ದೇಶದ ಅಲ್ಪಸಂಖ್ಯಾತ ಧರ್ಮೀಯ ಮೂಲಭೂತವಾದಿಗಳು ಹಚ್ಚೊಂದರೆ ತಮ್ಮ ಧರ್ಮೀಯರನ್ನು ಮೌಢ್ಯದಲ್ಲಿಟ್ಟು ಶೋಷಿಸಬಹುದು. 90ಕ್ಕೆ ಮುಂಚೆ ಅವರಲ್ಲಿನ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಲಾಭಗಿಟ್ಟಿಸಿಕೊಳ್ಳಲು ಕೋಮು ಗಲಭೆಗೂ ಕಾರಣರಾಗಿರಬಹುದು. ಆದರೆ ಹಿಂದೂತ್ವ ಭಯೋತ್ಪಾದನೆ ಪ್ರಾರಂಭವಾದ ಮೇಲೆ ಈ ದೇಶದ ಅಲ್ಪಸಂಖ್ಯಾತರ ಬದುಕು ಮಾತ್ರವಲ್ಲ ಎಲ್ಲಾ ಜನರ ಬದುಕು, ಈ ದೇಶದ ಪ್ರಜಾಸತ್ತೆ, ಸೌಹಾರ್ದತೆ, ಭವಿಷ್ಯ ಎಲ್ಲವೂ ಆತಂಕದಲ್ಲಿವೆ.

ಅಂಕಿ ಅಂಶಗಳ ಲೆಕ್ಕದಲ್ಲೇ ನೋಡುವುದಾದರೂ ಈವರೆಗೆ ತಥಾಕಥಿತ ಇಸ್ಲಾಮಿಕ್ ಭಯೋತ್ಪಾದನೆಯಿಂದ ಸತ್ತವರ ಸಂಖ್ಯೆಗಿಂತ ಹಿಂದೂತ್ವವಾದಿಗಳು ಪ್ರಭುತ್ವದ ಬೆಂಬಲದೊಂದಿಗೆ ಸೃಷ್ಟಿಸಿದ ಕೋಮು ಗಲಭೆಯಿಂದ ಸತ್ತವರ ಸಂಖ್ಯೆ ಎಷ್ಟೋ ಪಟ್ಟು ಹೆಚ್ಚು. ಈ ನರಮೇಧದಲ್ಲಿ ಹಿಂದೂ ಮುಸ್ಲಿಮರಿಬ್ಬರೂ ಬಲಿಪಶುಗಳಾಗಿದ್ದಾರೆ.

ಈ ದೇಶದಲ್ಲಿ ಹಿಂದೂತ್ವ ಭಯೋತ್ಪಾದನೆ ಬೇರೆ ಯಾವುದೇ ಭಯೋತ್ಪಾದನೆಗಿಂತ ಹೆಚ್ಚು ಅಪಾಯಕಾರಿ ಎನ್ನುವುದಕ್ಕೆ ಇದಕ್ಕಿಂತ ಪುರಾವೆ ಬೇಕೆ? •

ಬುದ್ಧಮಾರ್ಗದ ಎರಡು ಮಹಾಕಾವ್ಯಗಳು

ಪುಸ್ತಕ ವಿಮರ್ಶೆ


ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಅಶ್ವಘೋಷನದ್ದು ಮಹತ್ವದ ಸ್ಥಾನ. ಬೌದ್ಧ ಧರ್ಮದ ಅನುಯಾಯಿಯೂ, ಮಹಾಕವಿಯೂ ಆಗಿದ್ದ ಈತ ಅನೇಕ ಕೃತಿಗಳನ್ನು ರಚಿಸಿದ ಉಲ್ಲೇಖಗಳಿವೆ. ಆದರೆ ಸಿಕ್ಕಿರುವುದು ಮೂರು ಕೃತಿಗಳು ಮಾತ್ರ. ಅದರಲ್ಲಿ 'ಬುದ್ಧಚರಿತ' ಮತ್ತು 'ಸೌಂದರಾನಂದ' ಕೃತಿಗಳು ಕನ್ನಡಕ್ಕೂ ಅನುವಾದಗೊಂಡು ಜನಮನ್ನಣೆ ಗಳಿಸಿವೆ. ಆದರೆ ಆ ಬಗೆಗೆ ಹೆಚ್ಚು ಚರ್ಚೆಗಳು ನಡೆದಿಲ್ಲ. ಆ ಕೃತಿಗಳನ್ನ ಎರಡು ಕಂತುಗಳಲ್ಲಿ ಚರ್ಚೆಗೆ ಒಡ್ಡುವ ಪ್ರಯತ್ನ ಇಲ್ಲಿದೆ...

"ಇತ್ತೀಚಿನ ವರ್ಷಗಳಲ್ಲಿ ಪ್ರಕಟವಾಗಿರುವ ಮಹತ್ವದ ಅನುವಾದ ಕೃತಿಗಳಲ್ಲಿ ಅಶ್ವಘೋಷನ 'ಬುದ್ಧಚರಿತೆ' ಮತ್ತು 'ಸೌಂದರನಂದ' ಕೃತಿಗಳಿಗೆ ಪ್ರಮುಖವಾದ ಸ್ಥಾನವಿದೆ. ಆದರೆ ಈ ಅನುವಾದಗಳ ಬಗ್ಗೆ ಅಷ್ಟೊಂದು ಚರ್ಚೆ ನಮ್ಮಲ್ಲಿ ನಡೆದಿಲ್ಲ. ಹಾಗೆಂದು ಈ ಕೃತಿಗಳನ್ನು ಕನ್ನಡದ ಜನತೆ ಕಡೆಗಣಿಸಿದ್ದಾರೆಂದೂ ಅಲ್ಲ, ಕಳೆದ ಹತ್ತು ಹನ್ನೆರಡು ವರ್ಷಗಳಲ್ಲಿ ಈ ಅನುವಾದಗಳು ಎರಡು ಮೂರು ಮುದ್ರಣಗಳನ್ನು ಕಂಡಿವೆ. ಕನ್ನಡಿಗರು ಬುದ್ಧನ ಬಗ್ಗೆ ಮತ್ತು ಈ ಕೃತಿಗಳ ಬಗ್ಗೆ ಪ್ರೀತಿ ಮತ್ತು ಆದರಗಳನ್ನು ತೋರಿಸಿರುವುದನ್ನು ಈ ಮರು ಮುದ್ರಣಗಳು ಸೂಚಿಸುತ್ತವೆ.

ಸಂಸ್ಕೃತದಲ್ಲಿ ಅಶ್ವಘೋಷ ಈ ಕೃತಿಗಳನ್ನು ರೂಪಿಸಿದ್ದು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ. ಸಂಸ್ಕೃತ ಸಾಹಿತ್ಯ ಚರಿತ್ರೆಯಲ್ಲಿ ಈ ಅಶ್ವಘೋಷನಿಗೆ ಮಹತ್ವದ ಸ್ಥಾನ ಇದೆ. ಈತ ಮಹಾಕವಿ; ಬೌದ್ಧ ಧರ್ಮದ ಅನುಯಾಯಿ. ಬೌದ್ಧಧರ್ಮ ಪ್ರಚಾರಕ, ನಾಟಕಕಾರ, ವಿದ್ವಾಂಸ ಮತ್ತು ಹಾಡುಗಾರ. ಇದೆಲ್ಲದಕ್ಕಿಂತ ಮಿಗಿಲಾಗಿ ಬುದ್ಧನ ನಂತರ ಸುಮಾರು ಐದು ನೂರು ವರ್ಷಗಳ ಅವಧಿಯಲ್ಲಿ ಈ ಮಹಾಕವಿ ಇದ್ದ ಕಾರಣದಿಂದಾಗಿ ಬುದ್ಧನ ಬಗ್ಗೆ ಮತ್ತು ಆತನ ಧರ್ಮದ ಬಗ್ಗೆ ಅಶ್ವಘೋಷ ತನ್ನ ಎರಡು ಕಾವ್ಯಗಳಲ್ಲಿ ಕೊಡುವ ವಿವರಗಳನ್ನು ಅಧಿಕೃತ ಎಂದು ಪರಿಗಣಿಸಬಹುದಾಗಿದೆ. ಬುದ್ಧನ ನಂತರದ ಅತ್ಯಲ್ಪ ಕಾಲಾವಧಿಯಲ್ಲಿಯೇ ಬೌದ್ಧಧರ್ಮ ಬಗೆಬಗೆಯ ರೂಪಾಂತರಕ್ಕೆ ಒಳಗಾಯಿತು, ಹಲವು ಶಾಖೆಗಳಲ್ಲಿ ಹಂಚಿ ಹೋಯಿತು ಎನ್ನುವುದು ನಿಜವಾದರೂ ಅಶ್ವಘೋಷನ ಕಾಲಕ್ಕೆ ಅದು ಸಂಪೂರ್ಣವಾಗಿ ನಾಶವಾಗಿರಲಿಲ್ಲ ಅಥವಾ ಹೊಸ ರೂಪವನ್ನು ಪಡೆದುಕೊಂಡಿರಲಿಲ್ಲ. ಅನೇಕ ರಾಷ್ಟ್ರಗಳಿಗೆ ಅದು ಚಾಚಿಕೊಳ್ಳುವಷ್ಟು ಪ್ರಭಾವಶಾಲಿಯಾಗಿತ್ತು.

ಅಶ್ವಘೋಷನ ಕಾಲವನ್ನು ಸಾಹಿತ್ಯ ಚರಿತ್ರಕಾರರು ಸುಮಾರು ಕ್ರಿ.ಪೂ. ಎರಡನೆಯ ಶತಮಾನ ಎಂದು ಗುರುತಿಸುತ್ತಾರೆ. ಈತ ಅನೇಕ ಕೃತಿಗಳನ್ನು ರಚಿಸಿದ ಎಂದು ಹೇಳಿದರೂ ಸಿಕ್ಕಿರುವವು ಮಾತ್ರ ಮೂರೇ ಕೃತಿಗಳು: ಬುದ್ಧಚರಿತೆ, ಸೌಂದರನಂದ ಮತ್ತು ಸಾರಿಪುತ್ರ ಪ್ರಕರಣ. ಬುದ್ಧಚರಿತೆಯ ಹದಿನಾಲ್ಕು ಅಧ್ಯಾಯಗಳು ಮಾತ್ರ (ಅಂದರೆ ಕೃತಿಯ ಮೊದಲ ಅರ್ಧ) ಸಿಕ್ಕಿವೆ. ಉತ್ತರಾರ್ಧ ಕಳೆದುಹೋಗಿದೆ. ಆದರೆ ಚೀನೀ ಮತ್ತು ಟಿಬೆಟಿಯನ್ ಭಾಷೆಗಳಲ್ಲಿ ಈ ಕೃತಿ ಸಂಪೂರ್ಣವಾಗಿ ಇರುವುದರಿಂದ ಉತ್ತರಾರ್ಧವನ್ನು ಟಿಬೆಟಿಯನ್ ಭಾಷೆಯಿಂದ ಇಂಗ್ಲಿಷ್‌ಗೆ ಮತ್ತು ಮರಳಿ ಸಂಸ್ಕೃತಕ್ಕೆ ಅನುವಾದಿಸಿಕೊಂಡು ಬುದ್ಧಚರಿತೆಯನ್ನು ಪೂರ್ಣ ಮಾಡಿಕೊಳ್ಳಲಾಗಿದೆ. ಟಿಬೆಟಿಯನ್ ಭಾಷೆಯಲ್ಲಿರುವ ಬುದ್ಧಚರಿತೆಯೇ ಅಧಿಕೃತವಾದದ್ದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಅಶ್ವಘೋಷ ಸಂಸ್ಕೃತ ಸಾಹಿತ್ಯದಲ್ಲಿ ಕಾಳಿದಾಸ ಮತ್ತು ಭಾಸರಿಗಿಂತಲೂ ಹಿಂದಿನವನು. ಬುದ್ಧಚರಿತೆ ಸಂಸ್ಕೃತ ಸಾಹಿತ್ಯ ಮತ್ತು ಬೌದ್ಧ ಸಾಹಿತ್ಯಗಳ ಮೇಲೆ ಗಾಢವಾದ ಪರಿಣಾಮವನ್ನು ಬೀರಿದೆ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಕಾಳಿದಾಸನ ರಘುವಂಶದ ಮೇಲೆ ಬುದ್ಧಚರಿತೆಯ ಪ್ರಭಾವ ನಿಚ್ಚಳವಾಗಿದೆ ಎಂದು ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸ ಮಾಡಿರುವ ವಿದ್ವಾಂಸ ಪ್ರೊ.ಕೆ.ಜಿ. ನಾಗರಾಜಪ್ಪ ಅಭಿಪ್ರಾಯಪಟ್ಟಿದ್ದಾರೆ. ರಘುವಂಶದಲ್ಲಿ ಬರುವ ಕಾಮ-ಶಿವ ಪ್ರಸಂಗ ಮತ್ತು ಬುದ್ಧಚರಿತೆಯ ಮಾರ-ಬುದ್ಧರ ಸಂವಾದವನ್ನು ಇದಕ್ಕೆ ಉದಾಹರಣೆಯಾಗಿ ಕೊಡುತ್ತಾರೆ. ಅಶ್ವಘೋಷ ಮಹಾಕವಿ ಎನ್ನುವದರಲ್ಲಿ ಯಾವುದೇ ಅನುಮಾನವಿಲ್ಲ.



ಅಶ್ವಘೋಷನ ಬುದ್ಧಚರಿತೆಯನ್ನು ಮೊದಲು ಕನ್ನಡಕ್ಕೆ ತಂದವರು ಪ್ರೊ.ಎಸ್.ವಿ.ಪರಮೇಶ್ವರ ಭಟ್ಟರು. 1974ರಲ್ಲಿ ಅವರು 'ಕನ್ನಡ ಬುದ್ಧಚರಿತೆ'ಯನ್ನು ಪ್ರಕಟಿಸಿದರು. ಇದು ವಿದ್ವಾಂಸ ವಲಯಕ್ಕೇ ಸೀಮಿತವಾಗುವಂಥ ಅನುವಾದವಾಗಿದ್ದು ಜನರ ಹತ್ತಿರಕ್ಕೆ ಹೋದಂತೆ ಕಾಣುವುದಿಲ್ಲ. ಡಾ.ಎಲ್.ಬಸವರಾಜು ಅವರು ಈ ಬುದ್ಧ ಚರಿತೆಯನ್ನು ವಿಶಿಷ್ಟವಾದ ರೀತಿಯಲ್ಲಿ ಕನ್ನಡೀಕರಿಸಿದ್ದಾರೆ. 1998ರಲ್ಲಿ ಬಸವರಾಜು ಅವರ ಅನುವಾದ ಶಿವಮೊಗ್ಗೆಯ 'ಪರಿಸರ ಸಾಹಿತ್ಯ'ದಿಂದ ಪ್ರಕಟವಾಯಿತು. ಬಸವರಾಜು ಅವರ ಅನುವಾದ ಉದಾರವಾದೀ ಧೋರಣೆಯದು ಮತ್ತು ಸುಲಭ ಗ್ರಹಿಕೆಗೆ ದಕ್ಕುವಂಥದ್ದು. ಹೀಗಾಗಿಯೇ ಓದುಗ ವಲಯ ಸಾಕಷ್ಟು ಕುತೂಹಲವನ್ನು ಈ ಕೃತಿಯ ಬಗ್ಗೆ ತೋರಿತು. ಇದರ ಫಲವಾಗಿ ಈ ಕೃತಿ ಬಳ್ಳಾರಿಯ 'ಲೋಹಿಯಾ ಪ್ರಕಾಶನ'ದಿಂದ 2000ದಲ್ಲಿ ಮರುಮುದ್ರಣಗೊಂಡಿತು. ಜೊತೆಗೆ ಬಸವರಾಜು ಅವರ ಉತ್ಸಾಹ ಹೆಚ್ಚಿ ಅವರು ಅಶ್ವಘೋಷನ ಇನ್ನೊಂದು ಮಹತ್ವದ ಕೃತಿಯಾದ 'ಸೌಂದರ ನಂದ'ವನ್ನೂ ಕನ್ನಡಕ್ಕೆ ತಂದರು. ಬುದ್ಧಚರಿತೆಯ ಮರು ಮುದ್ರಣದ ಜೊತೆಯಲ್ಲಿಯೇ 'ಲೋಹಿಯಾ ಪ್ರಕಾಶನ' 2000ದಲ್ಲಿ 'ಸೌಂದರನಂದ'ವನ್ನೂ ಪ್ರಕಟಿಸಿತು. ಅಶ್ವ ಘೋಷನ ಎರಡು ಮಹಾಕಾವ್ಯಗಳು ಕನ್ನಡಕ್ಕೆ ದೊರೆತವು.


ಹಾಗೆ ನೋಡಿದರೆ ಬೌದ್ಧ ಸಾಹಿತ್ಯವನ್ನು ಮೊದಲು ಕನ್ನಡಕ್ಕೆ ಪರಿಚಯಿಸಿದ ಕೀರ್ತಿ ಜಿ.ಪಿ.ರಾಜರತ್ನಂ ಅವರಿಗೇ ಸಲ್ಲಬೇಕು. 'ಮಿಳಿಂದ ಪನ್ಹಾ' ಕೃತಿಯನ್ನು ಅವರು 'ಮಿಳಿಂದ ಪ್ರಶ್ನೆ'ಯಾಗಿ ಕನ್ನಡಕ್ಕೆ ತಂದರು. ರಾಜರತ್ನಂ ಅವರ ಅಪಾರ ವಿದ್ವತ್ತು ಮತ್ತು ಕನ್ನಡ ಪ್ರೀತಿ ಈ ಕೃತಿಯನ್ನು ಇಂದಿಗೂ ಮಹತ್ವದ ಕೃತಿಯಾಗಿಯೇ ಉಳಿಸಿದೆ. ಅವರ ಅನುವಾದದ ಸೊಗಸು, ಹೊಳಪು ಮತ್ತು ಗಟ್ಟಿತನಗಳೆಲ್ಲ ಈ ಕೃತಿಯಲ್ಲಿ ಬಂಬಿತವಾಗಿವೆ. (2007ರಲ್ಲಿ ಈ ಕೃತಿಯನ್ನು 'ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ' ಪುನರ್ಮುದ್ರಿಸಿರುವುದು ಕನ್ನಡಿಗರಿಗೆ ಮಾಡಿರುವ ಉಪಕಾರವಾಗಿದೆ.)

ಡಾ.ಎಲ್ ಬಸವರಾಜು ಅವರ 'ಬುದ್ಧಚರಿತೆ' ಮತ್ತು 'ಸೌಂದರನಂದ' ಕೃತಿಗಳು ಎಷ್ಟು ಜನಪ್ರಿಯವಾಗಿವೆ ಎಂದರೆ ಈ ಎರಡೂ ಕೃತಿಗಳನ್ನು ಕೃಷ್ಣಾಪುರದೊಡ್ಡಿಯ ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್ ಮತ್ತೆ ಮುದ್ರಿಸಿದೆ (2010). ಕನ್ನಡ ಓದುಗರು ಬುದ್ಧನ ಬಗ್ಗೆ ತೋರುತ್ತಿರುವ ಪ್ರೀತಿ ನಮ್ಮ ಸಾಮಾಜಿಕ, ಸಾಹಿತ್ಯಕ ಮತ್ತು ಸಾಂಸ್ಕೃತಿಕ ಚಲನೆಯ ದಿಕ್ಕನ್ನೂ ಸೂಚಿಸುವಂತಿದೆ.

2

ಬುದ್ಧಚರಿತೆಯ ಕೊನೆಯಲ್ಲಿ ಕವಿ ಅಶ್ವಘೋಷ ತನ್ನ ಕಾವ್ಯದ ಉದ್ದೇಶವೇನು ಎಂಬುದನ್ನು ಹೀಗೆ ವಿವರಿಸಿದ್ದಾನೆ:

"ಮುನಿಶ್ರೇಷ್ಠನಾದ ಬುದ್ಧನ
ಬಗ್ಗೆ ಸಮ್ಮಾನ ಭಾವದಿಂದ-ಆ
ಮುನಿಯ
ಶಾಸ್ತ್ರ(ಸಿದ್ಧಾಂತ-ಉಪದೇಶ)ದ
ಅನುಸಾರವಾಗಿಯೇ ಈ
ಕಾವ್ಯವನ್ನು (ಅಶ್ವಘೋಷನೆಂಬ)
ನಾನು ಬರೆದೆ-ನನ್ನ ವಿದ್ವತ್ತನ್ನಾಗಲಿ
ಕಾವ್ಯಕೌಶಲವನ್ನಾಗಲಿ
ಮೆರೆಯುವುದಕ್ಕಲ್ಲ!"



ಸೌಂದರನಂದ ಕೃತಿಯ ಕೊನೆಯಲ್ಲಿಯೂ ಇಂಥದೇ ಮಾತು ಬರುತ್ತದೆ:

"ಇಲ್ಲಿ
ನಾನು
ಮೋಕ್ಷವಿಚಾರಕ್ಕೆ
ಅನ್ಯವಾದುದೇನನ್ನಾದರೂ ಹೇಳಿದ್ದರೆ
ಅದು ಕಾವ್ಯಧರ್ಮಕ್ಕೆ
ಹೊಂದಿಕೆಯಾಗಲಿಕ್ಕಾಗಿ ಮಾತ್ರವೇ ಹೇಳಲಾಯಿತು-
ಕಹಿಯಾದ ಔಷಧವನ್ನು ಸೇವಿಸಲು
ಸುಲಭವಾಗಲೆಂದು-
ಜೇನುತುಪ್ಪದಲ್ಲಿ ಕಲಸಿ ನೆಕ್ಕಿಸಿದಂತೆ!"

ಅಶ್ವಘೋಷನ ಕಾಲವೇ ಧರ್ಮ ಸಂಘರ್ಷದ ಕಾಲ. ಹುಸಿ ಮತಧರ್ಮಗಳಲ್ಲಿ ನಂಬಿಕೆ ಇಟ್ಟವರನ್ನು ಬೌದ್ಧ ಧರ್ಮದ ಕಡೆ ಸೆಳೆಯುವುದಕ್ಕಾಗಿಯೇ ಪ್ರಚಾರ ಕಾರ್ಯಗಳು ಬಿರುಸಿನಿಂದಲೂ, ವ್ಯಾಪಕವಾಗಿಯೂ ನಡೆಯುತ್ತಿದ್ದವು. ಧರ್ಮದ ಮೇಲಾಟಕ್ಕಿಂತ ಇಲ್ಲಿ ಜನಹಿತವೇ ಮುಖ್ಯವಾಗಿದ್ದದ್ದನ್ನೂ ಗಮನಿಸಬಹುದು. ಬುದ್ಧನ ಇಡೀ ಬದುಕೇ ಜನಹಿತಕ್ಕೆ ಮೀಸಲಾದದ್ದು. ಅವನು ಕಂಡುಕೊಂಡ ಮಾರ್ಗ ಬಿಡುಗಡೆಯ ಮಾರ್ಗ. ನಿರಂತರ ಸಂಕಟದಲ್ಲಿ, ನೋವಿನಲ್ಲಿ, ದುಃಖದಲ್ಲಿ ಮುಳುಗಿದ ಜೀವಿಗಳನ್ನು ಬಿಡುಗಡೆಗೊಳಿಸುವುದೇ ಬುದ್ಧನ ಮಹಾಯಾತ್ರೆಯ ಮುಖ್ಯ ಉದ್ದೇಶವಾಗಿತ್ತು. ಪ್ರತಿಯೊಂದು ಜೀವಿಯನ್ನೂ ನಿರಂತರವಾಗಿ ಕಾಡುವ ಹುಟ್ಟು ಮುಪ್ಪು ರೋಗ ಸಾವುಗಳ ಬಗ್ಗೆ ಬುದ್ಧ ತನ್ನ ಜೀವನವನ್ನೇ ಪಣವಾಗಿಟ್ಟು ಧ್ಯಾನಿಸಿದವನು. ಹುಟ್ಟುರೋಗ ಸಾವು ಮುಪ್ಪುಗಳ ಚಕ್ರಕ್ಕೆ ಸಿಕ್ಕಿ ನರಳುವವರನ್ನು ಕಂಡು ಮರುಗಿದವನು. ಇದರಿಂದ ಬಿಡುಗಡೆ ಹೇಗೆಂದು ಚಿಂತಿಸಿ ದಾರಿಯನ್ನು ಕಂಡುಕೊಂಡವನು. ಬೌದ್ಧ ಧರ್ಮದಲ್ಲಿ, ಬುದ್ಧನ ಬೆಳಕಿನ ಮಾರ್ಗದಲ್ಲಿ ಅಖಂಡ ವಿಶ್ವಾಸವನ್ನಿಟ್ಟಿದ್ದ ಧರ್ಮ ಪ್ರಚಾರಕನೂ ಆಗಿದ್ದ ಮಹಾಕವಿ ಅಶ್ವಘೋಷ ತನ್ನ ಕಾಲದ ಧರ್ಮ ಸಂಘರ್ಷಕ್ಕೆ ಪ್ರತಿಕ್ರಿಯಿಸದೆ ಇರುವುದು ಹೇಗೆ ಸಾಧ್ಯ? ಸಹಜವಾಗಿಯೇ ಅದು ಅವನ ಕಾವ್ಯಗಳ ,ಮುಖ್ಯ ಜೀವಾಳವಾಗಿದೆ. ಬುದ್ಧನ ಸತ್ಪಥಕ್ಕೆ ಹುಸಿ ಮತಧರ್ಮಗಳ ಜನರನ್ನು ಸೆಳೆಯುವುದು ಮತ್ತು ಆ ಮೂಲಕ ಸರಿದಾರಿಯನ್ನು ತೋರಿಸುವುದು ಅಶ್ವಘೋಷನ ಮುಖ್ಯ ಉದ್ದೇಶವಾಗಿತ್ತು ಎಂಬುದು ಸ್ಪಷ್ಟ.

ಈ ಮುಖ್ಯ ಧ್ಯೇಯವನ್ನು ಇಟ್ಟುಕೊಂಡಿದ್ದರೂ ಅಶ್ವಘೋಷನ ಈ ಎರಡು ಕೃತಿಗಳು ಮೂಲತಃ ಕಾವ್ಯಗಳು. ಕಾವ್ಯವನ್ನು, ಕಾವ್ಯಧರ್ಮವನ್ನು, ಕಾವ್ಯದ ಎಲ್ಲ ಸೊಗಸು ಸೌಂದರ್ಯಗಳನ್ನು ಬಲ್ಲ ಅಶ್ವಘೋಷ ಅವುಗಳಿಗೆ ಮುಖ ತಿರುಗಿಸಿ ಕೃತಿಕಟ್ಟುವುದು ಸಾಧ್ಯವೂ ಇರಲಿಲ್ಲ. ಹೀಗಾಗಿ ಅವನು ಕಾವ್ಯಮಾರ್ಗ ಮತ್ತು ಧರ್ಮಮಾರ್ಗಗಳನ್ನು ಪರಸ್ಪರ ಪೂರಕವಾಗಿ ಬಳಸಿಕೊಂಡು ತನ್ನ ಕೃತಿಗಳನ್ನು ರೂಪಿಸಿದ. ಅವನಿಗೆ ಭಾರತೀಯ ಕಾವ್ಯ ಪರಂಪರೆಯೂ ತಿಳಿದಿತ್ತು. ಆ ಹೊತ್ತಿಗೆ ಬೌದ್ಧ ಸಾಹಿತ್ಯದಲ್ಲಿ ಬಂದಿದ್ದ ಬುದ್ಧನ ಜೀವನ ಚರಿತ್ರೆಗಳಾದ ಮಹಾವಸ್ತು, ಲೋಕೋತ್ತರವಾದನ್, ಮಹಾಯಾನ, ಸರ್ವಾಸ್ತಿವಾದ, ಲಲಿತ ವಿಸ್ತಾರ ಮೊದಲಾದ ಕೃತಿಗಳನ್ನು ಅವನು ಗಮನಿಸಿದ್ದ. ಕಾವ್ಯದ ಚೆಲ್ವಿಕೆಯ ಗುಣ, ಸೂಕ್ಷ್ಮ ಸಂವೇದನೆಯ ವಿನ್ಯಾಸಗಳನ್ನು ಉಳಿಸಿಕೊಂಡು ಧರ್ಮದ ವಿಚಾರಗಳ ಒಳ ಹೆಣಿಗೆಯನ್ನು ಮಾಡಿ ಅಶ್ವಘೋಷ ಈ ಎರಡು ಮಹಾಕಾವ್ಯಗಳನ್ನು ಸೃಷ್ಟಿಸಿದ. ಹೀಗಾಗಿಯೇ ಇವು ಸಾವಿರಾರು ವರ್ಷಗಳ ಕಾಲಪ್ರವಾಹವನ್ನು ದಾಟಿಕೊಂಡು ಜನಮನದಲ್ಲಿ ಉಳಿದುಕೊಂಡಿವೆ. ಒಂದಲ್ಲ ಹಲವು ಭಾಷೆಗಳಿಗೆ ಅನುವಾದಗೊಂಡಿವೆ; ಹಲವು ರಾಷ್ಟ್ರಗಳಲ್ಲಿ ಇನ್ನೂ ಅಧ್ಯಯನ ಗ್ರಂಥಗಳಾಗಿ, ಧರ್ಮಗ್ರಂಥಗಳಾಗಿ ಬಳಕೆಯಾಗುತ್ತಲೇ ಇವೆ.

(ಮುಂದುವರೆಯುತ್ತದೆ)

ಮುಳ್ಳಿನ ಕಿರೀಟ

ಒಣಗಿ ಬಿರಿದಿದೆ ಮಣ್ಣು ರೋಮನರ ದಾಪುಗಾಲಿಗೆ
ಸೋತು ಅಂಗಾತ, ಮೌನ ಸ್ತಬ್ಧ.
ತೆನೆಗಳಲಿ ಹಾಲು ತುಂಬುತ್ತಿಲ್ಲ
ನಿಟ್ಟುಸಿರಿಗೆ, ಚಿಗುರು ಮುರುಟಿದೆ

ಮೋಡಗಟ್ಟಿದ ರಾತ್ರಿ ಪಿಸುಗುಟ್ಟಿತೇನು?
ಭರವಸೆಯ ಕಿರುಬೆಳಕಲ್ಲಿ ಬಿರಬಿರ ನಡೆದವು ಮೂರು
ಜೊತೆ ಮುದಿ ಕಾಲ್ಗಳು.
ಏನದು ಅಲ್ಲಿ! ಕತ್ತಲ ದಾರಿಯ ದೊಂದಿ
ಕುರುಬನ ಹಟ್ಟಿಯ ಒಣ ಹುಲ್ಲಲ್ಲಿ ಬೆಳಗಿದೆ ಲೋಕದ
ಕಂದ
ಸುದ್ದಿ ಮುಟ್ಟಿಸಲು ಓಡಿದೆ ಚುಕ್ಕಿ ಬಾನಂಗಳದ
ಮೂಲೆಮೂಲೆಗೂ.
'ಹುಲ್ಲು ಮೊಳೆಯಲಿ, ಕಾಳು ಹಾಲು ತುಂಬಲಿ,
ಕುರಿಗಳು ಬೆಚ್ಚದೇ ಮೇಯಲಿ, ಕರುಣೆಯ ನದಿ ಬತ್ತದಿರಲಿ'.

ಒಣಗಿನಿಂತ ಖರ್ಜೂರವೋ, ಗರಿ ತೂಗಿ ತೇಲಿಸಿದೆ


ಮರಳ ಅಲೆಗಳ ಮೇಲೆ ಇವನನ್ನು
ಆತ್ಮದ ಘೋರ ತೀರಗಳ ನೇವರಿಸಲು.
ಇವನ ಕಣ್ಗೊಳಗೆ ದಿವದ ಪ್ರೀತಿಯ ಕನವರಿಕೆ, ಎಚ್ಚರ!

ಆಹಾ! ಎಂಥ ಕಿರೀಟ!
ಇಂಚಿಂಚು ಮುಳ್ಳೂ ನಾಟಿ ಬೀಗಿದೆ :
(ಚಿಮ್ಮುವ ಪ್ರೀತಿಗಿನಿತೂ ನೆನೆಯದೆ?)
ದ್ವೇಷದ ಉರಿ ಕಿರೀಟ; ಕರುಣೆಯ ರಾಜಕುಮಾರನಿಗೆ.
ಹೊತ್ತ ದೂಲವೂ ಭಾರ, ದೇವರ ತೋಟವ ನೆನೆದು
ಕಾಲ್ವರಿ ಗುಡ್ಡ ತುಂಬಿದೆ.

ಈಗ, ಕಾಯಬೇಕಾಗಿದೆ ಕಾಯಬೇಕಾಗಿದೆ...
ಇನ್ನೂ ಹೊತ್ತು ಮುಳುಗಿಲ್ಲ ಮೊಳೆಗಳು ಮುಳುಗಿವೆ

ಮಿಂಚು ತುಯ್ಯುತಿದೆ ಬಿಸುಸುಯ್ಯುತಿದೆ
ಬಸಿದ ಹಸಿಕರುಣೆಗೆ ಕುಸಿದಿಳಿಗಿಳಿದ ಮಳೆ
ಇದ್ಯಾವ ಪ್ರಳಯದಲೆ!
ಹರಿಹರಿಹರಿದಪ್ಪಿದೆ ಶಪಿತ ಆರ್ತ ಒಣ ಆತ್ಮಗಳನ್ನು.

ಮನದ ಮಡುಗಟ್ಟಿದ ಮೌನ ಕಾತುರ
ಪ್ರೀತಿಯ ಹೂ ಮತ್ತೆ ಅರಳಿತೇನು ?
ಮುಳ್ಳ ಕಿರೀಟ ಮೂರನೆ ದಿನಕ್ಕೆ ಒಣಗಿ ಕಳಚಿತೇನು ?



• ಸುಮಾ ಎಂಬಾರ್, ಮೈಸೂರು

ಮತದಾರನ ಜೇಬಲ್ಲೀಗ ಯರಡೂವರೆ ಸವುರದೆ ಕಣೊ


ಮಲಕ್ಷನ್ ಟೀಮು ಕರ್ಟಾಯ್ತದೆ ಏನಾರ ತಿಂಡಿ ಾ ಚಿಕ್ಕಣ್ಣ, ಬರಿ ಕಾಫಿ ಟೀ ಮಾಡಿ ಏನ್" ಎಂದ ಉಗ್ರಿ. ಅದಕ್ಕೆ ಸಾವಕಾಶವಾಗಿ ಉತ್ತರಿಸಿದ ಶಲ್ ಚಿಕ್ಕ,

ಸರಕಾರಿ ರೇಟ್ ಕೇಳಿದ್ದಿಯೇನೊ? ಈ ತರ ಬ್ಯಲಿ ಏ ನಾನು ಯಾವತ್ತೂ ಕಂಡಿಲ್ಲ" ಎಂದ.

ತೋಗ್ನಿ ಉಪ್ಪಿಟ್ಟು ಮಾಡು."

ಅರುಳ್ಳಿ ಇಲ್ಲದ ಉಪ್ಪಿಟ್ಟು ಮಾಡ್ತಿನಿ ತಿಂದಿಯಾ?"

ಂದೆಯೇನೂ. ಹೆಸರೇ ಉಪ್ಪಿಟ್ಟಲ್ಲವೆ. ರವೆ ಉರುದು



ವಗ್ಗಣೆ ಕೊಟ್ಟು ಉಪ್ಪಾಕಿದರಾಯ್ತಪ್ಪ, ಅದೇ ಉ ಪ್ಪ."

ನ್ನ ಮಾತು ಕೇಳಿ ಅವುನಂಗೆ ಮಾಡಿದ್ರೆ ಕಡಿಗವುನೇ ಸು ಕಂಡ್ರ" ಎಂದು ಜುಮ್ಮಿ ನಕ್ಕಳು.

ಮಾವು ರೇಟೇರಿಸಿದ್ರು ಜನ ತಡಕತ್ತಾ ಅವುರಲ್ಲ, ಕತೆ?"

ನಗಳತ್ರ ದುಡ್ಡದೆ ಕಣಮಾವ. ಈಗೇನಿಲ್ಲ ಅಂದ್ರುವೆ ಒಬ್ಬ ಮತದಾರನ ಜೇಬಲ್ಲೂ ಯರಡೂವರೆ ಸಾಪಾಯಿಗಂಟ ಸಿಗತದೆ. ಅದ್ಕೆ ಯಾವ ಬ್ಯಲಿ ಾ ಅವುರ ಅಳ್ಳಾಡಸಾಕ್ಯಾಯ್ತಾಯಿಲ್ಲ."

ಯರಡೂವರೆ ಸವುರ ಎಲ್ಲಿಂದ ಬಂದತ್ಲ?" ಎಂದು ಂತೂಹಲಗೊಂಡ.

ಜೆಪಿಗಳು ಒಂದೋಟಿಗೆ ಯರಡು ಸವುರ ಕೊಡ್ತರೆ. ಜೆ ಸ್‌ನೋರು ಐನೂರು ಕೊಡ್ತಾ ಅವ್ರುರೆ. ಕಾ ನೋರು ತಲಾ ನೂರು ಕೊಡ್ತರಂತೆ. ಅಲ್ಲಿಗೆ ಎ ಮ್ತು ಟೋಟ್ಲು ಮಾಡು."

ಂತೂ ಯಲಕ್ಷನ್ನು ಅಂದ್ರೆ ಸಂತೇಲಿ ತೆಂಗಿನಕಾಯಿ ಕೆ ಗೆ ಓಟು ಕೊಳ್ಳೊ ಯಾಪಾರಾ ಅನ್ನು" ಎಂದ ಕಾ ವ.

ಕಣ ಮಾವ. ಯಾರು ಯಾರ್ನು ಬೈಯಂಗಿಲ್ಲ. ಕೊ ದು, ಬಕರಿಯಾಗೋರು ಯಲ್ಲ ಒಂಥರಾ ಕದಬಳ್ಳಿ ಸ ಬಂದೋರಂಗಾಗ್ಯವುರೆ. ಈ ಟೀಮಲ್ಲಿ ಬಿಜೆಪಿ ದು ಕೈಯೊಡ್ಡದೋನು ಯಾವನೊ ನಿನ್ನಂಥೊನ್ನಬ್ಬ ಅ ."

ಬಿಜೆಪಿಗಳು ಯರಡು ಸವುರ ಕೊಟ್ರೆ ಈ ಡಿಯೇನೊ ಮಾವ?" ಎಂದು ಜುಮ್ಮಿ ನಕ್ಕಳು.

ಪಿಸಿ, ಈಸಗಂಡೇನು ಮಾಡನ್ನೆ ಅದ. ಸಾಯಕಡೆಸತಿ ಡ ಹಂದಿ ಬಾಡ ತಿಂದು ಸತ್ತ ಅನ್ನಂಗೆ ಇಲ್ಲಿಗಂಟ ದೂ ಇಲ್ದಂಗೆ ಯಾಚಗ ಮಾಡಿ ಈಗ ಕೊಳ್ಳೊದನೆ?" ಎಂದ ಕಾಳಮಾವ.

ಳಮಾವ ನಿಜಲಿಂಗಪ್ಪ, ಹನುಮಂತಯ್ಯನೋರ ನು ಕಣೆ. ನಿಜಲಿಂಗಪ್ಪ ಎಂಟೊರ್ಸ ವಂತ್ರಿಯಾಗಿದ್ರೂ ಬೆಂಗಳೂರಲ್ಲಿ ಒಂದು ಲ್ಲಿ ಮನೆಗೂ ಇರಲಿಲ್ಲ, ಹೋಗಿ ಚಿತ್ರದುರ್ಗದಲ್ಲಿ ಕೆ ಗೊತ್ತೆ? ಬೆಂಗಳೂರಲ್ಲಿ ಜೀವನ ಮಾಡಕ್ಯಾಗದಿಲ್ಲ ಆದಾಯದಲ್ಲಿ, ಚಿತ್ರದುರ್ಗದಲ್ಲಿ ಯಂಗೋ

ಕಾಲ ಮಾಡಬವುದು ಅಂತ ಹೋಗಿ ಉಟ್ಟಿದೂರಲ್ಲೇ ತೀರಿಕಂಡ ಗೊತ್ತೆ."

"ಇವತ್ತು ಹುಡುಕಿದ್ರೂ ಅಂಥೋನ್ನಬ್ಬ ಸಿಗದಿಲ್ಲ ಬುಡು."

"ದ್ಯಾವೇಗೌಡನೂ ನಿಜಲಿಂಗಪ್ಪನಂಗಾಯ್ತನೆ ಅಂತ ತಿಳಕಂಡಿದ್ದ ನಮ್ಮ ಕಾಳಮಾವ" ಎಂದು ಉಗ್ರಿ ಕುಚೋದ್ಯವಾಗಿ ನಕ್ಕ.

"ಮದ್ದಿಗೆ ಅಂಗೆ ಇದ್ದ ಕಂಡ್ರ ಅವುನು. ಪಾಪ ಕಾಲ ಬದ್ಲಾದಂಗೂ ಅವುನೂ ಬದ್ಲಾದ ಅತ್ತಗೆ."

"ಸರಿಯಪ್ಪ ಕಾಲ ಬದ್ಲಾದಂಗೆ ನೀನು ಬದ್ಲಾಗಲಿಲ್ಲವಲ್ಲ ಹೇಳು."

"ನಾನ್ಯಾವ ರಾಜಕಾರಣ ಕ್ಷಸಿಯಕ್ಕೋಗಿದ್ದೆನೂ. ಕುಂತಿತ್ತ ಇದ್ದಿನಪ್ಪ."

"ಅಲ್ಲಿಗೆ ಸಂದರ್ಭ ಬಂದ್ರೆ ನೀನು ಅಂಗೇ ಅನ್ನಂಗಾಯ್ತು."

"ಅದಂಗಲ್ಲ ಕಂಡ್ರ. ಒಂದೊಂದು ಯವಸ್ಥೆ ನ್ಯಡಕಂಡು ಹೋಯ್ತಾಯಿರುವಾಗ ಅದ್ಯಂಗೊ ನಡಕಂಡೋಯ್ತದೆ. ನೀನು ನೇಮ ನಿಷ್ಟೆಲಿ ಉಳಕೊಬವುದು ಅಲ್ಲವೇ."

"ನೀನೇಳದು ಒಂಥರಾ ಗೋವಿಂದೇಗೌಡ್ರ ಲ್ಯಕ್ಕಾಚಾರ ಆಯ್ತು."

"ಗೋವಿಂದೇಗೌಡ್ರು ದ್ಯಾವ ಲ್ಯಕ್ಕಾಚಾರನ್ಲ?" ಎಂದಳು ಜುಮ್ಮಿ.

"ಗೋವಿಂದೇಗೌಡ್ರು ದ್ಯಾವೇಗೌಡ್ರ ಪಾರ್ಟಿಲಿ ಎಜುಕೇಷನ್ ಮಿನಿಷ್ಟ್ರಾಗಿದ್ರು ಕಣೆ. ಈ ಮುಖ್ಯಮಂತ್ರಿ, ಈ ಸರಕಾರ ಏನಾರ ಆಗಿರ್ಲಿ ನಾನು ಮಾತ್ರ ಒಂದು ಪೈಸ ಲಂಚ ಮುಟ್ಟದಂಗೆ ಈ ಕೈಯ್ಯ ಶುದ್ಧವಾಗೇ ಮಡಿಕಂಡಿದ್ದು ಮನಿಗೋಯ್ತಿನಿ ಅಂದ್ರು. ಅಂಗೇ ಇದ್ರು, ಅಂಗೇ ಹೋದ್ರು."

"ಈಗ್ಲು ಇದ್ದರೇನ್ಲ ಅವುರು?"

"ದೇವೇಗೌಡ್ರೆ ಇರುವಾಗ ಅವುರಿರದಿಲವೇನೆ? ಚನ್ನಾಗ್ಯವುರೆ."

"ಆ ದ್ಯಾವೇಗೌಡುಂದೇನೊ ಅಳಕಂಡು ಬತ್ತಿನಿ ಅಂತ ಎಡೂರ ವಳೇನರಸೀಪುರಗಂಟ ಹೋಗಿದ್ನಲ್ಲ, ಏನಾಯಿತ್ಲ ಅದು?" ಎಂದ ಕಾಳಮಾವ.

"ಅಳಿಯಕ್ಕೆ ಅವುಕಾಸ ಕೊಡ್ತಿಲ್ಲವಂತೆ ಕಣಮಾವ. ದ್ಯಾವೇಗೌಡ ಆ ಕಾಲದಲ್ಲೇ ತಮಗೆ ಬೇಕಾದ ಅಧಿಕಾರಿಗಳ ಹಾಕಿಸಿಗಂಡಿದ್ರಂತೆ. ಅವುರು ಎಡೂರನ ಮಾತನೆ ಕೇಳ್ತಿಲವಂತೆ. ಅಂಗಾಗಿ ಗೌಡ್ರುದು ಏನೂ ಸಿಗಲಿಲ್ಲ."

"ಅದ್ಯಂಗೆ ಸಿಗತದೊ ಉಗ್ರಿ?" ಎನ್ನುತ್ತ ವಾಟಿಸ್ಸೆ ಬಂದ.

"ಮೂರು ದಿನದಿಂದ ಪತ್ತೆಯಿಲವಲ್ಲ ಎಲ್ಲಿಗೋಗಿದ್ದ?"

"ವಳ್ಳೆ ಕ್ಯಾಂಡಿಡೇಟ್ ತರಕ್ಕೆ ಅಂತ ಮೈಸೂರುಗಂಟ ಹೋಗಿದ್ದೆ."

"ಇಲ್ಯಾರು ಸಿಗಲಿಲ್ವೆ?"

"ಇಲ್ಲಿ ಅಂತ ಕ್ವಾಲಿಟಿ ಇರೊ ಕ್ಯಾಂಡೇಟ್ ಸಿಗಲಿಲ್ಲ ಕಣಕ್ಕ. ಅದ್ಕೆ ನಮ್ಮ ಹೆಚ್.ಟಿ. ಕೃಷ್ಣಪ್ಪನೋರ ಸ್ವಸೆ ಮೈಸೂರು ಕುವೆಂಪು ನಗರದಲ್ಲಿ ಹೋಗಿ ಸೆಟ್ಲಾಗಿದ್ಲು, ಹಿಡಕಂಡು ಬಂದು ನಿಲ್ಲಿಸಿದ್ದಿವಿ. ಕ್ಯಾನುವಾಸಿಗೆ ಇನ್ನು ನಾಲ್ಕೇ ದಿನದೆ. ವಿಳಕ್ಕ ಇನ್ನು ಹನ್ನರಡೂರು ಸುತ್ತಬೇಕು" ಎಂದು ವಾಟಿಸ್ಸೆ ಅವಸರಿಸಿದ.

"ಅವುಳೆಸರೇನ್ಲ?"

"ಚಂದ್ರಕಲಾ ಅಂತ. ನಿನಿಗಿಂತ ವಳ್ಳೆ ಕ್ಯಾಂಡೇಟು. ಎಜುಕೇಟೆಡು. ಮಟನ್ನು ಚಿಕನ್ ಸಾರನ್ನಲ್ಲ ಚನ್ನಾಗಿ ಮಾಡ್ತಳೆ."

"ನಾರಾಯಣಮೂರ್ತಿ ಹೆಡತಿಯಲವೇನ್ಲ?"

"ನಿನಿಗೊತ್ತೇನಕ್ಕ?"

"ನಾನು ಮೈಸೂರಿಗೋದ್ರೆ ಅವುರ ಮನೆಲೆ ಕಂಡ್ರ ಉಳಕಳದು. ನಡಿ ಹೋಗನ. ಕಾರು ತಂದಿಲವೇನ್ಲ?"

"ಇದಪ್ಪ ಸ್ಟ್ಯಾಂಡರ್ಡ್ ಲೈಪು ಅಂದ್ರೆ. ಪಸ್ಟು ಲಗೇಜಾಟೋದಲ್ಲಿ ಹೋಗನ. ಅಮ್ಯಾಲೆ ಇನೋವ ಕಾರು ತರುಸ್ತಿನಿ. ಆಯ್ತೇನಕ್ಕ?"

"ಇಲ್ಲಿಗೆ ತರುಸ್ಲ ಉಗ್ರಿ, ಸೀರಮಾವುನ್ನ ಕರಕಂಡೋಗನ."

"ಸೀರ ಚಿಗಪ್ಪ ನಮ್ಮ ಜೊತೆ ಬ್ಯಾಡ ಕಣಕ್ಕ. ಅವುನು ಸದ್ದಿಕೆ ಸಿಐಡಿ ಕ್ಯಲಸ ಮಾಡ್ಲಿ, ದಳದಲ್ಲಿ ಕಾಣೆಸಿಗೊಂಡು ನಮಿಗೆ ಮೆಸೇಜ್ ಕೊಡ್ಲಿ. ನಾವು ಈ ಟೈಮಲ್ಲಿ ಸಿದರಾಮಯ್ಯ, ಪರಮೇಶ್ವರನ ರಾಜಕೀಯ ಮಾಡಿದ್ರೆ ಗ್ಯಾತ ಯಸಿತಿವಿ. ಸದ್ದಿಕೆ ಕುಮಾರಣ್ಣನ ರಾಜಕಾರಣ ಮಾಡಬೇಕು. ನೋಡಾಗ್ಲೆ ಆ ಚೆನ್ನಿಗಪ್ಪ ಮಗನ ಜ್ವತೆ ಬಂದು ದ್ಯಾವೇಗೌಡನ ಕಾಲಿಗೆ ಬಿದ್ದ, ಬೆಂಕಿ ಮಾದೇವ ಬೆಂಕಿ ಆರಿಸಿ ಬರಿ ದೊಂದಿ ಜ್ವತೆ ಬಂದು ಕುಮಾರಣ್ಣನ ಕಾಲಿಗೆ ಬಿದ್ದ, ಇನ್ನು ಯಾರ್‍ಯಾರು ಬಂದು ದ್ಯಾವೇಗೌಡ್ರ ದೊಡ್ಡಿ ಸೇರತರೊ ಏನೊ."

"ನೀವು ಅಂಗೆ ಯಾರ್‍ಯಾರ್‍ನೊ ಸೇರಿಸಿಕೊಬ್ಯಾಡಿ ಕಂಡ್ರಲಾ. ಮಕಿಲ್ಲದವುನ್ನಲ್ಲ ಸೇರಿಸಿಗಂಡ್ರೆ ಬರೊ ಓಟೂ ಹೋಯ್ತದೆ."

"ನಿಜ ದ್ವಡಪ್ಪ ನೀನೇಳಿದ್ದು, ಅಂಥೋರು ಸುಮಾರು ಜನವುರೆ. ಪರೆಗ್ ಚಾಂಪಲ್, ಚೆನ್ನಿಗಪ್ಪ ಹೋಗಿ ದಳದ ಓಟು ಕೇಳಿದ್ರೆ ಯಂಗಾಯ್ತದೊ ಅದೇ ತರದ ಹೈನಾತಿ ಜನ ನಮ್ಮಲ್ಲವುರೆ. ಅವುರ ಗುರುತು, ಪರಿಚಯ ಇಲ್ದಿರೊ ಊರಿಗೆ ಕ್ಯಾನುವಾಸಿಗೆ ಕಳಿಸದ್ದಿವಿ."

"ಅದಿರ್ಲಿ, ಬಿಜೆಪಿಗಳು ಆಟೊಂತರ ದುಡ್ಡು ಕೊಡ್ತರಂತಲ್ಲಾ, ನೀವು ಏಟು ಕೊಡ್ತಿರೀ?"

"ನಾವು ಸೋತ್ರ ದುಡ್ಡು ಕೊಡದಿಲ್ಲ ದ್ವಡಪ್ಪ, ಕೊಟ್ರು ಯಲ್ಲಾರಿಗೂ ಕೊಡದಿಲ್ಲ, ಯಾರೂ ಈಸಗಳಕ್ಕೆ ಯೋಗ್ಯರೊ ಅಂಥೋರ ಹುಡುಕಿ ಕೊಡ್ತಿವಿ."

"ಅದ್ಯಂಗುಡುಕ್ತಿರಿ?"

"ಈಗ ಇಲ್ಲೆ ತಗೋ. ನೀನು ಎಷ್ಟು ಕೊಟ್ರು ಈಸಗಳದಿಲ್ಲ, ಅದೇ ನಮ್ಮ ಸೀರ ಚಿಗಪ್ಪ ಕೊಟ್ಟಷ್ಟು ಈಸಗತ್ತನೆ. ಈ ತರ ಲೋಕಲ್ಲಲ್ಲಿ ಫಲಾನುಭವಿ ಪರಸನ್‌ಗಳ ಪತ್ತೆಹಚ್ಚೊ ಜನ ಅವುರೆ. ಅವುರ ಮುಖಾಂತರ ನಾವು ಡವುಟಿರೊ ಓಟುಗಳ ಪರಚೇಸ್ ಮಾಡ್ತಿವಿ."

"ಅಂಗರೆ ಆರೆಸೆಸ್ ತರದ ಕಾರ್ಯಕರ್ತರು ನಿಮಿಗೂ ಅವುರೆ ಅನ್ನು."

"ಆರೆಸ್ಸೆಸ್‌ನೋರು ಹಣ ಹಂಚದರಲ್ಲಿ ಪ್ರಾಮಾಣಿಕರಂತೆ ಕಣೊ ಉಗ್ರಿ. ಅವುರಿಗೆ ಪಾರ್ಟಿ ಬರೋದು ಮುಖ್ಯವಂತೆ. ಬಂದಮ್ಯಾಲೆ ಬೆನಿಫಿಟ್ ಯಂಗೆ ತಗೊಬೇಕು ಅನ್ನದು ಅವುರಿಗೆ ಗೊತ್ತದಂತೆ. ಅದ್ಕೆ ಬಟಾವಡೆಗೆ ಕೊಟ್ಟ ದುಡ್ಡಲ್ಲಿ ಕದಿಯದಿಲ್ಲ, ಕದ್ದರೆ ಗಂಟನೆ ಕದಿಯದವುರು."

"ಅವುರನೇನೊ ರಾವುಲಗಾಂಧಿ ಬೋದಿದ್ದನಂತೆ."

"ಬೋದಿಲ್ಲ, ಎಚ್ಚರಿಕೆ ಮಾತಾಡ್ಯವುನೆ. ಬಾಂಬಾಕೊ ಸಾಬರಿಗಿಂತ ಲಾರಿ ಬೀಸೊ ದೇಶಭಕ್ತರಿಂದ ದೇಶಕ್ಕೆ ಅಪಾಯ ಅಂದವುನೆ."

"ಅದ್ಯಾಕಂಗಂದಾ?"

"ಯಾಕಂದಾ ಅಂದ್ರೆ, ಅವುನು ಅಂಗೇ ನೋಡಿದ. ಅವುರಬ್ಯಾಕೊ ಜಗಳದಲ್ಲಿ ಸತ್ತಿರೊ ಜನಗಳ ಲ್ಯಕ್ಕ ತಗಂಡ. ಬಾಬ್ರಿ ಮಸೀದಿ ಬಿದ್ದಾಗ ಸತ್ತೋರು, ಇಟ್ಟಿಗೆ, ಜ್ಯೋತಿ, ಪಾದುಕೆ ತಂದಾಗ ಸತ್ತೋರು. ಇಂತ ಲ್ಯಕ್ಕ ತಗಂಡಾಗ ಆರೆಸೆಸ್ಸಿನೋರು ಯಾರು ಸತ್ತಿಲ್ಲ ಅನ್ನದು ಗೊತ್ತಾಯ್ತಂತೆ. ಅದ್ಕೆ, ಬಾಂಬಿಗಿಂತ ಬಿದುರು ದೊಣ್ಣೆ ಡೇಂಜರು ಅಂದವುನೆ."

"ಅದಿರ್ಲಿ, ಬಿದುರು ದೊಣ್ಣೆ ತಗಂಡು ಹೆಡತಿಗೊಡದಂತಲ್ಲ ಯಾಕ್ಲ?"


"ಎಡೂರಪ್ಪ ಕೊಟ್ಟ ಸೀರೆ ಉಟಗಂಡಿದ್ಲು ಅದ್ಕೆ ಕಣಕ್ಕ."

"ಅದ್ಕೆ ಅಂಗ್ಯಡದರ್ಲ?"

"ಆ ಸೀರೆ ಒಂಥರಾ ಕೇಸರಿ ಬಣ್ಣಕಿತ್ತು ಕಣಕ್ಕ. ಮದ್ಲೆ ಆ ಬಣ್ಣ ಕಂಡ್ರಾಗದಿಲ್ಲ ನನಿಗೆ. ಹೋಗಬ್ಯಾಡ ಅಂದ್ರು ಹೋಗಿ ಈಸಗಂಡು ಬಂದು ಉಟಗಂಡ್ಲು. ಗಂಡ ಅಂತ ನಾನಿರುವಾಗ ಎಡೂರಪ್ಪ ಕೊಟ್ಟ ಸೀರೆ ಉಟಗತ್ತಳೆ ಅಂದ್ರೆ ಗಂಡ ನಾನೊ, ಅವುನೊ ಅಂತ ಕೇಳಿದೆ. ಅದ್ಕೆ ಎಡೂರಪ್ಪ ಅಪ್ಪ ಅಂದ್ಲು, ಅಂಗಾದ್ರಪ್ಪನ ಮನಿಗೇ ಹೋಗು ಅಂತ ಯರಡುಬುಟ್ಟೆ ಕಣಕ್ಕ. ಆ ಸೀರೆ ಬಿಚ್ಚಿಯಸ್ತು ನಾನು ತಂದ ಸೀರೆ ಉಟಗಂಡ್ಳು, ಈಗ ಚನ್ನಾಗಿದ್ದಿವಿ. ಅವುಳೆ ಕ್ಯಾನುವಾಸಿಗೆ ಕಳಿಸಿಕೊಟ್ಟು. ನಡಿ ಹೋಗನ ಓಟು ಕೇಳಕ್ಕೆ." ●



ಯುಧಿಷ್ಠಿರನ ಶಿಷ್ಯರು....



ಮೊನ್ನೆ ಬೆಂಗಳೂರು ರೇಸು ಮುಗಿಯಿತು. ಒಂದಾನೊಂದು ಕಾಲಕ್ಕೆ 'ಮುಗಿಯಿತಲ್ಲ ಸದ್ಯ' ಎಂದು ಜೂಜುಕೋರರು ಕೂಡ ನೆಮ್ಮದಿಯ ರುಬಿಡುತ್ತಿದ್ದರು. ಈಗ ಹಾಗಿಲ್ಲ, ಬೆಂಗಳೂರು ರೇಸ್ ಮುಗಿದೊಡನೆ ತ ರೇಸ್ ಇರುತ್ತದೆ. ಅಲ್ಲಿನ ರೇಸ್‌ನ **running commentary**, ಂಶ ನೋಡುತ್ತಾ ಇಲ್ಲಿಯ ರೇಸ್ ಕೋರ್ಸ್‌ನಲ್ಲಿ ಕಟ್ಟುವವರಿದ್ದಾರೆ. ಬಲು ಇರುವವರು ವರ್ಷದ ಹನ್ನೆರಡು ತಿಂಗಳೂ ಜೂಜಾಡುತ್ತಾ ಬಹುದು.

ನರೆ ಯಾರು ಏನೇ ಹೇಳಲಿ, ಎಷ್ಟೇ ದುರಹಂಕಾರದಿಂದ ಮೆರೆಯಲಿ, ಜೂಜುಕೋರರ ಮಾತುಗಳನ್ನು ಡಿ. ತಾನು ಮಾತ್ರ ಯಾವಾಗಲೂ ಗೆದ್ದುದಾಗಿ ಹೇಳುತ್ತಾನೆ; ತಾನು ಜೂಜಿನಲ್ಲಿ **lucky** ಅಥವಾ ನಿಷ್ಣಾತ ಹೇಳಿಕೊಳ್ಳುತ್ತಾನೆ. ಎಲ್ಲ ಸುಳ್ಳು. ಕುದುರೆಯ ಮಾಲೀಕರು ಮತ್ತು ಜಾಕಿಯೇ ತಮ್ಮ ನಿರೀಕ್ಷೆ ಸುಳ್ಳಾಗಿ ಪುಕುತ್ತಾರೆ. 'ನಾನು ಓಡಿಸುವ ಕುದುರೆ ಅಕಸ್ಮಾತ್ ಗೆಲ್ಲಬಹುದು, ಛಾನ್ಸ್ ಇದೆ, ಆದರೆ ಗೆದ್ದೇ ಗೆಲ್ಲುತ್ತೆ ಹೇಳಲಾರೆ' ಎಂದ ಜಾಕಿಯೇ ಅಚ್ಚರಿಪಡುವಂತೆ ಅವನನ್ನು ಎಳೆದುಕೊಂಡು ಹೋಗಿ ಕುದುರೆ ! ಆದ್ದರಿಂದ ಜೂಜಾಡುವವರು ಹುಷಾರಾಗಿರಬೇಕು.

ಮೊನ್ನೆ ಏನಾಯಿತೆಂದರೆ, ಇಡೀ ವರ್ಷ ಅಷ್ಟಾಗಿ ಸೋಲದಿದ್ದ ನಾನು ಕೊನೆಯ ಮೂರು ದಿನ ಸ್ವಲ್ಪ ಸೋತಿದ್ದೆ. 'ಪರವಾಗಿಲ್ಲ' ಎಂದುಕೊಂಡು ಹೊರಡಲಿದ್ದೆ. ಕೊನೇ ರೇಸ್‌ನಲ್ಲಿ ನಾನು ಈಚೆಗೆ ಮೆಚ್ಚಿದ ಒಂದು ಕುದುರೆ–ಅದರ ಹೆಸರು 'ಪೀರ ಪ್ರಿನ್ಸೆಸ್' ಎಂದು. ಕೈಯಲ್ಲಿದ್ದ ನೂರೈವತ್ತು ರೂಪಾಯಿ ಕಟ್ಟಿ ಸುಮ್ಮನೆ ಕೂತೆ. ನಾನು ಚಕಿತಗೊಳ್ಳುವಂತೆ ಅದು ಎಲ್ಲಕ್ಕಿಂತ ಮುಂದೆ.... ಮುಂದೆ.... ಬಂತು. ಇನ್ನೇನು ರೂ. 1500 ಬಂತು ಅಂತ ಎದ್ದೆ, ನೋಡಿದರೆ ಹಿಂದಿನಿಂದ ಬಂದ ಹ್ಯಾಪಿ ಹೌಸ್ ಬರೀ ಮೂತಿಯಲ್ಲಿ ಅದನ್ನು ಸೋಲಿಸಿತ್ತು!

ಇದಕ್ಕೆ ಹೇಳುವುದು: ಯುದ್ಧ, ಜೂಜು ಎದೆಗೊದ್ದರೆ ಯಾರಿಗೂ ಶಾಕ್ ಆಗಬಾರದು. ಆದಕ್ಕೆ ಜೆಫ್ರಿ ಬರ್ನಾರ್ಡ್ ನೂರಾರು ರೇಸ್ ನೋಡಿ, ಹಣ ಕಟ್ಟಿ, ಸೋತು, ಅನಿರೀಕ್ಷಿತವಾಗಿ ಗೆದ್ದು, ಇದೆಲ್ಲದರ ನಿರರ್ಥಕತೆ ಅರಿತು ಹೇಳುತ್ತಾನೆ: ಇವತ್ತು ರೇಸ್‌ಗೆ ಹೋಗಬೇಕು. ಟ್ಯಾಕ್ಸಿ ಹಿಡಿದು, ಟಿಕೆಟ್ ಕೊಂಡು, ಒಳಗೆ ಹೋಗಿ **form book** ಅಭ್ಯಾಸ ಮಾಡಿ, ಹಣ ಕಟ್ಟಿ ಸೋಲುವುದಕ್ಕಿಂತ.... ಮನೇಲೇ ಇದ್ದು ನಿಮ್ಮ ಟಾಯ್ಲೆಟ್ ಕಮೋಡ್‌ನಲ್ಲಿ ಐವತ್ತು ಪೌಂಡ್ ಹಾಕಿ ಬಕೆಟ್ ನೀರು ಚೆಲ್ಲಿ **flush** ಮಾಡಿ ಮಲಗಿಬಿಡುವುದು ವಾಸಿ... ಹೇಗೂ ದುಡ್ಡು ಹೋಗುತ್ತೆ! ಅಲ್ಲಿಗೆ ಹೋಗುವ ಕಷ್ಟ ಯಾಕೆ?



ಆಗಸ್ಟ್ 17, 1994

ಸೀಥ್ರೂ ಸೀರೆ ಸುಖ!

ಯಡ್ಯೂರಪ್ಪನವರ ಸೀರೆ ಎಲ್ಲೆಡೆ ಸುದ್ದಿಯಾಗಿದೆ. ಅವನ್ನ 'ಚುನಾವಣೆ ಸೀರೆ' ಅಂತಾರೆ', 'ಕಮೀಷನ್ ಸೀರೆ' ಅಂತಾರೆ; 'ಅದ ಸುತ್ಕಂಡ್ರೆ ಬಿಜೆಪೀನೆ ಸುತ್ಕಂಡಂಗೆ ಅಸ್ನಿಸ್ತಿ ಅನ್ಸುಸ್ತದೆ' ಅಂತಾರೆ; 'ಸೀರೆ ತಂದಿವ್ನಿ ಇದ್ಕೊಂದ ರವಿಕೆ ಬಟ್ಟೆ ತಗಂಬ' ಅಂತ ಭಾಗ್ಯಲಕ್ಷ್ಮಿಯೋರು ಹೇಳಿದ್ರೆ ಗಂಡ ಅನ್ನಿಸಿಕೊಂಡ ಮೂದೇವಿ 'ಸೀರೆ ಕೊಟ್ನಲ್ಲ ಅದ್ನೂ ಕೊಡು ಅಂತ ಕೇಳ್ಬೇಕಿತ್ತು' ಅಂತ ಹೇಳೋದ್ರಿಂದ ಮನೆಗಳೆಲ್ಲ ರಣರಂಗ ಆಗವೆ ಅಂತಾರೆ. ಮೋಟಮ್ಮನೋರು ಇನ್ನೊಂದು ತಕರಾರು ಎತ್ತವ್ರೆ. 'ಅವ ಉಟ್ಕಂಡ್ರೆ ಮೈ ಎಲ್ಲ ಕಾಣ್ತದೆ' ಅಂದವ್ರೆ. ಅವು ಅಷ್ಟು ತೆಳ್ಳಗಿದ್ದವಂತೆ. ಯಾರೋ ಹಿಂಗಿಂಗಂತಲ್ಲ ಅಂತ ಮುಖ್ಯಮಂತ್ರಿಗೋಳ ಹತ್ರ ಹೇಳಿದ್ದಕ್ಕೆ ಅವ್ರು 'ಆಯ್ತು ಬುದ್ರಮ್ಮ. ಮುಂದಿನ ಸಲ ಸೀರೆ ಜೊತೆ ಲಂಗಾನೂ ಕೊಡುಸ್ತೀನಿ' ಅಂದ್ರಂತೆ!

ಅಲ್ಲ ಸೀರೆ ತೆಳ್ಳಗವೆ ಅಂತ ತಿಳಿದ ಮೇಲೆ ಅದಕ್ಕೆ ಪರಿಹಾರಾನ ಲಂಗದಲ್ಲಿ ಕಂಡುಕೊಂಡ್ರು ಯಡ್ಯೂರಪ್ನೋರು. ಇದನ್ನೇ ಏನೋ ಮಹಾಪರಾಧ ಅನ್ನೊ ಹಂಗೆ ಮೋಟಮ್ಮನವರು ಹೇಳಿರೋದು ನೋಡಿದ್ರೆ ಅವರಿಗೆ ನಮ್ಮ ಸಂಸ್ಕೃತಿಯ ಕಾಳಜೀನೆ ಇಲ್ಲ ಅನ್ನೊ ಹಂಗೆ ಕಾಣಿಸ್ತದೆ. ಅಲ್ಲ ಮೇಡಮ್ನೋರೆ ಪ್ಯಾಟೆ ಹೆಂಗುಸ್ರು ಸೀರೆ ಬಿಟ್ಟು ಸಾಬರ ಹೆಂಗಸರಂಗೆ ಡ್ರೆಸ್ ಮಾಡ್ಕಂತಾ ಕುಂತವ್ರೆ. ದಿಸದಿಸಾ ಇಂತೋರು ಜಾಸ್ತಿ ಆಗ್ತಿರೋದ ಕಂಡಿದೀರಿ. ಹಳ್ಳಿಗಳಿಗೂ ಈ ರೋಗ ಬಡೀತಾ ಅದೆ. ಕೆಟ್ಟು ಕೆರ ಹಿಡೀತಿರೋ ಸಂಸ್ಕೃತಿ ಬಗ್ಗೆ ಶಾನೆ ತಲೆ ಕೆಡಿಸಿಕೊಂಡ ಸನ್ಮಾನ್ಯರು ಸೀರೆ ಹಂಚಾದ್ರೂ ನಮ್ಮ ಹೆಂಗುಸ್ರು ಸಾಬರ ಹೆಂಗಸರ ವೇಷ ಹಾಕೋದ ತಪ್ಸಾನ ಅಂತ ಹಿಂಗ್ಮಾಡಿದ್ರೆ ಅವ ಉಟ್ಕಂಡ್ರೆ ಮೈ ಎಲ್ಲ ಕಾಣ್ತದೆ ಅನ್ನೊ ಕೆಲಸಕ್ಕೆ ಬಾರದ ಸಬೂಬು ಹೇಳ್ತೀರಿ. ಕಾಣಲಿ ಬಿಡ್ರಿ ಮೋಟಮ್ನೋರೇ. ಪ್ಯಾಟೆ ಹೆಂಗುಸ್ನು ಸೀಥ್ರೂ ಸೀರೆ ಉಟ್ಟು ಮೆರೆಯೋದ ನೋಡಿ, ಹಳ್ಳಿ ಹೆಣ್ಮಕ್ಳು 'ನಾವ್ಯಾವತ್ತಪ್ಪಾ ಇಂಥ ಸೀರೆ ಉಟ್ಕೊಂಡು ಮೆರೆಯೋದು' ಅಂತ ಏನೋನೂ ಕನಸು ಕಾಣ್ತಿರ್ತವೆ. ಅವರ ಕನಸೂ ನನಸಾಗಲಿ ಬಿಡಿ. ಅವ್ರೂ ಇಂತೋವ ಉಟ್ಕಂಡು 'ಸೀಥ್ರೂ ಸೀರೆ ಸುಖ' ಅನುಭವಿಸಲಿ. ನಿಮಗೇನು ಕಷ್ಟ ಅಂತೀನಿ!

ಲಂಗ ಅಂದಾಗ ನೆನಪಾಗ್ತಿದೆ. ನೀರಾ ರಾಡಿಯಾ ಟೇಪಿನ ರಾಡಿ ನಾತ ಎಲ್ಲ ಕಡೆ ಬಡೀತಲ್ಲಾ, ಅದ್ರಲ್ಲಿ ರತನ್ ಟಾಟಾ-ನೀರಾ ಮಾತಾಡಿದ್ದೆಲ್ಲ ಹಾದಿಬೀದಿ ಮಾತಾಗಿದೆಯಂತೆ. ಟಾಟಾ ಸಾಹೇಬರು ಇದ್ರಿಂದ ಬಲೆ ತಲೆ ಕೆಡಿಸಿಕೊಂಡವ್ರಂತೆ. ಹೇಳಿಕೇಳಿ ನಾನು ಖಾಸಗಿ ಮನುಷ್ಯ, ಸಾರ್ವಜನಿಕ ಆಸಾಮಿ ಅಲ್ಲ, ನಮ್ಮ ಮಾತುಕತೆ ಜನರ ಬಾಯಿಗೆ ಎಲೆಅಡಿಕೆ ಆಗಿದ್ದು ಸುತರಾಂ ಸರಿ ಇಲ್ಲ, ಹಿಂಗಾಗಿದ್ದರಿಂದ ನನ್ನ ಖಾಸಗಿತನಕ್ಕೆ ಭಂಗ ಬಂದಿದೆ ಅಂತಾವ ಕೋರ್ಟಿನ ಮುಂದೆ ತಮ್ಮ ಬಂಗ ನೋಡ್ಕಂಡವ್ರಂತೆ. ಅದೂ ನ್ಯಾಯವೇಯ. ಶ್ರೀಮಂತರು ಅಂದ್ಮೇಲೆ ದೊಡ್ಡೋರು. ಅವ್ರು ಹೇಳಿರೋದ್ರಲ್ಲಿ ನ್ಯಾಯ ಇರ್ತದೆ. ಇಂತದ್ನೆಲ್ಲ ತಿಳ್ಕಂಡು ಅವರು ಹೇಳಿದ್ದ ಒಪ್ಕೊಂಡು ತೆಪ್ಪಗೆ ಬಿದ್ದರಬಾರ್ದ. ಅದ್ಯಾವುದೋ ತಲೆ ಕೆಟ್ಟ ವಾಚಕನಂತೆ ಪತ್ರಿಕೆಗಳಲ್ಲಿ 'ನೀರಾ ಬೆಡ್‌ರೂಮಲ್ಲಿ ಏನು ನಡೀತು ಅನ್ನೋದ ಕೇಳ್ತಿಲ್ಲ, ಅವಳು ಯಾವ ಬಣ್ಣದ ಲಂಗ ಹಾಕಿದ್ಳು, ನೀನು ಯಾವ ಕಲರ್ ಚೆಡ್ಡಿ ಹಾಕ್ಕಂಡಿದ್ದೆ ಅನ್ನೊದೂ ಬೇಕಿಲ್ಲ, ಬೆಡ್‌ರೂಮಲಿ ಏನು ನಡೀತು ಅನ್ನೊ ಕುತೂಹಲವೂ ನಮಗಿಲ್ಲ ಕಣಯ್ಯ, ನಮ್ಮ ದುಡ್ಡಲ್ಲಿ ನಿನ್ನಂತೋರು ಮೋಜು ಮಾಡ್ತಿದೀರಲ್ಲಾ, ತರಂಗಾಂತರದ ಹಂಚಿಕೇಲಿ ಲಾಭ ಕಮಾಯಿಸಿದೀಯಲ್ಲ.... ಅದೂ ಖಾಸಗೀತನನೇನೋ ಬಡ್ಡಿಐದ್ನೆ, ನಮ್ ದುಡ್ಗೆ ನಾವು ಲೆಕ್ಕ ಕೇಳ್ಬಾರೆನೋ' ಅಂತಾವ ಏನೇನೋ ಕೆರ್ದವ್ನಂತೆ. ಇವನೇನು ಮನುಷ್ಯನೇ ಅಂತ. ಅಲ್ಲ ದೊಡ್ಡೋರು. ಏನೇನೋ ವ್ಯವಹಾರ ನಡೆಸ್ತಿರ್ತಾರಪ್ಪ, ಅದ್ನೆಲ್ಲ ಹಿಂಗೆ ಬಟಾಬಯಲು ಮಾಡೋದು ತರವೇನ್ರಿ!



ತರಂಗಾಂತರದ ಹಂಚಿಕೇಲಿ ದೊಡ್ಡದೊಡ್ಡೋರೆಲ್ಲ ಸೇರ್ಕಂಡು ಬೇಕುಬೇಕಾದೋರು ಬೇಕು ಬೇಕಾದಂಗೆ ಗೋರ್ಕಂಡವ್ರೆ ಅಂತ ಭಾಜಪ ಶಾನೆ ಸುದ್ದೀನೆ ಮಾಡ್ತು, ಚಳಿಗಾಲದ ಅಧಿವೇಶನ ನಡೆಯೋಕೇ ಬಿಡ್ಲಿಲ್ಲ, ಇದು ನ್ಯಾಯವಂತ ಕೆಲಸ ಅಂದ್ರೆ! ಈಗ ದೇಶದ ವಿವಿಧ ನಗರಗಳಲ್ಲಿ ಭ್ರಷ್ಟಾಚಾರದ ವಿರುದ್ಧ ಪ್ರತಿಭಟನೆ ಮಾಡ್ತಾರಂತೆ. ಬೊಂಬಾಯಿ, ಮದರಾಸು ಅಂತಹ ಕಡೇಲೆಲ್ಲ ಅದಿರ್ತದಂತೆ. ಹಂಗಾರೆ ಬೆಂಗ್ಳೂರಲ್ಲೂ ಇರುತ್ತೆ... ಅಂದ್ರೆ... ಇಲ್ವಂತೆ!

ಅರೆ ಇದೇನಿದು ಭ್ರಷ್ಟಾಚಾರದಲ್ಲಿ ಕರ್ನಾಟಕವೇ ಮೊದಲು ಅಂತೆಲ್ಲ ಪತ್ರಿಕೆಗಳಲ್ಲಿ ಹಿಟ್ಬಾಡ್ತ ಬಿದ್ದದಲ್ಲ ಅಂದ್ರೆ ಅದೆಲ್ಲ ಸುಪ್ಪಟೆ ಸುಳ್ಳಂತೆ! ರಾಜ್ಯಪಾಲರೆ ಭೂಹಗರಣ ಆಗಿದೆ ಅಂತ ಮಾಧ್ಯಮಗಳಲ್ಲಿ ಬರ್ತಿದೆಯಲ್ಲ ಇದಕ್ಕೇನಂತೀರಿ ಅಂತ ಕೇಳವ್ರಂತಲ್ಲಾ ಅಂದ್ರೆ... ಅದ್ಕೆ ಮುಟ್ಟಿ ನೋಡ್ಕೊಳೊ ಅಂತ ಉತ್ತರ ಕೊಟ್ಟವ್ರೆ. ಯಾರು ಅಂತೀರಿ? ಸನ್ಮಾನ್ಯ ಕೆ.ಎಸ್. ಈಶ್ವರಪ್ಪನೋರು. ನಾವೆಲ್ಲ ಸತ್ಯಹರಿಶ್ಚಂದ್ರನ ವಂಶದೋರು. ಲೋಕಾಯುಕ್ತ ರಾಜ್ಯಪಾಲರಂಗೆ ರಾಕ್ಷಸ ಗಣ ನಮ್ಮದಲ್ಲ, ಇಲ್ಲಸಲ್ಲದ ಆರೋಪ ಮಾಡಬೇಡಿ. ಅವರಿವರ ಮಾತ ಕೇಳಿ ಹಿಂಗೆಲ್ಲ ಮಾಡಬ್ಯಾಡಿ. ತಾಕತ್ತಿದ್ದರೆ ನಿಮ್ಮ ಹುದ್ದೆಗೆ ರಾಜೀನಾಮೆ ಬಿಸಾಕಿ ಜಿಲ್ಲಾ ಪಂಚಾಯಿತಿ ಚುನಾವಣೆಗೆ ನಿಂತು ಗೆದ್ದು ಬನ್ನಿ ಅಂತೆಲ್ಲ ಏನೇನೋ ಹೇಳಿದ್ದಾರಂತೆ. ಅಂದಮೇಲೆ ಚುನಾವಣೇಲಿ ಗೆದ್ದವ್ರೆಲ್ಲ ಸತ್ಯಹರಿಶ್ಚಂದ್ರರು ಅಂದಹಾಗೆ ಅಲ್ವಾ.....!

ಆದರೇನು ಮಾಡ್ತೀರಿ. ಈಶ್ವರಪ್ಪನಂತ ದಡ್ಡ ದುರಹಂಕಾರಿಗಳು ಎಲ್ಲಾ ಪಕ್ಷಗಳಿಗೂ 'ನಿಧಿ' ಇದ್ದಂತೆ. ಪೆದ್ದುಪೆದ್ದಾಗಿ ಏನೇನೋ ಬೊಗುಳ್ತಾ ಇರ್ತವೆ. ಇಂತೋರ ಸಾವಾಸ ಅಂದ್ರೆ ಹುಚ್ಚು ನಾಯಿ ಸಾವಸ ಇದ್ದಂಗೆ ಅಂತ ಸಭ್ಯರ್ಯಾರೂ ತಂಟೆಗೆ ಬರೋಲ್ಲ ಅಂತಾರಲ್ಲಾ ಅವರಿಗೆ ಆಗದವರೂ....

ಸುಳ್ಳು ಬ್ರಹ್ಮ ಪ್ರಶಸ್ತಿ!

ಸುಳ್ಳು ಹೇಳುವವರಿಗೆ ನೊಬೆಲ್ ಪ್ರಶಸ್ತಿ ಇರುವಂತಿದ್ದರೆ ಅದು ಯಡ್ಯೂರಪ್ಪನವರಿಗೇ ದಕ್ಕುತ್ತಿತ್ತು ಎಂದು ಸಿದ್ಧರಾಮಯ್ಯ ಹೇಳುತ್ತಲೇ ಬಂದಿದ್ದಾರೆ. ಸತತವಾಗಿ ಸುಳ್ಳು ಹೇಳುವುದೂ ಒಂದು ಕಲೆ. ಆದುದರಿಂದ ಈ ವಿಭಾಗಕ್ಕೆ ಪ್ರಶಸ್ತಿ ಇಡಬೇಕು ಎಂಬುದು ನ್ಯಾಯಯುತ ಬೇಡಿಕೆಯೇ ಆಗಿದೆ. ಇದನ್ನು ಕಾರ್ಯಗತಗೊಳಿಸುವಂತೆ ಸ್ವೀಡಿಷ್ ಅಕಾಡೆಮಿಯ ಮುಂದೆ ಈ ಹಕ್ಕೊತ್ತಾಯವನ್ನ ಇಡಬಹುದಾಗಿದೆ.

ನೊಬೆಲ್ ಪ್ರಶಸ್ತಿ ಸಿಗಬೇಕಾದರೆ ಈ ವಿಷಯಕ್ಕೆ ಸಂಬಂಧಿಸಿದ ಸಾಕ್ಷಿ ಪುರಾವೆಗಳಿರಬೇಕು. ಅವರ ಬಳಿ ಇರುವ ಪುರಾವೆಗಳ ಜೊತೆಗೆ ಇನ್ನೂ ಒಂದನ್ನು ಸಿದ್ಧರಾಮಯ್ಯನವರಿಗೆ ಒದಗಿಸಲು ಪ್ರಯತ್ನಿಸುತ್ತೇನೆ.

ಜಿಲ್ಲಾ, ತಾಲ್ಲೂಕು ಪಂಚಾಯತಿ ಚುನಾವಣೆಗಳು ಬಂದಿದೆಯಲ್ಲ, ಹೇಳಿಕೇಳಿ ಇದು ಗ್ರಾಮಾಂತರ ಜನರ ಚುನಾವಣೆ. 'ಏಟ, ಬಿಟಗೆ ಹುಂಗ್ಮಾಡಿದೀವಿ ಹಿಂಗ್ಮಾಡಿದೀವಿ' ಅಂದ್ರೆ 'ಎತ್ಕೊ ನಿಮ್ ಕಂತೆಯ' ಅಂತಾರೆ ಮತದಾರರು. ಅದ್ಕೇ ಸರ್ಕಾರ ಸಮೃದ್ಧ ಬೆಳೆ ಇರುವ ಜಾಗದಲ್ಲಿ ರೈತ ಕಾರ್ಯನಿರತನಾಗಿರುವುದನ್ನು ತೋರಿಸಿದರೆ 'ಬೇಸ್ ಕಣ್ಲ ಬೇಸ್' ಅಂತ ಓಟ ತುಂಬ್ತಾರೆ ಅಂತ ಯೋಚಿಸ್ತು ಅಂತ ಫೋಟೋ ಇದ್ದರೆ ಕಳಿಸಿ ಅಂತ ಇಲಾಖೆಗೆ ಸೂಚಿಸಿತು. ಅಧಿಕಾರಿಗಳು ಏನ್ಮಾಡಿದ್ರು ಖುಷ್ಕಿ ಭೂಮಿ ತೋರ್ಸಿದ್ರೆ ಖದರ್ ಇರಲ್ಲ ಅನ್ಕಂಡು ಸೊಗಸಾಗಿ ಬೆಳೆದ ಕಬ್ಬಿನ ಗದ್ದೇಲಿ ರೈತ ನಿಂತಿದ್ದರೆ ಪಸಂದಾಗಿರ್ತದೆ ಅಂತಾವ ಅಂತಹ ಫೋಟೋ ಕಳ್ಸಿದ್ರು. ಸರ್ಕಾರಕ್ಕೂ ಇದು ಫೈನಾಗದೆ ಅನ್ಸುಸ್ತು, ಆ ಫೋಟೋ ಜೊತೆ



ಎಚ್.ಎಲ್. ಕೇಶವಮೂರ್ತಿ

ಅಣಕ

'ಬಿಜೆಪಿ ಸರ್ಕಾರ ಬಂದಿತು
ರೈತನ ಭಾಗ್ಯದ ಬಾಗಿಲು ತೆರೆಯಿತು'
ಅಂತ ಬರ್ಸಿ ಭರ್ಜರಿ ಜಾಹೀರಾತು ನೀಡಿತು.

ಆದರೆ ಇಲ್ಲೊಂದು ಯಡವಟ್ಟಾಗಿತ್ತು. ಈ ಫೋಟೋ ತೆಗೆದದ್ದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಬಿ.ಆರ್. ಕೊಪ್ಪಲು ಎಂಬ ಗ್ರಾಮದಲ್ಲಿ, ಭಾಜಪ ಸರ್ಕಾರದಿಂದ ಭಾಗ್ಯದ ಬಾಗಿಲು ತೆಗೆಸಿಕೊಂಡ ರೈತ ನಾಗರಾಜ ಹನುಮೇಗೌಡ ಸಾಲಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡು ಹದಿನೆಂಟು ತಿಂಗಳೇ ಕಳೆದಿತ್ತು!

ಇದಕ್ಕಿಂತಲೂ ಪುರಾವೆ ಬೇಕೆ ಎಂದು ಸಿದ್ಧರಾಮಯ್ಯನವರಿಗೆ ಕೇಳಬೇಕೆಂದಿದ್ದಾಗ ಬಿಜೆಪಿ ವರಸೆಗಳು ಒಂದೊಂದಾಗಿ ನೆನಪಾದವು. ಈಗ ಅವರೇನು ವಾದ ಮಂಡಿಸಬಹುದು ಎಂದು ಯೋಚಿಸಿದಾಗ,...

1. ಈ ಪ್ರಪಂಚದಲ್ಲಿ ಒಬ್ಬನ ತರಹವೇ ಏಳು ಜನರು ಇರುತ್ತಾರೆ ಎಂಬುದನ್ನು ಸಿನಿಮಾಗಳು ಸಾವಿರ ಸಲ ಹೇಳಿವೆ. ಇವನು ಸತ್ತಿರುವ ವ್ಯಕ್ತಿಯೇ ಅಲ್ಲ, ಅವನು ಬೇರೆ ಒಬ್ಬ.
2. ಅವಳಿ ಮಕ್ಕಳು ಶೈಶವಾವಸ್ಥೆಯಲ್ಲಿ ಬೇರೆಬೇರೆಯಾಗುವ ಸಂಗತಿ ನಮ್ಮ ಎಷ್ಟೊಂದು ಸಿನಿಮಾ ಕತೆಗಳಿಗೆ ಎಡೆ ಮಾಡಿಕೊಟ್ಟಿಲ್ಲ? ಸತ್ತಿರುವ ವ್ಯಕ್ತಿಯ ಸಹೋದರ ಈತ.
3. ರೈತನ ತಂದೆಯೂ ಲೋಕ ಸಂಚಾರಿಯಾಗಿದ್ದು ಬೇರೆ ತಾಯಿಯ ಹೊಟ್ಟೆಯಲ್ಲಿ ಈತ ಜನಿಸಿದ. ಸತ್ತ ವ್ಯಕ್ತಿಯೇ ಬೇರೆ.

ಹೌದಲ್ಲ ಈ ತರಹವೂ ನಡೆದಿರಬಹುದಲ್ಲಾ...!

ಪತ್ರಕರ್ತರು ಆಡೋದು ಶಾಸ್ತ್ರ, ತಿನ್ನೋದು ಬದನೆಕಾಯಿ

ದೇಶದ ಸ್ವಾತಂತ್ರ್ಯದ ನಂತರ ನಮ್ಮ ರಾಜಕಾರಣಿಗಳು ಹಾಗೂ ಅಧಿಕಾರಿ ವರ್ಗ ಭ್ರಷ್ಟರಾದಾಗ ಜನರಿಗೆ ಬೇಜಾರಾಯಿತು. ಆದರೆ ಕ್ರಮೇಣ ಈ ಅನಿಷ್ಟ ತೊಲಗಬಹುದೆಂಬ ಆಶಾಭಾವನೆ ಮಾತ್ರ ಬಿಡಲಿಲ್ಲ, ನಂತರ ಮಿಲಿಟರಿ ಸಹ ಭ್ರಷ್ಟರಾದಾಗ ಜನರಿಗೆ ತುಂಬಾ ನಿರಾಶೆಯಾಯಿತು. ತದನಂತರ ನ್ಯಾಯಾಂಗ ಸಹಾ ಭ್ರಷ್ಟವಾದಾಗ ಜನರಲ್ಲಿ ರೋಷವುಕ್ಕಿತು. ಕೊನೆಗೆ ಪತ್ರಿಕಾರಂಗವೂ (ಸಂಪಾದಕರು-ಪತ್ರಕರ್ತರು) ಭ್ರಷ್ಟರಾದಾಗ ಈ ದೇಶದಲ್ಲಿ ನಾವು ಹುಟ್ಟಲೇ ಬಾರದಿತ್ತು ಎಂದು ಜನರಿಗೆ ಅನ್ನಿಸಿತು. ಎಲ್ಲಾ ಕ್ಷೇತ್ರಗಳ ಹುಳುಕು ಹೆಕ್ಕಿ-ಹೆಕ್ಕಿ ತೋರಿಸುವ ಪತ್ರಕರ್ತರು ಆಡೋದು ಶಾಸ್ತ್ರ ತಿನ್ನೋದು ಬದನೆಕಾಯಿ ಎಂದಂತಾಯಿತು.



ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಜುಜುಬಿ ಒಂದೆರಡು ಸಾವಿರ ಸಂಬಳಕ್ಕೆ ದುಡಿಯುತ್ತಿದ್ದವರು ವಿಜಯ ಕರ್ನಾಟಕ ಸೇರಿದ ನಂತರ ಕೆಲವೇ ವರ್ಷದಲ್ಲಿ ಕೋಟ್ಯಾಧೀಶರಾಗಿದ್ದು ನೋಡಿ ದಿಲ್ಲಿಯ ಪತ್ರಕರ್ತರಂತೆ ನಮ್ಮ ಬೆಂಗಳೂರಿನ ಪತ್ರಕರ್ತರೂ 'ಪಾವರ್ ಬ್ರೋಕರ್'ಗಳಾಗಿರುವುದು ಸ್ಪಷ್ಟವಾಯಿತು. ವಿ.ಕ.ದವರಿಂದ ಈ ರೋಗ ಹಿಂದಿನ 5-6 ವರ್ಷಗಳಲ್ಲಿ ಇತರ ಕೆಲವು ಕನ್ನಡ ಪತ್ರಿಕೆಗಳಿಗೂ ಸಾಂಕ್ರಾಮಿಕವಾಗಿ ಹರಡಿ ಕನ್ನಡ ಪತ್ರಿಕಾ ರಂಗವನ್ನು ಕುಲಗೆಡಿಸಿದ್ದು ನಿಜ. ಚಿತ್ರದುರ್ಗದ ಮುರುಘಾ ಶರಣರು ಪತ್ರಕರ್ತರ ಬಗ್ಗೆ ರೋಷ ವ್ಯಕ್ತಪಡಿಸಿದ್ದು ಸಮಂಜಸ.

ವಿ.ಕ.ದ ಒಂಭತ್ತು ಆವೃತ್ತಿಗಳಲ್ಲಿ ಕೇವಲ ಮಂಗಳೂರು ಆವೃತ್ತಿ ಮಾತ್ರ ಸಂಜೆ ಆವೃತ್ತಿ ಹೊರಡಿಸುತ್ತಿರುವುದು. ಇದು ವಿಭಟ್ಟರ ವೈಯಕ್ತಿಕ ದ್ವೇಷದ ಪರಿಣಾಮ. ವಿಭಟ್ಟರ ಜಾತಿಯವರೇ ಒಬ್ಬರು ಹೊರತರುತ್ತಿರುವ ಸಂಜೆ ಪತ್ರಿಕೆಯ ಕತ್ತು ಹಿಸುಕುವುದಕ್ಕಾಗಿ ವಿ.ಕ.ದ ಸಂಜೆ ಆವೃತ್ತಿ ಮಂಗಳೂರಲ್ಲಿ ಪ್ರಾರಂಭಿಸಲಾಯಿತು. ವಿಭಟ್ಟರ ಈ ದ್ವೇಷ ಸಾಧನೆಯಿಂದಾಗಿ ವಿ.ಕ.ದ ಮಂಗಳೂರು ಆವೃತ್ತಿಗೆ ನಷ್ಟವುಂಟಾಗುತ್ತಿದ್ದರೂ ಈ ಸಂಜೆ ಪತ್ರಿಕೆ ಮುಂದುವರಿಸಿಕೊಂಡು ಹೋಗುತ್ತಿರುವ ಟೈಮ್ಸ್ ಧಣಿಗಳ ಲೆಕ್ಕಾಚಾರ ಅರ್ಥವಾಗುತ್ತಿಲ್ಲ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ನಾನು ಪಿ.ಲಂಕೇಶರ ಅಭಿಮಾನಿಯಾಗಿದ್ದು ಈಗ ಗೌರಿ ಲಂಕೇಶರ ಪತ್ರಿಕೆಯ ಅಭಿಮಾನಿಯಾಗಿದ್ದೇನೆ. ಕಳೆದ ಡಿಸೆಂಬರ್ 22ರ ಸಂಚಿಕೆ ಬಹಳ ಚೆನ್ನಾಗಿತ್ತು ಅದರ ಹೆಡ್ಡಿಂಗ್‌ಗಳು ಮತ್ತು ಬರಹಗಳು ತುಂಬಾ ಸೊಗಸಾಗಿದ್ದವು. ಎಚ್.ಡಿ.ರೇವಣ್ಣ ಕುರಿತ ಕಾಮೆಂಟ್‌ಗಳೂ ಸೂಕ್ತವಾಗಿದ್ದವು.

-ಕೇಶವ ಭಟ್, ಇ-ಮೇಲ್ ಮೂಲಕ

ಇತ್ತೀಚೆಗೆ ಗೌರಿ ಲಂಕೇಶರ 'ಕಂಡಹಾಗೆ' ಅಂಕಣದಲ್ಲಿ ಪೇಜಾವರ ಶ್ರೀ ಅವರ 'ಹಗರಣ' ಕುರಿತ ಬರಹ ಮತ್ತು ಕಳೆದ ಸಂಚಿಕೆಯಲ್ಲಿ ಬಂದ '96ನೇ ಪ್ರಾಯದಲ್ಲಿ ಖುಷ್‌ವಂತರ ತುಂಟ ಕಾದಂಬರಿ' ತುಂಬಾ ಚೆನ್ನಾಗಿದ್ದವು.

-ವಿದ್ಯಾಧರ ರೈ.ಎಂ.ಆರ್. ಮಡಿಕೇರಿ

ವಿಜಯಕುಮಾರ್ ವಿ.ಬೊರಟ್ಟಿಯವರ 'ಸೂರಿಯ ಮಾಕಾಳಮ್ಮ, ಉಪ್ಪಿಯ ಭಗವದ್ಗೀತೆ...' ಲೇಖನ ಒಂದು ಸಿನಿಮಾವನ್ನು ನೋಡುವುದು, ಅರ್ಥೈಸುವುದು ಹೇಗೆ ಎಂಬುದಕ್ಕೆ ಒಂದು ಮಾದರಿಯಂತಿದೆ. ಇವತ್ತು ನಮ್ಮ ಸಮಾಜದ ಮೇಲೆ ಸಿನಿಮಾ ಮತ್ತು ಟಿವಿ ತರಹದ ಮಾಧ್ಯಮಗಳು ಹೆಚ್ಚು ಪ್ರಭಾವ ಬೀರುವುದರಿಂದ ಆ ಮಾಧ್ಯಮಗಳಲ್ಲಿ ಸೂಕ್ಷ್ಮವಾಗಿ ವ್ಯಕ್ತವಾಗುವ ಉಪೇಂದ್ರರಂತಹವರ ಪುರೋಹಿತಶಾಹಿ ಧೋರಣೆಯನ್ನು ಮತ್ತು ಅಂತಹದನ್ನು ತನ್ನ ರೀತಿಯಲ್ಲೇ ತಿರಸ್ಕರಿಸುವ ಸೂರಿ ತರಹದ ನಿರ್ದೇಶಕರ ಒಳನೋಟವನ್ನು ಗುರುತಿಸಿದ್ದು ಸರಿಯಾಗಿತ್ತು.

- ನಿರಂಜನ್ ಪಾಟೀಲ್, ಹುನಸಿನಹಳ್ಳಿ

ಎಲ್ಲ ಸರ್ಕಾರಗಳು ಎಂತಹ ದುಃಸ್ಥಿತಿ ತಲುಪಿವೆ ಎಂಬುದನ್ನು ವಿಕೀಲಿಕ್ಸ್‌ನ ಜೂಲಿಯನ್ ಅಸ್ಸಾಂಜೆ ಬಯಲು ಮಾಡುತ್ತಿದ್ದಾರೆ. ಆ ಕಾರಣಕ್ಕೇ ಅವರ ವಿರುದ್ಧ ದಿನಕ್ಕೊಂದು ಪ್ರಕರಣಗಳು ದಾಖಲೆಯಾಗುತ್ತಿವೆ.

ಈಗಾಗಲೇ ಬಹಳಷ್ಟು ದೇಶಗಳಲ್ಲಿ ನಿಜವಾದ ಪತ್ರಕರ್ತರು ಮರೆಯಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಅಸ್ಸಾಂಜೆ ಅವರಿಗೂ ಕೇಸ್‌ಗಳ ಗುಮ್ಮವನ್ನು ತೋರಿಸಿ ಅವರನ್ನು ತೆಪ್ಪಗಾಗಿಸುವ ಪ್ರಯತ್ನಗಳು ನಡೆಯುತ್ತಿವೆ.

ಇವತ್ತು ಅಸ್ಸಾಂಜೆ ವಿರುದ್ಧ ಅತ್ಯಾಚಾರದ ಕೇಸುಗಳನ್ನು ದಾಖಲಿಸಿ ಅವರನ್ನು ಬಂಧಿಸಿ ಆನಂತರ ಜಾಮೀನು ನೀಡಲಾಗಿದೆ. ಆದರೆ ವಾಸ್ತವವಾಗಿ ಅಸ್ಸಾಂಜೆಯ ವಿರುದ್ಧ ಯಾವ ಮಹಿಳೆಯೂ ಅತ್ಯಾಚಾರದ ಆರೋಪ ಮಾಡಿಲ್ಲ, ಅದರ ಹಿಂದೆ ಬೇರೆಯದೇ ರಾಜಕೀಯದ ಕಾರಣಗಳಿವೆ. ಅಷ್ಟಕ್ಕೂ ಅಮೆರಿಕದ ಮಾಜಿ ಅಧ್ಯಕ್ಷ ಬಿಲ್ ಕ್ಲಿಂಟನ್ ಸೇರಿದಂತೆ ನಮ್ಮ ದೇಶದ ಅದೆಷ್ಟು ರಾಜಕಾರಣಿಗಳು ಅಕ್ರಮ ಸಂಬಂಧಗಳನ್ನು ಹೊಂದಿಲ್ಲ, ಆದರೆ ಅಂತಹ ಯಾರ ವಿರುದ್ಧವೂ ಒಂದೇಒಂದು ದೂರನ್ನು ದಾಖಲಿಸಿಕೊಳ್ಳದ ವ್ಯವಸ್ಥೆ ಅಸ್ಸಾಂಜೆ ಅವರಿಗೆ ಮಾತ್ರ ಎಲ್ಲ ರೀತಿಯ ಕಿರುಕುಳವನ್ನು ನೀಡುತ್ತಿದೆ.

ಅದೆಲ್ಲ ಏನೇ ಇರಲಿ, ಎಲ್ಲರಂತೆ ಅಸ್ಸಾಂಜೆ ಅವರಿಗೂ ಪತ್ರಕರ್ತರಾಗಿ ಅಭಿವ್ಯಕ್ತಿ ಸ್ವಾತಂತ್ರ್ಯ ಇದ್ದೇ ಇದೆಯಲ್ಲವೇ?


- ವಿಜಯಲಕ್ಷ್ಮಿ . ಆರ್. ಚಿಕ್ಕಬಳ್ಳಾಪುರ

ಅರುಣ್ ಸಿನಿ Bits

ಮದನಾನಂದ!

ನಿತ್ಯಾನಂದನ ಸೆಕ್ಸ್ ಸ್ಕ್ಯಾಂಡಲ್ ಹೊರಬೀಳುತ್ತಿದ್ದಂತೆಯೇ ಮಾಧ್ಯಮಗಳು ಆತನ ಮೇಲೆ ದಬದಬನೆ ಮುರಕೊಂಡು ಬಿದ್ದಿದ್ದವು. ಆತನ ಬಗ್ಗೆ ಸಾವಿರಾರು ಎಸ್ಸೆಮ್ಮೆಸ್ಸುಗಳು, ಜೋಕ್ಸ್‌ಗಳು ಸರಿದಾಡಿದ್ದವು. ಇಂಟರ್‌ನೆಟ್ಟನ್ನಂತೂ ನಿತ್ಯಾನಂದನೇ ಆವರಿಸಿಕೊಂಡಿದ್ದ. ತನ್ನ ಕಾಮಲೀಲೆಯ ಮೂಲಕ ಹಾಲುಗಲ್ಲದ ಮಕ್ಕಳಿಂದ ಹಿಡಿದು ಬೊಚ್ಚು ಬಾಯಿಯ ಮುದುಕರ ...ನಿತ್ಯಾನಂದ ಫೇಮಸ್ ಆಗಿಬಿಟ್ಟ.


...ಗ ನಿತ್ಯಾನಂದನ ವಿರುದ್ಧ ಸಿನಿಮಾ ಮಂದಿಯೂ ತಿರುಗಿ ಬಿದ್ದಿದ್ದರು. ನಿತ್ಯಾನಂದನಿಗೆ ...ೇನು ಸಿಗುವ ಮುನ್ನವೇ ಹಾಸ್ಯನಟ, ಮಿಮಿಕ್ರಿ ...ನಂದ್ 'ಕಾಮಿಸ್ವಾಮಿ' ಎನ್ನುವ ವಿಡಿಯೋವನ್ನು ...ಗಡೆ ಮಾಡಿದ್ದರು. ನಂತರ ಹಿಂದಿಯಲ್ಲಿ ...ಗೋಪಾಲ್ ವರ್ಮಾ ನಿರ್ದೇಶನದ 'ಗಾಡ್ ಎಂಡ್' ...ಕನ್ನಡದಲ್ಲಿ ಸಾಧು ಕೋಕಿಲಾರ 'ಸ್ವಾಮೀಜಿ' ಹಾಗೂ ...್ ಆರವಿಂದ್ ನಾಯಕನಾಗಿ ನಟಿಸಲಿರುವ 'ರಂಗೀಲಾ' ...ೂ ಅನೌನ್ಸ್ ಆದವು.



...ವೆಲ್ಲ ಇನ್ನೂ ಪ್ರಾರಂಭವಾಗುವ ಮುನ್ನವೇ ಮೊನ್ನೆ ...ಗೂ ಮುನ್ನ ನಿತ್ಯಾನಂದನ ಬಗ್ಗೆ ನಾನೊಂದು ಸಿನಿಮಾ ...ನಿ. ನಿತ್ಯಾನಂದ ಇಡೀ ಹಿಂದೂ ಸಮುದಾಯಕ್ಕೆ ...ಜೆಗಳಿಗೆ ಅವಮಾನ ಮಾಡಿದ್ದಾನೆ. ನಿತ್ಯಾನಂದನ ವಿರುದ್ಧದ ಸಿನಿಮಾ ಮಾಡುವ ...ಕ ನಾನು ಹಿಂದೂ ಧರ್ಮಕ್ಕೆ ನ್ಯಾಯ ಒದಗಿಸುತ್ತೇನೆ" ಎಂದು ಚಿಡ್ಡಿ ಮದನ್ ಮಲ್ಲು ...ಾಸ್ ಮದನ್ ಪಟೇಲ್ ಅರಚಾಡಿದ್ದಾರೆ.

...ತಃ ಬಿಜೆಪಿಯಲ್ಲಿ ಸಕ್ರಿಯನಾಗಿ, ಯಡ್ಡಿಯ ಚೆಡ್ಡಿ ಹಿಡಿದು ಓಡಾಡುತ್ತಿರುವ ಮದನ್ ... ಯಾವುದೇ ಕಾರಣಕ್ಕೂ ಈ ಚಿತ್ರವನ್ನು ಮಾಡಿಯೇ ಮುಗಿಸುತ್ತಾರಂತೆ. ಸ್ವತಃ ... ಮಲ್ಲು ನಿರ್ಮಿಸಿ, ನಿರ್ದೇಶಿಸುತ್ತಿರುವ ಈ ಸಿನಿಮಾ ನಿಜಕ್ಕೂ ಆರಂಭವಾಗುತ್ತಾ ... ನಿತ್ಯಾನಂದನನ್ನು ಬ್ಲಾಕ್‌ಮೇಲ್ ಮಾಡಿ ಆತನಿಂದ ಹಣ ಕೀಳುವುದೇ ಮದನ್ ... ಮಾಸ್ಟರ್‌ಪ್ಲಾನಾ? ಎಂಬುದು ಮುಂದಿನ ದಿನಗಳಲ್ಲಿ ಬಯಲಾಗುವ ಸತ್ಯ!

...ೋಡಲು ಸಾಯಿಬಾಬಾನಂತೆ ಗುಂಗುರು ಕೂದಲು ಹೊಂದಿರುವ ಮದನ್ ಪಟೇಲ್ ...ದನ ಪಾತ್ರದಲ್ಲಿ ಕಾಣಿಸಿಕೊಳ್ಳಬಹುದು ಅನ್ನೋದು ಹಲವರ ಅಭಿಪ್ರಾಯವಾಗಿತ್ತು. ...ಆ ಪಾತ್ರಕ್ಕೆ ನಿತ್ಯನನ್ನೇ ಹೋಲುವ ನಟನಿಗಾಗಿ ಮದನ್ ಪಟೇಲ್ ಹುಡುಕುತ್ತಿದ್ದಾರಂತೆ. ... ಯಾರಾದರೂ ನಿತ್ಯಾನಂದನ ಹಾಗೇ ಇದ್ದರೆ ಒಮ್ಮೆ ಹೋಗಿ ಮಲ್ಲುರನ್ನು ಮೀಟ್ ಮ...ನ್ನಿ!



ವಿಷ್ಣು ನಮನ

ವಿಷ್ಣುವರ್ಧನ್ ಅಗಲಿ ಡಿಸೆಂಬರ್ 30ಕ್ಕೆ ಭರ್ತಿ ಒಂದು ವರ್ಷವಾಗುತ್ತೆ.

ವಿಷ್ಣು ಕಣ್ಮುಚ್ಚಿದ ದಿನ ಇಡೀ ಕರ್ನಾಟಕ ಶೋಕದಲ್ಲಿ ಮುಳುಗಿತ್ತು. ಬೆಂಗಳೂರು ಮಹಾನಗರವಂತೂ ದೊಂಬಿ, ಗಲಾಟೆಗಳಿಂದ ಥರಗುಟ್ಟಿತ್ತು. ಒಬ್ಬ ಮಹಾನ್ ಕಲಾವಿದನ ಅಂತಿಮ ಯಾತ್ರೆ ಎಷ್ಟು ಗಂಭೀರವಾಗಿರಬೇಕಿತ್ತೋ ಅದಕ್ಕೆ ...ವಾಗಿ, ಅಶಾಂತಿಯಿಂದ ಆ ದಿನ ಮುಗಿದಿತ್ತು. ನಿಜಕ್ಕೂ ಗೌಜು, ಗದ್ದಲಗಳನ್ನು ...ದ 'ನಿಶ್ಯಬ್ಧ' ನಾಯಕ ವಿಷ್ಣುಗೆ ಒಪ್ಪದ ರೀತಿಯಲ್ಲಿ...

...ವಾಗಿ ಅಭಿಮಾನಿಗಳು ಮತ್ತು ವಿಷ್ಣು ಕುಟುಂಬ ವರ್ಗದವರು ಸೇರಿ ಡಿಸೆಂಬರ್ 30... ಬೆಂಗಳೂರಲ್ಲಿ 'ಮೌನ ಮೆರವಣಿಗೆ' ನಡೆಸಲು ಮುಂದಾಗಿದ್ದಾರೆ. ಬಸವನಗುಡಿ ... ಕಾಲೇಜು ಮೈದಾನದಿಂದ ಅಭಿಮಾನ್ ಸ್ಟುಡಿಯೋವರೆಗೆ ಈ ಮೆರವಣಿಗೆ ... ವಿಷ್ಣುವರ್ಧನ್ ಅವರ ಅಭಿಮಾನಿಗಳು, ಸಿನಿಮಾ ಪ್ರೇಮಿಗಳು ಹಾಗೂ ಹಲವು ...ರ್ಧನ್ ಸಂಘಟನೆಗಳು ಸೇರಿ 'ಸಿಂಹಜ್ಯೋತಿ' ಮೌನಯಾತ್ರೆ ಮಾಡುತ್ತಿದ್ದಾರೆ. ಅಂದು ಅಭಿ...ನ್ ಸ್ಟುಡಿಯೋದಲ್ಲಿ 'ಯುಗ ಯುಗಗಳೇ ಸಾಗಲಿ ನಮ್ಮ ಪ್ರೀತಿ ಶಾಶ್ವತ...' ಎಂಬ ...ರುಳ್ಳ ಒಂದು ಸಾವಿರ ಬಲೂನುಗಳನ್ನು ಹಾರಿ ಬಿಡುತ್ತಾರಂತೆ. ಮೌನ ಮೆರವಣಿಗೆಯಲ್ಲಿ ...ಸುವ ವಿಷ್ಣುವರ್ಧನ್ ಅವರ ಪ್ರತಿಯೊಬ್ಬ ಅಭಿಮಾನಿಗಳು ವಿಶೇಷವಾಗಿ ಅಂದು ... ಧರಿಸಿ ಪಾಲ್ಗೊಳ್ಳಬೇಕು ಎಂಬುದು ವಿಷ್ಣು ಅಳಿಯ ಅನಿರುದ್ಧ್ ಕೋರಿಕೆ.

... ದಿನ ವಿಷ್ಣು ಸಮಾಧಿ ಬಳಿ ರೋಟರಿ ಕ್ಲಬ್, ರೆಡ್ ಕ್ರಾಸ್, ಹಾಲಪ್ಪ ಫೌಂಡೇಶನ್, ...ಹ ವಿಷ್ಣುವರ್ಧನ್ ಅಭಿಮಾನಿಗಳ ವಿಶ್ವ ಮಹಾ ಸಂಘ ಹಾಗೂ ವಿಭಾ ಚಾರಿಟೇಬಲ್ ...ತೃತ್ವದಲ್ಲಿ ರಕ್ತದಾನ, ಉಚಿತ ಆರೋಗ್ಯ ತಪಾಸಣೆ ಕಾರ್ಯಕ್ರಮ ನಡೆಯಲಿದೆ. ಇದೇ ...ಚ್‌ಐವಿ ಪೀಡಿತರಿಗೆ ಉಚಿತ ಔಷಧೋಪಚಾರ ಮಾಡುತ್ತಿದ್ದಾರೆ.

... ತಾಳ್ಮೆ, ಪ್ರೀತಿ, ಸಹನೆಗಳು ವಿಷ್ಣು ಅಂತಿಮ ಯಾತ್ರೆಯಲ್ಲೂ ಇದ್ದಿದ್ದರೆ ಎಷ್ಟು ...ರ್ಣವಾಗಿರುತ್ತಿತ್ತು, ಅಲ್ಲವೇ?

...ಜೈಲೂಟವೇ ಗಟ್ಟಿ!



...ಷ್ಟು ವರ್ಷಗಳ ಹಿಂದೆ ಇಬ್ಬರು ಯುವಕರು ...ರಕ್ಕೆ ಬಂದು ಸಿನಿಮಾ ಮಾಡಲು ಮುಂದಾಗಿದ್ದರು. ...ಡೆಂಟ್' ಎಂಬ ಚಿತ್ರಕ್ಕೆ ಹಿಂದೆ ಮುಂದೆ ... ಅವರಿಬ್ಬರು ಕಾಸು ಸುರಿದಿದ್ದರು. ನಂತರ ...ದುಕೂ ಒಂದೊಂದು ದಿಕ್ಕಿನಲ್ಲಿ ಸಾಗಿತ್ತು. ಒಬ್ಬ ...ರ, ಶೋಕಿ, ತೆವಲುಗಳಿಗೆ ಬಿದ್ದು ಜೈಲು ... ಮತ್ತೊಬ್ಬ ಯುವಕ ಬಣ್ಣದ ಲೋಕದ ...ಂದ ದೂರ ನಿಂತ.

...ಕಿಟ್ಟಿ ಕಂಬಿ ಎಣಿಸುವಂತಾದವನು ವಿಕೃತ ಹಂತಕ ಗೋವರ್ಧನ ಮೂರ್ತಿ. ...ಗೇ ಚಿತ್ರರಂಗಕ್ಕೆ ಕಾಲಿಟ್ಟ ಜೆ.ಎಲ್.ರೆಡ್ಡಿ ಎನ್ನುವ ಮತ್ತೊಬ್ಬ ಹುಡುಗ ಮೊನ್ನೆ ...ಮ್ಮೆಲ್ಲೆ ಒಬ್ಬರ ಮಗಳೊಂದಿಗೆ ಅದ್ದೂರಿಯಾಗಿ ಮದುವೆ ಮಾಡಿಕೊಂಡಿದ್ದಾನೆ. ...ನ ಅಮಲು, ಹೆಂಡದ ಘಮಲಿನಲ್ಲಿ ನಿಷ್ಪಾಪಿ ಹುಡುಗ ವಿನೋದ್ ಮೇಲೆ ...ರಿಸಿ ಈಗ ಜೈಲಿನಲ್ಲಿರುವ ಗೋವರ್ಧನ ತನಗೆ ಯಾರಾದರೂ ಬರಿಯಾನಿ ...ತಂದುಕೊಡುತ್ತಾರಾ ಎಂದು ಕಂಬಿಗಳ ಹಿಂದೆ ಕಾಯುತ್ತಾ ಕೂತಿದ್ದಾನೆ.



ಹತ್ತು ವರ್ಷದ ಲೆಕ್ಕ-ನಟರಿಗಿಲ್ಲ ರೊಕ್ಕ

ಒಂದೆಡೆ ವಿಶ್ವಕಪ್ ಕ್ರಿಕೆಟ್ ಬಗೆಗಿನ ಉತ್ಸಾಹ ಏರುತ್ತಿರುವಾಗಲೇ ಮತ್ತೊಂದೆಡೆ ತಾರಾ ಕ್ರಿಕೆಟ್ ಹಬ್ಬಕ್ಕೆ ಕ್ಷಣಗಣನೆ ಪ್ರಾರಂಭವಾಗಿದೆ.

ಬರುವ ಜನವರಿ 23 ಮತ್ತು 24ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸ್ಯಾಂಡಲ್‌ವುಡ್, ಬಾಲಿವುಡ್, ಕಾಲಿವುಡ್, ಟಾಲಿವುಡ್ ಮತ್ತು ಮಲೆಯಾಳಂ ಚಿತ್ರರಂಗಗಳ ಸಿನಿಮಾ ನಟರ ಕ್ರಿಕೆಟ್ ಪಂದ್ಯಾಟ ನಡೆಯಲಿದೆ. ಇದು ಐಪಿಎಲ್ ಮಾದರಿಯಲ್ಲಿ ನಡೆಯಲಿದ್ದು ತಾರೆಗಳ ಅಭಿಮಾನಿಗಳಲ್ಲಿ ಪುಳಕವನ್ನುಂಟುಮಾಡಿದೆ.

ಅಂದಹಾಗೆ ಕನ್ನಡ ಚಿತ್ರರಂಗದ ತಂಡಕ್ಕಾಗಿ 17 ಕೋಟಿ ರೂ.ಗಳಿಗೆ ಮುಂದಿನ ಹತ್ತು ವರ್ಷಗಳಿಗೆ ಬಿಡ್ ಮಾಡಬಹುದಾಗಿದೆ ಎಂದು ವ್ಯವಸ್ಥಾಪಕರು ಘೋಷಿಸಿದ್ದಾರೆ. 17 ಕೋಟಿ ರೂ. ಕೊಟ್ಟು ಯಾವ ಪುಣ್ಯಾತ್ಮ ಕನ್ನಡ ಚಿತ್ರರಂಗದ ಈ ಆಟಗಾರರನ್ನು ಹತ್ತು ವರ್ಷಗಳ ಕಾಲಾವಧಿಗೆ ಖರೀದಿಸುತ್ತಾರೆ ಎಂಬುದು ಗೊತ್ತಿಲ್ಲ. ಆದರೆ ನಮ್ಮ ಹದಿನೈದು ಜನ ಆಟಗಾರರ ತಾರಾಮೌಲ್ಯವನ್ನು ಲೆಕ್ಕಹಾಕಿದ ವ್ಯವಸ್ಥಾಪಕರು ಈ ಆಟಗಾರರು ಕನಿಷ್ಠವೆಂದರೂ 17 ಕೋಟಿ ರೂ. ಬೆಲೆಬಾಳುವವರು ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

ಆದರೆ ನಮ್ಮ ತಂಡಕ್ಕಿಂತಲೂ ಹೆಚ್ಚು ಬೆಲೆಯನ್ನು ಹಿಂದಿ, ತಮಿಳು, ತೆಲುಗು ಚಿತ್ರರಂಗದ ತಂಡಗಳಿಗೆ ನಿಗದಿಮಾಡಲಾಗಿದೆ. ಅಂದರೆ ನಮ್ಮ ಆಟಗಾರರಿಗಿಂತ ಆ ಆಟಗಾರರಿಗೆ ಹೆಚ್ಚು ಮಾರಾಟದ ಬೆಲೆ ಇದೆ. ಆದರೆ ಮಲೆಯಾಳಂ ತಂಡ ಬಿಡ್ ಕನ್ನಡಕ್ಕಿಂತ ಕಡಿಮೆ ಮೊತ್ತಕ್ಕೆ ನಿಗದಿಯಾಗಿದೆ.

ಈ ಎಲ್ಲ ಆಟಗಾರರ ಕ್ರಿಕೆಟ್ ಸಾಮರ್ಥ್ಯವನ್ನು ಪರಿಗಣಿಸಿ ಇವರಿಗೆ ಬೆಲೆ ಕಟ್ಟಿದ್ದಾರೆಂದು ನೀವು ಭಾವಿಸಿದರೆ ಅದು ತಪ್ಪು. ಏಕೆಂದರೆ ಇಲ್ಲಿ ಪ್ರತಿಯೊಬ್ಬ ಆಟಗಾರನ ಜನಪ್ರಿಯತೆ, ತಾರಾವರ್ಚಸ್ಸು ಮತ್ತು ಆತನ ಹಿಂದಿರುವ ಅಭಿಮಾನಿಗಳ ಗುಂಪನ್ನು ಆಧರಿಸಿ ಆತನ ಮೌಲ್ಯವನ್ನು ನಿಗದಿಪಡಿಸಲಾಗಿದೆ.

ಈಗಾಗಲೇ ಗೊತ್ತಿರುವಂತೆ ಕರ್ನಾಟಕ ತಂಡದ ಕ್ಯಾಪ್ಟನ್ ಕಿಚ್ಚ ಖ್ಯಾತಿಯ ಸುದೀಪ್ ಆಗಿದ್ದರೆ, ಐಕಾನ್ ಆಫ್ ದಿ ಟೀಮ್ ಎಂಬ ಗೌರವಕ್ಕೆ ಪುನೀತ್ ರಾಜ್‌ಕುಮಾರ್ ಪಾತ್ರರಾಗಿದ್ದರೆ. ಈ ತಂಡದಲ್ಲಿ ಅಂಬರೀಶ್, ರವಿಚಂದ್ರನ್, ದೊಡ್ಡಣ್ಣ, ಉಪೇಂದ್ರ, ಶಿವರಾಜ್‌ಕುಮಾರ್, ದರ್ಶನ್, ರಾಘವೇಂದ್ರ ರಾಜ್‌ಕುಮಾರ್, ಗಣೇಶ್, ರಮೇಶ್, ವಿಜಯ್... ಮೊದಲಾದವರಿದ್ದಾರೆ. ಈ ತಂಡಕ್ಕೆ ಕರ್ನಾಟಕ ರಾಯಲ್ಸ್ ಎಂಬ ಹೆಸರನ್ನಿಡಲಾಗಿದೆ. ಇದೇ ರೀತಿ ತಮಿಳು, ತೆಲುಗು, ಬಾಲಿವುಡ್ ತಂಡಗಳಲ್ಲೂ ಆ ಚಿತ್ರರಂಗಗಳ ಪ್ರಖ್ಯಾತ ನಾಯಕನಟರು ಆಡಲಿದ್ದಾರೆ. ಆ ದೃಷ್ಟಿಯಿಂದ ಇದೊಂದು ವಿನೂತನವಾದ ಪಂದ್ಯಾಟ ಎಂದೇ ಹೇಳಬಹುದು.

ಕಲಾವಿದರ ಸಂಘದ ಅಧ್ಯಕ್ಷ ಅಂಬರೀಶ್ ಅವರ ನೇತೃತ್ವದಲ್ಲಿ ಈ ಕ್ರಿಕೆಟ್ ತಂಡ ಆಯ್ಕೆಯಾಗಿದೆ. ಕಲಾವಿದರ ಸಂಘದ ಮತ್ತೊಬ್ಬ ಸಕ್ರಿಯ ಸದಸ್ಯ ದೊಡ್ಡಣ್ಣ ಕೂಡಾ ಅಂಬರೀಶ್ ಜೊತೆಗೆ ಸಾಥಿಯಾಗಿ ಈ ಟೂರ್ನಮೆಂಟ್‌ನ ಯಶಸ್ಸಿಗಾಗಿ ದುಡಿಯುತ್ತಿದ್ದಾರೆ. ಸುದೀಪ್ ಸಮೇತ ಅನೇಕ ಯುವ ಆಟಗಾರರು ತುಂಬಾ ಒಳ್ಳೆಯ ಕ್ರಿಕೆಟ್ ಆಟಗಾರರಾಗಿರುವುದರಿಂದ ಖಂಡಿತವಾಗಿಯೂ ನಮ್ಮ ತಂಡವಾದ ಕರ್ನಾಟಕ ರಾಯಲ್ಸ್ ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆ ಇದೆ.

ಈ ಟೂರ್ನಮೆಂಟ್‌ನ ವಿಶೇಷತೆಯೆಂದರೆ ಇದರಿಂದ ಬರುವ ಆದಾಯವನ್ನು ನಮ್ಮ ತಂಡದ ಆಟಗಾರರು ತಮ್ಮ ತಮ್ಮ ಬ್ಯಾಂಕ್ ಅಕೌಂಟ್‌ಗೆ ಹಾಕುವ ಬದಲು ಕಲಾವಿದರ ಸಂಘದ ಉದ್ದೇಶಿತ ಕಟ್ಟಡ ನಿರ್ಮಾಣಕ್ಕಾಗಿ ದಾನ ಮಾಡಲಿದ್ದಾರೆ. ಇದು ನಿಜಕ್ಕೂ ಒಳ್ಳೆಯ ನಿರ್ಧಾರ.

ಆದರೆ ಕರ್ನಾಟಕದ ತಂಡ ನಿಜಕ್ಕೂ ಕೇವಲ 17 ಕೋಟಿ ರೂ.ಗಳಿಗಷ್ಟೇ ಸೀಮಿತವೇ ಎಂಬುದು ನಮ್ಮ ಪ್ರಶ್ನೆ, ಅದೂ ಹತ್ತು ವರ್ಷಗಳ ಕಾಲಾವಧಿಗೆ! ಅಂದರೆ ಒಂದು ವರ್ಷಕ್ಕೆ ನಮ್ಮ ತಂಡ ಸಂಪಾದಿಸುವುದು ಕೇವಲ 1 ಕೋಟಿ 70 ಲಕ್ಷ ರೂ.ಗಳನ್ನು ಮಾತ್ರ! ಆ ಹಣವನ್ನು ಹದಿನೈದು ಆಟಗಾರರಿಗೆ ಸಮನಾಗಿ ಹಂಚಿದರೆ ಒಬ್ಬೊಬ್ಬ ಆಟಗಾರರಿಗೆ 11 ಲಕ್ಷ 33 ಮೂರು ಸಾವಿರ ರೂ.ಗಳು ದೊರಕುತ್ತವೆ. ಒಬ್ಬ ಆಟಗಾರ ಒಂದು ಟೂರ್ನಮೆಂಟ್‌ನಲ್ಲಿ ನಾಲ್ಕು ಪಂದ್ಯಗಳಲ್ಲಿ ಆಡಲೇಬೇಕು. ಅಂದರೆ ಒಂದು ಪಂದ್ಯಕ್ಕೆ ಆತ ಗಳಿಸುವ ಸಂಪಾದನೆ 2 ಲಕ್ಷ 80 ಸಾವಿರ ರೂ.ಗಳು. ಈ ಪಂದ್ಯಕ್ಕೆ ಕನಿಷ್ಠವೆಂದರೂ ಒಂದು ವಾರದ ತರಬೇತಿ ತೀರಾ ಅಗತ್ಯ. ಅದನ್ನೆಲ್ಲ ಪರಿಗಣನೆಗೆ ತಗೆದುಕೊಂಡರೆ ನಮ್ಮ ಆಟಗಾರರು ದಿನವೊಂದಕ್ಕೆ 20 ಸಾವಿರ ರೂ.ಗಳನ್ನು ಮಾತ್ರ ಈ ಕ್ರಿಕೆಟ್ ಆಟದಿಂದ ಸಂಪಾದಿಸಿದಂತಾಗುತ್ತದೆ. ಇದು ಅತ್ಯಂತ ನೋವಿನ ಮತ್ತು ಅವಮಾನಕಾರಿ ವಿಷಯವಲ್ಲವೇ?

ಈಗ ಕನ್ನಡ ಚಿತ್ರರಂಗದ ನಾಯಕನಾಯಕಿಯರು ಯಾವುದಾದರೊಂದು ಅಂಗಡಿಯನ್ನು ಉದ್ಘಾಟಿಸಲೋ ಅಥವಾ ಎಲ್ಲೋ ಒಂದು ರಿಬ್ಬನ್ ಕಟ್ ಮಾಡಲೋ ಅರ್ಧ ಗಂಟೆ ವ್ಯಯಿಸಿದರೆ ಅದಕ್ಕೆ ಅವರಿಗೆ ಕೊಡುವ ಸಂಭಾವನೆಯೇ ಕನಿಷ್ಠ 50ರಿಂದ 75 ಸಾವಿರ ರೂಪಾಯಿ. ಇದಕ್ಕೆ ಹೋಲಿಸಿದರೆ, ಒಂದು ಇಡೀ ದಿನ ಕ್ರಿಕೆಟ್ ಆಡಿದ್ದಕ್ಕೆ ನಮ್ಮ ಆಟಗಾರರು ಪಡೆಯಲಿರುವ ಸಂಭಾವನೆ ನಗಣ್ಯ.

ಈ ಲೆಕ್ಕ ಯಾಕೆ ಮುಖ್ಯವೆಂದರೆ, ನಮ್ಮ ತಂಡದ ಆಟಗಾರರಿಗೆ ಇಷ್ಟು ಕಡಿಮೆ ಹಣವನ್ನು ನೀಡಿದರೂ ಅವರ ಆಟದಿಂದಾಗಿ ಆ ವ್ಯವಸ್ಥಾಪಕರು ಕೋಟ್ಯಾಂತರ ರೂ.ವನ್ನು ಸಂಪಾದಿಸಲಿದ್ದಾರೆ. ಅಷ್ಟೇ ಅಲ್ಲದೆ, ಇವತ್ತು ಬೆಂಗಳೂರಿನಲ್ಲಿ ಒಂದು ಮನೆಯನ್ನು ಬಾಡಿಗೆ ಕೊಟ್ಟರೂ ಪ್ರತಿ ವರ್ಷ ಅದರ ಬಾಡಿಗೆಯನ್ನು ಹೆಚ್ಚಿಸುತ್ತಾರೆ. ಅಂತಹ ಪರಿಸ್ಥಿತಿಯಲ್ಲಿ ಹತ್ತು ವರ್ಷಗಳ ಕಾಲಾವಧಿಗೆ ಕಣ್ಣುಮುಚ್ಚಿ ನಮ್ಮ ಆಟಗಾರರು ಸಹಿಮಾಡಿದ್ದು ಖಂಡಿತವಾಗಿಯೂ ವ್ಯಾವಹಾರಿಕವಾಗಿ ಮುಗ್ಗರಿಸಿದ್ದಾರೆಂದೇ ಹೇಳಬೇಕಾಗುತ್ತದೆ. ಖಂಡಿತವಾಗಿಯೂ ತಾರೆಗಳ ಈ ಕ್ರಿಕೆಟ್ ಟೂರ್ನಮೆಂಟ್ ವರ್ಷದಿಂದ ವರ್ಷಕ್ಕೆ ಜನಪ್ರಿಯವಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಹೀಗಾಗಿ ಪ್ರತಿವರ್ಷಕ್ಕೆ ಇವರು ತಮ್ಮ ಬೆಲೆಯನ್ನು ಇಂತಿಷ್ಟು ಅಂತ ಹೆಚ್ಚಿಸಿಕೊಳ್ಳುವಂತಹ ಆಯ್ಕೆಯನ್ನಾದರೂ ಇಟ್ಟುಕೊಳ್ಳಬೇಕಾಗಿತ್ತು. ವರ್ಷದಿಂದ ವರ್ಷಕ್ಕೆ ರೂಪಾಯಿ ಅಪಮೌಲ್ಯ ಆಗುತ್ತಿರುವುದನ್ನು ಗಮನಿಸಿದರೆ ಹತ್ತು ವರ್ಷಗಳ ನಂತರ ದೊರಕುವ ಒಂದು ಕೋಟಿ 70 ಲಕ್ಷಕ್ಕೆ ಯಾವ ಬೆಲೆ ಇರುತ್ತದೆ ಎಂಬುದನ್ನು ನೀವೇ ಊಹಿಸಿ. ನಿಜ, ಆಟವನ್ನು ವ್ಯವಹಾರ ಅಥವಾ ಲೆಕ್ಕಾಚಾರದ ದೃಷ್ಟಿಯಿಂದ ಅಳೆಯಬಾರದು. ಆದರೆ ಇದೇ ಆಟದಿಂದ ಬೇರೆಯವರು ಲಾಭ ಮಾಡುವುದರಿಂದ ಇದನ್ನೆಲ್ಲ ಪ್ರಶ್ನಿಸಬೇಕಾಗುತ್ತದೆ.


ಅದೆಲ್ಲ ಏನೇ ಇರಲಿ, ಕ್ರಿಕೆಟ್ ಆಟದಿಂದ ಪರಭಾಷಾ ನಟನಟಿಯರ ಜೊತೆಗಿನ ನಮ್ಮವರ ಸಂಪರ್ಕ ಮತ್ತು ಬಾಂಧವ್ಯ ಗಟ್ಟಿಯಾಗುತ್ತದೆ ಎಂಬುದು ಮಾತ್ರ ನಿಜ.

• ಶೆಟ್ಟಿ

ಜಾಕಿ ಜೋಶ್

'ಜಾಕಿ' ಚಿತ್ರದ ಹಾಡುಗಳು ಎಷ್ಟು ಜನಪ್ರಿಯವಾಗಿವೆಯೆಂದರೆ ಇದರ ಹಕ್ಕನ್ನು ಖರೀದಿಸಿದ ಆನಂದ್ ಆಡಿಯೋ ಸಂಸ್ಥೆಯವರು ನಾಡಿದ್ದು ಪ್ಲಾಟಿನಂ ಡಿಸ್ಕ್ ಸಮಾರಂಭವನ್ನು ಹಮ್ಮಿಕೊಂಡಿದ್ದಾರೆ. ಕನ್ನಡ ಚಿತ್ರರಂಗದಲ್ಲಿ ಪ್ಲಾಟಿನಂ ಡಿಸ್ಕ್ ಸಮಾರಂಭ ನಡೆದು ಅದೆಷ್ಟೋ ವರ್ಷಗಳೇ ಸಂದುಹೋಗಿವೆ. ಆ ನಿಟ್ಟಿನಿಂದ ಇದು 'ಜಾಕಿ' ತಂಡಕ್ಕೆ ಸಲ್ಲುವ ದೊಡ್ಡ ಗೌರವ.

ಇತ್ತೀಚೆಗೆ ಪೈರಸಿ ಸಿಡಿಗಳ ಹಾವಳಿ ಬಗ್ಗೆ ಉದ್ಯಮದ ಮಾತು ಕೇಳಿಬರುತ್ತಿದೆ. 'ಜನರು ಸಿಡಿಯನ್ನು ಖರೀದಿಸುವುದೇ ಇಲ್ಲ' ಎಂಬುದು ಆಡಿಯೋ ಕಂಪೆನಿಗಳ ಮಾಲೀಕರ ಆರೋಪ. ಇಂತಹ ಆರೋಪದ ನಡುವೆಯೂ ಚಿತ್ರವೊಂದರ ಹಾಡುಗಳು ಪ್ಲಾಟಿನಂ ಡಿಸ್ಕ್ ಸಂಭ್ರಮ ಕಾಣುತ್ತಿರುವುದು ವಿಶೇಷ. ಇದು 'ಜಾಕಿ'ಯ ಸಂಗೀತ ನಿರ್ದೇಶಕ ಹರಿಕೃಷ್ಣರಿಗೆ ಎಷ್ಟು ಸಂತೋಷ ತಂದುಕೊಡುತ್ತದೊ, ಅದಕ್ಕಿಂತಲೂ ಹೆಚ್ಚು ಸಂತೋಷಪಡುವ ಮತ್ತೊಬ್ಬ ವ್ಯಕ್ತಿಯೆಂದರೆ ಅದು ಯೋಗರಾಜ್ ಭಟ್. ಯಾಕೆಂದರೆ ಈ ಚಿತ್ರದ ಎಲ್ಲಾ ಹಾಡುಗಳನ್ನು ಬರೆದದ್ದು ಭಟ್ಟರು. ಹೀಗಾಗಿ ಭಟ್ಟರ ಕೈಯಲ್ಲೇ ಎಲ್ಲಾ ಹಾಡು ಬರೆಸಿದ ಸೂರಿಯ ಲೆಕ್ಕಾಚಾರ ಇಲ್ಲಿ ಕ್ಲಿಕ್ ಆಯಿತೆಂದೇ ಹೇಳಬೇಕು. ಅದೇನೇ ಇರಲಿ 'ಜಾಕಿ' ತಂಡಕ್ಕೆ ಅಭಿನಂದನೆಗಳು.



Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 05-01-2011 RNI No. KARKAN2005/14646

ಸೂಪರ್ ಕದ್ದಿದ್ದಾ?


ಕನ್ನಡ ಚಿತ್ರರಂಗದಲ್ಲಿ ಅಪರೂಪಕ್ಕೊಮ್ಮೆ ಯಾವುದಾದರೊಂದು ಸಿನಿಮಾ ಹಿಟ್ ಆಗಿಬಿಟ್ಟರೆ ಅದರ ಹಿಂದೆ ನೂರೆಂಟು ರಗಳೆ, ರಂಕಲುಗಳೂ ಬಾಲಂಗೋಚಿಯಂತೆ ಅಂಟಿಕೊಂಡು ಬರುತ್ತವೆ. ಆದರೆ ಸೋತ ಚಿತ್ರಗಳ ತೊಣೆ ಹೊರಲು ಯಾರೂ ಮುಂದೆ ಬರುವುದಿಲ್ಲ. ಸಿನಿಮಾ ಗೆದ್ದುಬಿಟ್ಟರೆ ಯಾರ್‍ಯಾರೋ ಓಡಿಬಂದು 'ಇದು ನನ್ನ ಕಥೆ. ಅದ್ಯಾವತ್ತೋ ನಾನು ಈ ಕಥೆಯನ್ನು ಹೇಳಿದ್ದೆ. ನಿರ್ದೇಶಕರು ಅದನ್ನೇ ಕದ್ದುಬಿಟ್ಟಿದ್ದಾರೆ' ಎಂದು ಗಂಟಲು ತುಂಡಾಗುವಂತೆ ಚೀರಲು ಶುರುಮಾಡಿಬಿಡುತ್ತಾರೆ. ಇತ್ತೀಚಿನ ವರ್ಷಗಳಲ್ಲಿ 'ತಾಜ್‌ಮಹಲ್', 'ಸತ್ಯ ಇನ್ ಲವ್', 'ಸರ್ಕಸ್' ಮುಂತಾದ ಚಿತ್ರಗಳಿಗೆ ಇಂಥವೇ ತಕರಾರುಗಳು ಅಂಟಿಕೊಂಡಿದ್ದವು.

ಈಗ 'ಸೂಪರ್' ಚಿತ್ರಕ್ಕೂ ಇಂಥದ್ದೇ ಕಂಟಕ ಬಂದೊದಗಿದೆ!

ಗಾಂಧಿನಗರದಲ್ಲಿ ಕೆಲಸವಿಲ್ಲದೇ ಅಂಡಲೆಯುವ ಕೆಲವು ತಿರುಕಲು ತಿಪ್ಪಂದಿರು ಹೀಗೆ 'ಆ ಕಥೆ ನಂದು, ಈ ಎಳೆ ನಂದು' ಎಂದು ತಿರುಗಾಡುವುದು ಸಾಮಾನ್ಯ. ಆದರೆ 'ಸೂಪರ್' ಚಿತ್ರದ ಕಥೆ ತನ್ನದು ಎಂದು ಹೇಳುತ್ತಿರುವ ವ್ಯಕ್ತಿ ಚಿತ್ರರಂಗಕ್ಕೆ ತೀರಾ ಹೊಸಬರೇನೂ ಅಲ್ಲ. ಈ ಹಿಂದೆ 'ಅಮೃತವಾಹಿನಿ' ಮತ್ತು 'ಪೆರೋಲ್' ಚಿತ್ರಗಳನ್ನು ನಿರ್ದೇಶಿಸಿದ್ದ ರಾಜಶೇಖರ್ 'ಉಪ್ಪಿ ನನ್ನ ಕಥೆಯನ್ನು ಕದ್ದಿದ್ದಾರೆ' ಎಂದು ಆರೋಪಿಸಿದ್ದಾರೆ. ತೀರಾ ಕಡುಗಷ್ಟದ ಬದುಕನ್ನು ಕಂಡು, ಗಾರ್ಮೆಂಟ್ಸ್ ಆರಂಭಿಸಿ ಈಗ 'ಬ್ಲಾಕ್‌ಬರ್ಡ್' ಎಂಬ ಬ್ರಾಂಡೆಡ್ ಗಾರ್ಮೆಂಟ್ಸ್‌ನ ಮಾಲೀಕರಾಗಿರುವ ರಾಜಶೇಖರ್ ತನ್ನ ಬಟ್ಟೆ ವ್ಯಾಪಾರದ ನಡುನಡುವೆಯೂ ಸಿನಿಮಾ ಮಾಡಿ ಸಾಕಷ್ಟು ದುಡ್ಡು ಕಳಕೊಂಡಿರುವ ವ್ಯಕ್ತಿ.

2008ರ ಸುಮಾರಿಗೆ ರಾಜಶೇಖರ್ ಅವರು ಕಥೆಯೊಂದನ್ನು ಉಪೇಂದ್ರ ಅವರಿಗೆ ಹೇಳಿದ್ದರು. ರಾಜಶೇಖರ್ ಅವರ ಕಥೆಗೆ ಇನ್ನೊಬ್ಬ ನಿರ್ದೇಶಕ ಕೆ.ವಿ.ರಾಜು ಚಿತ್ರಕಥೆ ಬರೆದಿದ್ದರು. ಆ ಸಂದರ್ಭದಲ್ಲಿ ಕುಮಾರಸ್ವಾಮಿ ಮತ್ತು ಯಡಿಯೂರಪ್ಪನ ಸಮ್ಮಿಶ್ರ ಸರ್ಕಾರ ಅಸ್ತಿತ್ವದಲ್ಲಿದ್ದುದರಿಂದ ಆ ಚಿತ್ರಕ್ಕೆ 'ಟ್ವೆಂಟಿ ಟ್ವೆಂಟಿ' ಎಂದು ಹೆಸರಿಡಬೇಕೆಂದು ಪ್ಲಾನು ಹಾಕಿದ್ದರು. ಆದರೆ ಸಂಭಾವನೆ ಮತ್ತು ಬಜೆಟ್ ವಿಚಾರದ ಹಿನ್ನೆಲೆಯಲ್ಲಿ ಯೋಜನೆಯನ್ನು ಕೈಬಿಡಲಾಗಿತ್ತು. ಈಗ ಅದೇ ಕಥೆಯನ್ನು 'ಸೂಪರ್' ಚಿತ್ರಕ್ಕೆ ಅಳವಡಿಸಲಾಗಿದೆ. ಆದರೆ ಚಿತ್ರಕಥೆಯನ್ನು ಮಾತ್ರ ಉಪ್ಪಿಯ ಚೇಸ್ಟಿಗೆ ತಕ್ಕಂತೆ ಬದಲಾಯಿಸಲಾಗಿದೆಯಂತೆ. ರಾಜಶೇಖರ್ ಅವರ ಕಥೆಯಲ್ಲಿ ಬದಲಾದ ಭಾರತದ ಕಥೆ 2020ಕ್ಕೆ ಎಂದಿತ್ತಂತೆ. ಆದರೆ 'ಸೂಪರ್' ಚಿತ್ರದಲ್ಲಿ ಅದನ್ನೇ 2030 ಎಂದು ತಿರುಚಿ, ರಾಜಶೇಖರ್ ಹೇಳಿದ ಕತೆಯನ್ನೇ ಯಥಾವತ್ತು ಕಾಪಿ ಮಾಡಿ 'ಸೂಪರ್' ಮಾಡಿದ್ದಾರಂತೆ....





ನಿರ್ದೇಶಕರ ಸಂಘದ ಅಧ್ಯಕ್ಷ ಎಂ.ಎಸ್. ರಮೇಶ್ ""ಸೂಪರ್' ಚಿತ್ರದ ಕಥೆ ಉಪೇಂದ್ರ ಅವರದ್ದಲ್ಲ ಎನ್ನುವ ಗಾಳಿಸುದ್ದಿಗಳು ಕೇಳಿಬಂದಿವೆ. ಆದರೆ ಈ ಬಗ್ಗೆ ಯಾರೊಬ್ಬರೂ ಲಿಖಿತ ದೂರು ನೀಡಿಲ್ಲ. ನಾವು ಕ್ರಮ ಕೈಗೊಳ್ಳಬೇಕೆಂದರೆ ನಮಗೆ ಲಿಖಿತ ದೂರಿನ ಅಗತ್ಯವಿದೆ. ಅವರು ತಮ್ಮ ಕಥೆಯ ಹಕ್ಕುಗಳನ್ನು ಪುರಾವೆಯಾಗಿ ತೋರಿಸಬೇಕಾದ ಅಗತ್ಯವಿದೆ" ಎಂದು ಪ್ರತಿಕ್ರಿಯೆ ನೀಡಿದ್ದಾರೆ. ಸದ್ಯ 'ಬ್ಲಾಕ್‌ಬರ್ಡ್' ರಾಜಶೇಖರ್ ವಿದೇಶ ಪ್ರವಾಸದಲ್ಲಿದ್ದಾರೆ. ಆತ ಬೆಂಗಳೂರಿಗೆ ಬಂದಮೇಲೆ ಈ ಕಥೆ ಇನ್ನೆಂಥ 'ಸೂಪರ್' ಟ್ವಿಸ್ಟ್ ಪಡೆಯುತ್ತದೋ ಗೊತ್ತಿಲ್ಲ.

ಇದೆಲ್ಲದರ ಮಧ್ಯೆ ಇನ್ನೊಬ್ಬನ್ಯಾರೋ 'ಸೂಪರ್ ಚಿತ್ರದ ಕಥೆ ನಂದು' ಎಂದು ಟಿವಿ ಚಾನೆಲ್‌ಗಳ ಮುಂದೆ ಅಡ್ಡಾಡುತ್ತಿರುವ ವಿಚಾರ ಸ್ವತಃ ಉಪ್ಪಿಗೇ ಗೊತ್ತಾಗಿದೆಯಂತೆ. ಯಾರು ಏನೇ ಆಕ್ಷೇಪ ಮಾಡಿದರೂ 'ಪ್ರಚಾರ ನನಗೇ' ಎನ್ನುವ ಸೂತ್ರವನ್ನು ನಂಬಿರುವ ಉಪೇಂದ್ರ ವಿವಾದಗಳು ಉದ್ಭವವಾದಷ್ಟೂ 'ಸೂಪರ್ ಪ್ರಚಾರ' ಸಿಕ್ಕಂತೆ ಎಂದು ಗಹಗಹಿಸಿ ನಗಾಡುತ್ತಿದ್ದಾರಂತೆ!

ರಜನಿಗೆ ಜೀವ ಭಯ!



ವಿಷ್ಣುವರ್ಧನ್ ನಟಿಸಿದ ಕೊನೆಯ ಚಿತ್ರ 'ಆಪ್ತರಕ್ಷಕ' ತೆಲುಗಿನಲ್ಲಿ 'ನಾಗವಲ್ಲಿ'ಯಾಗಿ ರಿಮೇಕ್ ಆಗಿ ಈಗಷ್ಟೇ ಬಿಡುಗಡೆಗೊಂಡಿದೆ. 30 ಕೋಟಿ ರೂಪಾಯಿ ವೆಚ್ಚದಲ್ಲಿ ತಯಾರಾದ ಇದರಲ್ಲಿ ಕನ್ನಡಿಗರೇ ಆದ ಅನೂಷ್ಕಾ ಶೆಟ್ಟಿ, ಅವಿನಾಶ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರವೀಗ ತಮಿಳಿನಲ್ಲೂ ತಯಾರಾಗುವ ಲಕ್ಷಣಗಳು ಕಾಣಿಸಿಕೊಂಡಿವೆ. ಮೂರು ವರ್ಷಗಳ ಹಿಂದೆ 'ಆಪ್ತಮಿತ್ರ'ದ ತಮಿಳು ಅವತರಣಿಕೆ 'ಚಂದ್ರಮುಖಿ'ಯಲ್ಲಿ ಹೀರೋ ಆಗಿ ಮಿಂಚಿದ್ದ ಸೂಪರ್‌ಸ್ಟಾರ್ ರಜನಿಕಾಂತ್ ಅವರೇ ತಮಿಳು 'ಆಪ್ತರಕ್ಷಕ'ದಲ್ಲಿ ನಟಿಸಬೇಕಿತ್ತು. ಆದರೆ ಆ ಪಾತ್ರವನ್ನು ಈಗ ಮತ್ತೊಬ್ಬ ಜನಪ್ರಿಯ ನಾಯಕ ಅಜಿತ್ ನಿಭಾಯಿಸುವುದಾಗಿ ಸುದ್ದಿಯಾಗಿದೆ.

'ಆಪ್ತಮಿತ್ರ', 'ಆಪ್ತರಕ್ಷಕ', 'ಚಂದ್ರಮುಖಿ' ಮತ್ತು 'ನಾಗವಲ್ಲಿ' ಚಿತ್ರಗಳನ್ನು ನಿರ್ದೇಶಿಸಿರುವ ಪಿ. ವಾಸು ಅವರೇ ತಮಿಳಿನಲ್ಲೂ ನಿರ್ದೇಶಿಸಲಿದ್ದಾರೆ. ಕನ್ನಡದಲ್ಲಿ 'ಆಪ್ತಮಿತ್ರ' ಭಾರೀ ಯಶಸ್ಸು ಕಾಣುತ್ತಿದ್ದಂತೆ ಅದು ತಮಿಳಿಗೆ 'ಚಂದ್ರಮುಖಿ'ಯಾಗಿ, ಬೆಂಗಾಲಿಗೆ 'ರಾಜಮಹಲ್' ಆಗಿ, ಹಿಂದಿಗೆ 'ಭೂಲ್ ಭುಲಯ್ಯಾ' ಆಗಿ ರಿಮೇಕ್‌ಗೊಂಡು ಬಾಕ್ಸಾಫೀಸ್ ಕೊಳ್ಳೆ ಹೊಡೆದಿತ್ತು. ಹೀಗಾಗಿ 'ಆಪ್ತರಕ್ಷಕ' ಕೂಡ ಬಹುತೇಕ ಎಲ್ಲ ಭಾಷೆಗಳಲ್ಲೂ ತಯಾರಾಗುತ್ತಿದೆ.

'ಆಪ್ತರಕ್ಷಕ' ಚಿತ್ರದಲ್ಲಿ ನಟಿಸಲು ಶುರು ಮಾಡಿದ ಮೇಲೆ ವಿಷ್ಣುವರ್ಧನ್ ಮಾನಸಿಕವಾಗಿ ಸಾಕಷ್ಟು ಜರ್ಝರಿತಗೊಂಡಿದ್ದರು. ಈ ಚಿತ್ರದ ಒಂದೊಂದು ದೃಶ್ಯದಲ್ಲಿ ನಟಿಸುವಾಗಲೂ ಅವರು ನಟಿ ಸೌಂದರ್ಯಾಳನ್ನು ನೆನೆಸಿಕೊಳ್ಳುತ್ತಿದ್ದರು. ಯಾವುದೋ ಅಗೋಚರವಾದ ಶಕ್ತಿಯೊಂದು ತನ್ನನ್ನು ಹಿಂಬಾಲಿಸುತ್ತಿದೆ ಎಂದು ಭ್ರಮಿಸುತ್ತಿದ್ದರು. ವಿಷ್ಣು ಅವರ ಮನೋಭ್ರಾಂತಿಗೆ ಇಂಬು ಕೊಡುವಂತೆ 'ಆಪ್ತರಕ್ಷಕ' ಚಿತ್ರದಲ್ಲಿ ಮುಖ್ಯ ಪಾತ್ರವನ್ನು ನಿರ್ವಹಿಸಿದ್ದ ವಿಮಲಾ ರಾವ್ ಎಂಬ ನೃತ್ಯಗಾರ್ತಿಗೆ ತಾನು ಮಲಗಿದ್ದ ಕೋಣೆಯ ಪಕ್ಕದಲ್ಲಿ ಯಾರೋ ಬಂದು ಮಲಗಿಕೊಂಡಂತೆ, ಕೋಣೆಯ ಕಿಟಕಿ ಬಾಗಿಲುಗಳು ಇದ್ದಕ್ಕಿದ್ದ ಹಾಗೆ ಬಡಿದುಕೊಂಡಂತೆ ಭಾಸವಾಗಿತ್ತಂತೆ.



ಅದೆಲ್ಲ ವಿಷ್ಣು ಕಿವಿಗೆ ಬಿದ್ದು ಅವರು ಮತ್ತಷ್ಟು ಹೆದರಿದ್ದರು. ಇದೇ ಸಂದರ್ಭದಲ್ಲಿ ಪ್ಯಾಲೇಸ್ ಗ್ರೌಂಡ್‌ನಲ್ಲಿ ಚಿತ್ರೀಕರಣ ನಡೆಯುತ್ತಿದ್ದಾಗ ಕುದುರೆ ಸವಾರಿಯ ದೃಶ್ಯದಲ್ಲಿ ಪಾಲ್ಗೊಂಡಿದ್ದ ವಿಷ್ಣು ಆಯತಪ್ಪಿ ಕೆಳಗೆ ಬಿದ್ದ ನಂತರವಂತೂ 'ಕಾಣದ ಶಕ್ತಿ'ಯಿಂದಲೇ ಹೀಗಾಯಿತು ಎನ್ನುವಷ್ಟರಮಟ್ಟಿಗೆ ವಿಷ್ಣು ತಲೆ ಕೆಡಿಸಿಕೊಂಡಿದ್ದರು. ಹೀಗೆ ಕಾಡಿಸುತ್ತಿದ್ದ ಭೀತಿ, ಹಿಂಸಿಸುತ್ತಿದ್ದ ಅನಾರೋಗ್ಯ ಎಲ್ಲವೂ ಸೇರಿ ವಿಷ್ಣು ಜೀವವನ್ನೇ ತೊರೆಯುವಂತಾಗಿತ್ತು.

'ಆಪ್ತರಕ್ಷಕ' ಚಿತ್ರದಲ್ಲಿ ನಟಿಸಿದ ನಂತರ ವಿಷ್ಣು ವಿಧಿವಶರಾಗಿದ್ದರಿಂದ ರಜನೀಕಾಂತ್ ಸಿಕ್ಕಾಪಟ್ಟೆ ಹೆದರಿದಂತೆ ಕಾಣುತ್ತಿದೆ. ವಿಷ್ಣು ವಿಧಿವಶರಾದ ನಂತರ ಅವರ ಮನೆಗೆ ಭೇಟಿ ಕೊಡುವ ಮುನ್ನ ರಜನಿ ಹೋಮಹವನಗಳನ್ನೆಲ್ಲಾ ನೆರವೇರಿಸಿ ಬಂದಿದ್ದರು. ಈ ವಿಚಾರ ಸಾಕಷ್ಟು ವಿವಾದಕ್ಕೂ ಕಾರಣವಾಗಿತ್ತು. ಈಗ 'ಆಪ್ತರಕ್ಷಕ'ದ ತಮಿಳು ಅವತರಣಿಕೆಯಲ್ಲಿ ನಟಿಸಿದರೆ ಎಲ್ಲಿ ತನ್ನ ಜೀವಕ್ಕೇ ಕಂಟಕ ಬರುತ್ತೋ ಎನ್ನುವ ಭಯ ರಜನಿಯನ್ನು ಕಾಡುತ್ತಿರಬೇಕು. ಹೀಗಾಗಿ ವಿಷ್ಣು ನಟಿಸಿದ ಪಾತ್ರವನ್ನು ರಜನಿ ನಿರಾಕರಿಸಿದ್ದಾರೆ.

ರಜನಿ ಈ ಚಿತ್ರವನ್ನು ನಿರಾಕರಿಸಲು ಬೇರಾವುದೋ ಕಾರಣವಿದ್ದಿದ್ದರೆ ಯಾರೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ವಿಷ್ಣುವರ್ಧನ್ ಅವರ ಅಕಾಲಿಕ ಮರಣ ಮತ್ತು 'ಆಪ್ತರಕ್ಷಕ' ಚಿತ್ರಕ್ಕೆ ಸಂಬಂಧ ಕಲ್ಪಿಸಿಕೊಂಡಿರುವುದೇ ದುರಂತ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, B...